ಮಂಗಳವಾರ, ಮಾರ್ಚ್ 5, 2024 | ₹ 7.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು "
- ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ.

ಪ್ರಕಟಣೆ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಎಲ್ಲ ನ್ಯಾಯಾಲಯಗಳಿಗೂ ಸಿವಿಲ್ ಪ್ರಕ್ರಿಯಾ ಸಂಹಿತೆ ಕಾಯ್ದೆ ಅನ್ವಯ

ಬಡವರಿಗೆ 6 ತಿಂಗಳಲ್ಲಿ ನ್ಯಾಯದಾನ

ಪ್ರಜಾವಾಣಿ ವಾರ್ತೆ

ಎಚ್‌.ಕೆ.ಪಾಟೀಲ

ಬೆಂಗಳೂರು: ಬಡವರು, ಸಣ್ಣ, ಅತಿ ಸಣ್ಣ ರೈತರು, ದುರ್ಬಲ ವರ್ಗದವರು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಸೇರಿದ ಸಿವಿಲ್ ವ್ಯಾಜ್ಯಗಳನ್ನು ಆದ್ಯತೆ ಮೇಲೆ ಕೈಗೆತ್ತಿಕೊಂಡು ಆರು ತಿಂಗಳಲ್ಲಿ ಇತ್ಯರ್ಥಗೊಳಿಸುವ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಕಾಯ್ದೆ ಸೋಮವಾರದಿಂದ ಜಾರಿ ಆಗಿದೆ.

ಕೆಳ ಹಂತದ ನ್ಯಾಯಾಲಯಗಳಿಂದ ಹಿಡಿದು ಹೈಕೋರ್ಟ್‌ವರೆಗಿನ ಎಲ್ಲ ನ್ಯಾಯಾಲಯಗಳಿಗೂ ಈ ಕಾಯ್ದೆ ಅನ್ವಯ ವಾಗುತ್ತದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಈ ವರ್ಗಕ್ಕೆ ಸೇರಿದವರ ಸಾವಿರಾರು ಪ್ರಕರಣಗಳು 5ರಿಂದ 10 ವರ್ಷಗಳಿಗೂ ಹೆಚ್ಚು ಸಮಯದಿಂದ ಇತ್ಯರ್ಥ ಆಗದೇ ಉಳಿದಿವೆ. ಸಕಾಲದಲ್ಲಿ ನ್ಯಾಯದಾನ ಮಾಡದೆ ತಡ ಮಾಡುವುದು ದ್ರೋಹ ಬಗೆಯುವುದಕ್ಕೆ ಸಮ. ಈ ಹಿನ್ನೆಲೆಯಲ್ಲಿ ಕಾನೂನು ತಜ್ಞರು, ವಕೀಲರು ಮತ್ತು ಸಂಬಂಧಿಸಿದ ಇತರ ತಜ್ಞರ ಜತೆ ಸಮಾಲೋಚನೆ ನಡೆಸಿ 2023ರ ಜುಲೈನಲ್ಲಿ ಮಸೂದೆಗೆ ತಿದ್ದುಪಡಿ ತರಲಾಯಿತು. ಎರಡೂ ಸದನಗಳಲ್ಲಿ ಒಪ್ಪಿಗೆ ಪಡೆದ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕದೆ ಅದನ್ನು ರಾಷ್ಟ್ರಪತಿಯವರಿಗೆ ಕಳಿಸಿದರು. ರಾಷ್ಟ್ರ-ಪತಿಯವರು ಫೆಬ್ರುವರಿಯಲ್ಲಿ ಅಂಕಿತ ಹಾಕಿದ್ದು, ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ ಎಂದರು.

ಕಾಯ್ದೆಯ ಅನುಷ್ಠಾನಕ್ಕೆ ಅಗತ್ಯವಿರುವ ಮಾರ್ಗಸೂಚಿಯೊಂದನ್ನು ಹೊರಡಿಸಲಾಗಿದೆ. ನ್ಯಾಯಾಲಯಗಳು ಪ್ರತಿನಿತ್ಯ ಪ್ರಕರಣಗಳನ್ನು ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಈ ವರ್ಗದವರಿಗೆ ಆದ್ಯತೆ ನೀಡಬೇಕಾಗುತ್ತದೆ ಎಂದು ಹೇಳಿದರು.

ಹೊಸ ವ್ಯವಸ್ಥೆಯಿಂದ ಸ್ವಲ್ಪಮಟ್ಟಿಗೆ ನ್ಯಾಯಾಲಯಗಳ ಮೇಲೆ ಒತ್ತಡ ಆಗಬಹುದು. ತ್ವರಿತ ನ್ಯಾಯದಾನದ ವಿಚಾರದಲ್ಲಿ ಈ ಹೊಸ ಕ್ರಮ ಅಗತ್ಯವಿತ್ತು. ಸಿವಿಲ್ ಪ್ರಕರಣಲ್ಲಿ ಸರ್ಕಾರಕ್ಕೆ ಸಂಬಂಧಿಸಿದ್ದು ಶೇ 30ರಿಂದ ಶೇ 40 ರಷ್ಟಿದ್ದರೆ, ಕೈಗಾರಿಕೆಗಳು ಮತ್ತು ರಿಯಲ್‌ಎಸ್ಟೇಟ್‌ಗೆ ಸಂಬಂಧಿಸಿರುವುದು ಶೇ 25ರಷ್ಟು ಪ್ರಕರಣಗಳಿವೆ ಎಂದರು.

ಯಾರು ಅರ್ಹರು

- ಎರಡು ಹೆಕ್ಟೇರ್ ಒಣ ಬೇಸಾಯದ ಭೂಮಿ ಹೊಂದಿರುವವರು
- ಒಂದು ಮತ್ತು ನಾಲ್ಕನೇ ಒಂದು ಹೆಕ್ಟೇರ್‌ನಷ್ಟು ಮಳೆಯಾಶ್ರಿತ ಭೂಮಿ ಹೊಂದಿರುವವರು
- ಒಂದು ನೀರಾವರಿ ಬೆಳೆ ಬೆಳೆಯಲು ಅಥವಾ ತೋಟದ ಬೆಳೆಗಳನ್ನು ಬೆಳೆಯಲು ಅಥವಾ ದ್ರಾಕ್ಷಿ ಅಥವಾ ತೆಂಗು ಅಥವಾ ಅಡಿಕೆ ಅಥವಾ ಕಬ್ಬು ಬೆಳೆಯಲು ಅಥವಾ ನೀರಾವರಿ ಮೂಲಕ ರೇಷ್ಮೆ ಬೆಳೆಯಲು ಅರ್ಧ ಹೆಕ್ಟೇರ್ ಭೂಮಿ ಇರುವವರು
- ದೀರ್ಘಕಾಲಿಕ ನೀರಾವರಿ ಸೌಲಭ್ಯಗಳನ್ನು ಹೊಂದಿರುವ ಅಥವಾ ವರ್ಷದಲ್ಲಿ ಒಂದಕ್ಕಿಂತ ಹೆಚ್ಚುವರಿ ನೀರಾವರಿ ಬೆಳೆಗಳನ್ನು ಬೆಳೆಯುವ ಸೌಲಭ್ಯಗಳಿರುವ ಕಾಲು ಹೆಕ್ಟೇರ್ ಭೂಮಿ ಹೊಂದಿರುವವರು. (ತೋಟದ ಬೆಳೆಗಳು ಎಂದರೆ ಏಲಕ್ಕಿ, ಕಾಫಿ, ರಬ್ಬರ್ ಮತ್ತು ಚಹಾ)
- ಆರ್ಥಿಕ ದುರ್ಬಲ ವರ್ಗಕ್ಕೆ ಸೇರಿದ ವ್ಯಕ್ತಿ ಎಂದರೆ ಎಲ್ಲ ಮೂಲಗಳಿಂದ ವಾರ್ಷಿಕ ಆದಾಯ ₹3 ಲಕ್ಷ ಮೀರದ ವ್ಯಕ್ತಿಯಾಗಿರಬೇಕು

ಐಹೊಳೆ 8 ದೇವಸ್ಥಾನಗಳ ಸಂರಕ್ಷಣೆ ಹೊಣೆ ಧರ್ಮಸ್ಥಳ ಟ್ರಸ್ಟ್‌ಗೆ

ಐಹೊಳೆಯ 8 ದೇವಸ್ಥಾನಗಳ ದುರಸ್ತಿ ಮತ್ತು ಸಂರಕ್ಷಣೆ ಜವಾಬ್ದಾರಿಯನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ಗೆ ವಹಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವರೂ ಆಗಿರುವ ಎಚ್‌.ಕೆ.ಪಾಟೀಲ ತಿಳಿಸಿದರು.

ಚಾಲುಕ್ಯರ ಕಾಲದ ಈ ದೇವಸ್ಥಾನಗಳನ್ನು ಸ್ಥಳೀಯರು ಹಸು, ಎಮ್ಮೆಗಳನ್ನು ಕಟ್ಟಿಕೊಳ್ಳಲು ಬಳಸುತ್ತಿದ್ದರು. ಇನ್ನೂ ಕೆಲವು ದೇವಸ್ಥಾನ ಗಳಲ್ಲಿ ಕುಟುಂಬಗಳು ವಾಸವಿದ್ದವು. ಅವರಿಗೆ ಪರ್ಯಾಯ ವಸತಿ ವ್ಯವಸ್ಥೆ ಮಾಡಲಾಗುತ್ತಿದೆ. ವಸತಿ ನಿರ್ಮಾಣಕ್ಕಾಗಿ ಭೂಮಿ ಖರೀದಿಸಲು ₹3.30 ಕೋಟಿ ನೀಡಲಾಗುವುದು ಎಂದು ಅವರು ತಿಳಿಸಿದರು.

ಐಹೊಳೆಯಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಲು ಕೆಎಸ್‌ಟಿಡಿಸಿ ವತಿಯಿಂದ ತ್ರೀಸ್ಟಾರ್ ಹೋಟೆಲ್ ನಿರ್ಮಿಸಲಾಗುವುದು. ಇದಕ್ಕಾಗಿ ಭೂಮಿ ನೀಡಲಾಗಿದೆ ಎಂದು ಪಾಟೀಲ ವಿವರಿಸಿದರು.

ವ್ಯಾಪಾರ ಜೋರು

ಚಿಕ್ಕಮಗಳೂರಿನ ಕಡೂರು–ಮಂಗಳೂರು ಹೆದ್ದಾರಿಯಲ್ಲಿ ರಾಯಚೂರು ಮೂಲದ ಬೆಳೆಗಾರರೊಬ್ಬರು ಒಣಗಿದ ಮೆಣಸಿನ ಕಾಯಿ ಮಾರಾಟದಲ್ಲಿ ಸೋಮವಾರ ತೊಡಗಿದ್ದರು –ಪಿಟಿಐ ಚಿತ್ರ

‘ಅರಿವು ಕೇಂದ್ರ’ಗಳಲ್ಲಿ 47.83 ಲಕ್ಷ ಮಕ್ಕಳು ನೋಂದಣಿ– ಪ್ರಿಯಾಂಕ್

ಬೆಂಗಳೂರು: ‘ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಗ್ರಂಥಾಲಯಗಳನ್ನು ಉಪಯೋಗಿಸಿಕೊಳ್ಳುವ ಮತ್ತು ಓದುವ ಹವ್ಯಾಸ ಪ್ರೋತ್ಸಾಹಿಸಿದ ಪರಿಣಾಮ ಒಟ್ಟು 47.83 ಲಕ್ಷ ಮಕ್ಕಳು ನೋಂದಣಿ ಆಗಿದ್ದಾರೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈ ಗ್ರಂಥಾಲಯಗಳನ್ನು ‘ಅರಿವು ಕೇಂದ್ರ’ಗಳೆಂದು ಹೆಸರಿಸಲಾಗಿದ್ದು, ಸೋಮವಾರ ಈ ಕೇಂದ್ರಗಳ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಲಾಂಛನ, ಭಿತ್ತಿಪತ್ರ, ಕಟ್ಟಡ ವಿನ್ಯಾಸ, ಆರು ತಿಂಗಳ ಸರ್ಟಿಫಿಕೇಟ್ ಕೋರ್ಸ್ ಮತ್ತು ಅರಿವು ಕೇಂದ್ರಗಳ ಚಟುವಟಿಕೆಯ ಸಂಪುಟಗಳನ್ನು ಬಿಡುಗಡೆ ಮಾಡಿದರು.

‘5,895 ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಪೈಕಿ 4,925ಕ್ಕೆ ಕಟ್ಟಡ, ಕಟ್ಟಡದ ನವೀಕರಣ, ಕೊಠಡಿಗಳು, ಓದುವ ಸಾಮಗ್ರಿಗಳನ್ನು ಇಡಲು ಸಮರ್ಪಕ ವ್ಯವಸ್ಥೆ ಕಲ್ಪಿಸಲಾಗಿದೆ. ಈವರೆಗೆ 5,537 ಗ್ರಂಥಾಲಯ ಗಳಲ್ಲಿ ಡಿಜಿಟಲ್ ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ’ ಎಂದರು.

‘ಕೇಂದ್ರ ಸರ್ಕಾರವು ಮಕ್ಕಳು ಮತ್ತು ಹದಿಹರೆಯದವರಿಗಾಗಿ ಗ್ರಂಥಾಲಯಗಳು–ಡಿಜಿಟಲ್ ಸೌಕರ್ಯ ಕಾರ್ಯಕ್ರಮಕ್ಕೆ ₹ 263.96 ಕೋಟಿ ಮಂಜೂರು ಮಾಡಿದೆ. ಮೊದಲ ಕಂತಿನ ₹131.98 ಕೋಟಿ ಅನುದಾನ ದಲ್ಲಿ 6,599 ಗ್ರಂಥಾಲಯಗಳಿಗೆ ತಲಾ ₹ 4 ಲಕ್ಷ ಸಿಗಲಿದೆ’ ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಹೇಳಿದರು.

ದೇವಸ್ಥಾನಗಳಲ್ಲಿ ನೆರಳಿನ ವ್ಯವಸ್ಥೆ ಮಾಡಲು ಸೂಚನೆ

ಬೆಂಗಳೂರು: ಮುಜರಾಯಿ ದೇವಸ್ಥಾನ-ಗಳಿಗೆ ಬರುವ ಭಕ್ತರಿಗೆ ನೆರಳಿನ ವ್ಯವಸ್ಥೆ ಕಲ್ಪಿಸುವಂತೆ ಧಾರ್ಮಿಕ ದತ್ತಿ ಇಲಾಖೆ ಸೂಚನೆ ನೀಡಿದೆ.

ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸಲು ‘ಶಕ್ತಿ’ ಯೋಜನೆ ಜಾರಿಗೆ ತಂದಿರುವುದರಿಂದ ಮತ್ತು ಬೇಸಿಗೆಯಲ್ಲಿ ಶಾಲಾ, ಕಾಲೇಜು ಗಳಿಗೆ ರಜೆ ಇರುವುದರಿಂದ ದೇವಸ್ಥಾನ ಗಳಿಗೆ ಭೇಟಿ ನೀಡುವವರ ಸಂಖ್ಯೆ ಅಧಿಕ ಇರುತ್ತದೆ. ಅವರು ಬಿಸಿಲಿನಲ್ಲಿ ಸರದಿ ಸಾಲಿನಲ್ಲಿ ನಿಲ್ಲುವಂತಾಗಬಾರದು. ನೆರಳಿನ ವ್ಯವಸ್ಥೆ ಮಾಡಬೇಕು. ಸ್ಥಳಾವಕಾಶ ಇರುವಲ್ಲಿ ತಾತ್ಕಾಲಿಕವಾಗಿ ಪೆಂಡಾಲ್‌ಗಳನ್ನು ಅಳವಡಿಸಬೇಕು.

ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ದಾನಿಗಳು ಮುಂದೆ ಬಂದರೆ ಅವರಿಗೆ ಅವಕಾಶ ನೀಡಬೇಕು. ಬಾರದೇ ಇದ್ದರೆ ದೇವಾಲಯದ ನಿಧಿಯಿಂದಲೇ ಶುದ್ಧ ಕುಡಿಯುವ ನೀರು ಒದಗಿಸಬೇಕು ಎಂದು ಮುಜರಾಯಿ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

‘ರೈಲ್ವೆ ಯೋಜನೆ: ₹ 93 ಕೋಟಿ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು–ದಾವಣಗೆರೆ ಮತ್ತು ಗದಗ– ವಾಡಿ ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ₹93.32 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಸೋಮವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಎರಡೂ ಯೋಜನೆಗಳ ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ತುಮಕೂರು–ದಾವಣಗೆರೆ ರೈಲ್ವೆ ಯೋಜನೆಗೆ ₹50 ಕೋಟಿ ಮತ್ತು ಗದಗ– ವಾಡಿ ರೈಲ್ವೆ ಯೋಜನೆಗೆ ₹43.32 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಕೇಂದ್ರ ಸರ್ಕಾರವು ಕೈಗೆತ್ತಿಕೊಳ್ಳುವ ಕೆಲವು ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರವು ಶೇಕಡ 50ರಷ್ಟನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಈ ಎರಡೂ ಯೋಜನೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಗಿದ ತಕ್ಷಣ ಕಾಮಗಾರಿಗಳು ವೇಗ ಪಡೆಯಲಿವೆ ಎಂದು ತಿಳಿಸಿದ್ದಾರೆ.

ನೈರುತ್ಯ ರೈಲ್ವೆ ಆದಾಯ ಶೇ 11ರಷ್ಟು ಹೆಚ್ಚಳ

ನೈರುತ್ಯ ರೈಲ್ವೆ ಆದಾಯವು ಕಳೆದ 10 ತಿಂಗಳಲ್ಲಿ ಶೇ 11.09ರಷ್ಟು ಹೆಚ್ಚಳವಾಗಿದೆ. ಇದು ದಾಖಲೆಯ ಬೆಳವಣಿಗೆ ಎಂದು ನೈಋತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ ಅರವಿಂದ್ ಶ್ರೀವಾಸ್ತವ್ ತಿಳಿಸಿದ್ದಾರೆ.

2023ರ ಏಪ್ರಿಲ್‌ನಿಂದ 2024ರ ಫೆಬ್ರುವರಿ ಅಂತ್ಯದವರೆಗೆ ₹ 6,970.18 ಕೋಟಿ ಆದಾಯ ಗಳಿಸಿದೆ. ಇದು ಹಿಂದಿನ ವರ್ಷ ಇದೇ ಅವಧಿಯಲ್ಲಿ ಗಳಿಸಿದ ಆದಾಯ ಕ್ಕಿಂತ ₹ 696.02 ಕೋಟಿ ಅಧಿಕ ವಾಗಿದೆ. ಈ ಬಾರಿ 11 ತಿಂಗಳಲ್ಲಿ ಪ್ರಯಾಣಿಕರಿಂದ ₹2,837.87 ಕೋಟಿ ಆದಾಯ ಬಂದಿದ್ದು, ಹಿಂದಿನ ಬಾರಿಗಿಂತ ₹ 323.43 ಕೋಟಿ (ಶೇ 12.86) ಹೆಚ್ಚಾಗಿದೆ.

ಸರಕು ಸಾಗಣೆಯಲ್ಲಿ ಆದಾಯ ₹ 4,590.52 ಕೋಟಿ ತಲುಪಿದೆ. ಕಳೆದ ಬಾರಿಗಿಂತ ₹ 422.64 ಕೋಟಿ (ಶೇ 10.13) ಹೆಚ್ಚಳವಾಗಿದೆ. ಬಂಡವಾಳ ವೆಚ್ಚ (ಕ್ಯಾಪೆಕ್ಸ್) ₹ 6,462.40 ಕೋಟಿ ತಲುಪಿದೆ. ಇದು ಹಿಂದಿನ ವರ್ಷಕ್ಕಿಂತ ₹ 2,386.75 ಕೋಟಿ (ಶೇ 58.56)ಯಷ್ಟಾಗಿದ್ದು, ಗಮನಾರ್ಹ ಹೆಚ್ಚಳ ಕಂಡಿದೆ ಎಂದು ಅರವಿಂದ್ ಶ್ರೀವಾಸ್ತವ್ ಮಾಹಿತಿ ನೀಡಿದ್ದಾರೆ.

ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತವಾದ ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರ ಮುಂದಾಗಿದೆ. ಮೈಸೂರು ಮತ್ತು ರಾಯಚೂರು ವಿಮಾನ ನಿಲ್ದಾಣ ಕಾಮಗಾರಿಗಳಿಗೆ ₹57.63 ಕೋಟಿ ಬಿಡುಗಡೆ ಮಾಡಲಾಗಿದೆ. ಈ ಪೈಕಿ ₹43.01 ಕೋಟಿಯನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ಮತ್ತು ₹14.62 ಕೋಟಿಯನ್ನು ರಾಯಚೂರು ವಿಮಾನ ನಿಲ್ದಾಣಕ್ಕೆ ಒದಗಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಾವೋ ನೀವೋ ನೋಡಿಯೇ ಬಿಡೋಣ: ಹಿಂದುಳಿದ ಜಾತಿಗಳ ಒಕ್ಕೂಟ

‘ಶಾಮನೂರು ಹೇಳಿಕೆ ಖಂಡನೀಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಸದ ಬುಟ್ಟಿಯಲ್ಲಿ ಬಿದ್ದಿದ್ದ, ಹತ್ತು ವರ್ಷಗಳಷ್ಟು ಹಳೆಯದಾದ ಜಾತಿಗಣತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ವರದಿ ಜಾರಿಗೊಳಿಸಿದರೆ ಮೂರು ಸಮುದಾಯ ಗಳು ಬೀದಿಗಿಳಿದು ಹೋರಾಟ ಮಾಡುತ್ತೇವೆ’ ಎಂಬ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಯನ್ನು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಖಂಡಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ, ‘ರಾಜ್ಯದಲ್ಲಿ ಆ ಮೂರು ಜಾತಿಗಳ ಜನಸಂಖ್ಯೆ ಶೇ 30ರಷ್ಟಿದೆ. ಆದರೆ, ಹಿಂದುಳಿದ ವರ್ಗಗಳ ಸಮುದಾಯಗಳ ಜನಸಂಖ್ಯೆ ಶೇ 70ರಷ್ಟಿದೆ. ಅವರು ಹೋರಾಡುವುದಾದರೆ, ನಾವೂ ಬೀದಿಗಿಳಿದು ಹೋರಾಟ ಮಾಡುತ್ತೇವೆ. ನೀವೋ, ನಾವೋ ನೋಡಿಯೇ ಬಿಡೋಣ’ ಎಂದು ಸವಾಲು ಹಾಕಿದರು.

‘ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಜಾತಿವಾರು ಜನಗಣತಿ (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ವರದಿಯನ್ನು ಸದನದಲ್ಲಿ ಮಂಡಿಸಬೇಕು. ಸಾರ್ವಜನಿಕ ಚರ್ಚೆಗೊಳಪಡಿಸಬೇಕು. ಅದರಲ್ಲಿ ಲೋಪದೋಷಗಳಿದ್ದರೆ ಸರಿಪಡಿಸಿ, ನಂತರ ವರದಿ-ಯಲ್ಲಿರುವ ಶಿಫಾರಸುಗಳನ್ನು ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧವೂ ಹೋರಾಟ ಮಾಡ-ಬೇಕಾಗುತ್ತದೆ’ ಎಂಬ ಎಚ್ಚರಿಕೆ ನೀಡಿದರು.

ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್, ‘ಶಾಮನೂರು ಶಿವಶಂಕರಪ್ಪ ಅವರು ಸರ್ಕಾರ ನಡೆಸಿದ್ದ ಸಮೀಕ್ಷಾ ವರದಿಯನ್ನು ಕಸದ ಬುಟ್ಟಿಯಲ್ಲಿ ಬಿದ್ದಿದ್ದ ವರದಿ ಎಂದು ಹೇಳಿರುವುದು ಖಂಡನೀಯ. ಅದು ಅವರ ವ್ಯಕ್ತಿತ್ವಕ್ಕೆ ಶೋಭೆ ತರುವಂತಹದಲ್ಲ. ವರದಿಯ ಬಗ್ಗೆ ಹಗುರವಾಗಿ ಮಾತನಾಡುವ ಮೂಲಕ ಅವರು ತಳ ಮತ್ತು ಶೋಷಿತ ಸಮುದಾಯಗಳನ್ನು ಅವಮಾನಿಸಿದ್ದಾರೆ’ ಎಂದು ಆರೋಪಿಸಿದರು.

‘ಬಸವ ತತ್ವಗಳು ಮತ್ತು ಶರಣರಲ್ಲಿ ನಂಬಿಕೆ ಇದ್ದವರು ಈ ಸಮೀಕ್ಷಾ ವರದಿಯನ್ನು ಗೌರವದಿಂದ ಸ್ವಾಗತಿಸುತ್ತಿದ್ದರು. ವರದಿಯನ್ನು ಸಾರ್ವಜನಿಕ ಚರ್ಚೆ-ಗೊಳಪಡಿಸಿದ ನಂತರ ಇದರಲ್ಲಿ ಏನಾದರೂ ಲೋಪ-ದೋಷಗಳಿದ್ದರೆ ಅದನ್ನು ಸರಿಪಡಿಸಿ ಅನುಷ್ಠಾನಗೊಳಿ-ಸುವಂತೆ ಸಲಹೆ ನೀಡಬೇಕು’ ಎಂದು ಹೇಳಿದರು.

ಸಂಚಾಲಕ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಉಪಸ್ಥಿತರಿದ್ದರು.

ಸೇವಾನುಭವ, ವಿದ್ಯಾರ್ಹತೆ ಪರಿಗಣಿಸಿ ಗೌರವಧನ ಹೆಚ್ಚಳ

ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕ-ರಿಗೆ 2024ರ ಜ. 1ರಿಂದ ಪೂರ್ವಾನ್ವಯ ಆಗುವಂತೆ ಗೌರವಧನ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಸೇವಾನುಭವ ಮತ್ತು ವಿದ್ಯಾರ್ಹತೆ ಪರಿಗಣಿಸಿ ಗೌರವಧನವನ್ನು ₹31 ಸಾವಿರ ದಿಂದ ₹40 ಸಾವಿರವರೆಗೆ ಹೆಚ್ಚಿಸ ಲಾಗಿದೆ. ಐದು ವರ್ಷಕ್ಕಿಂತ ಕಡಿಮೆ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ₹31 ಸಾವಿರ, ಐದು ವರ್ಷಕ್ಕಿಂತ ಕಡಿಮೆ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿವರಿಗೆ ₹35 ಸಾವಿರ, ಐದು ವರ್ಷದಿಂದ 10 ವರ್ಷ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ₹34 ಸಾವಿರ, ಐದು ವರ್ಷದಿಂದ 10 ವರ್ಷ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದವರಿಗೆ ₹ 38 ಸಾವಿರ, 10 ವರ್ಷದಿಂದ 15 ವರ್ಷ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ₹ 35 ಸಾವಿರ, 10 ವರ್ಷದಿಂದ 15 ವರ್ಷ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದವರಿಗೆ ₹ 39 ಸಾವಿರ, 15 ವರ್ಷಕ್ಕಿಂತ ಹೆಚ್ಚಿನ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ ₹36 ಸಾವಿರ, 15 ವರ್ಷಕ್ಕಿಂತ ಹೆಚ್ಚಿನ ಸೇವಾನುಭವ, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದವರಿಗೆ ₹40 ಸಾವಿರ ಗೌರವಧನ ಸಿಗಲಿದೆ.

ಇಡುಗಂಟು: 60 ವರ್ಷ ಮೀರಿದ ಅತಿಥಿ ಉಪನ್ಯಾಸಕರಿಗೆ ಭದ್ರತಾ ರೂಪದಲ್ಲಿ ವಾರ್ಷಿಕ ₹50 ಸಾವಿರದಂತೆ ಗರಿಷ್ಠ ₹ 5 ಲಕ್ಷ ಮೊತ್ತದ ಇಡುಗಂಟು ಸೌಲಭ್ಯವೂ ಸಿಗಲಿದೆ. ವಾರ್ಷಿಕ ₹5 ಲಕ್ಷವರೆಗೆ ಆರೋಗ್ಯ ವಿಮೆ ಸೌಲಭ್ಯ ನೀಡಲು, ಅತಿಥಿ ಉಪನ್ಯಾಸಕರಿಂದ ವಂತಿಗೆಯಾಗಿ ₹400, ಸರ್ಕಾರದಿಂದ ₹400 ಸೇರಿಸಿ ಒಟ್ಟು ₹ 800 ಸಂಗ್ರಹಿಸಿ ವಿಮೆ ಸೌಲಭ್ಯಕ್ಕೆ ಮಂಜೂರಾತಿ ನೀಡಲಾಗಿದೆ.

ತಾಂತ್ರಿಕ ಶಿಕ್ಷಣ ಇಲಾಖೆ: ತಾಂತ್ರಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಸರ್ಕಾರಿ ಎಂಜಿನಿಯರಿಂಗ್, ಪಾಲಿಟೆಕ್ನಿಕ್, ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸಿರುವ ಅತಿಥಿ ಉಪನ್ಯಾಸಕರ ಗೌರವಧನವನ್ನೂ ಹೆಚ್ಚಿಸಲಾಗಿದೆ.

5 ವರ್ಷಕ್ಕಿಂತ ಕಡಿಮೆ ಸೇವಾನುಭವ ಹೊಂದಿವರಿಗೆ ₹5 ಸಾವಿರ, 5ರಿಂದ 10 ವರ್ಷ ಸೇವಾನುಭವ ಇರುವವರಿಗೆ ₹6 ಸಾವಿರ, 10ರಿಂದ 15 ವರ್ಷ ಸೇವಾನು ಭವ ಇದ್ದರೆ ₹7 ಸಾವಿರ, 15 ವರ್ಷಕ್ಕೂ ಹೆಚ್ಚು ಸೇವಾನುಭವ ಇದ್ದರೆ ₹8 ಸಾವಿರ ಗೌರವಧನ ಹೆಚ್ಚಿಸಲಾಗಿದೆ. 60 ವರ್ಷ ಮೀರಿದ ಈ ಅತಿಥಿ ಉಪನ್ಯಾಸಕರಿಗೂ ಭದ್ರತಾ ರೂಪದಲ್ಲಿ ವಾರ್ಷಿಕ ₹50 ಸಾವಿರದಂತೆ ಗರಿಷ್ಠ ₹5 ಲಕ್ಷ ಮೊತ್ತದ ಇಡುಗಂಟು, ವಿಮೆ ಸೌಲಭ್ಯ ಸಿಗಲಿದೆ.

ಮಂಗಳವಾರ, ಮಾರ್ಚ್ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 65 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಗರ್ಭಕಂಠದ ಕ್ಯಾನ್ಸರ್‌ಗೆ ಹೆದರಬೇಕಿಲ್ಲ.ಅದನ್ನು ತಡೆಗಟ್ಟಲು ಲಸಿಕೆ ಲಭ್ಯವಿದೆ.

ಆಳ-ಅಗಲ: ಮತಕ್ಕಾಗಿ ಲಂಚ ಅಪರಾಧವೇ ಸರಿ...
ಮೂವರು ವಿದ್ಯಾರ್ಥಿನಿಯರ ಮೇಲೆ ಆ್ಯಸಿಡ್ ದಾಳಿ 4
ಉದಯನಿಧಿಗೆ ಸುಪ್ರೀಂ ಕೋರ್ಟ್ ಛೀಮಾರಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,872 ▲	22,405 ▲	₹65,440 (ಬೆಂಗಳೂರು) ▲	₹72,600 (ಬೆಂಗಳೂರು) ▲	82.90 ▲

ಲಂಚ: 1998ರ ತೀರ್ಪನ್ನು ಅಸಿಂಧುಗೊಳಿಸಿದ ಕೋರ್ಟ್ • ಮಹತ್ವದ ತೀರ್ಪು ನೀಡಿದ ಪೀಠ

ಎಂಪಿ, ಎಂಎಲ್‌ಎಗಿಲ್ಲ ರಕ್ಷಣೆ

ನವದೆಹಲಿ (ಪಿಟಿಐ): ಸದನದಲ್ಲಿ ಮತ ಚಲಾಯಿಸಲು ಅಥವಾ ಮಾತನಾಡಲು ಲಂಚ ಪಡೆಯುವ ಶಾಸಕರು ಮತ್ತು ಸಂಸದರಿಗೆ ಕಾನೂನು ಕ್ರಮದಿಂದ ರಕ್ಷಣೆ ಇಲ್ಲ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಸೋಮವಾರ ಸರ್ವಾನುಮತದ ತೀರ್ಪು ನೀಡಿದೆ.

ಇಂತಹ ಕೃತ್ಯ ಎಸಗಿದ ಶಾಸಕರು, ಸಂಸದರಿಗೆ ಕಾನೂನು ಕ್ರಮದಿಂದ ರಕ್ಷಣೆ ಇದೆ ಎಂದು ಜೆಎಂಎಂ ಲಂಚ ಪ್ರಕರಣದಲ್ಲಿ 1998ರಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ನೀಡಿದ್ದ ಬಹುಮತದ ತೀರ್ಪನ್ನು ಕೋರ್ಟ್ ಈ ಮೂಲಕ ರದ್ದುಪಡಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ಮಂದಿ ನ್ಯಾಯಮೂರ್ತಿಗಳ ಪೀಠವು ನೀಡಿರುವ ಈ ತೀರ್ಪು ಮೈಲಿಗಲ್ಲು ಎಂದು ಬಿಂಬಿತವಾಗಿದೆ.

ಶಾಸನ ಸಭೆಗಳ ಸದಸ್ಯರು ಎಸಗುವ ಭ್ರಷ್ಟಾಚಾರ, ಅವರಲ್ಲಿನ ಲಂಚಗುಳಿತನವು ದೇಶದ ಸಂಸದೀಯ ಪ್ರಜಾತಂತ್ರದ ನೆಲೆಗಟ್ಟನ್ನೇ ಹಾಳು ಮಾಡುತ್ತದೆ ಎಂದ ಹೇಳಿರುವ ನ್ಯಾಯಪೀಠವು, 'ಸಂಸದೀಯ ಹಕ್ಕುಗಳು ಲಂಚ ಪಡೆಯುವುದಕ್ಕೆ ರಕ್ಷಣೆ ಒದಗಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

ಶಾಸನಸಭೆಗಳ ಸದಸ್ಯರು ಭ್ರಷ್ಟಾಚಾರದಲ್ಲಿ ತೊಡಗಿದರೆ, ಲಂಚ ಪಡೆದರೆ ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ ಹಾಳಾಗುತ್ತದೆ ಎಂದು ಹೇಳಿರುವ ಕೋರ್ಟ್, 1998ರಲ್ಲಿ ನೀಡಿದ ತೀರ್ಪಿನಲ್ಲಿನ ವ್ಯಾಖ್ಯಾನವು ಸಂವಿಧಾನದ 105 ಹಾಗೂ 194ನೇ ವಿಧಿಗಳಿಗೆ ವಿರುದ್ಧವಾಗಿದೆ ಎಂದು ಹೇಳಿದೆ. ಸಂವಿಧಾನದ ಈ ಎರಡು ವಿಧಿಗಳು ಸಂಸದರು ಹಾಗೂ ಶಾಸಕರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಇರುವ ಹಕ್ಕುಗಳು, ಅಧಿಕಾರದ ಬಗ್ಗೆ ವಿವರಣೆ ನೀಡುತ್ತವೆ.

ಜೆಎಂಎಂ ಲಂಚ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಬಹುಮತದ ತೀರ್ಪಿನಲ್ಲಿ, 'ಸದನದಲ್ಲಿ ಮಾಡಿದ ಯಾವುದೇ ಭಾಷಣ ಅಥವಾ ಚಲಾಯಿಸಿದ ಮತಕ್ಕೆ ಸಂಬಂಧಿಸಿದಂತೆ ಸದಸ್ಯರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇದೆ. ಸಂವಿಧಾನದ 105(2) ಹಾಗೂ 194(2) ವಿಧಿಗಳು ಈ ರಕ್ಷಣೆ ಒದಗಿಸಿವೆ' ಎಂದು ಹೇಳಿತ್ತು.

'ಭ್ರಷ್ಟಾಚಾರ ಮತ್ತು ಲಂಚಗುಳಿತನವು ಸಂವಿಧಾನದ ಹೆಬ್ಬಯಕೆಗಳನ್ನು, ಅದು ಬಯಸುವ ಚರ್ಚೆಯ ಮಾದರಿಗಳನ್ನು ನಾಶ ಪಡಿಸುವಂಥದ್ದು. ಜವಾಬ್ದಾರಿಯುತವಾದ, ಸ್ಪಂದನಶೀಲವಾದ ಮತ್ತು ಪ್ರಾತಿನಿಧ್ಯದ ಪ್ರಜಾತಂತ್ರವನ್ನು ನಾಗರಿಕರಿಗೆ ನಿರಾಕರಿಸುವ ಕೆಲಸವನ್ನು ಅದು ಮಾಡುತ್ತದೆ' ಎಂದು ಸೋಮವಾರ ತೀರ್ಪಿನ ಪ್ರಮುಖ ಅಂಶಗಳನ್ನು ಓದುವ ಸಂದರ್ಭದಲ್ಲಿ ನ್ಯಾಯಮೂರ್ತಿ ಚಂದ್ರಚೂಡ್ ಹೇಳಿದರು.

ಪುನರ್ ಪರಿಶೀಲನೆ ಆಗಿದ್ದು ಹೀಗೆ...

- ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷದ ಶಾಸಕಿಯಾಗಿದ್ದ ಸೀತಾ ಸೊರೇನ್ ಅವರು 2012ರ ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಆರ್.ಕೆ. ಅಗರ್ವಾಲ್ ಅವರಿಗೆ ಮತ ಚಲಾಯಿಸಲು ಲಂಚ ಪಡೆದಿದ್ದರು. ಆದರೆ ಅವರಿಗೆ ಮತ ಹಾಕಿರಲಿಲ್ಲ. ಇದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ಸಿಬಿಐ ತನಿಖೆಗೆ ದಾರಿ ಮಾಡಿಕೊಟ್ಟಿತು.
- ಸೀತಾ ಸೊರೇನ್ ಅವರು ಜೆಎಂಎಂ ಪಕ್ಷದ ಸಂಸ್ಥಾಪಕ ಶಿಬು ಸೊರೇನ್ ಅವರ ಮಗಳು. ವಿಧಾನಸಭೆಯಲ್ಲಿ ತಾವು ಯಾವುದೇ ಮಾತು ಆಡಲಿ, ಯಾರಿಗೇ ಮತ ಚಲಾಯಿಸಲಿ, ಸದನದ ಸಮಿತಿಗಳಲ್ಲಿ ಯಾವುದೇ ಮಾತು ಆಡಲಿ ಆ ವಿಚಾರವಾಗಿ ತಮ್ಮ ವಿರುದ್ಧ ಕಾನೂನಿನ ಅಡಿ ಕ್ರಮ ಜರುಗಿಸುವಂತೆ ಇಲ್ಲ ಎಂದು ಸಂವಿಧಾನದ 194(2) ವಿಧಿಯು ಹೇಳುತ್ತದೆ ಎಂದು ಸೀತಾ ಅವರು ವಾದಿಸಿದ್ದರು. ಜೆಎಂಎಂ ಪಕ್ಷದ ಶಾಸಕಿಯಾಗಿ ತಾವು ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಸಂಜೀವ್ ಕುಮಾರ್ ಅವರಿಗೆ ಮತ ಚಲಾಯಿಸಿದ್ದಾಗಿ ಹೇಳಿದ್ದರು.
- ಸೀತಾ ವಿರುದ್ಧ ಸಿಬಿಐ ದಾಖಲಿಸಿದ್ದ ಪ್ರಕರಣವನ್ನು ರದ್ದುಪಡಿಸಲು ಜಾರ್ಖಂಡ್ ಹೈಕೋರ್ಟ್ 2014ರಲ್ಲಿ ನಿರಾಕರಿಸಿತು. ಈ ಕ್ರಮವನ್ನು ಪ್ರಶ್ನಿಸಿ ಸೀತಾ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು.
- ಇದು ಸಾರ್ವಜನಿಕ ಮಹತ್ವದ ಪ್ರಕರಣ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗಿದ್ದ ರಂಜನ್ ಗೊಗೊಯಿ ಅವರು ಪ್ರಕರಣವನ್ನು ಮೂವರು ನ್ಯಾಯಮೂರ್ತಿಗಳ ಪೀಠಕ್ಕೆ ವಹಿಸಿದ್ದರು.
- ಸಂಸದರು ಹಾಗೂ ಶಾಸಕರು ಸದನದಲ್ಲಿ ಏನೇ ಮಾಡಿದ್ದರೂ ಅದಕ್ಕೆ ಕಾನೂನಿನ ಕ್ರಮದಿಂದ ರಕ್ಷಣೆ ಇದೆ ಎಂದು 1998ರಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ಹೇಳಿತ್ತು. ಅಂದರೆ, ಶಾಸಕರು, ಸಂಸದರು ಮತ ಚಲಾಯಿಸಲು ಲಂಚ ಪಡೆದಿದ್ದರೂ ಅವರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇತ್ತು.
- ಇದಾದ ಒಂಬತ್ತು ವರ್ಷಗಳ ನಂತರದಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಇನ್ನೊಂದು ಪೀಠವು 'ಪ್ರಶ್ನೆ ಕೇಳಲು ಲಂಚ' ಪ್ರಕರಣದಲ್ಲಿ, ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಸಂಸದರು ಸಂಸತ್ತಿನಿಂದ ಶಾಶ್ವತವಾಗಿ ಹೊರಹಾಕಲು ಯೋಗ್ಯರು ಎಂದು ಹೇಳಿತ್ತು.
- 2019ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಸೀತಾ ಅವರ ಅರ್ಜಿಯು ವಿಚಾರಣೆಗೆ ಬಂತು. ಆಗ ತ್ರಿಸದಸ್ಯ ಪೀಠವು ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಿತು.
- ಸೋಮವಾರ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಲಂಚ ಪಡೆದಿದ್ದರೂ ಶಾಸಕರು, ಸಂಸದರಿಗೆ ರಕ್ಷಣೆ ಇದೆಯೇ ಎಂಬ ಪ್ರಶ್ನೆಗೆ ನಿರ್ಣಾಯಕ ಉತ್ತರವನ್ನು ನೀಡಿದೆ.

ಎರಡು ವಿಧಿಗಳ ಬಗ್ಗೆ ಪರಿಶೀಲನೆ

ಶಾಸಕರು ಮತ್ತು ಸಂಸದರು ತಮ್ಮ ವಿರುದ್ಧ ಲಂಚದ ಆರೋಪ ಬಂದಾಗ, ಕ್ರಿಮಿನಲ್ ಪ್ರಕರಣಗಳ ನ್ಯಾಯಾಲಯದಲ್ಲಿ ಸಂವಿಧಾನದ 105 ಹಾಗೂ 194ನೇ ವಿಧಿಗಳ ಆಧಾರದಲ್ಲಿ ಕಾನೂನು ಕ್ರಮದಿಂದ ರಕ್ಷಣೆ ಪಡೆಯಬಹುದೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಿದೆ.

1998ರ ಸುಪ್ರೀಂ ಕೋರ್ಟ್ ತೀರ್ಪು ಸಾರ್ವಜನಿಕ ಹಿತಾಸಕ್ತಿಯ ಮೇಲೆ, ಸಾರ್ವಜನಿಕ ಜೀವನದಲ್ಲಿ ಸಚ್ಚಾರಿತ್ರ್ಯದ ಮೇಲೆ ಮತ್ತು ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯ ಮೇಲೆ ಬಹಳ ವಿಸ್ತೃತವಾದ ಪರಿಣಾಮವನ್ನು ಬೀರಿದೆ ಎಂದು ಏಳು ಸದಸ್ಯರ ನ್ಯಾಯಪೀಠವು ಸೋಮವಾರ ಹೇಳಿದೆ.

7ನೇ ಪುಟ ನೋಡಿ

ಸಂವಿಧಾನ ಪೀಠದಲ್ಲಿ ಇದ್ದವರು

- ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್,
- ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ,
- ಎಂ.ಎಂ. ಸುಂದರೇಶ್,
- ಪಿ.ಎಸ್. ನರಸಿಂಹ,
- ಜೆ.ಬಿ. ಪಾರ್ದೀವಾಲಾ,
- ಸಂಜಯ್ ಕುಮಾರ್ ಮತ್ತು
- ಮನೋಜ್ ಮಿಶ್ರಾ

ರಥೋತ್ಸವ ವಿಜಯನಗರ ಜಿಲ್ಲೆ ಕೊಟ್ಟೂರಿನಲ್ಲಿ ಸೋಮವಾರ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವವು ಭಕ್ತಾದಿಗಳ ಸಮ್ಮುಖದಲ್ಲಿ ಸಂಭ್ರಮದಿಂದ ನೆರವೇರಿತು ಪ್ರಜಾವಾಣಿ ಚಿತ್ರ/ ಜಿ.ಕರಿಬಸವರಾಜ

ಎಫ್‌ಎಸ್‌ಎಲ್ ವರದಿ, ಸಾಕ್ಷ್ಯಾಧಾರದಲ್ಲಿ ಕ್ರಮ: ಡಿಸಿಪಿ

ಪಾಕ್ ಪರ ಘೋಷಣೆ ಆರೋಪ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ' ಎಂದು ಆರೋಪಿಸಲಾದ ಪ್ರಕರಣದಲ್ಲಿ ಮೂವರನ್ನು ವಿಧಾನಸೌಧ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಮೊಹಮ್ಮದ್ ನಾಶಿಪುಡಿ

ದೆಹಲಿ ಕಿಶನ್ ಗಂಜ್‌ನ ಮೊಹಮ್ಮದ್ ಇಲ್ತಾಜ್, ಹಾವೇರಿ ಜಿಲ್ಲೆಯ ಬ್ಯಾಡಗಿಯ ಮೊಹಮ್ಮದ್ ನಾಶಿಪುಡಿ, ಬೆಂಗಳೂರು ಜಯಮಹಲ್‌ನ ಮುನಾವರ್ ಅಹ್ಮದ್ ಬಂಧಿತ ಆರೋಪಿಗಳು.

'ಫೆ. 27ರಂದು ವಿಧಾನಸೌಧದಲ್ಲಿ ರಾಜ್ಯಸಭೆ ಚುನಾವಣೆಯ ಮತದಾನ ನಡೆದಿತ್ತು. ಫಲಿತಾಂಶ ಬಂದ ಬಳಿಕ, ಸಂಭ್ರಮಾಚರಣೆ ವೇಳೆ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದ್ದ ಬಗ್ಗೆ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ, ಸಾಂದರ್ಭಿಕ ಸಾಕ್ಷ್ಯಗಳು, ಸ್ಥಳದಲ್ಲಿದ್ದ ಸಾಕ್ಷಿಗಳ ಹೇಳಿಕೆ ಹಾಗೂ ಲಭ್ಯವಿರುವ ಸಾಕ್ಷ್ಯಗಳ ಆಧಾರದಲ್ಲಿ ಮೂವರನ್ನು ಬಂಧಿಸಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಾಸ್ ಪಡೆದಿದ್ದ ಆರೋಪಿಗಳು: 'ಮೊಹಮ್ಮದ್ ನಾಶಿಪುಡಿ, ಮೆಣಸಿನ ಕಾಯಿ ವ್ಯಾಪಾರಿ. ಈತ, ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿದ್ದಾನೆ. ಮುನಾವರ್ ಸಹ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತ. ಇಲ್ತಾಜ್, ಚುನಾವಣೆಗಾಗಿಯೇ ದೆಹಲಿಯಿಂದ ಬೆಂಗಳೂರಿಗೆ ಬಂದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜ್ಯಸಭಾ ಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್‌ನ ಸೈಯ್ಯದ್ ನಾಸಿರ್ ಹುಸೇನ್ ಅವರ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದ ಆರೋಪಿಗಳು, 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದ್ದರೆಂಬ ಆರೋಪವಿತ್ತು. 'ನಾಸಿರ್ ಸಾಬ್ ಜಿಂದಾಬಾದ್' ಎಂದಿರುವುದಾಗಿ ಕೆಲವರು ಹೇಳುತ್ತಿದ್ದರು.'

'ಘೋಷಣೆ ಕೂಗಿದ್ದ ದೃಶ್ಯ ಸುದ್ದಿವಾಹಿನಿಗಳ ಕ್ಯಾಮೆರಾದಲ್ಲಿ ಸೆರೆ ಆಗಿತ್ತು. ಸ್ಥಳದಲ್ಲಿದ್ದವರು ಸಹ ವಿಡಿಯೊ ಚಿತ್ರೀಕರಿಸಿದ್ದರು. ಎಲ್ಲ ವಿಡಿಯೊಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದ್ದು ನಿಜವೆಂಬುದು ಪ್ರಯೋಗಾಲಯದ ವರದಿಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳ ಧ್ವನಿ ಮಾದರಿ ಸಹ ಸಂಗ್ರಹಿಸಲಾಗಿತ್ತು. ವಿಡಿಯೊದಲ್ಲಿರುವ ಧ್ವನಿಗೂ ಆರೋಪಿಗಳ ಧ್ವನಿಗೂ ಹೋಲಿಕೆ ಇರುವುದಾಗಿ ಪ್ರಯೋಗಾಲಯದ ವರದಿ ಬಂದಿದೆ. ಹೀಗಾಗಿ, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಇಬ್ಬರಿಂದ ಜಿಂದಾಬಾದ್'

'ಬಂಧಿತ ಆರೋಪಿಗಳ ಪೈಕಿ ಒಬ್ಬ, 'ಪಾಕಿಸ್ತಾನ್' ಎಂದು ಕೂಗಿದ್ದ. ಇನ್ನಿಬ್ಬರು, 'ಜಿಂದಾಬಾದ್' ಎಂದು ಧ್ವನಿಗೂಡಿಸಿದ್ದರು. ಈ ಅಂಶ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಒಳಪುಟಗಳು
10 ಸಾವಿರ ಟನ್ ಅಕ್ಕಿ ಮಾರಾಟ ಗುರಿ 10
ವಾರದೊಳಗೆ ಸೀಟು ಹಂಚಿಕೆ ಅಂತಿಮ: ಎಚ್‌ಡಿಡಿ 4
'5 ಪೈಸೆ ಪಡೆದಿದ್ದರೂ ರಾಜಕೀಯ ನಿವೃತ್ತಿ' 4

ರೈತರ ಪ್ರತಿಭಟನೆ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿ: 'ಸುಪ್ರೀಂ' ಕಿಡಿ

'ಪ್ರಚಾರಕ್ಕಾಗಿ ಅರ್ಜಿ ಸಲ್ಲಿಸಬೇಡಿ'

ನವದೆಹಲಿ (ಪಿಟಿಐ): 'ರೈತರ ಪ್ರತಿಭಟನೆಗೆ ಸಂಬಂಧಿಸಿದ ವಿಷಯಗಳು ತೀರಾ ಗಂಭೀರವಾದವು. ಈ ಸಂಬಂಧ ಕೇವಲ ಪ್ರಚಾರಕ್ಕಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸಿಖ್ ವಾಣಿಜ್ಯ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಗ್ನೋಸ್ಟೋಸ್ ಥಿಯೊಸ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಗಮನಿಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠ ಈ ಮಾತು ಹೇಳಿತು.

ಶಾಂತಿಯುತವಾಗಿ ಪ್ರತಿಭಟನೆ ನಡೆಸುವ ರೈತರ ಹಕ್ಕನ್ನು ಕೇಂದ್ರ ಮತ್ತು ಕೆಲ ರಾಜ್ಯ ಸರ್ಕಾರಗಳು ಹತ್ತಿಕ್ಕುತ್ತಿವೆ ಎಂದು ಅರ್ಜಿದಾರರು ಆರೋಪಿಸಿದ್ದರು. ಅರ್ಜಿ ಗಮನಿಸುತ್ತಿದ್ದಂತೆಯೇ ಅಭಿಪ್ರಾಯ ವ್ಯಕ್ತಪಡಿಸಿದ ಪೀಠ, ಅರ್ಜಿಯನ್ನು ವಾಪಸು ಪಡೆಯುವಂತೆಯೂ ಸೂಚಿಸಿತು.

'ಪ್ರಚಾರಕ್ಕಾಗಿ ಅರ್ಜಿ ಸಲ್ಲಿಸಬಾರದು. ನಿಜವಾದ ಬದ್ಧತೆ ಉಳ್ಳವರು ಮಾತ್ರ ಅರ್ಜಿ ಸಲ್ಲಿಸಬೇಕು. ದಿನಪತ್ರಿಕೆಗಳನ್ನು ನೀವು ಗಮನಿಸಿದ್ದರೆ ಹೈಕೋರ್ಟ್ ಈ ಪ್ರಕರಣದ ವಿಚಾರಣೆಯನ್ನು ನಡೆಸುತ್ತಿರುವುದೂ ನಿಮಗೆ ತಿಳಿದಿರುತ್ತದೆ' ಎಂದು ಪೀಠ ಹೇಳಿತು.

'ಅಲ್ಲದೆ, ಹೈಕೋರ್ಟ್ ಈ ಸಂಬಂಧ ಈಗಾಗಲೇ ಕೆಲವು ನಿರ್ದೇಶನಗಳನ್ನೂ ನೀಡಿದೆ ಎಂಬುದು ನಿಮಗೆ ಗೊತ್ತಿರಬೇಕು. ಮುಂದಿನ ಬಾರಿ ಎಚ್ಚರಿಕೆಯಿಂದಿರಿ. ಇವು ಸಂಕೀರ್ಣವಾದ ವಿಷಯಗಳು. ಹೆಚ್ಚು ಅಧ್ಯಯನ ಮಾಡಿ' ಎಂದು ಅರ್ಜಿದಾರರ ಪರ ವಕೀಲರಿಗೆ ಹೇಳಿತು.

'ನವದೆಹಲಿಗೆ ಸಂಪರ್ಕ ಕಲ್ಪಿಸುವ ಗಡಿಯನ್ನು ಮುಚ್ಚಿರುವ ಕೇಂದ್ರ, ಕೆಲ ರಾಜ್ಯ ಸರ್ಕಾರಗಳು ರೈತರಿಗೆ ಬೆದರಿಕೆ ಒಡ್ಡಿವೆ. ನಿಷೇಧಾಜ್ಞೆ ಹೇರಿವೆ. ಕೆಲವರನ್ನು ಬಂಧಿಸಲಾಗಿದೆ. ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ನಿರ್ಬಂಧಿಸಲಾಗಿದೆ' ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ರಾಜ್ಯದ ಡಿಜಿ– ಐಜಿಪಿ ಭೇಟಿ • ವಿಶೇಷ ತಂಡಗಳಿಂದ ತನಿಖೆ ಚುರುಕು

ಸ್ಫೋಟ: ಎನ್‌ಐಎ ತನಿಖೆಗೆ ಐಜಿಪಿ ನೇತೃತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಹೊಣೆಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕೃತವಾಗಿ ವಹಿಸಿಕೊಂಡಿದ್ದು, ಎನ್‌ಐಎ ಐಜಿಪಿ ನೇತೃತ್ವದಲ್ಲಿ ವಿಶೇಷ ತಂಡಗಳು ಕಾರ್ಯಾಚರಣೆ ಶುರುಮಾಡಿವೆ.

ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟದ ಸ್ಥಳಕ್ಕೆ ಎನ್‌ಐಎ ಸೇರಿ ಕೇಂದ್ರದ ಹಲವು ತನಿಖಾ ಸಂಸ್ಥೆಗಳು ಭೇಟಿ ನೀಡಿದ್ದವು. ಅವಶೇಷಗಳ ಮಾದರಿಗಳನ್ನು ಸಂಗ್ರಹಿಸಿದ್ದವು. ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆಯಡಿ (ಯುಎಪಿಎ) ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿತ್ತು.

ಕಾನೂನು ಪ್ರಕಾರ ಯುಎಪಿಎ ಪ್ರಕರಣದ ಬಗ್ಗೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಲಾಗಿತ್ತು. ಇದರ ಬೆನ್ನಲ್ಲೇ ಅಧಿಕೃತವಾಗಿ ತನಿಖೆ ಆರಂಭಿಸಲು ಎನ್‌ಐಎ ಅಧಿಕಾರಿಗಳಿಗೆ ನಿರ್ದೇಶನ ದೊರಕಿದೆ. ಹೀಗಾಗಿ, ಐಜಿಪಿ ಸಂತೋಷ್ ರಸ್ತೋಗಿ ನೇತೃತ್ವದಲ್ಲಿ ತನಿಖೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ.

ರಾಜ್ಯದ ಡಿಜಿ- ಐಜಿಪಿ ಭೇಟಿ: ಪ್ರಕರಣದ ತನಿಖೆ ಆರಂಭಿಸಿರುವ ಎನ್‌ಐಎ ಐಜಿಪಿ ಸಂತೋಷ್ ರಸ್ತೋಗಿ ಹಾಗೂ ಅಧಿಕಾರಿಗಳು, ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಅವರನ್ನು ಸೋಮವಾರ ಭೇಟಿಯಾಗಿ ಮಾಹಿತಿ ಪಡೆದರು.

ಸ್ಫೋಟ ಪ್ರಕರಣದ ಬಗ್ಗೆ ಬೆಂಗಳೂರು ಸಿಸಿಬಿ ಪೊಲೀಸರು ಈಗಾಗಲೇ ತನಿಖೆ ನಡೆಸುತ್ತಿದ್ದು, ಅದರ ಪ್ರಗತಿ ಬಗ್ಗೆ ಐಜಿಪಿ ಮಾಹಿತಿ ಪಡೆದುಕೊಂಡರು. ಜೊತೆಗೆ, ಪ್ರಕರಣದ ಕಡತಗಳನ್ನು ಸೂಕ್ತ ಸಮಯಕ್ಕೆ ಹಸ್ತಾಂತರಿಸುವಂತೆ ಕೋರಿದರೆಂದು ಗೊತ್ತಾಗಿದೆ.

4ನೇ ಪುಟ ನೋಡಿ

'ಪುರಾವೆಗಳು ಲಭ್ಯ'

'ಬಾಂಬ್ ಸ್ಫೋಟ ಪ್ರಕರಣ ಭೇದಿಸಿ ಆರೋಪಿಯನ್ನು ಬಂಧಿಸಲು ಬೆಂಗಳೂರು ಪೊಲೀಸರು ಹಗಲು–ರಾತ್ರಿ ಕೆಲಸ ಮಾಡುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಲವು ಪುರಾವೆಗಳು ಈಗಾಗಲೇ ಲಭ್ಯವಾಗಿವೆ' ಎಂದು ಡಿಜಿ–ಐಜಿಪಿ ಅಲೋಕ್ ಮೋಹನ್ ಹೇಳಿದರು.

ಕೆಲವೆಡೆ ಸರ್ವರ್ ಸಮಸ್ಯೆ, ರೈತರ ಅಸಮಾಧಾನ, ಕೇಂದ್ರದ ಮುಂದೆಯೇ ವಾಸ್ತವ್ಯ

ಕೊಬ್ಬರಿ ನೋಂದಣಿ: ನೂಕುನುಗ್ಗಲು

ಪ್ರಜಾವಾಣಿ ವಾರ್ತೆ

ಹಾಸನ/ತುಮಕೂರು/ಚಿಕ್ಕಮಗಳೂರು /ಚಿತ್ರದುರ್ಗ: ಕೊಬ್ಬರಿ ಖರೀದಿ ನೋಂದಣಿ ಸೋಮವಾರ ಆರಂಭವಾಗಿದ್ದು, ವಿವಿಧ ಜಿಲ್ಲೆಗಳ ನೋಂದಣಿ ಕೇಂದ್ರಗಳ ಎದುರು ರೈತರ ನೂಕುನುಗ್ಗಲು, ಪ್ರತಿಭಟನೆಗಳು ನಡೆದವು. ಕೆಲವೆಡೆ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದ್ದು ಅಸಮಾಧಾನಕ್ಕೆ ಕಾರಣವಾಯಿತು.

ರೈತರು ನೋಂದಣಿಗಾಗಿ ಭಾನುವಾರ ರಾತ್ರಿಯೇ ಖರೀದಿ ಕೇಂದ್ರದ ಮುಂದೆ ಜಮಾಯಿಸಿದ್ದರು.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ನುಗ್ಗೇಹಳ್ಳಿ, ಉದಯಪುರ, ಜಾವಗಲ್ ಕೇಂದ್ರಗಳಲ್ಲಿ ಸೋಮವಾರ ಹೆಚ್ಚಿನ ಜನಸಂದಣಿ ಉಂಟಾಗಿತ್ತು. ಹಿರೀಸಾವೆ ಕೇಂದ್ರದಲ್ಲಿ ರೈತರು ಒಮ್ಮೆಲೆ ನುಗ್ಗಿದ್ದರಿಂದ ಕೆಲಕಾಲ ನೋಂದಣಿ ಸ್ಥಗಿತಗೊಳಿಸಲಾಗಿತ್ತು. ಅರಸೀಕೆರೆಯಲ್ಲಿ ಅವ್ಯವಸ್ಥೆಯನ್ನು ಖಂಡಿಸಿ ರೈತರು ಪ್ರತಿಭಟಿಸಿದರು.

ಹಾಸನ ಜಿಲ್ಲೆಯ ಹಿರೀಸಾವೆ ನೋಂದಣಿ ಕೇಂದ್ರದ ಎದುರು ರೈತರು ಜಮಾಯಿಸಿದ್ದರು

'ಪ್ರತಿ ಪಂಚಾಯಿತಿಗೆ ಒಂದರಂತೆ ಖರೀದಿ ಕೇಂದ್ರವನ್ನು ಆರಂಭಿಸಿದರೆ ಮಾತ್ರ ನೂಕುನುಗ್ಗಲು ತಪ್ಪಲಿದೆ. ಅರ್ಹರಿಗೆ ಕೊಬ್ಬರಿ ಖರೀದಿಯ ಪ್ರಯೋಜನ ದೊರಕುತ್ತದೆ' ಎಂದು ರೈತರು ಹೇಳಿದರು.

'ಬಾಡಿಗೆ ರೈತರನ್ನು ಸರದಿ ಸಾಲಿನಲ್ಲಿ ನಿಲ್ಲಿಸಲಾಗಿದೆ. ಇವರಿಂದಲೇ ಗೊಂದಲ ಉಂಟಾಗುತ್ತಿದೆ' ಎಂದು ಯಾಳನಹಳ್ಳಿಯ ಬಲರಾಮ ಆರೋಪಿಸಿದರು.

10 ನೇ ಪುಟ ನೋಡಿ

UNIVERSAL COACHING CENTRE
VIJAYANAGAR, BENGALURU
KAS CRASH COURSE WITH TEST SERIES
STARTS FROM MARCH 15TH
IAS PRELIMS TEST SERIES
STARTS FROM MARCH 24TH
ENROLL NOW
9845512052 / 9686664983

ಮಂಗನ ಕಾಯಿಲೆ ಮೂವರ ಸಾವು

ಸಿದ್ದಾಪುರ (ಉತ್ತರ ಕನ್ನಡ)/ ಚಿಕ್ಕಮಗಳೂರು: ಮಂಗನ ಕಾಯಿಲೆಗೆ (ಕೆಎಫ್‌ಡಿ) ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಇಬ್ಬರು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

'ಸಿದ್ದಾಪುರ ತಾಲ್ಲೂಕು ಕಲ್ಲೂರಿನ 65 ವರ್ಷದ ವ್ಯಕ್ತಿ ಮತ್ತು ಹೆಗ್ಗೆಕೊಪ್ಪದ 80 ವರ್ಷದ ವೃದ್ಧ ಇಬ್ಬರಿಗೂ ಮಣಿಪಾಲ ಆಸ್ಪತ್ರೆಯಲ್ಲಿ ಪರೀಕ್ಷಿಸಿದಾಗ, ಕಾಯಿಲೆ ಇರುವುದು ದೃಢಪಟ್ಟಿತ್ತು. ಇಬ್ಬರೂ ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ. ಕೊಪ್ಪ ತಾಲ್ಲೂಕಿನಲ್ಲಿ ಸೋಮವಾರ ಮತ್ತೆ ಇಬ್ಬರಿಗೆ ಮಂಗನ ಕಾಯಿಲೆ ದೃಢಪಟ್ಟಿದೆ. ಜಿಲ್ಲೆಯಲ್ಲಿ ಕೆಎಫ್‌ಡಿ ಪ್ರಕರಣ 51ಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲ್ಲೂಕಿನ ಮೇಲ್‌ಪಾಲ್ ಗ್ರಾಮದ ಬಸವ ಪೂಜಾರಿ (71) ಮಂಗನ ಕಾಯಿಲೆಯಿಂದ ಮೃತಪಟ್ಟಿದ್ದಾರೆ. ಮಂಗನ ಕಾಯಿಲೆ ದೃಢವಾದ ಬಳಿಕ ಅವರನ್ನು ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

VICCO® — ವಿಶ್ವಾಸಾರ್ಹ ಆಯುರ್ವೇದ — 1952 ರಿಂದ
Go natural ಆಯುರ್ವೇದದ ಔಷಧ
BEST BRANDS 2023 An Initiative by ET NOW BEST BRANDS CONCLAVE
ಇಂತಹ ಅವಕಾಶ ಇನ್ನೆಲ್ಲಿ ಸಿಗಬಲ್ಲದು
ಒಂದರ ಜೊತೆಗೆ ಒಂದನ್ನು ಉಚಿತವಾಗಿ* ಪಡೆಯಿರಿ
ಈಗ ವೀಕೋದ ಉತ್ಕೃಷ್ಟ ಉತ್ಪಾದನೆಗಳ ಜೊತೆಗೆ ಆಯುರ್ವೇದದ ವಿಶೇಷತೆಗಳನ್ನು ಮನೆಗೆ ತನ್ನಿರಿ ಮತ್ತು ಕುಟುಂಬದೊಂದಿಗೆ ಆರೋಗ್ಯದ ದಿಕ್ಕಿನಲ್ಲಿ ಒಂದು ಹೆಜ್ಜೆ ಮುಂದೆ ಇಡಿರಿ. ಆಯುರ್ವೇದದ ಗುಣ ಹಲವಾರು, ಇದರ ಪ್ರಯೋಜನ ಪಡೆದುಕೊಳ್ಳಲಿ ಪ್ರತಿಯೊಬ್ಬರೂ !
ಯೋಚಿಸಬೇಡಿ, ಇಂದೇ ಖರೀದಿ ಮಾಡಿರಿ, ಈ ಆಫರ್ ಸಮೀಪದ ಸ್ಟೋರ್‌ನಲ್ಲಿ ಲಭ್ಯವಿದೆ.
ಆಫರ್ ಸೀಮಿತ ಅವಧಿಗೆ ಮಾತ್ರ

ವೀಕೋ ವಜ್ರದಂತಿ ಸೌಂಫ್ ಪೇಸ್ಟ್ | ವೀಕೋ ಲೋಶನ್ಸ್ | ವೀಕೋ ಆಲೋ ಕೇರ್ ಕ್ರೀಮ್ | ವೀಕೋ ನಾರಾಯಣಿ ಕ್ರೀಮ್ | ವೀಕೋ ಶೇವಿಂಗ್ ಕ್ರೀಮ್ ಬೇಸ್
*ಖರೀದಿ ಮಾಡಿದ ಉತ್ಪಾದನೆಯ ಜೊತೆಗೆ ಅದಕ್ಕೆ ಸಮಾನವಾದ ಉತ್ಪಾದನೆಯನ್ನು ಸಂಪೂರ್ಣ ಉಚಿತವಾಗಿ ಪಡೆಯಿರಿ.
*Products also available without offer *Available in select cities and stores
ಸಂಪೂರ್ಣ ಸ್ವದೇಶಿ
• Follow us on @viccolabs • Like us on /ViccoLabs
• Shop online at https://viccolabs.com • Customer Care No. 0712-2420890
ನಮ್ಮ ವೆಬ್‌ಸೈಟ್‌ನಲ್ಲಿ ಆಫರ್‌ನ ಪ್ರಯೋಜನ ಪಡೆದುಕೊಳ್ಳುವುದಕ್ಕೆ QR ಕೋಡನ್ನು ಸ್ಕ್ಯಾನ್ ಮಾಡಿರಿ.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

‘ಫಲಾನುಭವಿಗಳ ಹೀಯಾಳಿಸುವ ಬಿಜೆಪಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ರಾಜ್ಯ ಸರ್ಕಾರದ ಯೋಜನೆಗಳ ನಾಲ್ಕೂವರೆ ಕೋಟಿ ಫಲಾನುಭವಿಗಳನ್ನು ಬಿಜೆಪಿ ಹೀಯಾಳಿಸುತ್ತಿದೆ, ಅವಮಾನಿಸುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಸೋಮವಾರ ಸಮೀಪದ ಬೂದಿಹಾಳ ಗ್ರಾಮದಲ್ಲಿ ಆಯೋಜಿಸಿದ್ದ ವೃಷಭಾವತಿ ಏತ ನೀರಾವರಿ ಯೋಜನೆಯ ಶಂಕುಸ್ಥಾಪನೆ, ನೆಲಮಂಗಲ ವಿಧಾನಸಭಾ ಕ್ಷೇತ್ರದ ವಿವಿಧ ಸರ್ಕಾರಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ರಾಜ್ಯದ ಜನರಿಗೆ ಅನ್ನ ಕೊಡಬೇಕು. ಹಾಗಾಗಿ, ಪ್ರತಿ ಕೆಜಿ ಅಕ್ಕಿಗೆ ₹34 ಕೊಡ್ತೀವಿ. ನಮಗೆ ಅಕ್ಕಿ ಕೊಡಿ ಎಂದು ಕೇಂದ್ರಕ್ಕೆ ಕೇಳಿದೆವು. ಆದರೆ, ಕೇಂದ್ರ ಸರ್ಕಾರ ಅಕ್ಕಿ ಕೊಡಲು ನಿರಾಕರಿಸಿತು. ಬಡವರಿಗೆ ಅನ್ನ ನಿರಾಕರಿಸುವ ಬಿಜೆಪಿಗೆ ನಾಚಿಕೆ ಕೂಡ ಆಗಲಿಲ್ಲ. ನಾವು ಅಕ್ಕಿ ಬದಲಿಗೆ ಹಣವನ್ನು ಬಡವರ ಖಾತೆಗೆ ಹಾಕಿದರೆ ಆ ಫಲಾನುಭವಿಗಳನ್ನು ಬಿಜೆಪಿ ಅವಮಾನಿಸುತ್ತಿದೆ. ಅದೇ ಬಿಜೆಪಿಗೆ ಚಾಳಿ ಆಗಿಬಿಟ್ಟಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪಾಠ ಕಲಿಸಿ‘ ಎಂದು ಹೇಳಿದರು.

‘ಕೆ.ಸಿ.ವ್ಯಾಲಿ ಮತ್ತು ಎಚ್.ಎನ್. ವ್ಯಾಲಿಗೆ ₹ 3,000 ಕೋಟಿ ಮತ್ತು ವೃಷಭಾವತಿ ವ್ಯಾಲಿ ಯೋಜನೆಗೆ ₹2,240 ಕೋಟಿ ವೆಚ್ಚ ಮಾಡುತ್ತಿದ್ದೇವೆ. ಇದರಿಂದ ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು ಜಿಲ್ಲೆಗಳ ಜನರ ನೀರಿನ ಬವಣೆ ಶಾಶ್ವತವಾಗಿ ಪರಿಹಾರಗೊಳ್ಳಲಿದೆ. ಮೊದಲ ಹಂತದಲ್ಲಿ 70 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇದಾಗಿದೆ’ ಎಂದು ವಿವರಿಸಿದರು.

ನೆಲಮಂಗಲ ಸಮೀಪದ ಬೂದಿಹಾಳ ಗ್ರಾಮದಲ್ಲಿ ಆಯೋಜಿಸಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು.

> **ನಾವು ದೇವರು-ಧರ್ಮದ ಹೆಸರಲ್ಲಿ ಭಾವನಾತ್ಮಕವಾಗಿ ಕೆರಳಿಸಿ ಅಧಿಕಾರ ನಡೆಸುವುದಿಲ್ಲ. ಅನ್ನ-ಆರೋಗ್ಯ-ಅಕ್ಷರ-ಸೂರು-ನೀರಿಗಾಗಿ ಕಾರ್ಯಕ್ರಮ ಜಾರಿ ಮಾಡಿದ್ದೇವೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ನಮ್ಮ ಗ್ಯಾರಂಟಿ ಯೋಜನೆಗಳನ್ನು ಕಾರ್ಕಳದ ಶಾಸಕ ಸುನೀಲ್ ಕುಮಾರ್ ಹೊಗಳಿದರೆ, ತೀರ್ಥಹಳ್ಳಿಯ ಶಾಸಕ ಅರಗ ಜ್ಞಾನೇಂದ್ರ 420 ಯೋಜನೆ ಎಂದು ಲೇವಡಿ ಮಾಡಿದ್ದಾರೆ. ಬಿಜೆಪಿ ಗೊಂದಲದಲ್ಲಿ ಮುಳುಗಿದೆ. ಆರ್. ಅಶೋಕ್ ಮತ್ತು ಜೆಡಿಎಸ್ ತಾಕತ್ತಿದ್ದರೆ ಅವರ ಕಾರ್ಯಕರ್ತರಿಗೆ ಗ್ಯಾರಂಟಿ ತಿರಸ್ಕರಿಸಲು ಕರೆ ನೀಡಲಿ’ ಎಂದು ಸವಾಲು ಹಾಕಿದರು.

‘ಶ್ರೀಮಂತ ದೇವಸ್ಥಾನಗಳಿಂದ ಆದಾಯದ ಶೇ10ರಷ್ಟು ಹಣ ಪಡೆದು ಬಡ ದೇವಸ್ಥಾನಗಳಿಗೆ, ಅಲ್ಲಿನ ಅರ್ಚಕರಿಗೆ ಸಹಾಯ ಮಾಡಲು ಹೊರಟರೆ ಬಿಜೆಪಿ ಅಡ್ಡಗಾಲು ಹಾಕಿತು. ಎರಡು ತಿಂಗಳು ಕಳೆದ ಮೇಲೆ ಮತ್ತೊಮ್ಮೆ ಈ ಮಸೂದೆಯನ್ನು ಮಂಡಿಸಿ ಒಪ್ಪಿಗೆ ಪಡೆದು ಅನುಷ್ಠಾನಕ್ಕೆ ತರುತ್ತೇವೆ’ ಎಂದು ತಿಳಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ವ್ಯವಹಾರ ಸಚಿವ ಕೆ.ಎಚ್. ಮುನಿಯಪ್ಪ, ವಸತಿ ಸಚಿವ ಜಮೀರ್ ಅಹಮದ್ ಖಾನ್ , ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜ್, ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಶರತ್ ಬಚ್ಚೇಗೌಡ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಶಾಸಕರಾದ ಎಸ್.ಟಿ.ಸೋಮಶೇಖರ್, ಶಾಸಕ ಎನ್. ಶ್ರೀನಿವಾಸ್ ಮುಂತಾದವರು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಎಂಟು ತಿಂಗಳಲ್ಲಿ 1202 ಸೇವೆಗಳೂ ಆನ್‌ಲೈನ್‌ನಲ್ಲಿ ಲಭ್ಯ: ಕೃಷ್ಣಬೈರೇಗೌಡ

ಬೆಂಗಳೂರು: ಮುಂದಿನ 8 ತಿಂಗಳೊಳಗೆ ಎಲ್ಲಾ 1202 ಸೇವೆಗಳೂ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಬೇಕು. ಈ ಮೂಲಕ ‘ಸಕಾಲ’ವನ್ನು ಬಲಪಡಿಸಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಸೋಮವಾರ 'ಸಕಾಲ' ಸಭೆ ನಡೆಸಿ ಮಾತನಾಡಿದ ಅವರು, ಸಕಾಲ ಯೋಜನೆ ಅಡಿ 101 ಇಲಾಖೆಯ 1082 ಸೇವೆಗಳನ್ನು ಈಗಾಗಲೇ ಒದಗಿಸಲಾಗುತ್ತಿದೆ. ಇದೀಗ ಹೊಸ 120 ಸೇವೆಗಳನ್ನು ಸೇರಿಸಲಾಗಿದೆ ಎಂದರು.



ಹೊಸ ಸೇವೆಗಳೂ ಸೇರಿ ಕೆಲವು ಸೇವೆಗಳು ಇನ್ನೂ ಕಾಗದದ ರೂಪದಲ್ಲಿವೆ. ಮುಂದಿನ 8 ತಿಂಗಳಲ್ಲಿ ಎಲ್ಲಾ ಸೇವೆಗಳನ್ನೂ ಡಿಜಿಟಲೀಕರಿಸಬೇಕು ಎಂದು ಅಧಿಕಾರಿಗಳಿಗೆ ಗಡುವು ನೀಡಿದರು.

1202 ಸಕಾಲ ಸೇವೆಗಳ ಪೈಕಿ 922 ನಾಗರಿಕ ಹಾಗೂ 280 ಸಿಬ್ಬಂದಿ ಸೇವೆಗಳನ್ನು ನೀಡಲಾಗುತ್ತಿದೆ. ಆದರೆ, ಈ ಪೈಕಿ 802 ಸೇವೆಗಳನ್ನು ಮಾತ್ರ ಸೇವಾಸಿಂಧು ಆನ್‌ಲೈನ್‌ನಲ್ಲಿ ಒದಗಿಸಲಾಗುತ್ತಿದೆ. ಉಳಿದ 120 ಸೇವೆಗಳನ್ನು ಆನ್‌ಲೈನ್‌ನಲ್ಲಿ ಒದಗಿಸಲಾಗುತ್ತಿಲ್ಲ. ನಿಗದಿತ ಸೇವೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜನಸಾಮಾನ್ಯರಿಗೆ ಅವಕಾಶ ಇದೆ. ಆದರೂ ಜನರಿಗೆ ಸಮಸ್ಯೆ ಆಗುತ್ತದೆ. ಆದ್ದರಿಂದ ಅರ್ಜಿಯಿಂದ ಸೇವೆಯವರೆಗೆ ಎಲ್ಲವನ್ನೂ ಡಿಜಿಟಲೀಕರಣಗೊಳಿಸಬೇಕು ಎಂದು ಹೇಳಿದರು.

ಪ್ರಯಾಣಿಕರ ದಟ್ಟಣೆ: ಕಲಬುರಗಿ–ಬೆಂಗಳೂರು ವಿಶೇಷ ರೈಲು

ಕಲಬುರಗಿ: ಪ್ರಯಾಣಿಕರ ದಟ್ಟಣೆ ತಗ್ಗಿಸಲು ಕಲಬುರಗಿ ಮತ್ತು ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಸಮೀಪದ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ನಡುವೆ ಹೊಸ ‘ಎಸ್‌ಎಂವಿಬಿ–ಕೆಎಲ್‌ಬಿಜಿ ವಾರದ ವಿಶೇಷ ರೈಲು’ ಮಾರ್ಚ್ 9ರಿಂದ ಸಂಚರಿಸಲಿದೆ ಎಂದು ಸಂಸದ ಡಾ.ಉಮೇಶ ಜಾಧವ ತಿಳಿಸಿದ್ದಾರೆ.

ಉಭಯ ನಿಲ್ದಾಣಗಳ ನಡುವೆ ಏಪ್ರಿಲ್ 5ರವರೆಗೆ ವಾರದಲ್ಲಿ ಒಂದು ದಿನ ಮಾತ್ರ ಎಸ್‌ಎಂವಿಬಿ–ಕೆಎಲ್‌ಬಿಜಿ ರೈಲು ಸಂಚರಿಸಲಿದೆ. ಆ ನಂತರ ವಾರದಲ್ಲಿ ಮೂರು ದಿನ ಓಡಲಿದೆ. ಪ್ರತಿ ಶುಕ್ರವಾರ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ನಿಂದ ರಾತ್ರಿ 11ಕ್ಕೆ ಹೊರಟ ರೈಲು, ಮರುದಿನ (ಶನಿವಾರ) ಬೆಳಿಗ್ಗೆ 9.5ಕ್ಕೆ ಕಲಬುರಗಿ ತಲುಪಲಿದೆ. ಕಲಬುರಗಿಯಿಂದ ಶನಿವಾರ ಸಂಜೆ 5ಕ್ಕೆ ಹೊರಡುವ ರೈಲು, ಮರುದಿನ (ಭಾನುವಾರ) ಬೆಳಿಗ್ಗೆ 4.15ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ತಲುಪಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ರೈಲ್ವೆ ಇಲಾಖೆಯ ಅಧಿಕಾರಿಗಳ ಜತೆಗೆ ನಿರಂತರ ಮಾತುಕತೆ ಮತ್ತು ಒತ್ತಡ ಹಾಕಿದ ಪರಿಣಾಮವಾಗಿ ದೀರ್ಘಕಾಲದ ಬೇಡಿಕೆ ಈಡೇರಿದೆ. ಹೊಸ ರೈಲು ನಿತ್ಯ ಸಂಚಾರ ನಡೆಸುವಂತಾಗಲು ಪ್ರಯಾಣಿಕರು ಸಹಕರಿಸಬೇಕು ಎಂದಿದ್ದಾರೆ.

ಮಹುವಾಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿ ಮಾರ್ಚ್ 11ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಟಿಎಂಸಿಯ ಮಾಜಿ ಸಂಸದೆ ಮಹುವಾ ಮೊಯಿತ್ರಾ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಸೋಮವಾರ ಹೊಸ ಸಮನ್ಸ್ ಜಾರಿಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣ ಸಂಬಂಧ ಕಳೆದ ತಿಂಗಳು ತನಿಖಾ ಸಂಸ್ಥೆ ಎದುರು ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಜೊತೆಗೆ ಕೆಲವು ವಾರಗಳ ಬಳಿಕ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕು ಎಂದು ಮೊಯಿತ್ರಾ ಅವರು ಇ.ಡಿ ಅಧಿಕಾರಿಗಳಿಗೆ ಕೋರಿದ್ದರು.

ಹೀಗಾಗಿ ಇದೀಗ ಮತ್ತೆ ಸಮನ್ಸ್ ಜಾರಿ ಮಾಡಿರುವ ಇ.ಡಿ ಅಧಿಕಾರಿಗಳು, ಮಾರ್ಚ್ 11ರಂದು ದೆಹಲಿಯಲ್ಲಿರುವ ಇ.ಡಿ ಕಚೇರಿಯಲ್ಲಿ ಹಾಜರಾಗುವಂತೆ ಸೂಚಿಸಲಾಗಿದೆ.

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ಆಯೋಜನೆ

ಇಂದಿನಿಂದ ತೋಟಗಾರಿಕಾ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹೆಸರಘಟ್ಟ: ಹೆಸರುಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಮಂಗಳವಾರದಿಂದ 3 ದಿನ ‘ರಾಷ್ಟ್ರೀಯ ತೋಟಗಾರಿಕೆ ಮೇಳ– 2024’ ನಡೆಯಲಿದೆ.

‘ಸುಸ್ಥಿರ ಅಭಿವೃದ್ಧಿಗಾಗಿ ನವೀನ ತೋಟಗಾರಿಕೆ ತಂತ್ರಜ್ಞಾನಗಳು‘ ಎಂಬ ಶೀರ್ಷಿಕೆಯಡಿ ನಡೆಯುವ ಈ ಮೇಳದಲ್ಲಿ ಪ್ರಮುಖವಾಗಿ ಚತುರ ನೀರಾವರಿ ವ್ಯವಸ್ಥೆ, ನಿಯಂತ್ರಿತ ಪರಿಸರ ಕೃಷಿ, ಸುಸ್ಥಿರ ಅಭಿವೃದ್ಧಿಗಾಗಿ ಪರಿಸರಸ್ನೇಹಿ ಪದ್ಧತಿಗಳು, ಡಿಜಿಟಲ್ ತೋಟಗಾರಿಕೆ ಸೇರಿದಂತೆ, ನವೀನ ತಂತ್ರಜ್ಞಾನಗಳ ಕುರಿತ ಪ್ರದರ್ಶನಗಳಿವೆ.

ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ನಡೆಯಲಿರುವ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಮಾರಾಟ ಮಾಡಲು ಸಿದ್ಧಗೊಂಡಿರುವ ವಿವಿಧ ಹಣ್ಣುಗಳ ಮೌಲ್ಯವರ್ಧಿತ ಉತ್ಪನ್ನಗಳು —ಪ್ರಜಾವಾಣಿ ಚಿತ್ರ

‘13 ವಿಭಾಗಗಳಲ್ಲಿ, 250ಕ್ಕೂ ಹೆಚ್ಚು ಪ್ರದರ್ಶನ ಮಳಿಗೆಗಳಿರುತ್ತವೆ. ಕೃಷಿ ಹಾಗೂ ತೋಟಗಾರಿಕೆ ವಿ.ವಿಗಳು ಖಾಸಗಿ ಹಾಗೂ ಸರ್ಕಾರೇತರ ಸಂಸ್ಥೆಗಳು, ರೈತ ಉತ್ಪಾದಕ ಸಂಘಗಳು (ಎಫ್‌ಪಿಒ) ಮೇಳದಲ್ಲಿ ತೋಟಗಾರಿಕೆಗೆ ಸಂಬಂಧಿಸಿದ ಹೊಸ ಆವಿಷ್ಕಾರಗಳು ಹಾಗೂ ತಂತ್ರಜ್ಞಾನ ಪ್ರದರ್ಶಿಸಲಿವೆ. ಜತೆಗೆ ಬೀಜಗಳು, ಹಣ್ಣಿನ ಗಿಡಗಳ ಮಾರಾಟವಿರುತ್ತದೆ‘ ಎಂದು ಮೇಳದ ಪ್ರಚಾರ ಸಮಿತಿ ಅಧ್ಯಕ್ಷ ನಂದೀಶ್ ಮಾಹಿತಿ ನೀಡಿದರು.

‘ತೋಟಗಾರಿಕೆ ಬೆಳೆಗಳ ಮೌಲ್ಯ ವರ್ಧನೆ ಮೇಳದ ಆಕರ್ಷಣೆಗಳಲ್ಲೊಂದು. ಜತೆಗೆ, ತೋಟಗಾರಿಕೆ ಉತ್ಪನ್ನಗಳ ಪ್ಯಾಕೇಜಿಂಗ್, ಶೇಖರಣಾ ತಂತ್ರಜ್ಞಾನ ಕುರಿತ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ನಗರ ತೋಟಗಾರಿಕೆ, ಮಣ್ಣುರಹಿತ ಕೃಷಿ, ತೋಟಗಾರಿಕೆ ಬೆಳೆಗಳ ಮೌಲ್ಯವರ್ಧನೆ ಕುರಿತು ಪ್ರದರ್ಶನ ಮಳಿಗೆಗಳಿರುತ್ತವೆ’ ಎಂದರು.

ಮೇಳದಲ್ಲಿ 18 ರಾಜ್ಯಗಳ ರೈತರು ಭಾಗವಹಿಸಲಿದ್ದಾರೆ. ಐಐಎಚ್‌ಆರ್ ತಂತ್ರಜ್ಞಾನ ಅಳವಡಿಸಿಕೊಂಡಿರುವ ಕೃಷಿಕರನ್ನು ಸನ್ಮಾನಿಸಲಾಗುತ್ತದೆ.

11 ಗಂಟೆಗೆ ಉದ್ಘಾಟನೆ

ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಕೇಂದ್ರ ಬುಡಕಟ್ಟು ವ್ಯವಹಾರಗಳು ಮತ್ತು ಕೃಷಿ ಮತ್ತು ರೈತ ಕಲ್ಯಾಣ ಸಚಿವ ಅರ್ಜುನ್ ಮುಂಡಾ ವರ್ಚುವಲ್ ವೇದಿಕೆ ಮೂಲಕ ಮೇಳವನ್ನು ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವ ಕೈಲಾಶ್ ಚೌಧರಿ, ಬಿಇಎಲ್ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕ ಭಾನುಪ್ರಕಾಶ್ ಶ್ರೀವಾಸ್ತವ, ದೆಹಲಿಯ ಐಸಿಎಆರ್ ಉಪ ಮಹಾನಿರ್ದೇಶಕ (ತೋಟಗಾರಿಕೆ ವಿಜ್ಞಾನಗಳ ವಿಭಾಗ) ಸಂಜಯ್ ಕುಮಾರ್ ಸಿಂಗ್ ಮತ್ತು ಐಐಎಚ್‌ಆರ್ ನಿರ್ದೇಶಕ(ಪ್ರಭಾರ) ಪ್ರಕಾಶ್ ಪಾಟೀಲ್ ಹಾಜರಿರುತ್ತಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

PUBLIC NOTICE

My client intends to purchase the property being described in the schedule hereunder and hereinafter referred to as 'Schedule Property' from its present owners, 1. Mr. Arvind D. Deogirikar, 2. Mr. Gajanan D. Deogirikar and 3. Mr. Shrinivas D. Deogirikar, all are sons of Late. Devendrarao B Deogirikar @ D. B. Deogirikar and residents of No. 1396, 9th Main, 3rd Cross, Judicial Layout Nyayanga Badavane, Bengaluru (Owners), who have represented that they have a clear, valid and marketable tittle with unrestricted rights of alienation over the same.

Any person/s, financial institutions and statutory authorities who claims any right, tittle or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within Ten (10) days hereof, failing which it will be presumed that no valid claims or objections subsist and my client would proceed to complete the transaction with the Owners thereof subject to compliance with other statutory and legal formalities.

SCHEDULE PROPERTY

All that piece and parcel of the residential property bearing Site No. 1396 measuring East to West 120.6 Ft., and North to South 80 Ft, in all measuring 1072 Sq., Yards equivalent to 9648 Sq., Ft., with an old house constructed thereon, situated in the layout known as Judicial Layout formed by The Karnataka State Judicial Department Employees House Building Co-operative Society Limited comprised in several survey numbers of Allalasandra, Chikkabommasandra and Jakkur Plantation Villages, Yelahanka Hobli, Bangalore North Taluk), now coming within the jurisdiction of the Bruhat Bangalore Mahanagara Palike, Yelahanka Sub – Division, Bangalore and bounded on the
East by: Site No. 1421;
West by: Road;
North by: Site No. 1397;
South by: Site No. 1395;

Place: Bangalore
Date: 05.03.2024

Sd/-
Lahiri Law Chambers, Kiran F Vora, Sandeep Lahiri, Advocates
No. 145, 1st Main Road, Sheshadripuram, Bengaluru-560020
Mob: 9886891785/ 8861249493

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land&
Building,Sites,Flats,
Converted&,
Agriculture Lands
Call:7204995189

REAL ESTATE SELLING

Farm House/ Land/ Resorts

General

1/2 ACRE gated converted eKhata 15 rooms AC fully furnished garden nandi hills road 9Cr Ph:9677002197

PERSONAL

Change of Name

WE, NAVEEN Shridhar and SowmyaParampalli Yajnanarayana, residing at 29, Krithika, 60 feet road, VBH complex,III Phase, Girinagar, Bengaluru-85 have changed the name of our minor son from AdhyanthNaveen Hegde to Adhyanth Hegde vide affidavit dated 24-02-2024, before notary RameshJ. Solanki, Bengaluru.

CHANGE OF NAME

I, **REKHA RANI**, Spouse of JC676853H, Rank: NB SUB Name: Y. Raja kumar, R/at. Kanchepalle, Pitchalavandla Palle, Kurabalakota, Chittoor Dist. AP, have changed my name from **REKHA RANI** to **Y REKHA RANI** vide affidavit dt. 04/03/2024 before Notary N. Narayana Swamy, Bengaluru. Henceforth I shall be called **Y REKHA RANI** only

JC673117Y, SUB, PRADEEP KUMAR SHARMA, Vill- Khad Mohan Nagar, Siyana, Bulandshahr, Uttar Pradesh, changed name CHARMI to CHARMI SHARMA, 02/03/2024, Notary K.V. Mani, Bangalore

CHANGE OF NAME

I, **PRASANNA KUMAR KUDUREGERE CHANDRAPPA**, Residing at No.14/26, 11th Cross, Bhovipalya, Mahalakshmipuram, Bengaluru-560086, in some documents my name is mentioned as **PRASANNA KUMAR K C, PRASANNAKUMAR KUDRUGERE CHANDRAPPA and PRASANNA KUMAR KUDUREGERE CHANDRAPPA** all the 3 names pertain to me. vide affidavit dt. 04-03-2024, before Notary P.C.Ramaiah, Bengaluru.

WE, SHILPA PRASAD and PRASAD. P, Residing at Mandya-571433 have changed our daughter's name from BRUNDASHREE. P to BRUNDA. P vide affidavit dated 25/1/2024 before Notary K.C.Shashikala, Bengaluru

MISS NEHA, Wife/o, 6500540M, NK/ASH, VINAY KUMAR BHADAURIA, Vill-Deenpura, Didee, Bhind, Madhya Pradesh changed name MISS NEHA to NEHA, 04/03/2024, Notary K.V. Mani, Bangalore

Lost

DOCUMENT LOST

I, **C. CHANDRA KUMAR**, Residing at 2nd Cross, Shivalingaiah Colony, Jeevan Bhimanagar, Bangalore-75, have lost my **release deed of property document No.6601/2014-15, Book No. 1, CD No. KRID539**, Located at the above address, While shifting residence. If Found please contact: **9880275265**

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 2481/-* FOR 15 WORDS

www.dhclassifieds.com BOOK NOW

For more details contact:
+91 9886213331 | +91 9901641752 | +91 9845114560

*Conditions apply

ಹಲವು ರಾಜ್ಯಗಳಲ್ಲಿ ಉಷ್ಣ ಅಲೆ ಸಾಧ್ಯತೆ: ಹವಾಮಾನ ತಜ್ಞರ ಎಚ್ಚರಿಕೆ

ಉತ್ತರ ಒಳನಾಡು, ಕರಾವಳಿಯಲ್ಲಿ ಬಿಸಿಗಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಧಗೆ ಹೆಚ್ಚುತ್ತಿದ್ದು, ವಾತಾವರಣದಲ್ಲಿ ಆಗಿರುವ ಬದಲಾವಣೆಯಿಂದ ಉತ್ತರ ಒಳನಾಡು, ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮಾರ್ಚ್ ಕೊನೆ ವಾರ, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬಿಸಿಗಾಳಿ ಬೀಸುವ ಆತಂಕ ಇದೆ ಎಂದು ಭಾರತೀಯ ಹವಾಮಾನ ತಜ್ಞರು ಮಾಹಿತಿ ನೀಡಿದ್ದಾರೆ.

‘ಬಾಗಲಕೋಟೆ, ಬೆಳಗಾವಿ, ವಿಜಯಪುರ, ಬೀದರ್, ಬಳ್ಳಾರಿ, ಧಾರವಾಡ, ಹಾವೇರಿ, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಉಷ್ಣಾಂಶ ದಾಖಲಾಗಿ ಬಿಸಿಗಾಳಿ ಬೀಸಲಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲೂ ಉಷ್ಣ ಅಲೆಯ ಆತಂಕವಿದೆ’ ಎಂದು ಭಾರತೀಯ ಹವಾಮಾನ ಇಲಾಖೆಯ ವಿಜ್ಞಾನಿ ಎ.ಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.

‘ಕರಾವಳಿ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್ ದಾಟಿ, ಇದೇ ತಾಪಮಾನ ಕೆಲವು ದಿನಗಳು ಮುಂದುವರೆಯುವ ಸಾಧ್ಯತೆ ಇರುತ್ತದೆ. ಉತ್ತರ ಒಳನಾಡಿನ ಕೆಲವು ಭಾಗಗಳಲ್ಲಿ ಗರಿಷ್ಠ ಉಷ್ಣಾಂಶ ವಾಡಿಕೆಗಿಂತ 3 ರಿಂದ 4 ಡಿಗ್ರಿ ಸೆಲ್ಸಿಯಸ್ ಹೆಚ್ಚು ದಾಖಲಾಗುವ ಸಾಧ್ಯತೆಯಿದೆ. ಇದು ಬಿಸಿಗಾಳಿಗೆ ಕಾರಣವಾಗಲಿದೆ’ ಎಂದು ಅವರು ಹೇಳಿದರು.

‘ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಉಷ್ಣ ಅಲೆ ವಾಡಿಕೆಗಿಂತ ಹೆಚ್ಚಿನ ದಿನಗಳು ಇರಲಿದೆ. ಇದರಿಂದ ಸ್ವಲ್ಪ ಸಮಸ್ಯೆ ಆಗಲಿದೆ’ ಎಂದು ಎಚ್ಚರಿಸಿದರು.

‘ದೇಶದ ಉತ್ತರ ಭಾಗದಲ್ಲಿ ಈಗ ಆಲಿಕಲ್ಲು ಸಹಿತ ಮಳೆಯಾಗುತ್ತಿದ್ದು, ಅಲ್ಲಿ ವಾತಾವರಣದಲ್ಲಿ ವ್ಯತ್ಯಾಸ ಕಂಡುಬಂದಿಲ್ಲ. ಉತ್ತರದಿಂದ ದಕ್ಷಿಣದತ್ತ ಗಾಳಿ ಬೀಸಿದ್ದರೆ ತಾಪಮಾನ ತಗ್ಗುವ ಸಾಧ್ಯತೆಯಿತ್ತು. ಆ ಭಾಗದಿಂದ ರಾಜ್ಯದ ಕಡೆಗೆ ಗಾಳಿ ಬೀಸುತ್ತಿಲ್ಲ. ಪೂರ್ವ ಹಾಗೂ ಆಗ್ನೇಯ ದಿಕ್ಕಿನಿಂದ ಗಾಳಿ ಬೀಸುತ್ತಿರುವ ಪರಿಣಾಮ ಬಿಸಿಗಾಳಿ ಇದೆ’ ಎಂದು ಹೇಳಿದರು.

‘ರಾಜ್ಯದ ಯಾವುದೇ ಭಾಗದಲ್ಲೂ ಫೆಬ್ರುವರಿ ತಿಂಗಳಲ್ಲಿ ಮಳೆಯೇ ಆಗಿಲ್ಲ. ಇದರಿಂದಲೂ ತಾಪಮಾನ ಏರಿಕೆಯಾಗಿದೆ’ ಎಂದು ಮಾಹಿತಿ ನೀಡಿದರು.

‘ರಾಜ್ಯದ ಕರಾವಳಿ, ಪಶ್ಚಿಮಘಟ್ಟ ವ್ಯಾಪ್ತಿಯ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಈ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗುವ ಸಂಭವವಿದೆ. ಏಪ್ರಿಲ್, ಮೇ ತಿಂಗಳ ಕೆಲವು ದಿನ ಆಲಿಕಲ್ಲು ಸಹಿತ ಮಳೆ ಆಗಲಿದೆ’ ಎಂದು ಮಾಹಿತಿ ನೀಡಿದರು.

ಆಶಾದಾಯಕ ಮುಂಗಾರು

‘ಎಲ್ ನಿನೊ ವಿದ್ಯಮಾನದ ಪ್ರಭಾವ ನಿಧಾನವಾಗಿ ತಗ್ಗುತ್ತಿದೆ. ಹೀಗಾಗಿ, ಈ ಬಾರಿ ಮುಂಗಾರು ಅವಧಿಯಲ್ಲಿ ಆಶಾದಾಯಕ ಮಳೆ ಆಗುವ ಸಾಧ್ಯತೆಯಿದೆ. ಆದರೆ, ಈಗಲೇ ನಿಖರವಾಗಿ ಮಾಹಿತಿ ನೀಡಲು ಸಾಧ್ಯವಿಲ್ಲ’ ಎಂದು ಪ್ರಸಾದ್ ಹೇಳಿದರು.

‘ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲಿ ಉಂಟಾಗುವ ಚಂಡಮಾರುತದಿಂದ ಹೆಚ್ಚಿನ ಮಳೆಯಾದರೆ ಮುಂದಿನ ಚಳಿಗಾಲದ ಅವಧಿಯಲ್ಲಿ ಚಳಿಯ ತೀವ್ರತೆ ಹೆಚ್ಚಿರಲಿದೆ’ ಎಂದರು.

ಎ.ಪ್ರಸಾದ್

‘ಮೌಢ್ಯ ನಿಯಂತ್ರಣಕ್ಕೆ ಇಚ್ಛಾಶಕ್ತಿ ಬೇಕು’

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಂಗಳೂರು: ‘ಮೌಢ್ಯ ಮತ್ತು ಮೂಢನಂಬಿಕೆಗಳನ್ನು ತಡೆಯುವ ಕಾನೂನುಗಳಿವೆ. ಆದರೆ, ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ‘ಮೌಢ್ಯ-ಮೂಢನಂಬಿಕೆ ಮತ್ತು ಮಾಧ್ಯಮ’ ಎಂಬ ವಿಷಯದ ಕುರಿತು ಸೋಮವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸರ್ಕಾರ ಕಾನೂನು ರೂಪಿಸಬಹುದು. ಆದರೆ, ಅದನ್ನು ಅನುಷ್ಠಾನಕ್ಕೆ ತರುವುದು ಕಾರ್ಯಾಂಗ. ಅಲ್ಲಿಯೂ ಸುಧಾರಣೆ ಅಗತ್ಯ’ ಎಂದರು.

‘ಮುಖ್ಯಮಂತ್ರಿ ಒಬ್ಬರೇ ಮೌಢ್ಯ ಮತ್ತು ಮೂಢನಂಬಿಕೆಗಳನ್ನು ಮೂಲೋತ್ಪಾಟನೆ ಮಾಡಲು ಸಾಧ್ಯವಿಲ್ಲ. ಸಚಿವರು, ಶಾಸಕರು, ಅಧಿಕಾರಿಗಳು ಎಲ್ಲರೂ ಕೈಜೋಡಿಸಿದರೆ ಕಾನೂನಿನ ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಅಂತಹ ವಾತಾವರಣ ಇನ್ನೂ ನಿರ್ಮಾಣವಾಗಿಲ್ಲ’ ಎಂದು ಹೇಳಿದರು.

‘ಅಂಬೇಡ್ಕರ್, ಬುದ್ಧ, ಬಸವಣ್ಣನವರ ವಿಚಾರಧಾರೆಯ ಬೆಳಕಿನಲ್ಲಿ ಉತ್ತಮ ಸಮಾಜ ಕಟ್ಟುವ ಕನಸನ್ನು ಹೊಂದಬೇಕು. ಇಂತಹ ಮಹನೀಯರ ವಿಚಾರಧಾರೆಗಳನ್ನು ಅಧ್ಯಯನ ಮಾಡುವ ಮೂಲಕ ವೈಚಾರಿಕತೆ ರೂಢಿಸಿಕೊಳ್ಳಬೇಕು. ಆಗ ನಮ್ಮ ಮೇಲೆ ಯಾರೂ ಸವಾರಿ ಮಾಡಲು ಸಾಧ್ಯವಾಗುವುದಿಲ್ಲ’ ಎಂದು ಅವರು ತಿಳಿಸಿದರು.

ಭಯ ಅಗತ್ಯವಿಲ್ಲ: ‘ಸ್ಮಶಾನದ ಕುರಿತು ಭಯ ಅಗತ್ಯವಿಲ್ಲ. ಅಲ್ಲಿ ದೆವ್ವವೂ ಇಲ್ಲ, ಪಿಶಾಚಿಯೂ ಇಲ್ಲ. ಸ್ಮಶಾನದಿಂದಲೇ ನಾನು ಅನೇಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದೇನೆ. ಎಲ್ಲವೂ ನಮ್ಮ ನಂಬಿಕೆಯನ್ನು ಆಧರಿಸಿರುತ್ತದೆ’ ಎಂದು ಸಚಿವರು ಹೇಳಿದರು.

ಮೌಢ್ಯ ತೊಲಗಿಸುವಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖವಾದುದು. ಮೌಢ್ಯ ಮತ್ತು ಮೂಢನಂಬಿಕೆಗಳನ್ನು ದೂರ ಮಾಡುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು ಎಂದರು.

ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿದರು.

ರೈತ ಧರಣಿಗೆ 700 ದಿನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆ ಉದ್ದೇಶಕ್ಕೆ ಸ್ವಾಧೀನ ಪಡಿಸಿಕೊಳ್ಳುವ ಸರ್ಕಾರದ ನಿರ್ಧಾರ ವಿರೋಧಿಸಿ ಇಲ್ಲಿನ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸೋಮವಾರ 700 ದಿನ ಪೂರೈಸಿದೆ.

700 ದಿನಗಳಿಂದ ಹೋರಾಟ ನಡೆಸಿ ಸರ್ಕಾರದ ಗಮನ ಸೆಳೆಯುತ್ತಿದ್ದೇವೆ. ಆದರೂ ಸರ್ಕಾರದಿಂದ ಸ್ಪಂದನೆ ದೊರೆಯುತ್ತಿಲ್ಲ. ರೈತರ ಹಿತ ದೃಷ್ಟಿ, ಮುಂದಿನ ಪೀಳಿಗೆಯ ಉಳಿವು ಮತ್ತು ಆಹಾರ ಭದ್ರತೆಗಾಗಿ ಭೂ ಸ್ವಾಧೀನವನ್ನು ಕೂಡಲೇ ಕೈಬಿಡಬೇಕು ಎಂದು ರೈತ ನಲ್ಲಪನಹಳ್ಳಿ ನಂಜಪ್ಪ ಆಗ್ರಹಿಸಿದರು.

ಸಚಿವ ಕೆ.ಎಚ್.ಮುನಿಯಪ್ಪ ಅವರು ದಲ್ಲಾಳಿಗಳ ಮಾತಿಗೆ ಮನ್ನಣೆ ನೀಡದೆ ಭೂಸ್ವಾಧೀನ ಕೈ ಬಿಟ್ಟು ರೈತರ ಹಿತ ಕಾಪಾಡಬೇಕು. ಅವರ ನೆಮ್ಮದಿ ಜೀವನಕ್ಕೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

‘ಕೃಷಿಯನ್ನೇ ನಮ್ಮ ಜೀವನವಾಗಿದೆ. ಶೇ 80ಕ್ಕೂ ಹೆಚ್ಚು ಜನರು ಭೂಮಿ ನೀಡಲು ಸಿದ್ಧರಿಲ್ಲ. ಕೆಲವು ದಳ್ಳಾಳಿಗಳು ಅಪಪ್ರಚಾರ ಮಾಡುತ್ತಾ ರೈತರ ನೆಮ್ಮದಿ ಹಾಳು ಮಾಡಲು ಪ್ರಯತ್ನಿಸುತ್ತಿದ್ದಾರೆ. ನಾವು ಯಾವುದಕ್ಕೂ ಹೆದರುವುದಿಲ್ಲ ಕೆಲವು ದಿನಗಳು ಕಾದು ನಮ್ಮ ದಾರಿಯನ್ನು ನಾವು ನೋಡಿಕೊಳ್ಳುತ್ತೇವೆ. ನಮ್ಮ ಶಕ್ತಿ ಏನೆಂಬುದನ್ನು ತೋರಿಸುತ್ತೇವೆ’ ಎಂದು ಅಶ್ವತಪ್ಪ ಎಚ್ಚರಿಸಿದರು.

ಆನೇಕಲ್ ಯೋಜನಾ ಪ್ರಾಧಿಕಾರ
‘ಅಣ್ಣ’, ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560 099.
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/59/2023–24 **ಪ್ರಕಟಣೆ** ದಿನಾಂಕ: 01.03.2024

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ:03.09.2014 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15(ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಎಸ್.ಮುನಿಶಾಮಿ ರೆಡ್ಡಿ	ಆನೇಕಲ್	ಅತ್ತಿಬೆಲೆ	ಗುಡ್ಡಹಟ್ಟಿ	71/4 (ಹಳೇ ನಂ. 71/3)	0–18.08	ಸಾರ್ವಜನಿಕ / ಅರೆ ಸಾರ್ವಜನಿಕ	ವಸತಿ

ಸಹಿ/–
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾಪ್ರ/ಜಿಎ/4053/2023–24

ಜಿಬಿಬಿಸಿ: 62 ಸಾವಿರ ಪಕ್ಷಿ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಗ್ರೇಟ್ ಬ್ಯಾಕ್‌ಯಾರ್ಡ್ ಬರ್ಡ್ ಕೌಂಟ್ (ಜಿಬಿಬಿಸಿ) ಅಭಿಯಾನಕ್ಕೆ ಭಾರತದಲ್ಲಿ ಪಕ್ಷಿ ವೀಕ್ಷಕರಿಂದ ಉತ್ತಮ ಸ್ಪಂದನೆ ದೊರೆತಿದೆ. ಕಳೆದ ಬಾರಿಗೆ ಹೋಲಿಸಿದರೆ ಸುಮಾರು 7 ಸಾವಿರದಷ್ಟು ಹೆಚ್ಚು ಪಕ್ಷಿಗಳ ವೀಕ್ಷಣೆ ನಡೆದಿದೆ.

ಜಿಬಿಬಿಸಿಯು ಪಕ್ಷಿ ಸಮೀಕ್ಷೆಯಲ್ಲಿ ಸಮುದಾಯವನ್ನು ತೊಡಗಿಸಿಕೊಂಡು ನಡೆಸುವ ಅಭಿಯಾನ ಆಗಿದೆ. ಪಕ್ಷಿ ವೀಕ್ಷಕರು ಪಕ್ಷಿ ವೀಕ್ಷಣೆ ಜತೆಯಲ್ಲೇ ಅವುಗಳ ವಿವರಗಳನ್ನು ದಾಖಲಿಸಿಕೊಳ್ಳಬೇಕು.

ಈ ಬಾರಿ ದೇಶದಾದ್ಯಂತ ನಾಲ್ಕು ದಿನ (ಫೆಬ್ರುವರಿ 16 ರಿಂದ 19ರ ವರೆಗೆ) ಪಕ್ಷಿ ವೀಕ್ಷಣೆ ನಡೆಸಲಾಗಿದೆ. ಪ್ರತಿದಿನ ಸರಾಸರಿ 2 ಸಾವಿರದಿಂದ 3 ಸಾವಿರ ಮಂದಿ ಪಕ್ಷಿ ವೀಕ್ಷಣೆಯಲ್ಲಿ ಪಾಲ್ಗೊಂಡಿದ್ದಾರೆ. ನಾಲ್ಕು ದಿನಗಳಲ್ಲಿ ಒಟ್ಟು 62,287 ಪಕ್ಷಿಗಳ ವೀಕ್ಷಣೆ ಹಾಗೂ ಅವುಗಳ ದಾಖಲೀಕರಣ ನಡೆದಿದೆ. ಕಳೆದ ವರ್ಷ 55,000 ಪಕ್ಷಿಗಳ ವಿವರಗಳನ್ನು ದಾಖಲಿಸಲಾಗಿತ್ತು.

‘ಭಾರತದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಸೇರಿಸಿಕೊಂಡು ನಡೆದ ಮೊದಲ ಸಮೀಕ್ಷೆ ಇದಾಗಿತ್ತು. ಬಹುತೇಕ ರಾಜ್ಯಗಳಲ್ಲಿ ಪಕ್ಷಿ ವೀಕ್ಷಕರು ಎಲ್ಲ ಜಿಲ್ಲೆಗಳಲ್ಲೂ ಪಕ್ಷಿ ವೀಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ಬರ್ಡ್ ಕೌಂಟ್ ಇಂಡಿಯಾ ತಿಳಿಸಿದೆ. ಎಲ್ಲ ಜಿಲ್ಲೆಗಳಲ್ಲೂ ಸಮೀಕ್ಷೆ ನಡೆದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ಸೇರಿವೆ.

ಸಮೀಕ್ಷೆಯ ಅವಧಿಯಲ್ಲಿ ಅತಿಹೆಚ್ಚು ಪಕ್ಷಿ ಪ್ರಭೇದಗಳನ್ನು ಪಟ್ಟಿ ಮಾಡಿರುವ ದೇಶಗಳ ಪೈಕಿ ಭಾರತವು (1,037) ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿದೆ. ಕೊಲಂಬಿಯಾ (1,367) ಮತ್ತು ಈಕ್ವೆಡಾರ್ (1,129) ದೇಶಗಳು ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿವೆ. ಅತಿಹೆಚ್ಚು ವೀಕ್ಷಣೆ ಮತ್ತು ದಾಖಲೀಕರಣ ಅಮೆರಿಕದಲ್ಲಿ (1.72 ಲಕ್ಷ) ಆಗಿದೆ.

‘ವಾಹನ ಸುಗಮ ಸಂಚಾರಕ್ಕಾಗಿ ರೇಸ್‌ಕೋರ್ಸ್ ವೃತ್ತ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತ ತಪ್ಪಿಸಲು ಮತ್ತು ಪಾದಚಾರಿಗಳ ಸುರಕ್ಷತೆಗಾಗಿ ನಗರದ ರೇಸ್‌ಕೋರ್ಸ್ ವೃತ್ತವನ್ನು (ಟ್ರಿಲೈಟ್) ಮರು ಅಭಿವೃದ್ಧಿ ಮಾಡಲಾಗುತ್ತಿದ್ದು, ಇದರಿಂದ ವಾಹನ ಸಂಚಾರ ಸುಗಮವಾಗಿದೆ ಎಂದು ಬಿಬಿಎಂಪಿ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಬಳ್ಳಾರಿ ರಸ್ತೆ ವಿಸ್ತರಣೆ ಮಾಡಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಸಮರ್ಪಣ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್. ವಿ. ಅಂಜಾರಿಯಾ ಅವರ ನೇತೃತ್ವದ ವಿಭಾಗೀಯ ಪೀಠಕ್ಕೆ ಬಿಬಿಎಂಪಿ (ಯೋಜನೆಗಳು-ಕೇಂದ್ರ) ವಿಭಾಗದ ಮುಖ್ಯ ಎಂಜಿನಿಯರ್ ಎಂ.ಲೋಕೇಶ್ ಪ್ರಮಾಣಪತ್ರ ಸಲ್ಲಿಸಿ ಈ ಸ್ಪಷ್ಟನೆ ನೀಡಿದ್ದಾರೆ.

ಟ್ರಿಲೈಟ್ ಜಂಕ್ಷನ್ ಅಲ್ಲಿ ಶಿವಾನಂದ ಮೇಲ್ಸೇತುವೆ ಕಡೆಗೆ ಹೋಗುವ ರಸ್ತೆ ತೀವ್ರ ತಿರುವಿನಿಂದ ಕೂಡಿದ್ದು, ಅಪಘಾತಗಳು ಸಂಭವಿಸುವ ಹಾಗೂ ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆಯಿದೆ. ಜಂಕ್ಷನ್ ಕೇಂದ್ರ ಭಾಗದಲ್ಲಿರುವ ಪ್ರತಿಮೆಗಳನ್ನು ತೆರವು-ಗೊಳಿಸಬೇಕು ಹಾಗೂ ಅಲ್ಲಿನ ಐಲ್ಯಾಂಡ್ ಅನ್ನು ಸರಿಪಡಿಸಬೇಕು ಎಂದು 2023ರ ಜ.4ರಂದು ನಗರ ಸಂಚಾರ ಪೊಲೀಸ್ (ಪೂರ್ವ) ವಿಭಾಗದ ಉಪ ಪೊಲೀಸ್ ಆಯುಕ್ತರು ಬಿಬಿಎಂಪಿಗೆ ಪತ್ರ ಬರೆದಿದ್ದರು. ಆ ಪತ್ರವನ್ನು ಪರಿಗಣಿಸಿ ಕುದುರೆ ಪ್ರತಿಮೆಗಳನ್ನು ತೆರವುಗೊಳಿಸಲಾಗಿದೆ. ಜಂಕ್ಷನ್ ಅನ್ನು ಮರು ವಿನ್ಯಾಸಗೊಳಿಸಲಾಗಿದ್ದು, ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಮಾರ್ಗಸೂಚಿಗಳ ಅನ್ವಯ ಸಂಚಾರ ಸುಗಮಗೊಳಿಸುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಜಂಕ್ಷನ್ ಮರು ಅಭಿವೃದ್ಧಿಯಿಂದ ರಸ್ತೆ ಅಗಲ ಕಡಿಮೆಯಾಗಿದೆ ಎಂಬುದು ಅರ್ಜಿದಾರರ ಊಹೆಯಾಗಿದೆ. ಸಂಚಾರ ನಿರ್ವಹಣೆಗೆ ಸಿಗ್ನಲ್ ಲೈಟ್ ಅಳವಡಿಸಲಾಗಿದೆ. ಜಂಕ್ಷನ್ ಮರು ವಿನ್ಯಾಸದ ಬಳಿಕ ಖಾಲಿ ಪ್ರದೇಶವನ್ನು ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯಡಿ ನವೀನ ಪರಿಕಲ್ಪನೆಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಜಂಕ್ಷನ್‌ನಲ್ಲಿ ಸಾರ್ವಜನಿಕ ಜಾಗ ಕಲ್ಪಿಸಲಾಗಿದೆ. ಪಾದಚಾರಿಗಳು ಸುರಕ್ಷತೆಯಿಂದ ಜಂಕ್ಷನ್ ದಾಟಲು ಅನುವು ಮಾಡಿಕೊಡಲಾಗಿದೆ. ಮರು ಅಭಿವೃದ್ಧಿಯಿಂದ ವಾಹನಗಳ ಸಂಚಾರ ಸುಗಮವಾಗಿದೆ. ಪಾದಚಾರಿಗಳು ಸರಕ್ಷಿತವಾಗಿ ರಸ್ತೆ ದಾಟುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಈ ಪ್ರಮಾಣ ಪತ್ರ ದಾಖಲಿಸಿಕೊಂಡ ಹೈಕೋರ್ಟ್, ಪಕ್ಷಗಾರರು ಪ್ರಕರಣ ಕುರಿತ ಮಾಹಿತಿಯನ್ನು ಪರಸ್ಪರ ವಿಮಯ ಮಾಡಿಕೊಳ್ಳುವಂತೆ ಸೂಚಿಸಿ ಅರ್ಜಿ ವಿಚಾರಣೆಯನ್ನು ಮಾರ್ಚ್ 7ಕ್ಕೆ ಮುಂದೂಡಿತು.

ಮಾರಕಾಸ್ತ್ರ ತೋರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಚಿಣ್ಣ ಪೀರಯ್ಯ ಎಂಬುವವರನ್ನು ಮಾರಕಾಸ್ತ್ರ ತೋರಿಸಿ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಕೆ.ಆರ್.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಾರತ್ತಹಳ್ಳಿಯ ಚಿಣ್ಣ ಪೀರಯ್ಯ ಬನಶಂಕರಿ ಬಡಾವಣೆಯಲ್ಲಿ ಸೋಮವಾರ ನಸುಕಿನಲ್ಲಿ ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಇಬ್ಬರು ದುಷ್ಕರ್ಮಿಗಳು, ಮಾರಕಾಸ್ತ್ರ ತೋರಿಸಿ ಹಣ ನೀಡುವಂತೆ ಬೆದರಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ತಮ್ಮ ಬಳಿ ಹಣವಿಲ್ಲವೆಂದು ಚಿಣ್ಣ ಪೀರಯ್ಯ ಹೇಳಿದ್ದರು. ಮೊಬೈಲ್ ಕಸಿದುಕೊಂಡಿದ್ದ ಆರೋಪಿಗಳು, ಯುಪಿಐ ಮೂಲಕ ₹ 5 ಸಾವಿರ ವರ್ಗಾಯಿಸಿಕೊಂಡು ಪರಾರಿಯಾಗಿದ್ದಾರೆ. ಬಳಿಕ, ಚಿಣ್ಣ ಪೀರಯ್ಯ ಠಾಣೆಗೆ ದೂರು ನೀಡಿದ್ದಾರೆ’ ಎಂದು ತಿಳಿಸಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್

ಅಧಿಕ ರಸಗೊಬ್ಬರ, ಕೀಟನಾಶಕ ಬಳಕೆ: ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಚ್ಚು ಆಹಾರವನ್ನು ಉತ್ಪಾದಿಸಲು ಅಧಿಕ ರಸಗೊಬ್ಬರ, ಕೀಟನಾಶಕಗಳ ಬಳಕೆ ಮಾಡಲಾಗುತ್ತಿದೆ. ಇದರಿಂದ ಮಾನವನ ಆರೋಗ್ಯದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಹಾಗೂ ಚಿನ್ನದ ಪದಕ ಪ್ರದಾನ ಮಾಡಿ ಅವರು ಮಾತನಾಡಿದರು.

'ಅತಿಯಾದ ರಸಗೊಬ್ಬರ ಬಳಕೆಯಿಂದ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ಪರಿಸರ ಕಲುಷಿತಗೊಳ್ಳುತ್ತಿವೆ' ಎಂದು ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಮಣ್ಣಿನ ರಕ್ಷಣೆಗಾಗಿ 2015ರಲ್ಲಿ ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆ ಪ್ರಾರಂಭಿಸಿದ್ದರು. ಇದರ ಅಡಿಯಲ್ಲಿ ದೇಶದಾದ್ಯಂತ 28 ಕೋಟಿ ರೈತ ಕುಟುಂಬಗಳಿಗೆ ಮಣ್ಣಿನ 'ಆರೋಗ್ಯ ಕಾರ್ಡ್' ವಿತರಿಸಲಾಗಿದೆ' ಎಂದರು. 'ಈಗ ರಸಗೊಬ್ಬರ, ರಾಸಾಯನಿಕ ಕೀಟನಾಶಕ ಬಳಸದಿರುವ ನೈಸರ್ಗಿಕ ಕೃಷಿಯನ್ನು ಉತ್ತೇಜಿಸುವ ಅವಶ್ಯಕತೆಯಿದೆ' ಎಂದು ಅವರು ಪ್ರತಿಪಾದಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, 'ಕೃಷಿಯನ್ನು ಲಾಭದಾಯಕ ಉದ್ದಿಮೆಯನ್ನಾಗಿಸಲು, ರೈತರ ಆದಾಯ ಹೆಚ್ಚಿಸಲು ರಾಜ್ಯ ಸರ್ಕಾರವು ಅನೇಕ ಯೋಜನೆ ಹಮ್ಮಿಕೊಂಡಿದೆ. ಅಧಿಕಾರಿಗಳು, ಕೃಷಿಯಲ್ಲಿನ ಹೊಸ ತಂತ್ರಜ್ಞಾನಗಳ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು. ಈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ತಾವು ಪಡೆದ ಜ್ಞಾನ ಮತ್ತು ಕೌಶಲಗಳ ಬಲದ ಮೇಲೆ ಕೃಷಿಯಲ್ಲಿರುವ ಸವಾಲುಗಳನ್ನು ಪರಿಹರಿಸಬೇಕು' ಎಂದು ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಚಿನ್ನದ ಪದಕಗಳನ್ನು ಪಡೆದ ಸ್ನೇಹಶ್ರೀ ಎಸ್‌, ಟಿ.ಎಂ.ಅಪರ್ಣಾ, ಸಿ.ಎಂ.ರಾಜೇಶ್‌, ಎಸ್‌ ನಂದಿತಾ ಎಸ್‌, ಆರ್‌.ಆರ್‌.ಪೂಜಾ, ಶ್ರೇಯಾ ಎಸ್‌ ಹಂಜಿ ಸಂಭ್ರಮಿಸಿದರು(ಎಡಚಿತ್ರ) ಘಟಿಕೋತ್ಸವದಲ್ಲಿ ಎಂ.ಸಿ. ರಂಗಸ್ವಾಮಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಸಚಿವ ಎನ್‌.ಚಲುವರಾಯಸ್ವಾಮಿ, ಕುಲಪತಿ ಎಸ್‌.ವಿ. ಸುರೇಶ ಉಪಸ್ಥಿತರಿದ್ದರು. – ಪ್ರಜಾವಾಣಿ ಚಿತ್ರ

ಮಳೆ ಕೊರತೆ: ಶೇ 50ರಷ್ಟು ಉತ್ಪಾದನೆ ಕುಸಿತ

'ಕಳೆದ ವರ್ಷ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು. 1,153 ಮಿ.ಮೀ ರಾಜ್ಯದ ವಾಡಿಕೆ ಮಳೆ. ಆದರೆ, 872 ಮಿ.ಮೀ ಮಳೆಯಾಗಿತ್ತು. ನೈರುತ್ಯ ಮುಂಗಾರಿನಲ್ಲಿ ಶೇ 25ರಷ್ಟು ಮಳೆ ಕೊರತೆಯಾಗಿತ್ತು' ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು.

'ರಾಜ್ಯದ 31 ಜಿಲ್ಲೆಗಳಲ್ಲಿ 216 ತಾಲ್ಲೂಕು ಬರಪೀಡಿತ ಎಂದು ಘೋಷಿಸಲಾಗಿದೆ. ಕಳೆದ ವರ್ಷ 73 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಶೇ 50ರಷ್ಟು ಉತ್ಪಾದನೆ ಕುಸಿತವಾಗಿದೆ' ಎಂದು ಮಾಹಿತಿ ನೀಡಿದರು.

ರೈತರಿಗೆ ಅಗತ್ಯವಿರುವ ಗುಣಮಟ್ಟದ ಬಿತ್ತನೆ ಬೀಜವನ್ನು ಪೂರೈಸಲು ರಾಜ್ಯದಲ್ಲಿ ಬಿತ್ತನೆ ಬೀಜ ಕಾಯ್ದೆ ಅನುಷ್ಠಾನಕ್ಕೆ ತರಲಾಗುತ್ತಿದೆ.

ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಸಾವಯವ ಗೊಬ್ಬರಗಳ ಬಳಕೆಯಿಂದ ಭೂಮಿ ಗುಣಮಟ್ಟ ಸುಧಾರಿಸುತ್ತದೆ. ಜೊತೆಗೆ ಉತ್ಪಾದನಾ ವೆಚ್ಚ ಕಡಿಮೆ ಮಾಡಿ, ಆದಾಯ ಹೆಚ್ಚಿಸುತ್ತದೆ

ಥಾವರಚಂದ್ ಗೆಹಲೋತ್, ರಾಜ್ಯಪಾಲ

ಪದವಿ ಪ್ರದಾನ	
83	ಪಿಎಚ್.ಡಿ
291	ಸ್ನಾತಕೋತ್ತರ ಪದವಿ
870	ಸ್ನಾತಕ ಪದವಿ
1,244	ಒಟ್ಟು ವಿದ್ಯಾರ್ಥಿಗಳು
ಚಿನ್ನದ ಪದಕಗಳು	
29	ಪಿಎಚ್.ಡಿ
69	ಸ್ನಾತಕೋತ್ತರ ಪದವಿ
58	ಪದವಿ

ಸುದ್ದಿ 2 ನಿಮಿಷ

ಕುರಿ– ಮೇಕೆ ಕಳವು: ಆರೋಪಿ ಬಂಧನಕ್ಕೆ ರೈತರ ಒತ್ತಾಯ

ಹೆಸರುಘಟ್ಟ: ದಾಸನಪುರ, ನೆಲಮಂಗಲ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕುರಿ – ಮೇಕೆ ಕಳ್ಳತನ ಪ್ರಕರಣಗಳು ಹೆಚ್ಚಾಗಿದ್ದು, ಕೃತ್ಯ ಎಸಗುತ್ತಿರುವ ಆರೋಪಿಗಳನ್ನು ತ್ವರಿತವಾಗಿ ಬಂಧಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

'ಖರೀದಿ ನೆಪದಲ್ಲಿ ಗ್ರಾಮಗಳಿಗೆ ಬರುವ ಕೆಲವರು, ಮೇಕೆ– ಕುರಿ ಸಾಕುವ ರೈತರನ್ನು ಭೇಟಿಯಾಗಿ ಮಾಹಿತಿ ಪಡೆಯುತ್ತಿದ್ದಾರೆ. ಇದಾದ ಕೆಲದಿನಗಳ ನಂತರ, ಅದೇ ರೈತರ ಕುರಿ– ಮೇಕೆಗಳು ಕಳ್ಳತನವಾಗುತ್ತಿವೆ. ಖರೀದಿ ನೆಪದಲ್ಲಿ ಬರುವವರೇ ಕಳ್ಳತನ ಮಾಡುತ್ತಿರುವ ಅನುಮಾನವಿದೆ' ಎಂದು ರೈತರು ಆರೋಪಿಸುತ್ತಿದ್ದಾರೆ.

ಕಳ್ಳತನ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ರೈತ ಮಹಿಳೆ ಲಕ್ಷ್ಮಮ್ಮ, 'ದಾಸನಪುರ ಹೋಬಳಿಯ ಪಿಳ್ಳಹಳ್ಳಿ ಸಮೀಪದ ವಿದ್ಯಾ ಪಬ್ಲಿಕ್ ಶಾಲೆ ಬಳಿ ಕುರಿ ಮತ್ತು ಮೇಕೆ ಕಳ್ಳರನ್ನು ಭಾನುವಾರ ರಾತ್ರಿ ಹಿಡಿಯಲಾಗಿದೆ ಎಂಬ ಸುದ್ದಿ ಹರಡಿತ್ತು. ಸುತ್ತಮುತ್ತಲಿನ ರೈತರು, ಶಾಲೆ ಬಳಿ ಜಮಾಯಿಸಿದ್ದರು. ಸ್ಥಳಕ್ಕೆ ಬಂದಿದ್ದ ಮಾದನಾಯಕನಹಳ್ಳಿ ಪೊಲೀಸರು, ಯಾವ ಕಳ್ಳನೂ ಸಿಕ್ಕಿಲ್ಲವೆಂದು ಹೇಳಿದರು. ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಠಾಣೆಗೆ ತಿಳಿಸುವಂತೆಯೂ ಕೋರಿದರು' ಎಂದರು.

'ರಾತ್ರಿ ವೇಳೆ ಕಾರಿನಲ್ಲಿ ಬರುವವರು, ನೋಂದಣಿ ಸಂಖ್ಯೆ ಫಲಕ ಮರೆ ಮಾಚುತ್ತಿದ್ದಾರೆ. ಮುಖಚಹರೆ ಗುರುತು ಸಿಗದಂತೆ ಮಾಸ್ಕ್ ಧರಿಸಿ ಕಳ್ಳತನ ಮಾಡುತ್ತಿದ್ದಾರೆ' ಎಂದು ಬೊಮ್ಮಶೆಟ್ಟಹಳ್ಳಿ ಗ್ರಾಮದ ಗಿರೀಶ್ ದೂರಿದರು.

'ಕಳ್ಳರನ್ನು ಬಂಧಿಸುವವರೆಗೂ, ಕುರಿ– ಮೇಕೆಗಳನ್ನು ರಕ್ಷಿಸಿಕೊಳ್ಳಲು ಯುವಕರೆಲ್ಲ ರಾತ್ರಿ ನಿದ್ದೆಗೆಟ್ಟು ಕಾವಲು ಕಾಯುತ್ತಿದ್ದೇವೆ' ಎಂದು ಅಳಲು ತೋಡಿಕೊಂಡರು.

ನಿವೇಶನ ಹಂಚಿಕೆ, ಹಕ್ಕು ಪತ್ರ ವಿತರಣೆ

ರಾಜರಾಜೇಶ್ವರಿ ನಗರ: ರಾಮೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಳ್ಳಘಟ್ಟದಲ್ಲಿ 5 ಎಕರೆ ಪ್ರದೇಶದಲ್ಲಿ 122 ಅಂಗವಿಕಲರಿಗೆ ಶಾಸಕ ಎಸ್.ಟಿ. ಸೋಮಶೇಖರ್ ಅವರು ನಿವೇಶನ ಹಂಚಿಕೆ ಮತ್ತು ಹಕ್ಕು ಪತ್ರಗಳನ್ನು ವಿತರಿಸಿದರು.

ಸರ್ಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನು ರಾಮೋಹಳ್ಳಿ ಗ್ರಾಮ ಪಂಚಾಯಿತಿ ಪ್ರಾಮಾಣಿಕವಾಗಿ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಭೀಮನಕುಪ್ಪೆ ವ್ಯಾಪ್ತಿಯಲ್ಲಿ ಬಿಡಿಎ ವತಿಯಿಂದ ಯುಜಿಡಿ ಯೋಜನೆಗೆ ಸಿದ್ಧತೆ ನಡೆದಿದ್ದು, ರಾಮೋಹಳ್ಳಿ, ವಿನಾಯಕ ನಗರ, ಚಳ್ಳಘಟ್ಟ ವ್ಯಾಪ್ತಿಯಲ್ಲಿಯೂ ಯುಜಿಡಿ ಯೋಜನೆ ಪ್ರಾರಂಭಗೊಂಡಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ವಸತಿ ಸಚಿವರು ಎಲ್ಲ ರೀತಿಯಲ್ಲಿ ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ ಹೆಚ್ಚಳ: ಎಂ.ಬಿ. ಪಾಟೀಲ ವಿಶ್ವಾಸ

'2032ಕ್ಕೆ 1 ಟ್ರಿಲಿಯನ್ ಆರ್ಥಿಕತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2032ರ ವೇಳೆಗೆ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯನ್ನು (ಜಿಎಸ್‌ಡಿಪಿ) ಒಂದು ಟ್ರಿಲಿಯನ್ ಡಾಲರ್‌ಗೆ (₹83 ಲಕ್ಷ ಕೋಟಿ) ಏರಿಸಲು ರಾಜ್ಯ ಸರ್ಕಾರವು ಗುರಿ ಹೊಂದಿದ್ದು, ಇದಕ್ಕೆ ಪೂರಕವಾಗಿ ಅಭಿವೃದ್ಧಿಗೆ ಒತ್ತು ನೀಡುತ್ತಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್ಸ್ ಅಸೋಸಿಯೇಷನ್ ಮತ್ತು ಬೆಂಗಳೂರಿನ ಡಬ್ಲ್ಯುಟಿಸಿಯಿಂದ ಜಂಟಿಯಾಗಿ ಹಮ್ಮಿಕೊಂಡಿರುವ ಗ್ಲೋಬಲ್ ಬ್ಯುಸಿನೆಸ್ ಫೋರಂನ (ಜಿಬಿಎಫ್) 54ನೇ ಜಾಗತಿಕ ವ್ಯಾಪಾರ ಸಮಾವೇಶದಲ್ಲಿ ಅವರು ಮಾತನಾಡಿದರು.

ಇದಕ್ಕಾಗಿಯೇ ಉದ್ಯಮ ವಲಯದಲ್ಲಿ ಅಸಾಂಪ್ರದಾಯಿಕ ಕ್ಷೇತ್ರಗಳತ್ತ ಗಮನಹರಿಸಲಾಗುತ್ತಿದೆ. ಇದರಿಂದ ಹೂಡಿಕೆಯ ಹರಿವು ಹೆಚ್ಚಲಿದೆ. ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಆರ್ಥಿಕತೆಯ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಭಾರತದಲ್ಲಿ ಎರಡನೇ ಬಾರಿಗೆ ಈ ಸಮಾವೇಶ ನಡೆಯುತ್ತಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಮೊದಲ ಸಮಾವೇಶ ಇದಾಗಿದೆ. 30ಕ್ಕೂ ಹೆಚ್ಚು ದೇಶಗಳ ಉನ್ನತ ಮಟ್ಟದ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

'ರಾಜ್ಯದ ಆರ್ಥಿಕ ಬೆಳವಣಿಗೆ ದರವು ಸದ್ಯ ಶೇ 18ರಷ್ಟಿದೆ. ಜಿಡಿಪಿಯಲ್ಲಿ ಕರ್ನಾಟಕವು ಇಡೀ ದೇಶದಲ್ಲಿ ಮೂರನೆಯ ಸ್ಥಾನದಲ್ಲಿದೆ. ತಲಾ ಆದಾಯವು ಕಳೆದ ಐದು ವರ್ಷಗಳಲ್ಲಿ ಶೇ 62ರಷ್ಟು ಏರಿಕೆಯಾಗಿದೆ' ಎಂದು ವಿವರಿಸಿದರು.

ಬೆಂಗಳೂರು ಹೊರತುಪಡಿಸಿ ಇತರೆ ಪ್ರದೇಶಗಳಲ್ಲಿ ಕೈಗಾರಿಕಾ ಕ್ರಾಂತಿ 4.0 ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ. ಇದಕ್ಕಾಗಿ ಸಾವಿರಾರು ಎಕರೆ ಪ್ರದೇಶಗಳಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸಲಾಗುತ್ತಿದೆ. ಉದ್ಯಮಿಗಳು ಇದಕ್ಕೆ ಪೂರಕವಾಗಿ ಸ್ಪಂದಿಸಬೇಕು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಕರ್ನಾಟಕವು ದೇಶದ ನಾಲ್ಕನೇ ಅತಿದೊಡ್ಡ ಕೌಶಲ ಆಧಾರಿತ ಮಾನವ ಸಂಪನ್ಮೂಲ ಹೊಂದಿರುವ ರಾಜ್ಯವಾಗಿದೆ' ಎಂದರು.

ಐ.ಟಿ, ನವೋದ್ಯಮಗಳ ಸ್ವರ್ಗವಾಗಿದೆ. ಕರ್ನಾಟಕವು ದೇಶದ ಬಯೊಟೆಕ್ನಾಲಜಿ ಕ್ಷೇತ್ರಕ್ಕೆ ಶೇ 60ರಷ್ಟು ಹಾಗೂ ಸಾಫ್ಟ್‌ವೇರ್ ಕ್ಷೇತ್ರಕ್ಕೆ ಶೇ 40ರಷ್ಟು ಕೊಡುಗೆ ನೀಡುತ್ತಿದೆ. ನವೋದ್ಯಮ ಸ್ಥಾಪನೆಯಲ್ಲಿ ಜಾಗತಿಕಮಟ್ಟದಲ್ಲಿ 20ನೇ ಸ್ಥಾನ ಪಡೆದಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ನ್ಯೂಯಾರ್ಕ್ ಡಬ್ಲ್ಯುಟಿಸಿ ಅಧ್ಯಕ್ಷ ಜಾನ್ ಡ್ರೀವ್, ಡಿಲೈಟ್ ಸಿಇಒ ರೋಮಲ್ ಶೆಟ್ಟಿ, ಬ್ರಿಗೇಡ್ ಗ್ರೂಪ್ ಕಾರ್ಯ ನಿರ್ವಾಹಕ ಅಧ್ಯಕ್ಷ ಎಂ.ಆರ್. ಜಯಶಂಕರ್, ಜಂಟಿ ವ್ಯವಸ್ಥಾಪಕ ನಿರ್ದೇಶಕ ನಿರೂಪ್ ಶಂಕರ್, ಬೆಂಗಳೂರು ಡಬ್ಲ್ಯುಟಿಸಿ ವ್ಯವಸ್ಥಾಪಕ ನಿರ್ದೇಶಕ ವಿನೀತ್ ವರ್ಮಾ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಸೋಮವಾರ ಆರಂಭವಾದ ಜಾಗತಿಕ ವ್ಯಾಪಾರ ಸಮಾವೇಶದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಸಮಾವೇಶದ ಕೈಪಿಡಿಯನ್ನು ಬಿಡುಗಡೆಗೊಳಿಸಿದರು. ಸಚಿವ ಎಂ.ಬಿ. ಪಾಟೀಲ ಹಾಗೂ ಪ್ರತಿನಿಧಿಗಳು ಹಾಜರಿದ್ದರು

ಹೂಡಿಕೆದಾರರ ಹಿತರಕ್ಷಣೆ: ಅಪರಾಧಿಗೆ ಜೈಲು, ರಾಜ್ಯದಲ್ಲಿ ಮೊದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಔಷಧ ಮಳಿಗೆ ವ್ಯವಹಾರದಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಹೇಳಿ ಹಣ ಪಡೆದು ವಂಚಿಸಿದ್ದ ಅಪರಾಧಿ ತಂಗಪ್ಪನ್ ಎಂಬಾತನಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ 47ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ (ಸಿಸಿಎಚ್ 48) ನ್ಯಾಯಾಲಯ ಆದೇಶ ಹೊರಡಿಸಿದೆ.

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆದಾರರ ಹಿತರಕ್ಷಣಾ (ಕೆಪಿಐಡಿಇಎಫ್) ಕಾಯ್ದೆ 2004ರ ಅಡಿ ಪುಲಿಕೇಶಿನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ನಡೆಸಿದ್ದರು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ಕೆ. ಅನುಪಮಾ ಅವರು ವಾದಿಸಿದ್ದರು.

ಕೆಪಿಐಡಿಇಎಫ್ ಕಾಯ್ದೆ ಜಾರಿಯಾದ ಬಳಿಕ ಅಪರಾಧಿಗೆ ಜೈಲು ಶಿಕ್ಷೆಯಾದ ರಾಜ್ಯದ ಮೊದಲ ಪ್ರಕರಣ ಇದಾಗಿದೆ.

ಹೊರಮಾವು ಬೃಂದಾವನ ಬಡಾವಣೆಯ ಅಪರಾಧಿ ತಂಗಪ್ಪನ್, ಪುಲಿಕೇಶಿನಗರದ ಹಚಿನ್ಸ್ ರಸ್ತೆಯಲ್ಲಿ ಔಷಧಿ ಮಳಿಗೆ ನಡೆಸುತ್ತಿದ್ದ. ಔಷಧ ಮಳಿಗೆ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಪರಿಚಯಸ್ಥರಿಗೆ ಹೇಳಿದ್ದ. ಈತನ ಮಾತು ನಂಬಿದ್ದ ಉಮಾಶಂಕರ್, ಎಲಿಜಬತ್ ಡಿಸೋಜ ಹಾಗೂ ಇತರರು ₹ 33 ಲಕ್ಷ ನೀಡಿದ್ದರು. ಜೊತೆಗೆ, ಪಾಲುದಾರಿಕೆ ಕರಾರು ಪತ್ರ ಸಹ ಮಾಡಿಸಿದ್ದರು. ಏಕಾಏಕಿ ಮಳಿಗೆ ಬಂದ್ ಮಾಡಿದ್ದ ತಂಗಪ್ಪನ್, ಹೂಡಿಕೆದಾರರಿಗೆ ಹಣ ವಾಪಸು ಕೊಡದೇ ಬೆಂಗಳೂರು ತೊರೆದಿದ್ದ. ವಂಚನೆಗೀಡಾಗಿದ್ದ ಉಮಾಶಂಕರ್ ಹಾಗೂ ಇತರರು, ಪುಲಿಕೇಶಿನಗರ ಠಾಣೆಗೆ ದೂರು ನೀಡಿದ್ದರು.

'ಅಪರಾಧಿ ತಂಗಪ್ಪನ್‌ನಿಗೆ ವಂಚನೆ (ಐಪಿಸಿ 420) ಆರೋಪಕ್ಕೆ ಐದು ವರ್ಷ ಹಾಗೂ ಕೆಪಿಐಡಿಇಎಫ್ ಕಾಯ್ದೆಯಡಿ ಐದು ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿದೆ. ಎರಡೂ ಶಿಕ್ಷೆಯನ್ನು ಅಪರಾಧಿ ಏಕಕಾಲದಲ್ಲಿ ಅನುಭವಿಸಬೇಕು. ಜೊತೆಗೆ, ಅಪರಾಧಿಗೆ ₹34 ಲಕ್ಷ ದಂಡ ವಿಧಿಸಲಾಗಿದೆ ಎಂದು ಎಸ್.ಕೆ. ಅನುಪಮಾ 'ಪ್ರಜಾವಾಣಿ' ತಿಳಿಸಿದರು.

ಬಿಜೆಪಿ ಯುವಮೋರ್ಚಾ ತಿರಂಗಾ ಯಾತ್ರೆ: ಕಾರ್ಯಕರ್ತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಂಬ್ ಸ್ಫೋಟ ಹಾಗೂ ಪಾಕಿಸ್ತಾನ್ ಪರ ಘೋಷಣೆ ಘಟನೆಗಳನ್ನು ಖಂಡಿಸಿ' ನಗರದಲ್ಲಿ ತಿರಂಗಾ ಯಾತ್ರೆ ನಡೆಸಲು ಮುಂದಾಗಿದ್ದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದು, ಸಂಜೆ ಬಿಟ್ಟು ಕಳುಹಿಸಿದ್ದಾರೆ.

ನಗರದ ಪುರಭವನ ಎದುರು ಸೇರಿದ್ದ ಕಾರ್ಯಕರ್ತರು, ಅಲ್ಲಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ತಿರಂಗಾ ಯಾತ್ರೆ ನಡೆಸಲು ಸಿದ್ಧರಾಗಿದ್ದರು. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಬಿಜೆಪಿ ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಧೀರಜ್ ಮುನಿರಾಜು, ಶಾಸಕ ಸಿ.ಕೆ. ರಾಮಮೂರ್ತಿ ನೇತೃತ್ವದಲ್ಲಿ ಯಾತ್ರೆ ಹಮ್ಮಿಕೊಳ್ಳಲಾಗಿತ್ತು.

ಪುರಭವನ ಎದುರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರಿದ್ದರು. ಸ್ಥಳದಲ್ಲಿದ್ದ ಪೊಲೀಸರು, 'ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ನಗರದ ಯಾವುದೇ ಭಾಗದಲ್ಲಿ ಪ್ರತಿಭಟನೆ ಹಾಗೂ ರ್‍ಯಾಲಿ ನಡೆಸಲು ಅವಕಾಶವಿಲ್ಲ. ಈ ಬಗ್ಗೆ ಹೈಕೋರ್ಟ್ ಆದೇಶವಿದೆ. ನಿಮ್ಮ ತಿರಂಗಾ ಯಾತ್ರೆಗೆ ಅನುಮತಿ ಇಲ್ಲ. ದಯವಿಟ್ಟು ಯಾತ್ರೆ ಕೈಬಿಡಿ' ಎಂದು ಕೋರಿದರು.

ಅದಕ್ಕೆ ಒಪ್ಪದ ಕಾರ್ಯಕರ್ತರು, 'ವಿಧಾನಸೌಧದಲ್ಲಿ ಪಾಕಿಸ್ತಾನ್ ಪರ ಘೋಷಣೆ ಕೂಗಿದವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಈಗ, ನಮ್ಮ ಯಾತ್ರೆ ತಡೆಯಲು ಬಂದಿದ್ದೀರಾ' ಎಂದು ಪ್ರಶ್ನಿಸಿದರು. ಬಳಿಕ, ಕಾರ್ಯಕರ್ತರು ಹಾಗೂ ಪೊಲೀಸರು ನಡುವೆ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ 40ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ಗಳಲ್ಲಿ ಕರೆದೊಯ್ದರು.

ರಾಷ್ಟ್ರಧ್ವಜ ಕಸಿದುಕೊಂಡು ಹೋದ ಪೊಲೀಸರು: ಪೊಲೀಸರ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ ಕಾರ್ಯಕರ್ತರು, 'ಶಾಂತಿಯುತವಾಗಿ ನಡೆಸಲಾಗುತ್ತಿದ್ದ ಯಾತ್ರೆಯನ್ನು ಪೊಲೀಸರು ಅಕ್ರಮವಾಗಿ ತಡೆದಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರದ ಕುಮ್ಮಕ್ಕು ಇದೆ. ಪೊಲೀಸರು ನಮ್ಮ ಬಳಿಯ ರಾಷ್ಟ್ರಧ್ವಜವನ್ನು ಕಸಿದುಕೊಂಡು, ಅಗೌರವದಿಂದ ನಡೆದುಕೊಂಡಿದ್ದಾರೆ' ಎಂದು ದೂರಿದರು.

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು ಬಿಎಂಟಿಸಿ ಬಸ್‌ನಲ್ಲಿ ಕರೆದೊಯ್ದರು

'ಜಾತಿಗಣತಿ ವರದಿ ಬಹಿರಂಗವಾಗದೆ ಚರ್ಚೆ ಅನಗತ್ಯ'

ಉಡುಪಿ: ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ವರದಿ (ಜಾತಿ ಜನಗಣತಿ) ಬಹಿರಂಗವಾಗದಿದ್ದರೂ ಜಾತಿಗಳ ಬಲಾಬಲದ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ಮಾಡುವುದು ಅನಗತ್ಯ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಅಭಿಪ್ರಾಯಪಟ್ಟರು.

ಸೋಮವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಆಯೋಗ ವರದಿಯನ್ನು ಈಚೆಗಷ್ಟೆ ಸರ್ಕಾರಕ್ಕೆ ಸಲ್ಲಿಸಿದೆ. ಸರ್ಕಾರ ಸಚಿವ ಸಂಪುಟದ ಮುಂದಿಟ್ಟ ಬಳಿಕ ವರದಿಯಲ್ಲಿರುವ ಸರಿ–ತಪ್ಪುಗಳ ಬಗ್ಗೆ ಚರ್ಚೆ ನಡೆಯಬೇಕು. ರಾಜ್ಯದಲ್ಲಿ 1,300ಕ್ಕೂ ಹೆಚ್ಚು ಜಾತಿಗಳಿದ್ದು ಕೇವಲ ಮೂರ್ನಾಲ್ಕು ಜಾತಿಗಳ ಜನಸಂಖ್ಯೆಯ ಅಂಕಿ ಅಂಶಗಳನ್ನು ಜಾಲತಾಣಗಳಲ್ಲಿ ಹರಿಬಿಟ್ಟು ಗೊಂದಲ ಸೃಷ್ಟಿಸಲಾಗಿದೆ ಎಂದರು.

ವರದಿಯಲ್ಲಿ ಹಿಂದುಳಿದ, ಹೆಚ್ಚು ಹಿಂದುಳಿದ ಹಾಗೂ ತೀರಾ ಹಿಂದುಳಿದ ಜಾತಿಗಳನ್ನು ವರ್ಗೀಕರಿಸಲಾಗಿದ್ದು ಕೆಲವು ಜಾತಿಗಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡುವಂತೆ ಶಿಫಾರಸು ಮಾಡಲಾಗಿದೆ ಎಂದರು.

ಖಾಸಗಿ ಸಂಸ್ಥೆ ಬಿಡುಗಡೆ ಮಾಡಿದ ಎಫ್‌ಎಸ್‌ಎಲ್ ವರದಿ

ಸರ್ಕಾರದ ವಿರುದ್ಧ ಹರಿಹಾಯ್ದ ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದಾರೆ ಎಂದು ಆರೋಪಿಸಲಾದ ಘಟನೆಗೆ ಸಂಬಂಧಿಸಿದಂತೆ ಖಾಸಗಿ ಸಂಸ್ಥೆಯೊಂದು ಬಿಡುಗಡೆ ಮಾಡಿದ ಎಫ್‌ಎಸ್‌ಎಲ್ ವರದಿಯನ್ನು ಆಧರಿಸಿ ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿತು.

ಈ ಸಂಬಂಧ ಬಿಜೆಪಿ ನಾಯಕರ ನಿಯೋಗವೊಂದು ಪೊಲೀಸ್ ಮಹಾ ನಿರ್ದೇಶಕರ ಕಚೇರಿಗೆ ತೆರಳಿ ಮನವಿಪತ್ರವೊಂದನ್ನು ನೀಡಿತು. 'ಖಾಸಗಿ ಸಂಸ್ಥೆಯ ಎಫ್‌ಎಸ್‌ಎಲ್ ವರದಿ ಬಂದಿದ್ದರೂ, ಪೊಲೀಸ್ ಇಲಾಖೆಯಿಂದ ನಡೆಸಿರುವ ಎಫ್‌ಎಸ್‌ಎಲ್ ವರದಿಯನ್ನು ಇನ್ನೂ ಬಹಿರಂಗಪಡಿಸಿಲ್ಲ. ತಕ್ಷಣವೇ ಬಹಿರಂಗಪಡಿಸಬೇಕು' ಎಂದು ನಿಯೋಗ ಒತ್ತಾಯಿಸಿತು.

'ವರದಿ ಬಂದ ತಕ್ಷಣ ಬಹಿರಂಗ ಮಾಡುವುದಾಗಿ ಗೃಹ ಸಚಿವರು ಹೇಳಿದ್ದರು. ವರದಿ ಬಂದಿದೆ ಎಂಬ ಮಾಹಿತಿ ನಮಗಿದೆ. ಒಂದು ವಾರ ಕಳೆದರೂ ವರದಿ ಬಹಿರಂಗ ಮಾಡುವ ಗೋಜಿಗೆ ಹೋಗದೇ ಆರೋಪಿಗಳನ್ನು ರಕ್ಷಿಸಲು ದಾರಿ ಹುಡುಕುತ್ತಿದೆ' ಎಂದು ಬಿಜೆಪಿ ನಾಯಕರು ಆರೋಪಿಸಿದರು.

'ಖಾಸಗಿ ಸಂಸ್ಥೆ ತಯಾರಿಸಿದ ಎಫ್‌ಎಸ್‌ಎಲ್ ಸಾಮಾಜಿಕ ಜಾಲತಾಣದಲ್ಲಿ ಲಭ್ಯವಿದೆ. ಸತ್ಯ ತಿಳಿಸಲು ಯಾವುದಾದರೂ ಒತ್ತಡವಿದೆಯೇ? ಈ ರೀತಿಯ ವಿಳಂಬದಿಂದಾಗಿ ಮುಂದಿನ ದಿನಗಳಲ್ಲಿ ದೇಶ ವಿರೋಧಿ ಮತ್ತು ಸಮಾಜಘಾತುಕ ಕೆಲಸ ಮಾಡುವ ಜನರಿಗೆ ಮತ್ತಷ್ಟು ಬಲ ಬಂದಂತಾಗುತ್ತದೆ' ಎಂದು ಮನವಿಯಲ್ಲಿ ತಿಳಿಸಿದರು. ನಿಯೋಗದಲ್ಲಿ ಶಾಸಕರಾದ ಎಲ್.ಎ. ರವಿಸುಬ್ರಹ್ಮಣ್ಯ, ಸಿ.ಕೆ. ರಾಮಮೂರ್ತಿ, ಉದಯ ಬಿ. ಗರುಡಾಚಾರ್ ಮತ್ತು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ಇದ್ದರು.

ಮುಚ್ಚಿಡಲು ಹುನ್ನಾರ: ಖಾಸಗಿ ಎಫ್‌ಎಸ್‌ಎಲ್ ವರದಿ ಬಂದರೂ, ಸರ್ಕಾರದ ವತಿಯಿಂದ ನಡೆಸಿರುವ ಎಫ್‌ಎಸ್‌ಎಲ್ ವರದಿ ಇನ್ನೂ ಏಕೆ ಬಹಿರಂಗ ಮಾಡಿಲ್ಲ. ಸಿದ್ದರಾಮಯ್ಯ ಮತ್ತು ಜಿ.ಪರಮೇಶ್ವರ ಅವರ ನಿಗೂಢ ನಡೆ ನೋಡುತ್ತಿದ್ದರೆ ಕಾಂಗ್ರೆಸ್ ಸರ್ಕಾರ ಏನನ್ನೊ ಮುಚ್ಚಿಡಲು ಮತ್ತು ಯಾರನ್ನೋ ರಕ್ಷಿಸಲು ಒತ್ತಡದಲ್ಲಿರುವಂತಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ 'ಎಕ್ಸ್'ನಲ್ಲಿ ದೂರಿದ್ದಾರೆ.

'ಸಿದ್ದರಾಮಯ್ಯ ಅವರೇ, ದೇಶಕ್ಕಿಂತ ತಮಗೆ ಪಕ್ಷವೇ ಹೆಚ್ಚಾಗಿ ಹೋಯಿತೇ? ರಾಷ್ಟ್ರದ ಹಿತಾಸಕ್ತಿಗಿಂತ ವೋಟ್ ಬ್ಯಾಂಕ್ ರಾಜಕಾರಣವೇ ದೊಡ್ಡದಾಯಿತೇ' ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ಕಿಡಿ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಸಂಸ್ಥೆಯ ಎಫ್‌ಎಸ್‌ಎಲ್ ವರದಿ ಬಿಡುಗಡೆ ಮಾಡಿರುವ ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

'ಖಾಸಗಿಯವರು ಯಾರು? ಎಫ್‌ಎಸ್‌ಎಲ್ ವರದಿ ತಯಾರಿಸಲು ಅವರಿಗೆ ನಿರಾಕ್ಷೇಪಣಾ ಪತ್ರ ಯಾರು ಕೊಟ್ಟಿದ್ದಾರೆ? ಈ ರೀತಿ ವರದಿ ಕೊಡಲು ಅವರಿಗೆ ಅನುಮತಿ ಇದೆಯೇ? ಎಲ್ಲವನ್ನೂ ಪರಿಶೀಲಿಸುತ್ತೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಖಾಸಗಿ ಸಂಸ್ಥೆ ತಯಾರಿಸಿದ ಎಫ್‌ಎಸ್‌ಎಲ್ ವರದಿಯನ್ನು ಬಿಜೆಪಿಯವರು ಬಹಿರಂಗಪಡಿಸಿರುವುದು ದೇಶದ್ರೋಹದ ಕೆಲಸ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದರು.

'ಕ್ಲೂ 4 ಎವಿಡೆನ್ಸ್ ಪ್ರಯೋಗಾಲಯದ ವಿಶ್ವಾಸಾರ್ಹತೆ ಏನು? ಖಾಸಗಿಯಾಗಿ ಅವರು ಏನಾದರೂ ಮಾಡಿಕೊಳ್ಳಲಿ. ಆ ಸಂಸ್ಥೆಗೆ ಸರ್ಕಾರದ ಪ್ರಮಾಣಪತ್ರ ಇದ್ದರೆ, ಅವರು ಸ್ಥಳೀಯ ಪೊಲೀಸರಿಗೆ ವರದಿ ನೀಡಬೇಕು. ಬಿಜೆಪಿಯವರು ಪ್ರಯೋಗಾಲಯಕ್ಕೆ ನೀಡಿರುವ ವಿಡಿಯೊ ತುಣುಕು ಯಾವುದು?. ಖಾಸಗಿ ಸಂಸ್ಥೆಗಳಿಂದ ನಾನೂ ವರದಿ ತೆಗೆದುಕೊಂಡಿದ್ದೇನೆ. ಅದನ್ನು ಬಹಿರಂಗಪಡಿಸಬಹುದಿತ್ತು ಅಲ್ಲವೇ? ಆದರೆ, ನಾನು ಹಾಗೆ ಮಾಡಿಲ್ಲ. ಬಿಜೆಪಿಯವರು ಮಾಡಿರುವುದು ನಿಜವಾದ ದೇಶದ್ರೋಹ. ಸಂವಾದ ಫೌಂಡೇಷನ್ ವರದಿ ತೆಗೆದುಕೊಳ್ಳಲು ಬಿಜೆಪಿಯವರಿಗೇನು ಆಸಕ್ತಿ?' ಎಂದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, 'ಪಾಕಿಸ್ತಾನ ಪರ ಘೋಷಣೆ ಕೂಗಿದ ಸಂಬಂಧ ವರದಿ ನೀಡಿರುವ ಖಾಸಗಿ ಸಂಸ್ಥೆ ಯಾರ ಪರ ಕೆಲಸ ಮಾಡುತ್ತಿದೆ ಎನ್ನುವುದು ಗೊತ್ತಿದೆ. ರಾಜ್ಯದ ಹಿತದೃಷ್ಟಿಯಿಂದ ಈ ಪ್ರಕರಣದಲ್ಲಿ ಪೊಲೀಸರಿಗೆ ತನಿಖೆ ಮಾಡಲು ಬಿಡೋಣ' ಎಂದರು.

'ಏನು ಬೇಕಾದರೂ ಟ್ವೀಟ್ ಮಾಡಲಿ'

'ಪಾಕಿಸ್ತಾನ ಜಿಂದಾಬಾದ್ ಕೂಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿಯವರು ಏನು ಬೇಕಾದರೂ ಟ್ವೀಟ್ ಮಾಡಿಕೊಳ್ಳಲಿ. ಎಫ್‌ಎಸ್‌ಎಲ್ ವರದಿ ಅವರಿಗೂ ಬಂದಿರುವುದಿಲ್ಲ. ನನಗೂ ಬಂದಿಲ್ಲ. ಗೃಹ ಸಚಿವರಿಗಷ್ಟೇ ಬಂದಿರುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಎಫ್‌ಎಸ್‌ಎಲ್ ವರದಿ ನಿಮಗೆ ಸಿಕ್ಕಿದೆಯೇ? ಅಥವಾ ಬಿಜೆಪಿಯವರಿಗೆ ಸಿಕ್ಕಿದೆಯೇ' ಎಂದೂ ಅವರು ಸುದ್ದಿಗಾರರನ್ನು ಪ್ರಶ್ನಿಸಿದರು.

ನಿಧನ ವಾರ್ತೆ

ಆರ್.ಕೆ. ಶೇಷಾದ್ರಿ

ಬೆಂಗಳೂರು: ನಗರದ ಬಿಇಎಲ್ ರಸ್ತೆ ನಿವಾಸಿ, ಸಂಗೀತ ಕಲಾವಿದ ಆರ್.ಕೆ. ಶೇಷಾದ್ರಿ (74) ಸೋಮವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರ ಇದ್ದಾರೆ.

ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ರವಿಕುಮಾರ್ ಚಾಮಲಾಪುರ

ಮಂಡ್ಯ: ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ, ಕನ್ನಡ ಉಪನ್ಯಾಸಕ ರವಿಕುಮಾರ್ ಚಾಮಲಾಪುರ (52) ಸೋಮವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಅವರ ಹುಟ್ಟೂರಾದ, ತಾಲ್ಲೂಕಿನ ಚಾಮಲಾಪುರದಲ್ಲಿ ಅಂತ್ಯಕ್ರಿಯೆ ನಡೆಯಿತು.

'10 ಸಾವಿರ ಮಂದಿ ನೋಂದಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆ ಸ್ಥಾಪನೆಯ ಸುವರ್ಣ ಮಹೋತ್ಸವದ ಅಂಗವಾಗಿ ಮಾರ್ಚ್ 10ರಂದು ಹಮ್ಮಿಕೊಳ್ಳುತ್ತಿರುವ 'ಸುವರ್ಣ ಸಂಭ್ರಮ ಓಟ'ದಲ್ಲಿ ಪಾಲ್ಗೊಳ್ಳಲು 10 ಸಾವಿರ ಮಂದಿ ನೋಂದಣಿ ಮಾಡಿಸಿದ್ದಾರೆ.

ನಗರದ ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಓಟದ ಬಗ್ಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಮಾಹಿತಿ ನೀಡಿದರು. ಓಟದ ಲಾಂಛನ ಬಿಡುಗಡೆ ಮಾಡಿದರು. ಓಟದ ಸ್ಪರ್ಧಿಗಳಿಗೆ ನೀಡುವ ಟೀ–ಶರ್ಟ್, ವಿಜೇತರಿಗೆ ನೀಡುವ ಪದಕಗಳು ಹಾಗೂ 'ಡಿಜಿಪಿ ಕರ್ನಾಟಕ ಕಪ್' ಅನಾವರಣಗೊಳಿಸಿದರು.

'ರಾಜ್ಯದಲ್ಲಿ ಡ್ರಗ್ಸ್ ಮಟ್ಟಹಾಕಲು ಪೊಲೀಸರು ಯುದ್ಧದ ರೀತಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸೈಬರ್ ಅಪರಾಧಗಳು ದುಪ್ಪಟ್ಟಾಗುತ್ತಿವೆ. ಡ್ರಗ್ಸ್ ಹಾಗೂ ಸೈಬರ್ ಕ್ರೈಂ ಮುಕ್ತ ರಾಜ್ಯವನ್ನಾಗಿ ಮಾಡುವ ಗುರಿಯೊಂದಿಗೆ, ಜನರಲ್ಲಿ ಜಾಗೃತಿ ಮೂಡಿಸಲು ಎಸ್‌ಬಿಐ ಸಹಯೋಗದೊಂದಿಗೆ ಸುವರ್ಣ ಸಂಭ್ರಮ ಓಟ ಹಮ್ಮಿಕೊಳ್ಳಲಾಗಿದೆ' ಎಂದು ಅಲೋಕ್ ಮೋಹನ್ ತಿಳಿಸಿದರು.

'ಪೊಲೀಸರು, ಎಸ್‌ಬಿಐ ಸಿಬ್ಬಂದಿ ಹಾಗೂ ಸಾರ್ವಜನಿಕರ ವಿಭಾಗಗಳಲ್ಲಿ ಓಟ ಇರಲಿದೆ. 5 ಕಿ.ಮೀ ಹಾಗೂ 10 ಕಿ.ಮೀ ಪ್ರತ್ಯೇಕ ಓಟವಿದ್ದು, ಮೊದಲ, ಎರಡನೇ ಹಾಗೂ ಮೂರನೇ ಸ್ಥಾನ ಪಡೆದವರಿಗೆ ನಗದು ಬಹುಮಾನವಿದೆ. ಆಸಕ್ತರು www.click2race.com ಜಾಲತಾಣ ಮೂಲಕ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಓಟದಲ್ಲಿ ಮೊದಲ ಸ್ಥಾನ ಪಡೆಯುವ ಪುರುಷ ಹಾಗೂ ಮಹಿಳೆಗೆ ಡಿಜಿಪಿ ಕರ್ನಾಟಕ ಕಪ್ ನೀಡಲಾಗುವುದು' ಎಂದರು.

'ಪ್ರತಿಯೊಬ್ಬರು ಆರೋಗ್ಯವಂತರಾಗಬೇಕು. ಇದಕ್ಕೆ ಓಟ ಸಹಕಾರಿ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಓಟ ಹಮ್ಮಿಕೊಳ್ಳಲಾಗುವುದು. ಪೊಲೀಸರು ಜನರೊಂದಿಗೆ ಬೆರೆಯಲು ಇದೊಂದು ಒಳ್ಳೆಯ ವೇದಿಕೆ' ಎಂದು ಹೇಳಿದರು.

ಪೊಲೀಸ್ ಸುವರ್ಣ ಸಂಭ್ರಮ ಓಟದಲ್ಲಿ ಮೊದಲ ಸ್ಥಾನ ಪಡೆದವರಿಗೆ ನೀಡಲಾಗುವ 'ಡಿಜಿಪಿ ಕರ್ನಾಟಕ ಕಪ್' ಅನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ (ಎಡದಿಂದ ಮೂರನೆಯವರು) ಮಾಧ್ಯಮದವರ ಎದುರು ಪ್ರದರ್ಶಿಸಿದರು. (ಎಡದಿಂದ) ಓಟ ಸಮಿತಿ ನಿರ್ದೇಶಕ ನಾಗರಾಜ್ ಅಡಿಗ, ಎಸ್‌ಬಿಐ ಮುಖ್ಯ ಪ್ರಧಾನ ವ್ಯವಸ್ಥಾಪಕ ಕೃಷ್ಣನ್ ಶರ್ಮಾ, ಬೆಂಗಳೂರು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹಾಗೂ ಎಡಿಜಿಪಿ ಸೀಮಂತ್‌ಕುಮಾರ್ ಸಿಂಗ್ ಇದ್ದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಕಾನೂನು ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ–2024: ಉದ್ಘಾಟನೆ: ಜಿ.ಎಸ್. ಸಂಗ್ರೇಶಿ, ಅಧ್ಯಕ್ಷತೆ: ಕೆ. ದ್ವಾರಕನಾಥ್ ಬಾಬು, ಅತಿಥಿಗಳು: ಜಿ. ಶ್ರೀಧರ್, ಎಚ್.ಕೆ. ಜಗದೀಶ್, ಸಿ.ಎಸ್. ಪಾಟೀಲ್, ಸಮಾರೋಪ ಭಾಷಣ: ಎಚ್.ಕೆ. ಪಾಟೀಲ, ಅತಿಥಿಗಳು: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಆಯೋಜನೆ: ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಸ್ಥಳ: ಕೊಠಡಿ ಸಂಖ್ಯೆ–419, ವಿಕಾಸಸೌಧ, ಬೆಳಿಗ್ಗೆ 9.30ರಿಂದ

'ನಿಷ್ಪಕ್ಷಪಾತ ಚುನಾವಣೆ ಮತ್ತು ಮಾಧ್ಯಮ' ವಿಚಾರಸಂಕಿರಣ: ಉದ್ಘಾಟನೆ: ಯು.ಟಿ. ಖಾದರ್, ಅತಿಥಿಗಳು: ಮನೋಜ್ ಕುಮಾರ್ ಮೀನಾ, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಉಪನ್ಯಾಸ: ವೆಂಕಟೇಶ್ ನಾಯಕ್, ಬ್ರಿಜೇಶ್ ಕಾಳಪ್ಪ, ವಾದಿರಾಜ್, ಕೆ.ವಿ. ಪ್ರಭಾಕರ್, ಸುದರ್ಶನ ಚನ್ನಂಗಿಹಳ್ಳಿ, ರಮಾಕಾಂತ್, ರಾಜೇಶ್ ಪದ್ಮಾರ್, ರವೀಂದ್ರ ಭಟ್ಟ, ಶಿವಾನಂದ್ ತಗಡೂರು, ಆಸ್ಮಾ, ಸಿದ್ಧರಾಜು, ಕೆ.ಎಂ. ಅಶೋಕ್ ಗೌಡ, ಆಯೋಜನೆ: ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ರಾಜ್ಯಶಾಸ್ತ್ರ ಮತ್ತು ಇತಿಹಾಸ ವಿಭಾಗಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಕರ್ನಾಟಕ ಸ್ಟೇಟ್ ಡಿಜಿಟಲ್ ಮೀಡಿಯಾ ಅಸೋಸಿಯೇಷನ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯ ಸರ್ಕಾರಿ ಸ್ವಾಭಿಮಾನಿ ಎಸ್ಸಿ, ಎಸ್ಟಿ ನೌಕರರ ರಾಜ್ಯಮಟ್ಟದ ಜಾಗೃತ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ. ಪರಮೇಶ್ವರ್, ಉಪಸ್ಥಿತಿ: ಜ್ಞಾನಪ್ರಕಾಶ್ ಸ್ವಾಮೀಜಿ, ಅತಿಥಿಗಳು: ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ಎಚ್. ಮುನಿಯಪ್ಪ, ಕೆ.ಎನ್. ರಾಜಣ್ಣ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಪಿ.ಎಂ. ನರೇಂದ್ರಸ್ವಾಮಿ, ಎಂ. ಲಕ್ಷ್ಮಣ್, ಸಂವಿಧಾನದ ಆಶಯಗಳು–ನೌಕರರ ಮತ್ತು ಅಧಿಕಾರಿಗಳ ಜವಾಬ್ದಾರಿ ವಿಚಾರಸಂಕಿರಣದ ಉದ್ಘಾಟನೆ: ಎಚ್. ಕೆ. ಪಾಟೀಲ, ವಿಷಯ ಮಂಡನೆ: ಎಚ್. ಎನ್. ನಾಗಮೋಹನದಾಸ್, ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30



ಮೂಡ್ನಾಕೂಡು ಚಿನ್ನಸ್ವಾಮಿ

ನಾಸಾದ ಬಾಹ್ಯಾಕಾಶ ಮಹಿಳಾ ವಿಜ್ಞಾನಿಗಳೊಂದಿಗೆ ಸಂವಾದ: ಅತಿಥಿ: ನಿಕೋಲಾ, ಆಯೋಜನೆ: ಯು.ಎಸ್. ಕಾನ್ಸುಲೇಟ್ ಜನರಲ್ ಚೆನ್ನೈ, ಸ್ಥಳ: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರ, ಮಧ್ಯಾಹ್ನ 2.30

ಅಂತರರಾಷ್ಟ್ರೀಯ ಯುನಾನಿ ದಿನಾಚರಣೆ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಅನಿಲ್ ಕುಮಾರ್ ಟಿ.ಕೆ., ರಂದೀಪ್ ಡಿ., ಶ್ರೀನಿವಾಸಲು, ನವೀನ್ ಭಟ್, ಅಬ್ದುಲ್ ನಾಸೀರ್ ಅನ್ಸಾರಿ, ಆಯೋಜನೆ: ಆಯುಷ್ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಗಾಂಧಿನಗರ, ಬೆಳಿಗ್ಗೆ 10.30

ಬಿ.ಇಡಿ ಪ್ರಥಮ ವರ್ಷದ ತರಗತಿಗಳ ಉದ್ಘಾಟನಾ ಸಮಾರಂಭ: ಅತಿಥಿಗಳು: ಆನಂದಕುಮಾರ್ ಸಿ.ಎಸ್., ನಿರ್ಮಲ್‌ಕುಮಾರ್ ಕೆ.ಆರ್., ಎನ್. ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಟಿ.ಆರ್. ವೆಂಕಟರೆಡ್ಡಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಜಯನಗರ, ಬೆಳಿಗ್ಗೆ 11.30

ವಾರ್ಷಿಕೋತ್ಸವ: 'ಕುರುಕ್ಷೇತ್ರ ಅಥವಾ ಗೀತೋಪದೇಶ' ನಾಟಕ ಪ್ರದರ್ಶನ: ಉದ್ಘಾಟನೆ: ಶ್ರೀರಂಗಸ್ವಾಮಿ, ಅಧ್ಯಕ್ಷತೆ: ರಾಮಚಂದ್ರ, ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನೋಂದಣಿ ಮಾಡಿಸಿಕೊಳ್ಳದಿದ್ದರೆ ಟ್ಯಾಂಕರ್‌ಗಳು ವಶ: ಡಿ.ಕೆ. ಶಿವಕುಮಾರ್

ನೀರಿನ ಸಮಸ್ಯೆ ನಿವಾರಣೆಗೆ ₹556 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ನೀರಿನ ಸಮಸ್ಯೆಯನ್ನು ನಿವಾರಿಸಲು ₹556 ಕೋಟಿ ಮೀಸಲಿಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಮತ್ತು ಪರಿಹಾರ ಕ್ರಮಗಳ ಕುರಿತು ಸೋಮವಾರ ನಡೆದ ಅಧಿಕಾರಿಗಳ ಸಭೆಯ ನಂತರ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ನಗರ ವ್ಯಾಪ್ತಿಯ ಎಲ್ಲ ಶಾಸಕರಿಗೆ ನೀರಿನ ಸಮಸ್ಯೆ ಬಗೆಹರಿಸಲು ತಲಾ ₹10 ಕೋಟಿ ಅನುದಾನ ನೀಡಲಾಗಿದೆ. ಬಿಬಿಎಂಪಿಯಿಂದ ₹148 ಕೋಟಿ, ಬೆಂಗಳೂರು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ)ಯಿಂದ ₹128 ಕೋಟಿ ಸೇರಿದಂತೆ ಒಟ್ಟು ₹556 ಕೋಟಿಯನ್ನು ಕುಡಿಯುವ ನೀರಿನ ಪೂರೈಕೆಗೆ ಮೀಸಲಿಡಲಾಗಿದೆ' ಎಂದರು.

'ನೀರಿನ ಸಮಸ್ಯೆ ಬಗೆಹರಿಸಲು ಬಿಬಿಎಂಪಿ ಸಹಾಯವಾಣಿ ಮತ್ತು ವಾರ್ಡ್ ವಾರು ದೂರು ಕೇಂದ್ರಗಳನ್ನು ತೆರೆಯಲಾಗುವುದು. ಕುಡಿಯುವ ನೀರನ್ನು ಪೂರೈಕೆ ಮಾಡುವುದು ಸರ್ಕಾರದ ಜವಾಬ್ದಾರಿ. ಬೆಂಗಳೂರಿನ ಜನತೆ ಗಾಬರಿಯಾಗುವುದು ಬೇಡ. ಪ್ರತಿಯೊಬ್ಬರಿಗೂ ನೀರು ನೀಡುತ್ತೇವೆ' ಎಂದು ಭರವಸೆ ನೀಡಿದರು.

ನಗರದಲ್ಲಿ 16,781 ಕೊಳವೆ ಬಾವಿಗಳಿವೆ. ಇದರಲ್ಲಿ 6,997 ಕೊಳವೆ ಬಾವಿಗಳು ಬತ್ತಿ ಹೋಗಿದ್ದು, 7,784 ಕೊಳವೆ ಬಾವಿಗಳು ಚಾಲ್ತಿಯಲ್ಲಿವೆ. ಹೊಸ ಕೊಳವೆ ಬಾವಿ ಕೊರೆಸಲು ಸ್ಥಳೀಯ ಗುತ್ತಿಗೆದಾರರು ಮತ್ತು ತಮಿಳುನಾಡಿನ ಕೊಳವೆಬಾವಿ ಕೊರೆಯುವವರ ನಡುವೆ ದರದ ವಿಚಾರವಾಗಿ ಒಂದಷ್ಟು ಗೊಂದಲಗಳಿದ್ದು, ಇದನ್ನು ಶೀಘ್ರ ಬಗೆಹರಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ನಿಷ್ಕ್ರಿಯವಾಗಿರುವ ಎಲ್ಲ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಚಾಲನೆ ನೀಡಲಾಗುವುದು. ಬೆಸ್ಕಾಂನವರು ನಗರದಲ್ಲಿ ಚಾಲನೆಯಲ್ಲಿರುವ ಕೃಷಿ, ವಾಣಿಜ್ಯ ಬಳಕೆಯ ಕೊಳವೆ ಬಾವಿಗಳ ಮಾಹಿತಿಗಳನ್ನು ದಾಖಲಿಸಬೇಕು ಎಂದರು.

'ನಾಗರಿಕರು ಸಹ ಅನಗತ್ಯವಾಗಿ ನೀರನ್ನು ಬಳಕೆ ಮಾಡಬಾರದು. ಉದ್ಯಾನಗಳಿಗೆ, ಇತರೇ ಬಳಕೆಗೆ ಸಂಸ್ಕರಿಸಿದ ನೀರನ್ನು ಪೂರೈಸಲಾಗುವುದು. ಭೀಕರ ಬರಗಾಲದಲ್ಲಿ ನೀರಿನ ಮಿತ ಬಳಕೆ ಮಾಡಬೇಕು' ಎಂದು ಮನವಿ ಮಾಡಿದರು.

ಬಿಡಿಎ ಅಧ್ಯಕ್ಷ ಎನ್.ಎ ಹ್ಯಾರೀಸ್, ಆಡಳಿತಗಾರ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಬಿಡಿಎ ಆಯುಕ್ತ ಜಯರಾಮ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಬಿಬಿಎಂಪಿ ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್ ಉಪಸ್ಥಿತರಿದ್ದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ ರಾಜೇಂದ್ರ ಚೋಳನ್, ಬಿಬಿಎಂಪಿ ಆಡಳಿತಗಾರ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮಾಹಿತಿ ನೀಡಿದರು.

'ನೀರು ಸರ್ಕಾರಕ್ಕೆ ಸೇರಿದ್ದು'

'ನೀರು ಸರ್ಕಾರಕ್ಕೆ ಸೇರಿದ್ದು. ಯಾವುದೇ ವ್ಯಕ್ತಿಗೆ ಸೇರಿದ್ದಲ್ಲ. ಯಾವ ನೀರನ್ನು ಬೇಕಾದರೂ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಹಕ್ಕು ಸರ್ಕಾರಕ್ಕೆ ಇದೆ. ಬೆಂಗಳೂರು ಹೊರವಲಯದಲ್ಲಿ ಅಂತರ್ಜಲ ನೀರಿನ ಮಟ್ಟ ಹೆಚ್ಚಿರುವ ಕಡೆಯಿಂದಲೂ ನೀರಿನ ಪೂರೈಕೆ ಮಾಡಲು ಸಿದ್ಧರಾಗಿರಬೇಕು ಎಂದು ಅಧಿಕಾರಿಗಳಿಗೆ ತಿಳಿಸಲಾಗಿದೆ. ನೀರಿನ ಸಮಸ್ಯೆ ಬಗೆಹರಿಸಲು ಚುನಾವಣಾ ನೀತಿ ಸಂಹಿತೆ ಅಡ್ಡ ಬರುವುದಿಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

7ರಂದು ದರ ನಿಗದಿ

'ಖಾಸಗಿ ಟ್ಯಾಂಕರ್ ನೀರು ಪೂರೈಕೆ ಮಾಲೀಕರ ಸಭೆ ಮಾರ್ಚ್ 7ರಂದು ನಡೆಯಲಿದ್ದು, ಅಂದೇ ಟ್ಯಾಂಕರ್‌ಗಳ ನೀರಿನ ದರ ನಿಗದಿ ಮಾಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಎಲ್ಲಾ ನೀರಿನ ಟ್ಯಾಂಕರ್ ಮಾಲೀಕರು ಮಾರ್ಚ್ 7ರೊಳಗೆ ನೋಂದಣಿ ಮಾಡಿಸದಿದ್ದರೆ ವಶಪಡಿಸಿಕೊಳ್ಳಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಖಡಕ್ ಎಚ್ಚರಿಕೆ ನೀಡಿದರು. 'ಬೆಂಗಳೂರಿನಲ್ಲಿ 3,500 ಟ್ಯಾಂಕರ್‌ಗಳು ಇದ್ದು, ಕೇವಲ 219 ಟ್ಯಾಂಕರ್‌ಗಳ ಮಾಲೀಕರು ನೋಂದಣಿ ಮಾಡಿಕೊಂಡಿದ್ದಾರೆ. ನಿರುಪಯುಕ್ತ ಹಾಲಿನ ಟ್ಯಾಂಕರ್‌ಗಳನ್ನು ನೀರು ಸರಬರಾಜಿಗೆ ಬಳಕೆ ಮಾಡಲು ಸೂಚಿಸಲಾಗಿದೆ. ಕೆಎಂಎಫ್ ವ್ಯಾಪ್ತಿಯ ಎಲ್ಲಾ ಘಟಕಗಳಿಂದ ಟ್ಯಾಂಕರ್‌ಗಳನ್ನು ತರಿಸಿ, ನೀರಿನ ಸಮಸ್ಯೆ ಬಗೆಹರಿಯುವವರೆಗೆ ಬಳಸಲಾಗುತ್ತದೆ' ಎಂದು ತಿಳಿಸಿದರು.

ಕಾವೇರಿ 5 ನೇ ಹಂತದ ಕಾಮಗಾರಿಯಲ್ಲಿ ಎರಡು ಕಿ.ಮೀ. ನಷ್ಟು ಸಮಸ್ಯೆ ಇದೆ. ಅರಣ್ಯ ಭೂಮಿ ಮತ್ತು ಒಂದು ಕಡೆ ಕಲ್ಲು ಅಡ್ಡ ಬಂದಿರುವುದರಿಂದ ಸಮಸ್ಯೆ ಉಂಟಾಗಿದೆ. ತೊಡಕು ನಿವಾರಣೆ ಮಾಡಿ, 110 ಹಳ್ಳಿಗಳಿಗೆ ಮೇ ಅತ್ಯಂತ ವೇಳೆಗೆ ನೀರು ಪೂರೈಕೆಯಾಗುವುದು ಎಂದು ಹೇಳಿದರು.

110 ಹಳ್ಳಿಗಳ 35 ವಾರ್ಡ್‌ಗಳಿಗೆ ನೋಡಲ್ ಅಧಿಕಾರಿ

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳನ್ನು ಒಳಗೊಂಡ 35 ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಬಗೆಹರಿಸುವ ಸಲುವಾಗಿ ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. 35 ವಾರ್ಡ್‌ಗಳಿಗೂ ಒಬ್ಬೊಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದ್ದು, ಮೇಲುಸ್ತುವಾರಿಗಾಗಿ ದಾಸರಹಳ್ಳಿ ವಲಯದ ಕಾರ್ಯಪಾಲಕ ಎಂಜಿನಿಯರ್ ಧರಣೇಂದ್ರ ಕುಮಾರ್ ಅವರನ್ನು ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿದೆ ಎಂದು ಬಿಬಿಎಂಪಿ ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್ ತಿಳಿಸಿದ್ದಾರೆ.

110 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಸಹಾಯವಾಣಿ **1533**ಗೆ ಕರೆ ಮಾಡಬಹುದು.

ಬಿಬಿಎಂಪಿ ವ್ಯಾಪ್ತಿಯ ಇನ್ನುಳಿದ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇದ್ದರೆ ಜಲಮಂಡಳಿ ಸಹಾಯವಾಣಿ **1916**ಗೆ ಕರೆ ಮಾಡಬಹುದು

'ಹೇರೋಹಳ್ಳಿ ವಾರ್ಡ್ ನಂಬರ್ 72ರ ವ್ಯಾಪ್ತಿಯಲ್ಲಿರುವ ಅಂಜನಾನಗರದ ಗದ್ದೆಕಾನ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉಲ್ಬಣಿಸಿರುವ ನೀರಿನ ಸಮಸ್ಯೆ ಬಗೆಹರಿಸಬೇಕು' ಎಂದು ಆಗ್ರಹಿಸಿ ಗದ್ದೆಕಾನ್ ನಿವಾಸಿಗಳು ಬಿಬಿಎಂಪಿ ಮುಖ್ಯ ಕಚೇರಿ ಎದುರು ಖಾಲಿ ಕೊಡ ಹಿಡಿದು ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಜಲಮಂಡಳಿಯಿಂದ 'ನೀರು ಉಳಿಸಿ ಬೆಂಗಳೂರು ಉಳಿಸಿ' ಅಭಿಯಾನ

ವಾಹನ ಸ್ವಚ್ಛತೆಗೆ ನೀರು ಬಳಸುವಂತಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತೊಳೆಯಲು, ತೋಟಗಾರಿಕೆ, ಫ್ಲಶ್ ಮಾಡಲು, ಪಾರ್ಕಿಂಗ್ ಪ್ರದೇಶವನ್ನು ಸ್ವಚ್ಛಗೊಳಿಸಲು ಹಾಗೂ ಇತ್ಯಾದಿ ಬಳಕೆಗೆ ಕುಡಿಯುವ ನೀರನ್ನು ಬಳಸದಂತೆ ಸಾರ್ವಜನಿಕ ಹಿತಾಸಕ್ತಿಯಿಂದ ನಿಷೇಧ ಆದೇಶ ಜಾರಿ ಮಾಡಲಾಗುತ್ತಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಜಲಮಂಡಳಿಯು 'ನೀರು ಉಳಿಸಿ ಬೆಂಗಳೂರು ಉಳಿಸಿ' ಅಭಿಯಾನ ಆರಂಭಿಸಿದೆ. ಐಐಎಸ್ಸಿ, ಐಐಎಂ, ಬಿಎಚ್‌ಇಎಲ್ ಹಾಗೂ ಇನ್ನಿತರೆ ಪ್ರಮುಖ ಸಂಸ್ಥೆಗಳಲ್ಲಿ ಬಳಸಿದ ನೀರನ್ನು ತೃತೀಯ ಹಂತದಲ್ಲಿ ಸಂಸ್ಕರಿಸಲಾಗಿದ್ದು, ಅದನ್ನು ಬಳಸಿಕೊಳ್ಳಲು ಚಿಂತಿಸಲಾಗಿದೆ.

ಕೆರೆಗಳ ಆವರಣದಲ್ಲಿ ಫಿಲ್ಟರ್ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ. ಅಂತರ್ಜಲ ಮಟ್ಟವನ್ನು ಮರುಪೂರಣಗೊಳಿಸಲು ಸಂಸ್ಕರಿಸಿದ ನೀರಿನಿಂದ ಕೆರೆಗಳನ್ನು ತುಂಬಿಸಲಾಗುತ್ತದೆ. ಅಂತರ್ಜಲದ ಮೇಲಿನ ಬೇಡಿಕೆಯನ್ನು ಕಡಿಮೆ ಮಾಡಲು ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಸಂಸ್ಕರಿಸಿದ ನೀರನ್ನು ಬಳಸಿಕೊಳ್ಳುವ ಬಗ್ಗೆ ಕ್ರಮವಹಿಸಲಾಗುತ್ತಿದೆ. ಕೈಗಾರಿಕೆಗಳಲ್ಲಿ ಕುಡಿಯುವುದಕ್ಕೆ ಹೊರತುಪಡಿಸಿ ಇತರ ಬಳಕೆಗೆ ಕಡ್ಡಾಯವಾಗಿ ಸಂಸ್ಕರಿಸಿದ ನೀರನ್ನು ಬಳಸುವಂತೆ ಸೂಚಿಸಲಾಗಿದೆ.

ಕಾವೇರಿ ಮೇಲೆ ಅವಲಂಬನೆ ಕಡಿತ; ನಗರದಲ್ಲಿ ಮುಂದಿನ 50 ವರ್ಷ ನೀರಿನ ಸಮಸ್ಯೆ ಇಲ್ಲ!

ಮಳೆ ನೀರ ಶೇಖರಣೆ ಭವಿಷ್ಯಕ್ಕೆ ಪೂರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನೀರು ಶೇಖರಣೆ, ಎಲ್ಲೆಡೆ ಇಂಗು ಗುಂಡಿಗಳ ಮೂಲಕ ಅಂತರ್ಜಲ ವೃದ್ಧಿ, ಜಲಮೂಲಗಳ ರಕ್ಷಣೆಗೆ ಆದ್ಯತೆ ನೀಡಿದರೆ ಮುಂದಿನ 50 ವರ್ಷ ನಗರದಲ್ಲಿ ನೀರಿನ ಸಮಸ್ಯೆ ಎದುರಾಗುವುದಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ನೀರು ಸರಬರಾಜಿನಲ್ಲಿ ಸೋರಿಕೆಯನ್ನು ಕಡಿಮೆ ಮಾಡಿ, ಈ ವ್ಯರ್ಥವಾಗುತ್ತಿರುವ ನೀರನ್ನು ಬಳಕೆ ಮಾಡಿಕೊಂಡರೆ ನಿತ್ಯ 20 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಕೆ ಮಾಡಬಹುದು ಎಂದು ಅಂಕಿ–ಅಂಶಗಳ ಸಹಿತ ಸಲಹೆ ನೀಡಿದ್ದಾರೆ.

ಮಳೆ ನೀರನ್ನು ಸಂಗ್ರಹಿಸಿ, ಅದನ್ನು ಬಳಸಿಕೊಂಡರೆ, ಕಾವೇರಿ ನೀರನ್ನು ಹೆಚ್ಚಾಗುವ ಜನಸಂಖ್ಯೆಗೂ ಹಂಚಬಹುದು. ಮಳೆ ನೀರು ಸಂಗ್ರಹಿಸಿ, ಒಳಚರಂಡಿ ನೀರನ್ನು ಸಂಸ್ಕರಿಸಿದರೆ 27 ಟಿಎಂಸಿ ಅಡಿ ನೀರು ಲಭ್ಯವಾಗುತ್ತದೆ. ನದಿಯಿಂದ ಬರುವ 22 ಟಿಎಸಿಸಿ ಅಡಿ ನೀರೂ ಸೇರಿದರೆ 49 ಟಿಎಂಸಿ ನೀರು ನಗರಕ್ಕೆ ಲಭ್ಯವಾದಂತಾಗುತ್ತದೆ ಎಂದು ನಿವೃತ್ತ ಹಿರಿಯ ಭೂಜಲವಿಜ್ಞಾನಿ ಟಿ.ಎಂ.ಶಿವಶಂಕರ್ ಹೇಳಿದರು.

ನಗರದ ಜನತೆ ಕುಡಿಯಲು ಶೇ 10ರಷ್ಟನ್ನು ನೀರು ಬಳಸಿದರೆ, ಉಳಿದ ಶೇ 90ರಷ್ಟು ಇತರೆ ಬಳಕೆಗೆ ವ್ಯಯವಾಗುತ್ತಿದೆ. ಈ ಇತರೆ ಬಳಕೆಗೆ ಮಳೆ ನೀರು, ಸಂಸ್ಕರಿಸಿದ ನೀರನ್ನು ಪೂರೈಸಿದರೆ ನೀರಿನ ಸ್ವಾವಲಂಬನೆ ಸಾಧ್ಯವಾಗುತ್ತದೆ ಎಂದು ಸಾಧ್ಯತಾ ಕಾರ್ಯಕ್ರಮಗಳೊಂದಿಗೆ ವಿವರಿಸಿದರು.

ಜಲ ಸ್ವಾವಲಂಬನೆಗೆ ತಜ್ಞರ ಸಲಹೆಗಳು

- ಮನೆಗಳಲ್ಲಿ ಸಿಮೆಂಟ್ ಟ್ಯಾಂಕ್ ಅಥವಾ ಪ್ಲಾಸ್ಟಿಕ್ ಟ್ಯಾಂಕ್‌ಗಳಲ್ಲಿ ಮಳೆ ನೀರನ್ನು ಸಂಗ್ರಹಿಸಬೇಕು. ಇದನ್ನು ಕಡ್ಡಾಯಗೊಳಿಸಿ ಸರ್ಕಾರ ಆದೇಶ ಹೊರಡಿಸಬೇಕು. ಈ ಪದ್ಧತಿ ಅನುಸರಿಸುವ ನಾಗರಿಕರಿಗೆ ತಿಂಗಳ ನೀರಿನ ಬಿಲ್‌ನಲ್ಲಿ ಭಾರಿ ರಿಯಾಯಿತಿ ನೀಡಬೇಕು.
- ಬರಿದಾಗುತ್ತಿರುವ ಅಂತರ್ಜಲ ಮರು ಪೂರಣಗೊಳಿಸುವುದನ್ನು ಕಡ್ಡಾಯಗೊಳಿಸಬೇಕು. ಮನೆಗಳ ಆವರಣ ಸೇರಿದಂತೆ ನಗರದೆಲ್ಲೆಡೆ ಮಳೆಯ ನೀರನ್ನು ನೆಲದಾಳಕ್ಕೆ ಇಂಗಿಸಿ ಭೂಜಲ ಸಂಪತ್ತನ್ನು ವೃದ್ಧಿಸಬೇಕು.
- ಬೆಂಗಳೂರು ನಗರದ ವಿಸ್ತೀರ್ಣ ಅಂದಾಜು 860 ಚದರ ಕಿಲೋಮೀಟರ್. ಇಷ್ಟು ಪ್ರದೇಶದಲ್ಲಿ ಪ್ರತಿ ವರ್ಷ ಬೀಳುವ ಅಂದಾಜು 850 ಎಂಎಂ ಮಳೆಯಿಂದ 25 ಟಿಎಂಸಿ ಅಡಿಯಿಂದ 28 ಟಿಎಂಸಿ ಅಡಿ ನೀರನ್ನು ಶೇಖರಿಸಬಹುದು. ರಸ್ತೆಯಲ್ಲಿ ಹರಿಯುವ ಮಳೆ ನೀರಿಗೆ ಚರಂಡಿ ನೀರು ಸೇರದಂತೆ ಜಾಗ್ರತೆ ವಹಿಸಿ, ಅದನ್ನು ಸಂಗ್ರಹಿಸುವ ಜವಾಬ್ದಾರಿ ಜಲಮಂಡಳಿಗೆ ವಹಿಸಬೇಕು.
- ಬೆಂಗಳೂರು ಹೊರ ವಲಯದಲ್ಲಿ ನೀರು ಹಿಡಿದಿಡುವ ದೊಡ್ಡ ಸಿಮೆಂಟ್ ನಾಲೆಗಳನ್ನು ನಿರ್ಮಿಸಿ, ಕಾವೇರಿ ನೀರಿಗೆ ನೀಡಲಾಗುವ ಆಧುನಿಕ ತಂತ್ರಜ್ಞಾನದ ಚಿಕಿತ್ಸೆ ನೀಡಿದರೆ ಅದನ್ನು ಕುಡಿಯಲು ಬಳಸಬಹುದು.
- ನಗರದಲ್ಲಿ ನಿತ್ಯ ಹರಿಯುವ ಸುಮಾರು ಎರಡು ಸಾವಿರ ಎಂಎಲ್‌ಡಿ ತ್ಯಾಜ್ಯ ನೀರನ್ನು ತೃತೀಯ ಹಂತದಲ್ಲಿ ಸಂಸ್ಕರಣೆ ಮಾಡಬೇಕು. ಅದನ್ನು ನಿತ್ಯ ಬಳಕೆಗೆ ಪೂರೈಕೆ ಮಾಡಬೇಕು.
- ಬೆಂಗಳೂರು ಸುತ್ತ ಹೊರ ವಲಯಗಳಲ್ಲಿ ಮೂರರಿಂದ ಐದು ಟಿಎಂಸಿ ಅಡಿ ನೀರು ಶೇಖರಣೆ ಸಾಮರ್ಥ್ಯದ ಸರೋವರಗಳನ್ನು ನಿರ್ಮಿಸಿ, ಅಲ್ಲಿಂದ ನೀರನ್ನು ನಗರಕ್ಕೆ ಪೂರೈಕೆ ಮಾಡಬೇಕು.

ಶೇ 60ರಷ್ಟು ವಿದ್ಯುತ್ ಶುಲ್ಕ!

ಬೆಂಗಳೂರು ನಗರದಲ್ಲಿ ಒಂದು ದಿನ ಎಷ್ಟು ಪ್ರಮಾಣದ ವಿದ್ಯುತ್ ಬಳಕೆಯಾಗುತ್ತದೆಯೋ ಅದರ ಮೂರನೇ ಒಂದು ಭಾಗದಷ್ಟು ವಿದ್ಯುತ್ ಅನ್ನು ನಗರಕ್ಕೆ ನೀರನ್ನು ಪಂಪ್ ಮಾಡಲು ಬಳಸಲಾಗುತ್ತಿದೆ. ಜಲಮಂಡಳಿಯ ಶೇ 60ರಷ್ಟು ಆದಾಯ ವಿದ್ಯುತ್ ಶುಲ್ಕದ ರೂಪದಲ್ಲಿ ಪಾವತಿಸಲಾಗುತ್ತದೆ ಎಂದು ಟಿ.ಎಂ.ಶಿವಶಂಕರ್ ಮಾಹಿತಿ ನೀಡಿದರು.

'ಗಾಳಿಯಿಂದ ನೀರು ಪೂರೈಸಲಿ'



'ಗಾಳಿಯಿಂದ ನೀರನ್ನು ಹೀರಿಕೊಂಡು ಸಂಸ್ಕರಿಸುವ ಏರ್ ಫಿಲ್ಟರ್ ಉಪಕರಣವನ್ನು ರಸ್ತೆಗಳಲ್ಲಿ ಅಳವಡಿಸಿ ಕುಡಿಯುವ ನೀರನ್ನು ಪೂರೈಸಬೇಕು. ಈ ನೀರಿನಲ್ಲಿ ಬ್ಯಾಕ್ಟೀರಿಯ ಇರುವುದಿಲ್ಲ, ಹಾನಿಕರ ರಾಸಾಯನಿಕ ಧಾತುಗಳು ಕರಗಿರುವುದಿಲ್ಲ. ಇಂತಹ ಉಪಕರಣಗಳನ್ನು ತೆಲಂಗಾಣ, ಹೈದರಾಬಾದ್‌ಗಳಲ್ಲಿ ಅಳವಡಿಸಿ, 'ಮೇಘದೂತ್ ಕಿಯೋಸ್ಕ್' ಸ್ಥಾಪಿಸಲಾಗಿದೆ. ಲೀಟರ್ ಆಧಾರದಲ್ಲಿ ಶುಲ್ಕವನ್ನೂ ಸಂಗ್ರಹಿಸಲಾಗುತ್ತಿದೆ. ಇಂತಹ ಪ್ರಯತ್ನ ಇಲ್ಲೂ ಆಗಬೇಕು' ಎಂದು ನಿವೃತ್ತ ಹಿರಿಯ ಭೂಜಲವಿಜ್ಞಾನಿ ಟಿ.ಎಂ. ಶಿವಶಂಕರ್ ಅಭಿಪ್ರಾಯಪಟ್ಟರು.

ಜಲಮಂಡಳಿ ಕೈಗೊಂಡಿರುವ ಕ್ರಮಗಳು

- 1,000 ರಿಂದ 3,000 ಲೀಟರ್ ಸಾಮರ್ಥ್ಯದ 336 ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಕೊಳೆಗೇರಿ ಪ್ರದೇಶ, ಜನನಿಬಿಡ ಪ್ರದೇಶ, ತಗ್ಗು ಮತ್ತು ಎತ್ತರ ಪ್ರದೇಶಗಳಲ್ಲಿ ಸ್ಥಾಪಿಸಲಾಗಿದೆ. ಈ ಮೂಲಕ ಕುಡಿಯುವ ನೀರನ್ನು ಉಚಿತವಾಗಿ ಪಡೆಯುತ್ತಿದ್ದಾರೆ.
- 6,000 ಲೀಟರ್ ಸಾಮರ್ಥ್ಯದ ಸುಮಾರು 76 ಖಾಸಗಿ ನೀರಿನ ಟ್ಯಾಂಕರ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು ಸಿಂಟೆಕ್ಸ್ ಟ್ಯಾಂಕ್‌ಗಳಿಗೆ ನೀರನ್ನು ಪೂರೈಸಲಾಗುತ್ತಿದೆ.
- ಜನನಿಬಿಡ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲು 82 ತಾತ್ಕಾಲಿಕ ಮೊಬೈಲ್ ನೀರಿನ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ.
- 110 ಹಳ್ಳಿಗಳು ಮತ್ತು 256 ನೀರಿನ ಸಮಸ್ಯೆಯಿರುವ ಪ್ರದೇಶಗಳಲ್ಲಿ ನೀರಿನ ಬೇಡಿಕೆಯನ್ನು ಪೂರೈಸಲು ಬೆಂಗಳೂರಿನ ಜಿಲ್ಲಾಧಿಕಾರಿ ಮತ್ತು ಸಾರಿಗೆ ಇಲಾಖೆಯ ಮುಖಾಂತರ ಸುಮಾರು 210 ಖಾಸಗಿ ನೀರಿನ ಟ್ಯಾಂಕರ್‌ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗುತ್ತಿದೆ.
- ಜಲಮಂಡಳಿಯು 313 ಸ್ಥಳಗಳಲ್ಲಿ ಬೋರ್‌ವೆಲ್ ಕೊರೆಯುತ್ತಿದೆ. ನಿಷ್ಕ್ರಿಯಗೊಂಡ ಕೊಳವೆಬಾವಿಗಳನ್ನು ಮತ್ತೆ ಕೊರೆಸಲು ಕ್ರಮವಹಿಸಲಾಗುತ್ತಿದೆ.
- ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಮಳೆ ನೀರು ಸಂಗ್ರಹ ಕ್ಷೇತ್ರದ ತಜ್ಞರೊಂದಿಗೆ ಸಭೆ ನಡೆಸಲಾಗಿದ್ದು, ಅವರ ಸಲಹೆಯನ್ನು ಪರಿಗಣಿಸಿ ಕ್ರಮಕೈಗೊಳ್ಳಲಾಗುತ್ತಿದೆ.
- ಕೈಗಾರಿಕೆ ಸೇರಿದಂತೆ ದೊಡ್ಡ ಪ್ರಮಾಣ ನೀರಿನ ಸಂಪರ್ಕವನ್ನು ಪಡೆದಿರುವ ಪ್ರಮುಖ ಗ್ರಾಹಕರೊಂದಿಗೆ ಸಭೆ ನಡೆಸಿ, ಅವರು ಕುಡಿಯಲು ಮಾತ್ರ ಕಾವೇರಿ ನೀರು ಬಳಸುವಂತೆ ತಿಳಿಸಲಾಗಿದೆ.

15ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಸಂವಾದ

'ದ್ವೀಪ'ದ ಸುತ್ತ ಕುತೂಹಲಕಾರಿ ಸುತ್ತು

• ಅಭಿಲಾಷ್ ಪಿ.ಎಸ್.

ಬೆಂಗಳೂರು: ಗಿರೀಶ ಕಾಸರವಳ್ಳಿ ಅವರು ನಿರ್ದೇಶಿಸಿದ 'ದ್ವೀಪ' ಸಿನಿಮಾ ತೆರೆಕಂಡು ಎರಡು ದಶಕಗಳು ಉರುಳಿವೆ. ಈ ಸಂದರ್ಭದಲ್ಲಿ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'ದ್ವೀಪ'ದ ಸುತ್ತ ಸುತ್ತುವ ಅವಕಾಶ ಲಭಿಸಿತ್ತು.

ನಗರದ ಒರಾಯನ್ ಮಾಲ್‌ನಲ್ಲಿ ನಡೆದ ವಿ.ಕೆ.ಮೂರ್ತಿ ಸ್ಮರಣಾರ್ಥದ ಮಾಸ್ಟರ್‌ಕ್ಲಾಸ್‌ನಲ್ಲಿ ಒಂದಿಷ್ಟು ಕುತೂಹಲಕಾರಿ ವಿಷಯಗಳನ್ನು ಚಿತ್ರದ ನಿರ್ದೇಶಕ ಗಿರೀಶ ಕಾಸರವಳ್ಳಿ, ಛಾಯಾಚಿತ್ರಗ್ರಾಹಕ ಎಚ್.ಎಂ.ರಾಮಚಂದ್ರ ಹಾಗೂ ಕಲಾ ನಿರ್ದೇಶಕ ಶಶಿಧರ್ ಅಡಪ ತೆರೆದಿಟ್ಟರು.

'ಸಿನಿಮಾವೊಂದನ್ನು ನೋಡಿದಾಗ ಎಲ್ಲವೂ ಒಮ್ಮೆಯೇ ಅರ್ಥವಾಗಬೇಕು ಎಂದುಕೊಳ್ಳುತ್ತೇವಲ್ಲ ಅದು ತಪ್ಪು. ಒಂದು ಸಿನಿಮಾವನ್ನು ಓದುವುದೂ ಅಷ್ಟೇ ಕಷ್ಟ. ಮೊದಲ ಬಾರಿಗೆ ಸಿನಿಮಾ ವೀಕ್ಷಿಸಿದಾಗ ಅರ್ಥವಾಗುವುದು ಕಥೆಯಷ್ಟೇ. ಒಳಾರ್ಥಗಳು ಎಟಕುವುದಿಲ್ಲ. ಮತ್ತೆ ಮತ್ತೆ ಸಿನಿಮಾ ನೋಡಿದಾಗಷ್ಟೇ ಸಿನಿಮಾ ಅರ್ಥವಾಗಲು ಸಾಧ್ಯ. ಸಿನಿಮಾದ ಸಣ್ಣ ಸಣ್ಣ ವಿವರಗಳನ್ನು ನೋಡಬೇಕು. ಉದಾಹರಣೆಗೆ 'ದ್ವೀಪ' ಸಿನಿಮಾದಲ್ಲಿ ಪಾತ್ರಗಳು ಬಳಸಿರುವ ಭಾಷೆ ಕುಂದಾಪುರ ಕನ್ನಡ. ಅವರ ಬಟ್ಟೆ ಮಲೆನಾಡಿನದ್ದು. ಹೀಗೆ ಹಲವು ವಿಷಯಗಳನ್ನು ಬುದ್ಧಿಪೂರ್ವಕವಾಗಿ ಅಳವಡಿಸಿದ್ದಾರೆ ಎನ್ನುವುದನ್ನೂ ಅರಿಯಬೇಕು. ಸಣ್ಣ ಸಣ್ಣ ವಿವರಗಳಿಂದ ಸಿನಿಮಾಗೆ ಜೀವ ಬರುತ್ತದೆ. ಹೀಗಾಗಿಯೇ ನಾನು ಚಿತ್ರಕಥೆ ರಚಿಸುವಾಗ ಎರಡು ಪ್ರತಿಗಳನ್ನು ಮಾಡಿಕೊಳ್ಳುತ್ತೇನೆ. ಒಂದು ತಾಂತ್ರಿಕ ವಿಭಾಗಕ್ಕೆ, ಇನ್ನೊಂದು ಕಲಾವಿದರಿಗೆ. ಇದರಲ್ಲಿ ಯಾವ ಲೆನ್ಸ್ ಬಳಸಿಕೊಳ್ಳಬೇಕು ಎನ್ನುವ ಸೂಕ್ಷ್ಮ ವಿಚಾರವೂ ಇರುತ್ತದೆ. ಈ ಎಲ್ಲ ಕಾರಣಗಳಿಂದಲೇ 1987ರಲ್ಲೇ ಸಿದ್ಧವಾಗಬೇಕಿದ್ದ 'ದ್ವೀಪ' 2002ರಲ್ಲಿ ತೆರೆಕಂಡಿತು' ಎಂದು ಸಂವಾದಕ್ಕೆ ವೇದಿಕೆ ಹಾಕಿಕೊಟ್ಟರು ಕಾಸರವಳ್ಳಿ.

'ಡ್ರೋನ್ ಅವಶ್ಯಕತೆಯೇ ಬರುತ್ತಿರಲಿಲ್ಲ': ಚಿತ್ರೀಕರಣದ ದಿನಗಳನ್ನು ನೆನಪಿಸಿಕೊಂಡ ರಾಮಚಂದ್ರ, 'ಯಾವುದೇ ಡ್ರೋನ್ ಶಾಟ್‌ಗಳು ಇಲ್ಲದೆಯೇ ದ್ವೀಪದ ಅನುಭವ ಕಟ್ಟಿಕೊಟ್ಟಿದ್ದೇವೆ ಎಂದರೆ ಅದರ ಅವಶ್ಯಕತೆಯೂ ಇಲ್ಲ. ಕ್ಯಾಮೆರಾ ಎನ್ನುವುದು ಕೇವಲ ಉಪಕರಣವಷ್ಟೇ. ಇಂದಿಗೂ ಆ ಕಥಾನಕಕ್ಕೆ ಡ್ರೋನ್ ಶಾಟ್ ಅವಶ್ಯಕತೆ ಇದೆ ಎಂದು ಅನಿಸುತ್ತಿಲ್ಲ. ಆ ಕಥೆ ಒಂದು ಭೌಗೋಳಿಕ ದ್ವೀಪಕ್ಕಿಂತಲೂ ಹೆಚ್ಚಾಗಿ ವ್ಯಕ್ತಿಗಳ ದ್ವೀಪವಾಗಿತ್ತು. ಅಂದು ಬಜೆಟ್ ಕೊರತೆಯಿಂದ ದಿನಕ್ಕೆ ಸಾವಿರಾರು ರೂಪಾಯಿ ಬಾಡಿಗೆ ಇದ್ದ ಕ್ಯಾಮೆರಾ ಬದಲು ಡಿ.ವಿ.ರಾಜಾರಾಂ ಅವರಿಂದ ವಿಲೇವಾರಿಯಾಗಬೇಕಿದ್ದ ಒಂದು 2ಸಿ ಕ್ಯಾಮೆರಾ ಪಡೆದಿದ್ದೆವು. ಅದರಲ್ಲಿ ಇಂಟರ್‌ನಲ್ ರಿಫ್ಲೆಕ್ಷನ್ ಇದ್ದ ಕಾರಣ ಇಡೀ ಕ್ಯಾಮೆರಾಗೆ ಕಪ್ಪುಪೇಪರ್ ಸುತ್ತಿದ್ದೆವು. ನಾಲ್ಕು ಪೈಪ್‌ಗಳಿಂದ ಮಾಡಿದ್ದ ರ‍್ಯಾಫ್ಟ್ ಮೇಲೆ ಕ್ಯಾಮೆರಾ ಇಟ್ಟು ಚಿತ್ರೀಕರಣ ಮಾಡಿದ್ದೆವು' ಎಂದರು.

ಕಾರ್ಯಕ್ರಮದಲ್ಲಿ ಛಾಯಾಚಿತ್ರಗ್ರಾಹಕರಾದ ಅದ್ವೈತ್ ಗುರುಮೂರ್ತಿ, ಜಿ.ಎಸ್.ಭಾಸ್ಕರ್, ನಿರ್ದೇಶಕ ಪಿ.ಶೇಷಾದ್ರಿ ಉಪಸ್ಥಿತರಿದ್ದರು.

'ದ್ವೀಪ' ಸಿನಿಮಾದ ಕುರಿತು ಸಂವಾದದಲ್ಲಿ ನಿರ್ದೇಶಕ ಗಿರೀಶ ಕಾಸರವಳ್ಳಿ (ಎಡದಿಂದ ನಾಲ್ಕನೇಯವರು) ಮಾತನಾಡಿದರು, (ಎಡದಿಂದ) ಛಾಯಾಚಿತ್ರಗ್ರಾಹಕರಾದ ಅದ್ವೈತ್ ಗುರುಮೂರ್ತಿ, ಜಿ.ಎಸ್.ಭಾಸ್ಕರ್, ಎಚ್.ಎಂ.ರಾಮಚಂದ್ರ, ನಿರ್ದೇಶಕ ಪಿ.ಶೇಷಾದ್ರಿ ಮತ್ತು ಕಲಾನಿರ್ದೇಶಕ ಶಶಿಧರ್ ಅಡಪ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಸೌಂದರ್ಯಗೆ ನೀರೆಂದರೆ ಭಯ'

'ನಟಿ ಸೌಂದರ್ಯ ಅವರಿಗೆ ನೀರೆಂದರೆ ಭಯವಿತ್ತು. ದೋಣಿಯಲ್ಲಿ ಸಾಗುವಾಗ ಅದರ ಕೆಳಗೆ ಸುರಕ್ಷತೆಗಾಗಿ ಬಲೆ ಹಾಕಲು ಸಾಧ್ಯವೇ ಎಂದು ಅವರ ಅಣ್ಣ ಕೇಳುತ್ತಿದ್ದರು. ಕಲಾ ವಿಭಾಗದ ಯಾರಾದರು ಒಬ್ಬರು ಜೊತೆಗಿಲ್ಲದೆ ಸೌಂದರ್ಯ ಅವರು ನೀರಿಗೆ ಇಳಿಯುತ್ತಿರಲಿಲ್ಲ. ನಂತರದಲ್ಲಿ ಅವರು ವಿಮಾನ ಅಪಘಾತದಲ್ಲಿ ನಿಧನರಾದರು. ನೀರಲ್ಲಿ ರಕ್ಷಣೆ ಮಾಡಲು ನಾವಿದ್ದೆವು. ಆದರೆ ಆಕಾಶದಲ್ಲಿ ರಕ್ಷಣೆ ಮಾಡಲು ನಮಗೇನು ಮಾಡಲು ಸಾಧ್ಯವಾಗಲಿಲ್ಲ. ಇದು ನನ್ನನ್ನು ಇನ್ನೂ ಕಾಡುತ್ತಿದೆ' ಎನ್ನುತ್ತಾ ಕಲಾ ನಿರ್ದೇಶಕ ಶಶಿಧರ್ ಅಡಪ ಭಾವುಕರಾದರು.

ದಿನದ ಪಾಸ್ ಲಭ್ಯ

ಚಿತ್ರೋತ್ಸವದಲ್ಲಿ ಭಾಗವಹಿಸಲು ಸಾರ್ವಜನಿಕರಿಗೂ ಅವಕಾಶ ಕಲ್ಪಿಸಲಾಗಿದ್ದು, ಸೋಮವಾರದಿಂದ(ಮಾರ್ಚ್ 4) ₹200ಕ್ಕೆ ದಿನದ ಪಾಸ್ ವಿತರಿಸಲಾಗಿದೆ. ಮೊದಲ ದಿನವೇ 160ಕ್ಕೂ ಅಧಿಕ ಜನರು ಈ ಪಾಸ್ ಖರೀದಿಸಿದ್ದಾರೆ. ಮಾರ್ಚ್ 6ರವರೆಗೆ ಚಿತ್ರೋತ್ಸವ ನಡೆಯಲಿದೆ.

ಕಾಸರವಳ್ಳಿ ಸಿನಿಮಾಗಳ ಕುರಿತು ಕೃತಿ

ನಿರ್ದೇಶಕ ಗಿರೀಶ ಕಾಸರವಳ್ಳಿ ನಿರ್ದೇಶನದ 16 ಸಿನಿಮಾಗಳ ಕುರಿತು 'ಬಿಂಬ–ಬಿಂಬನ' ಎಂಬ ಕೃತಿ ಶೀಘ್ರದಲ್ಲೇ ಬರಲಿದ್ದು, ಇದರಲ್ಲಿ ಗೋಪಾಲಕೃಷ್ಣ ಪೈ ಅವರ ಜೊತೆಗೂಡಿ ಕಾಸರವಳ್ಳಿ ಅವರೇ ತಮ್ಮ ಸಿನಿಮಾಗಳ ಕಥಾನಕವನ್ನು ವಿಸ್ತರಿಸಿದ್ದಾರೆ. ಉದಾಹರಣೆಗೆ 'ದ್ವೀಪ' ಚಿತ್ರದಲ್ಲಿ ಹುಲಿಯ ಪ್ರಸ್ತಾಪ ಮತ್ತೆ ಮತ್ತೆ ಬಂದರೂ ಹುಲಿ ಏಕೆ ಕಾಣಿಸಿಕೊಳ್ಳುವುದಿಲ್ಲ ಎನ್ನುವುದಕ್ಕೆ ಕಾಸರವಳ್ಳಿಯವರು ಈ ಕೃತಿಯಲ್ಲಿ ವಿವರ ನೀಡಿದ್ದಾರೆ. ಪ್ರಶ್ನೋತ್ತರದ ರೀತಿಯಲ್ಲಿ ಪ್ರತಿ ಸಿನಿಮಾದ ಕುರಿತು ತಲಾ 20–25 ಪುಟಗಳಷ್ಟು ವಿವರಣೆ ಈ ಕೃತಿಯಲ್ಲಿದೆ.

ಮಲೆನಾಡಿನ ಮಳೆಗಾಲದ ಸಾಹಸ!

ಮಲೆನಾಡಿನ ಮಳೆಗಾಲದ ಅನುಭವವನ್ನು ತೆರೆ ಮೇಲೆ ತರಲು ಚಿತ್ರತಂಡ ಯಾವೆಲ್ಲಾ ಸಾಹಸ ಮಾಡಿತ್ತು ಎನ್ನುವುದನ್ನು ಕಾಸರವಳ್ಳಿ ಅವರು ವಿವರಿಸಿದ್ದು ಹೀಗೆ...

- ಮೋಡವಿದ್ದಾಗಲೇ ಚಿತ್ರೀಕರಣ. ಹೀಗಾದಾಗ ದೃಶ್ಯಗಳಲ್ಲಿ ನೀಲಿಬಣ್ಣ ತುಂಬಿ ಮಳೆಗಾಲದ ಅನುಭವ
- ಬೆಟ್ಟಹತ್ತಿ ಮೋಡವಿಲ್ಲದೆ ಸಂಜೆಯವರೆಗೂ ಕಾದು ಮರಳಿದ್ದೂ ಇದೆ
- ಯಾವ ಸಂದರ್ಭದಲ್ಲೂ ಕಣ್ಣಿಗೆ ಕುಕ್ಕುವ ಬಣ್ಣದ ಬಟ್ಟೆಗಳ ಬಳಕೆ ಇಲ್ಲ
- ಕ್ಯಾಮೆರಾ ಮುಂದೆ ಏನೇನು ಕಾಣುತ್ತದೆಯೋ ಅವುಗಳೆಲ್ಲವೂ ಒದ್ದೆಯಾಗಿರಬೇಕು
- ಎಳೆ ಹಸಿರು ಬೇಕು ಎಂದು ಒಂದೇ ದೃಶ್ಯಕ್ಕಾಗಿ 25 ಕಿ.ಮೀ. ಪ್ರಯಾಣ
- ಮೋಡಗಳ ಮೇಲೆ ನಿಗಾ ಇಡಲು 'ಕ್ಲೌಡ್ ವಾಚರ್' ನಿಯೋಜಿಸಿದ್ದೆವು. ಆತನ ಹೆಸರು ಆನಂದ್. ಮೊದಲೆರಡು ದಿನ ಹುಮ್ಮಸ್ಸಿನಲ್ಲಿ ಮೋಡ ಬಂತು ಎಂದು ಕೂಗುತ್ತಿದ್ದ ಈತ, ದಿನ ಉರುಳಿದಂತೆ 'ಮೋಡ ಬರ್ತಿದೆ, ಆದರೆ ನಮ್ಮ ಮೇಲೆಯೇ ಬರುತ್ತದೆಯೇ ಎಂದು ತಿಳಿದಿಲ್ಲ' ಎನ್ನುತ್ತಿದ್ದ.

ಪ್ರತಿಭಟನೆ

'ವಿಶ್ವಕರ್ಮ ಅಭಿವೃದ್ಧಿ ನಿಗಮದ ಬಾಕಿ ಸಾಲವನ್ನು ಮನ್ನಾ ಮಾಡಬೇಕು. ನಿಗಮಕ್ಕೆ ₹ 100 ಕೋಟಿ ಅನುದಾನ ನೀಡಬೇಕು. ವಿಧಾನಸೌಧ ಆವರಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಪ್ರತಿಮೆ ಸ್ಥಾಪಿಸಬೇಕು. ವಿಶ್ವಕರ್ಮ ಮಕ್ಕಳಿಗಾಗಿ ವಸತಿ ಶಾಲೆ ತೆರೆಯಬೇಕು' ಎಂದು ಆಗ್ರಹಿಸಿ 'ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ' ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

'ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖ'

ಸೋಮನಾಥ್

ನವದೆಹಲಿ/ತಿರುವನಂತಪುರ (ಪಿಟಿಐ): 'ಕ್ಯಾನ್ಸರ್‌ನಿಂದ ಬಳಲಿದ್ದ ನಾನು, ಇದೀಗ ಸಂಪೂರ್ಣ ಗುಣಮುಖನಾಗಿದ್ದೇನೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

'ನನಗೆ ಕ್ಯಾನ್ಸರ್ ಇದೆ ಎಂಬುದು ದೇಶದ ಮೊದಲ ಸೌರ ಅಧ್ಯಯನ ಯೋಜನೆಯ ಉಪಗ್ರಹ ಆದಿತ್ಯ ಎಲ್1 ಉಡಾವಣೆಯ ದಿನದಂದೇ ಪತ್ತೆಯಾಗಿತ್ತು. ಹೊಟ್ಟೆಯಲ್ಲಿ ಬೆಳೆದಿದ್ದ ಕ್ಯಾನ್ಸರ್ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆಯಲಾಗಿದೆ. ಕಿಮೋಥೆರಪಿ ಚಿಕಿತ್ಸೆ ಬಳಿಕ ಕ್ಯಾನ್ಸರ್‌ನಿಂದ ಗುಣಮುಖನಾದೆ' ಎಂದು ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಬಹಿರಂಗಪಡಿಸಿದ್ದಾರೆ.

'ಚಂದ್ರಯಾನ–3 ಯೋಜನೆ ಸಮಯದಲ್ಲೇ ನನ್ನ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು. ಆದರೆ ಸಮಸ್ಯೆ ಏನೆಂಬುದು ಸ್ಪಷ್ಟವಾಗಿರಲಿಲ್ಲ. ಆದಿತ್ಯ ಎಲ್1 ಉಪಗ್ರಹ ಉಡಾವಣೆಯ ಬೆನ್ನಲ್ಲೇ ಚೆನ್ನೈನಲ್ಲಿ ಆರೋಗ್ಯ ಪರೀಕ್ಷೆಗೆ ಒಳಗಾದೆ. ದೊಡ್ಡ ಕರುಳಿನಲ್ಲಿ ಗೆಡ್ಡೆ ಇರುವುದು ಪತ್ತೆಯಾಗಿದೆ' ಎಂದು ಸೋಮನಾಥ್ ಹೇಳಿದ್ದಾರೆ.

ಬಿಎಂಟಿಸಿಗೆ 'ಸ್ಕ್ವಾಚ್' ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯ ಸ್ಕ್ವಾಚ್ ಸಂಸ್ಥೆಯು ನೀಡುವ ರಾಷ್ಟ್ರೀಯ ಪ್ರಶಸ್ತಿಗೆ 'ಸ್ಮಾರ್ಟ್ ಸಿಟಿ' ವಿಭಾಗದ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಗೆ ಬಿಎಂಟಿಸಿ ಆಯ್ಕೆಯಾಗಿದೆ.

ಸಾರಿಗೆ ಸಂಸ್ಥೆಗಳಲ್ಲಿ ಬಿಎಂಟಿಸಿ ಮೊದಲ ಬಾರಿಗೆ ಎಲೆಕ್ಟ್ರಿಕ್ ವಾಹನಗಳನ್ನು ಸೇರ್ಪಡೆಗೊಳಿಸಿತ್ತು. ಇಂಧನ ವೆಚ್ಚ ಕಡಿತಗೊಳಿಸಿದ್ದು, ಶಬ್ದ ಮಾಲಿನ್ಯ ಕಡಿಮೆಗೊಳಿಸಿದ್ದು, ಹೊಸ ತಂತ್ರಜ್ಞಾನ ಅಳವಡಿಕೆಯಲ್ಲಿ ಬಿಎಂಟಿಸಿಯ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಬಿಎಂಟಿಸಿ ಪ್ರಕಟಣೆ ತಿಳಿಸಿದೆ.

ರಾಜ್ಯ ಗುತ್ತಿಗೆದಾರರ ಸಮ್ಮೇಳನದಲ್ಲಿ ಲಂಚದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘5 ಪೈಸೆ ಪಡೆದಿದ್ದರೂ ರಾಜಕೀಯ ನಿವೃತ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರರ ಬಿಲ್ ಪಾವತಿಸಲು ನೀಡುವ ಯಾವುದೇ ಎಲ್‌ಒಸಿಗೆ (ಹಣ ಭರವಸೆ ಪತ್ರ) ಐದು ಪೈಸೆ ನಾನು ಪಡೆದಿದ್ದರೆ ರಾಜಕೀಯದಿಂದಲೇ ನಿವೃತ್ತಿ ಪಡೆಯುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ನಗರದಲ್ಲಿ ಸೋಮವಾರ ನಡೆದ ರಾಜ್ಯ ಗುತ್ತಿಗೆದಾರರ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಹಿಂದಿನ ಸರ್ಕಾರ 40 ಪರ್ಸೆಂಟ್ ಲಂಚ ಪಡೆಯುತ್ತಿದ್ದ ಬಗ್ಗೆ ತನಿಖೆ ನಡೆಸಲು ನ್ಯಾ. ನಾಗಮೋಹನದಾಸ್ ಸಮಿತಿ ನೇಮಕ ಮಾಡಲಾಗಿದೆ. ತನಿಖೆ ನಡೆಸುತ್ತಿದ್ದಾರೆ. ನಮ್ಮ ಸರ್ಕಾರದಲ್ಲಿಯೂ ಈ ರೀತಿ ಲಂಚ ಪಡೆಯುತ್ತಿದ್ದರೆ ಈ ಸಮಿತಿಗೆ ದೂರು ಸಲ್ಲಿಸಿ’ ಎಂದು ಸಲಹೆ ನೀಡಿದರು.

‘ನಾನು ಹಿಂದಿನ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಗುತ್ತಿಗೆದಾರರ ಬಿಲ್ ಉಳಿಸಿಕೊಂಡಿರಲಿಲ್ಲ. ಬಿಜೆಪಿ ಆಡಳಿತಕ್ಕೆ ಬಂದಾಗ ಅವರು ಸರ್ಕಾರದ ಬೊಕ್ಕಸದಲ್ಲಿ ಹಣ ಇಲ್ಲದೇ ಇದ್ದರೂ ಹಣಕಾಸು ಆಯೋಗ ಒಪ್ಪದೇ ಇದ್ದರೂ ಅನೇಕ ಟೆಂಡರ್‌ಗಳನ್ನು ಕರೆದಿದ್ದರಿಂದ ಈ ಸಮಸ್ಯೆ ಉಂಟಾಗಿದೆ. ನೀವು ಯಾಕೆ ಕಾಮಗಾರಿ ನಡೆಸಲು ಒಪ್ಪಿಕೊಂಡ್ರಿ. ನಾನೇ ಹೇಳಿದರೂ ಕಾಮಗಾರಿಯ ಒಟ್ಟು ವೆಚ್ಚದ 3ನೇ 1 ಭಾಗದಷ್ಟು ಹಣ ತೆಗೆದಿರಿಸದ ಕಾಮಗಾರಿಗಳನ್ನು ನೀವು ಒಪ್ಪಿಕೊಳ್ಳ ಬೇಡಿ. ಒಪ್ಪಿಕೊಂಡರೆ ಹಿಂದಿನ ಸರ್ಕಾರದಲ್ಲಿ ಇಕ್ಕಟ್ಟಿನಲ್ಲಿ ಸಿಲುಕಿ 4ಕೊಂಡಂತೆ ಮುಂದೆಯೂ ಸಂಕಷ್ಟಕ್ಕೆ ಸಿಲುಕುತ್ತೀರಿ’ ಎಂದು ಎಚ್ಚರಿಸಿದರು.

ಪ್ಯಾಕೇಜ್ ಪದ್ಧತಿ ರದ್ದುಗೊಳಿಸುವುದು, ಬಾಕಿ ಮೊತ್ತ ಪಾವತಿಸುವುದು ಸೇರಿದಂತೆ ಗುತ್ತಿಗೆದಾರರು ಮುಂದಿಟ್ಟ ಎಲ್ಲ ಬೇಡಿಕೆಗಳಿಗೆ ಸ್ಪಂದಿಸ ಲಾಗುವುದು. ಪ್ಯಾಕೇಜ್ ಪದ್ಧತಿಯಲ್ಲಿ ಅನೇಕ ಗುತ್ತಿಗೆದಾರರು ಬಂದುಬಿಟ್ಟದ್ದಾರೆ. ಒಮ್ಮೆಲೇ ನಿಲ್ಲಿಸಲಾಗುವುದಿಲ್ಲ. ಹಂತ ಹಂತವಾಗಿ ಕಡಿಮೆಗೊಳಿಸಿ, ಸ್ಥಳೀಯ ಗುತ್ತಿಗೆದಾರರಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ರಾಜಕಾರಣಿಗಳು ಮತ್ತು ಅಧಿಕಾರಿಗಳ ಕಿರುಕುಳದಿಂದ ನೀವು ಬಸವಳಿದಿದ್ದೀರಿ. ರಾಜಕೀಯದವರ ಸಹವಾಸದಿಂದ ದೂರ ಇರುವುದು ಒಳಿತು’ ಎಂದು ಗುತ್ತಿಗೆದಾರರಿಗೆ ಸಲಹೆ ನೀಡಿದರು.

‘ಮುಂದಿನ 9 ವರ್ಷ ನಾವೇ ಅಧಿಕಾರದಲ್ಲಿ ಇರುತ್ತೇವೆ. ನಿಮ್ಮ ಸಮಸ್ಯೆಗಳನ್ನು ನಾವೇ ಬಗೆಹರಿಸುತ್ತೇವೆ. ಗುತ್ತಿಗೆದಾರರು ಇಲ್ಲದೇ ಸರ್ಕಾರ ನಡೆಸಲು ಸಾಧ್ಯವಿಲ್ಲ. ಹಿಂದಿನ ಸರ್ಕಾರ ಸರಿಯಾದ ಯೋಜನೆ ತಯಾರಿಸದೆ ಕಾಮಗಾರಿಗಳನ್ನು ಮಂಜೂರು ಮಾಡಿ ನಿಮ್ಮ ಮೇಲೆ ಹೊರೆ ಹಾಕಿದೆ. ಹಿಂದಿನ ಸರ್ಕಾರ ಬಜೆಟ್‌ನಲ್ಲಿ ನೀರಾವರಿಗೆ ₹16 ಸಾವಿರ ಕೋಟಿ ಮೀಸಲಿರಿಸಿ, ₹25 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಅನುಮೋದನೆ ನೀಡಿದೆ. ನನ್ನ ಇಲಾಖೆಯಲ್ಲಿ ₹1.25 ಲಕ್ಷ ಕೋಟಿ ಮೊತ್ತದ ಕಾಮಗಾರಿಗಳು ಈ ರೀತಿಯಾಗಿ ನಡೆಯುತ್ತಿವೆ’ ಎಂದು ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ‘ಯಾವುದೇ ಪ್ಯಾಕೇಜ್ ಕಾಮಗಾರಿ ಕೈಬಿಟ್ಟು, ಸಣ್ಣ ಗುತ್ತಿಗೆದಾರರಿಗೆ ಉಪಯೋಗವಾಗಲು ಲೋಕೋಪಯೋಗಿ ಇಲಾಖೆಯಿಂದ ₹4,000 ಕೋಟಿಯ ಕಾಮಗಾರಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಗುತ್ತಿಗೆದಾರರ ಸಂಕಷ್ಟ ಪರಿಹರಿಸಲು ಈಗಾಗಲೇ ಎರಡು ಬಾರಿ ಸಭೆ ನಡೆಸಿದ್ದೇನೆ’ ಎಂದು ತಿಳಿಸಿದರು. ಸಚಿವರಾದ ಬಿ.ಜೆಡ್. ಜಮೀರ್ ಅಹಮದ್ ಖಾನ್, ದಿನೇಶ್ ಗುಂಡೂರಾವ್, ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಗರದಲ್ಲಿ ಸೋಮವಾರ ನಡೆದ ಕರ್ನಾಟಕ ರಾಜ್ಯ ಗುತ್ತಿಗೆದಾರರ ರಾಜ್ಯಮಟ್ಟದ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗಣೇಶನ ವಿಗ್ರಹ ನೀಡಿ ಗೌರವಿಸಲಾಯಿತು. ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ, ಸಚಿವ ಸತೀಶ ಜಾರಕಿಹೊಳಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ನೋಟ್ ಪ್ರಿಂಟರ್ ಇಲ್ಲ’

‘ಗುತ್ತಿಗೆದಾರರ ಬಾಕಿ ಬಿಲ್ ಒಂದೇ ಬಾರಿಗೆ ಚುಕ್ತಗೊಳಿಸಬೇಕು ಎಂದು ಬೇಡಿಕೆ ಇಟ್ಟಿದ್ದೀರಿ. ಒಂದೇ ಬಾರಿ ಪಾವತಿಸಲು ನಮ್ಮ ಸರ್ಕಾರದಲ್ಲಿ ನೋಟ್ ಪ್ರಿಂಟ್ ಮಷಿನ್ ಇಲ್ಲ. ಹಂತಹಂತವಾಗಿ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ₹ 5,300 ಕೋಟಿ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಬ್ಬರೂ ಘೋಷಿಸಿದ್ದರು. ಆದರೆ ಒಂದೇ ಒಂದು ರೂಪಾಯಿ ಕೊಟ್ಟಿಲ್ಲ. ಕೇಂದ್ರ ಸರ್ಕಾರ ಎಷ್ಟೇ ಅಸಹಕಾರ ನೀಡಿದರೂ ಗುತ್ತಿಗೆದಾರರ ಬಾಕಿ ಹಣವನ್ನು ಉಳಿಸಿಕೊಳ್ಳುವುದಿಲ್ಲ ಎಂದು ಭರವಸೆ ನೀಡಿದರು.

5 ವರ್ಷ ಸಿದ್ದರಾಮಯ್ಯ ಸಿ.ಎಂ: ಯತೀಂದ್ರ

ಹಾಸನ: ‘ಲೋಕಸಭೆ ಚುನಾವಣೆ ಬಳಿಕ ಮುಖ್ಯಮಂತ್ರಿ ಬದಲಾವಣೆ ವಿಚಾರ ಕೇವಲ ಊಹಾಪೋಹ. ಆ ರೀತಿ ಏನೂ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ತಿಳಿಸಿದರು.

ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರಿನಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸ್ಥಿರ ಸರ್ಕಾರ ಕೊಡಬೇಕಿರುವುದು ಎಲ್ಲ ಪಕ್ಷಗಳ ಜವಾಬ್ದಾರಿ. ಹಾಗಾಗಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಐದು ವರ್ಷ ಪೂರೈಸುತ್ತಾರೆಂಬುದು ನನ್ನ ನಂಬಿಕೆ’ ಎಂದರು.

‘ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ’ ಎಂಬ ಕೆಲ ಶಾಸಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪ್ರತಿ ಸರ್ಕಾರವಿದ್ದಾಗಲೂ ಇಂಥ ಮಾತುಗಳು ಬರುತ್ತವೆ. ಬಿಜೆಪಿ ಸರ್ಕಾರವಿದ್ದಾಗ ಎಷ್ಟು ಮಂದಿ ಮುಖ್ಯಮಂತ್ರಿ ಆಕಾಂಕ್ಷಿಗಳಿದ್ದರು? ಅವರ ಬೆಂಬಲಿಗರು ಕೂಡ ಮಾತನಾಡಿದ್ದರು’ ಎಂದು ಸಮರ್ಥಿಸಿಕೊಂಡರು.

‘ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಿದ್ದರಾಮಯ್ಯ ಶಕ್ತಿ ತುಂಬುತ್ತಿದ್ದಾರೆ. ಇದೇ ರೀತಿ ಕೆಲಸ ಮುಂದುವರಿಸಬೇಕು ಎಂದರೇ, ನೀವು ಅಂತಹ ನಾಯಕರಿಗೆ ಶಕ್ತಿ ಕೊಡಬೇಕು’ ಎಂದು ಕೋರಿದರು.

‘ಮೈಸೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಗ್ಗೆ ವರಿಷ್ಠರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ. ನನಗೂ ಸೂಚನೆ ಕೊಟ್ಟಿಲ್ಲ. ನಾನಂತೂ ಟಿಕೆಟ್ ಕೇಳಲ್ಲ, ಆಕಾಂಕ್ಷಿಯೂ ಅಲ್ಲ’ ಎಂದರು.

‘ಜಾತಿ ಗಣತಿ ವರದಿ ಬಿಡುಗಡೆ ಮಾಡಲು ಸರ್ಕಾರ ಬದ್ಧವಾಗಿದೆ. ಸಿದ್ದರಾಮಯ್ಯ ಅವರು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗಲೇ ಜಾತಿಗಣತಿ ಮಾಡಿಸಿದ್ದರು. ಆದರೆ ಆ ವರದಿ ಸ್ವೀಕರಿಸುವ ಮುಂಚೆ ಅಧಿಕಾರ ಹೋಗಿತ್ತು’ ಎಂದರು.

ಸುದ್ದಿ 2 ನಿಮಿಷ

ಮಹಾಶಿವರಾತ್ರಿ: ಹೆಚ್ಚುವರಿ ಬಸ್

ಬೆಂಗಳೂರು: ವಾರಾಂತ್ಯಕ್ಕೆ ಹೊಂದಿಕೊಂಡು ಶಿವರಾತ್ರಿ ಬಂದಿರುವುದರಿಂದ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಒಮ್ಮೆಲೇ ಹೆಚ್ಚಳವಾಗಲಿದೆ. ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಕೆಎಸ್‌ಆರ್‌ಟಿಸಿ 1,500 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಮಾ.7ರಿಂದ 11ರ ವರೆಗೆ ಈ ವಿಶೇಷ ಸಾರಿಗೆ ಇರಲಿದೆ.

ಶುಕ್ರವಾರ (ಮಾ.8) ಶಿವರಾತ್ರಿ ಬಂದಿದ್ದು, ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಮಾ.7ರಿಂದ 10ರವರೆಗೆ ಹೊರಡಲಿವೆ. ಮಾ.10 ಮತ್ತು 11ರಂದು ವಿವಿಧ ಕಡೆಗಳಿಂದ ಬೆಂಗಳೂರಿಗೆ ವಿಶೇಷ ಬಸ್‌ಗಳು ವಾಪಸ್ ಆಗಲಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಹೊರರಾಜ್ಯಗಳ ಮದುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರು, ತಿರುಚ್ಚಿ, ಪಾಲಕ್ಕಾಡ್, ತ್ರಿಶೂರ್, ಎರ್ನಾಕುಲಂ, ತಿರುಪತಿ, ವಿಜಯವಾಡ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ.

ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. www.ksrtc.karnataka.gov.in ವೆಬ್‌ಸೈಟ್ ಮೂಲಕ ಇ-ಟಿಕೆಟ್ ಬುಕಿಂಗ್ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಕಾಯ್ದಿರಿಸಿದಲ್ಲಿ ಶೇ 5 ರಿಯಾಯಿತಿ ಸಿಗಲಿದೆ. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದರೆ ವಾಪಸ್ಸಾಗುವ ದರದಲ್ಲಿ ಶೇ 10 ರಿಯಾಯಿತಿ ದೊರೆಯಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದ್ದಾರೆ.

ಕುಸಿದ ಕೆಆರ್‌ಎಸ್ ನೀರಿನ ಮಟ್ಟ

ಮಂಡ್ಯ: ಬರಗಾಲದಿಂದಾಗಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಸೋಮವಾರ 89.81 ಅಡಿಗೆ ಇಳಿದಿದೆ.

ಕಳೆದ ವರ್ಷ ಇದೇ ದಿನ 105.38 ಅಡಿ ಇತ್ತು. 2018ರಲ್ಲಿ 90 ಅಡಿಗೆ ಕುಸಿದಿತ್ತು. ನಂತರ ಇದೇ ಮೊದಲ ಬಾರಿಗೆ 90 ಅಡಿಗಿಂತ ಕೆಳಗಿಳಿದಿದೆ.

ಮುಂಗಾರು ಮಳೆ ಕೊರತೆಯಾಗಿದ್ದರಿಂದ ಕಳೆದ ವರ್ಷ ಭರ್ತಿಯಾಗಲಿಲ್ಲ. ಸದ್ಯ ಒಳಹರಿವು 226 ಕ್ಯುಸೆಕ್ ಇದೆ, ಕುಡಿಯುವ ನೀರು ಪೂರೈಕೆ ಸೇರಿದಂತೆ ಹೊರಹರಿವು 749 ಕ್ಯೂಸೆಕ್ ಇದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ಕಳೆದ ಡಿಸೆಂಬರ್‌ವರೆಗೂ ತಮಿಳುನಾಡಿಗೆ ನೀರು ಹರಿಸಿದ್ದರಿಂದ ನೀರಿನ ಮಟ್ಟ ಕುಸಿದಿದೆ. ಬೆಳೆದು ನಿಂತಿರುವ ಕಬ್ಬಿನ ಬೆಳೆ ಉಳಿಸಿಕೊಳ್ಳಲು ರೈತರು ಪರದಾಡುತ್ತಿದ್ದು, ನೀರು ಹರಿಸುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಉಳಿಸಿಕೊಳ್ಳುವುದಾಗಿ ತಿಳಿಸಿದ್ದಾರೆ.

‘ಜಲಾಶಯದಲ್ಲಿ ಕೇವಲ 15.825 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ, 5 ಟಿಎಂಸಿ ಅಡಿ ಡೆಡ್ ಸ್ಟೋರೇಜ್ ಹೊರತುಪಡಿಸಿದರೆ 10.825 ಟಿಎಂಸಿ ಅಡಿ ಮಾತ್ರ ಉಳಿಯಲಿದೆ. ಅದನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಕಾಪಾಡಿಕೊಳ್ಳುವುದು ಅನಿವಾರ್ಯ’ ಎಂದು ಅಧಿಕಾರಿಗಳು ತಿಳಿಸಿದರು.

ವಾರದೊಳಗೆ ಸೀಟು ಹಂಚಿಕೆ ಅಂತಿಮ: ಎಚ್‌ಡಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆಡಿಎಸ್ ಮತ್ತು ಬಿಜೆಪಿ ಮಧ್ಯೆ ಲೋಕಸಭಾ ಕ್ಷೇತ್ರಗಳ ಹಂಚಿಕೆಯ ಚರ್ಚೆ ಅಂತಿಮ ಹಂತದಲ್ಲಿದೆ. ವಾರದೊಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ತಿಳಿಸಿದರು.

ಸೋಮವಾರ ನಡೆದ ಜೆಡಿಎಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ ಅವರ ಅಧಿಕಾರ ಸ್ವೀಕಾರ ಸಮಾರಂಭದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸೀಟು ಹಂಚಿಕೆ ಕುರಿತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿ ನಾಯಕರ ಜತೆ ಒಂದು ಸುತ್ತಿನ ಚರ್ಚೆ ನಡೆಸಿದ್ದಾರೆ. ಇನ್ನೊಂದು ಸುತ್ತಿನ ಚರ್ಚೆಯಲ್ಲಿ ಎಲ್ಲವೂ ಅಂತಿಮವಾಗಲಿದೆ’ ಎಂದರು.

‘ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಕುರಿತು ಜೆಡಿಎಸ್ ನಾಯಕರ ಅಭಿಪ್ರಾಯ ಕೇಳಬಹುದು. ಆಗ ಅಭಿಪ್ರಾಯವನ್ನು ಹಂಚಿಕೊಳ್ಳುತ್ತೇವೆ. ಮೈತ್ರಿ ಧರ್ಮವನ್ನು ನಾವು ಪಾಲಿಸುತ್ತೇವೆ. ಎಲ್ಲ ಕ್ಷೇತ್ರಗಳಲ್ಲೂ ಮೈತ್ರಿಕೂಟದ ಅಭ್ಯರ್ಥಿಗಳು ಗೆಲ್ಲುವುದಕ್ಕೆ ಪೂರಕವಾಗಿ ಬಿಜೆಪಿ ಜತೆ ಸೇರಿ ಕೆಲಸ ಮಾಡುತ್ತೇವೆ’ ಎಂದು ಹೇಳಿದರು.

ಕುಮಾರಸ್ವಾಮಿ ರಾಷ್ಟ್ರ ರಾಜಕಾರಣಕ್ಕೆ ಹೋಗುತ್ತಾರೆಯೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಜೆಡಿಎಸ್‌ಗೆ ಯಾವ ಕ್ಷೇತ್ರಗಳು ಸಿಗುತ್ತವೆ ಎಂಬುದು ಸೀಟು ಹಂಚಿಕೆಯಲ್ಲಿ ನಿರ್ಧಾರವಾಗಲಿದೆ. ಕುಮಾರಸ್ವಾಮಿ ಸ್ಪರ್ಧಿಸಬೇಕೆ? ಬೇಡವೆ? ಎಂಬುದನ್ನು ಸೀಟು ಹಂಚಿಕೆ ಬಳಿಕ ನಿರ್ಧಾರ ಮಾಡಲಾಗುವುದು. ಮಂಡ್ಯ ಲೋಕಸಭಾ ಕ್ಷೇತ್ರದ ಕುರಿತು ಮಾಧ್ಯಮಗಳಲ್ಲಿ ಅನಗತ್ಯ ಚರ್ಚೆ ನಡೆಯುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ನಮ್ಮ ಪಕ್ಷ ಬಲಿಷ್ಠವಾಗಿದ್ದು, ಸಂಘಟನೆ ಚೆನ್ನಾಗಿದೆ. ಆದಷ್ಟು ಬೇಗ ಮಂಡ್ಯದಲ್ಲಿ ಪಕ್ಷದ ಸಮಾವೇಶ ಮಾಡುತ್ತೇವೆ’ ಎಂದು ಹೇಳಿದರು.

‘ಒಂದಷ್ಟು ಜನರು ಮಂಡ್ಯ ಕ್ಷೇತ್ರದ ವಿಚಾರದಲ್ಲಿ ಮನಸ್ಸಿಗೆ ಬಂದ ಹಾಗೆ ಹೇಳಿಕೆ ಕೊಡುತ್ತಿದ್ದಾರೆ. ಹಾಗೆ ಹೇಳಿಕೆ ನೀಡಲು ಅವರು ಸ್ವತಂತ್ರರು. ನನಗೆ ವಯಸ್ಸಾಗಿರಬಹುದು. ನಾನೇನೂ ಸುಮ್ಮನೆ ಕೂರುವುದಿಲ್ಲ’ ಎಂದರು.

ಕೋಲಾರದಲ್ಲಿ ಮಹಿಳಾ ಸಮಾವೇಶ: ಪಕ್ಷದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರು ಕೋಲಾರ ಜಿಲ್ಲೆಯವರು. ಇದೇ 14 ಅಥವಾ 16ರಂದು ಕೋಲಾರದಲ್ಲಿ ಮಹಿಳಾ ಸಮಾವೇಶ ನಡೆಸಲಾಗುವುದು. ಅಲ್ಲಿಂದಲೇ ಜೆಡಿಎಸ್‌ನ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಗುವುದು ಎಂದು ದೇವೇಗೌಡ ಅವರು ತಿಳಿಸಿದರು.

‘ಮಂಜುನಾಥ್ ರಾಜಕೀಯ ಪ್ರವೇಶ: ಅವರು ಒಪ್ಪಲಾರರು, ನನಗೂ ಇಷ್ಟವಿಲ್ಲ’



ಎಚ್.ಡಿ. ದೇವೇಗೌಡ

‘ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು ರಾಷ್ಟ್ರ ರಾಜಕಾರಣಕ್ಕೆ ಬರಬೇಕು ಎಂದು ಜನರು ಪ್ರೀತಿಯಿಂದ ಒತ್ತಾಯಿಸುತ್ತಿದ್ದಾರೆ. ಆದರೆ, ರಾಜಕೀಯ ಪ್ರವೇಶದ ಆಹ್ವಾನವನ್ನು ಅವರು ಒಪ್ಪಲಾರರು’ ಎಂದು ಎಚ್.ಡಿ. ದೇವೇಗೌಡ ಹೇಳಿದರು.

ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈಗಿನ ರಾಜಕಾರಣ ಯಾವ ಸ್ಥಿತಿಗೆ ತಲುಪಿದೆ ಎಂಬುದು ಗೊತ್ತಿದೆ. ಜಯದೇವ ಸಂಸ್ಥೆಯ ನಿರ್ದೇಶಕರಾಗಿ ಅವರು ರಾಷ್ಟ್ರ ಮಟ್ಟದಲ್ಲಿ ಉನ್ನತ ಗೌರವ ಪಡೆದಿದ್ದಾರೆ. ಅವರ ವ್ಯಕ್ತಿತ್ವಕ್ಕೆ ಕಳಂಕ ತರುವ ಕೆಲಸವನ್ನು ಮಾಡುವುದಿಲ್ಲ. ಈಗಿನ ಸನ್ನಿವೇಶದಲ್ಲಿ ರಾಜಕಾರಣ ಪ್ರವೇಶಿಸುವಂತೆ ಮಂಜುನಾಥ್ ಅವರಿಗೆ ನಾನು ಸಲಹೆ ನೀಡುವುದಿಲ್ಲ’ ಎಂದರು.

ಸರ್ಕಾರಕ್ಕೆ ಶ್ಲಾಘನೆ: ‘ಬೆಂಗಳೂರಿನಲ್ಲಿ ಸ್ಫೋಟ ಸಂಭವಿಸಿದ ಪ್ರಕರಣವನ್ನು ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಸೂಕ್ಷ್ಮವಾಗಿ ನಿಭಾಯಿಸುತ್ತಿದ್ದಾರೆ. ಈ ಪ್ರಕರಣದ ಕುರಿತು ಅವರ ಹೇಳಿಕೆಗಳನ್ನು ಗಮನಿಸುತ್ತಿದ್ದೇನೆ. ಸರ್ಕಾರ ಈ ಪ್ರಕರಣವನ್ನು ಸಮರ್ಥವಾಗಿ ನಿಭಾಯಿಸುತ್ತಿದೆ’ ಎಂದು ಹೇಳಿದರು.

ಬಿಆರ್‌ಟಿ ಅರಣ್ಯದಲ್ಲಿ ಬೆಂಕಿ ಬಿದ್ದಿರುವುದು

ಬಿಆರ್‌ಟಿ: 50 ಎಕರೆಗೂ ಹೆಚ್ಚು ಎಕರೆ ಕಾಡು ಭಸ್ಮ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವಲಯದಲ್ಲಿ ಸೋಮವಾರ ಕಾಳ್ಗಿಚ್ಚಿನಿಂದ 50 ಎಕರೆಗೂ ಹೆಚ್ಚು ಕಾಡು ಸುಟ್ಟಿದೆ.

‘ಪುಣಜನೂರಿನಿಂದ ಬೇಡಗುಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ವ್ಯಾಪ್ತಿಯ ಕುರಿಮಂದೆ, ಬಜೆಬಾವಿ ಪ್ರದೇಶದ ಮೂರು ಕಡೆ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಎರಡು ಕಡೆ ಬೆಂಕಿ ಆರಿಸಲಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇನ್ನೊಂದು ಕಡೆ ಬೆಂಕಿ ಆರಿಸಲು ಅರಣ್ಯ ಇಲಾಖೆ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ.

‘ಬೆಳಿಗ್ಗೆಯೇ ಬೆಂಕಿ ಹೊತ್ತಿಕೊಂಡಿತ್ತು. ಸಂಜೆಯಾದರೂ ನಂದಿಸಲು ಸಾಧ್ಯವಾಗಿಲ್ಲ. ಬಿಸಿಲಿನಿಂದಾಗಿ ಕಾಡು ಒಣಗಿದ್ದು, ಬೆಂಕಿ ವೇಗವಾಗಿ ಹರಡುತ್ತಿದೆ. ಕನಿಷ್ಠ 50 ಎಕರೆ ಬೆಂಕಿಗೆ ಆಹುತಿಯಾಗಿದೆ’ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ‘ನೂರಾರು ಎಕರೆ ಭಸ್ಮವಾಗಿದೆ’ ಎಂದು ಪುಣಜನೂರಿನ ನಿವಾಸಿಗಳು ಹೇಳುತ್ತಿದ್ದಾರೆ.

ಕೋರ್ ಅರಣ್ಯ ವಲಯದಲ್ಲಿ ಬೆಂಕಿ ಬಿದ್ದಿರುವುದರಿಂದ ಅಂದಾಜು ಸಿಗುತ್ತಿಲ್ಲ. ಆದರೆ, ದಟ್ಟ ಹೊಗೆ, ಬೆಂಕಿ ದೂರದಿಂದಲೇ ಕಾಣಿಸುತ್ತಿತ್ತು.

ಈ ಬಗ್ಗೆ ’ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿರುವ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ದೀಪ್ ಜೆ.ಕಾಂಟ್ರ್ಯಾಕ್ಟರ್, ‘ಕನಿಷ್ಠ 50 ಎಕರೆ ಸುಟ್ಟಿರಬಹುದು. ನೆಲ ಬೆಂಕಿಯಾಗಿದ್ದು, ಎತ್ತರಕ್ಕೆ ವ್ಯಾಪಿಸಿಲ್ಲ. ಬೆಂಕಿ ನಂದಿಸಲು ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸ್ಥಳೀಯರೇ ಬೆಂಕಿ ಹಾಕಿರುವ ಅನುಮಾನವಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಿದ್ದೇವೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದ್ದೇವೆ’ ಎಂದರು.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ
ಅಂಚೆ ಪೆಟ್ಟಿಗೆ ಸಂಖ್ಯೆ : 14, ಮಾರ್ಕೆಟ್ ರಸ್ತೆ, ಮಂಡ್ಯ, ದೂ: 08232–226010/226011

ನಂ. ಡಿಸಿಸಿಬಿ/ಕಟ್ಟಡ/52 /2023–24 ದಿನಾಂಕ : 04–03–2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಸೋಮನಹಳ್ಳಿ, ಶೀಳನೆರೆ ಮತ್ತು ಕೆ.ಆರ್. ಪೇಟೆ ರಾತ್ರಿ ಶಾಖೆಯ ಶಾಖಾ ಕಟ್ಟಡ ನಿರ್ಮಾಣ ಮಾಡಲು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಪ್ರಕಟಿಸಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12–03–2024 ರ ಮಧ್ಯಾಹ್ನ 12.00 ಗಂಟೆ ಆಗಿರುತ್ತದೆ.

Tender No. MDCCB/2023-24/ BD/WORK_INDENT3	Somanahally Branch Construction Work
Tender No. MDCCB/2023-24/ BD/WORK_INDENT4	Sheelanere Branch Construction Work
Tender No. MDCCB/2023-24/ BD/WORK_INDENT5	K R Pet Night Branch Construction Work

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು ಆಸಕ್ತಿಯುಳ್ಳ ಟೆಂಡರ್‌ದಾರರು ಕರ್ನಾಟಕ ಇ–ಪೋರ್ಟಲ್ ಜಾಲತಾಣ https//kppp.karnataka.gov.in ಮೂಲಕ ಪಡೆಯಬಹುದಾಗಿರುತ್ತದೆ ಎಂದು ತಿಳಿಯಪಡಿಸಿದೆ. ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ

‘ಕೈ’ ನಾಯಕರ ಮಹತ್ವದ ಸಭೆ

ಲೋಕಸಭೆ ಚುನಾವಣೆ: ಅಭ್ಯರ್ಥಿಗಳ ಆಯ್ಕೆ ಬಗ್ಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಗೆ ಸಂಭವನೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತಂತೆ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಮಹತ್ವದ ಚರ್ಚೆ ನಡೆಸಿದರು.

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಸಭೆ ನಡೆಸಿದ ಈ ಮೂವರು ನಾಯಕರು, ರಾಜ್ಯದ ಎಲ್ಲ 28 ಕ್ಷೇತ್ರಗಳಿಗೆ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಕುರಿತು ವಿಚಾರ ವಿನಿಮಯ ನಡೆಸಿದರು.

ಎಐಸಿಸಿ ಮತ್ತು ಕೆಪಿಸಿಸಿಯಿಂದ ನಡೆಸಿರುವ ಸಮೀಕ್ಷೆ, ಸಿದ್ದರಾಮಯ್ಯ ಅವರು ಮಾಡಿಸಿರುವ ಸಮೀಕ್ಷೆ, ಅಭ್ಯರ್ಥಿ ಆಯ್ಕೆ ಸಂಬಂಧಿಸಿದಂತೆ ಉಸ್ತುವಾರಿ ಸಚಿವರು ನೀಡಿರುವ ಅಭಿಪ್ರಾಯ, ಟಿಕೆಟ್ ಆಕಾಂಕ್ಷಿಗಳ ಹೆಸರಿನ ಮೇಲೆ ನಡೆದ ಸಮೀಕ್ಷೆಯ ಈ ಎಲ್ಲ ವಿಷಯಗಳನ್ನು ಮುಂದಿಟ್ಟು ನಾಯಕರು ಚರ್ಚೆ ನಡೆಸಿದ್ದಾರೆ. ಪ್ರತಿ ಲೋಕಸಭಾ ಕ್ಷೇತ್ರಕ್ಕೆ ಸಂಭವನೀಯ ಅಭ್ಯರ್ಥಿಗಳ ಹೆಸರನ್ನು ಈ ಸಭೆಯಲ್ಲಿ ಅಂತಿಮಗೊಳಿಸಿ, ಹೈಕಮಾಂಡ್‌ಗೆ ಶಿಫಾರಸು ಮಾಡಲಾಗುವುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಭೆಯ ಬಳಿಕ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಹೋಟೆಲ್‌ನಿಂದ ಒಂದೇ ಕಾರಿನಲ್ಲಿ ತೆರಳಿದರು.

ಸಭೆಗೂ ಅದಕ್ಕೂ ಮೊದಲು ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಸಚಿವರಾದ ಪ್ರಿಯಾಂಕ್ ಖರ್ಗೆ, ಎಂ.ಸಿ. ಸುಧಾಕರ್, ಭೈರತಿ ಸುರೇಶ್ ಕೂಡ ಭೇಟಿ ಮಾಡಿದರು. ಅಲ್ಲದೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಮುಖಂಡ ಎಚ್.ಎಂ. ರೇವಣ್ಣ ಸೇರಿದಂತೆ ಇತರ ಕೆಲವು ನಾಯಕರೂ ಭೇಟಿ ಮಾಡಿ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಸುರ್ಜೇವಾಲಾ- ಜಯಪ್ರಕಾಶ್ ಹೆಗ್ಡೆ ಭೇಟಿ

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕೆ. ಜಯಪ್ರಕಾಶ್ ಹೆಗ್ಡೆ ಅವರು ಸಭೆ ನಡೆಯುತ್ತಿದ್ದ ವೇಳೆ, ಅಲ್ಲಿಗೆ ಬಂದು ಕಾಂಗ್ರೆಸ್ ನಾಯಕರ ಜೊತೆ ಮಾತುಕತೆ ನಡೆಸಿದರು. ಸದ್ಯ ಬಿಜೆಪಿಯಲ್ಲಿರುವ ಅವರು ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ. ಹೆಗ್ಡೆ ಅವರು ಸದ್ಯದಲ್ಲೇ ಕಾಂಗ್ರೆಸ್ ಸೇರುವ ಸಾಧ್ಯತೆಯಿದೆ ಎಂದೂ ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಇಂದು ‘ನಾರಿಶಕ್ತಿ’ ಯಾತ್ರೆ

ಬೆಂಗಳೂರು: ಮಹಿಳಾ ಮೋರ್ಚಾದ ನೇತೃತ್ವದಲ್ಲಿ ಮಂಗಳವಾರ (ಮಾರ್ಚ್ 5) ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ‘ನಾರಿಶಕ್ತಿ ಯಾತ್ರೆ’ ನಡೆಸಲಾಗುವುದು ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಸೋಮವಾರ ತಿಳಿಸಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಮಹಿಳಾ ಮೋರ್ಚಾ ಕಾರ್ಯಕರ್ತೆಯರು ಭಾಗವಹಿಸಲಿದ್ದಾರೆ. ನಾರಿಶಕ್ತಿ ಯಾತ್ರೆ ಇದೇ 6 ವರೆಗೆ ನಡೆಯಲಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸ್ಫೋಟ: ಎನ್‌ಐಎ ತನಿಖೆಗೆ ಐಜಿಪಿ ನೇತೃತ್ವ

ಒಂದನೇ ಪುಟದಿಂದ...

ಎನ್‌ಐಎ ಐಜಿಪಿ ಭೇಟಿ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅಲೋಕ್ ಮೋಹನ್, ‘ಬಾಂಬ್ ಸ್ಫೋಟ ಪ್ರಕರಣವನ್ನು ಎನ್‌ಐಎಗೆ ವಹಿಸುವ ಕಾನೂನು ಪ್ರಕ್ರಿಯೆ ಆರಂಭವಾಗಿದೆ. ಇದರ ಭಾಗವಾಗಿ, ಎನ್‌ಐಎ ಐಜಿಪಿ ಕಚೇರಿಗೆ ಬಂದು ಮಾತುಕತೆ ನಡೆಸಿದರು. ಇದೊಂದು ಸೂಕ್ಷ್ಮ ಪ್ರಕರಣ. ತನಿಖೆ ಅಂಶಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

ಸಿಸಿಬಿ, ರಾ, ಐಬಿ ಸಹಕಾರ: ಬಾಂಬ್ ಸ್ಫೋಟ ನಡೆದಿದ್ದ ದಿನದಿಂದಲೂ ಎಲ್ಲ ತನಿಖಾ ಸಂಸ್ಥೆಗಳು ಜಂಟಿಯಾಗಿ ತನಿಖೆ ಕೈಗೊಂಡಿವೆ. ಬೆಂಗಳೂರು ಸಿಸಿಬಿ ಪೊಲೀಸರು ಅಧಿಕೃತವಾಗಿ ತನಿಖೆ ನಡೆಸುತ್ತಿದ್ದರು. ಯುಎಪಿಎ ಕಾಯ್ದೆ ಪ್ರಕರಣವಾಗಿದ್ದರಿಂದ ಎನ್‌ಐಎ, ರಾ, ಕೇಂದ್ರ ಗುಪ್ತಚರ (ಐಬಿ) ಹಾಗೂ ಎನ್‌ಎಸ್‌ಜಿ ಕಮಾಂಡೊಗಳು ಮಾಹಿತಿ ಕಲೆಹಾಕುತ್ತಿದ್ದರು.

‘ಪ್ರಕರಣದ ತನಿಖೆಯನ್ನು ಎನ್‌ಐಎ ಅಧಿಕೃತವಾಗಿ ವಹಿಸಿಕೊಂಡಿದೆ. ಸಿಸಿಬಿ, ರಾ, ಎನ್‌ಎಸ್‌ಜಿ ಕಮಾಂಡೊಗಳು ಹಾಗೂ ಹೊರ ರಾಜ್ಯಗಳ ಪೊಲೀಸರು ತನಿಖೆಗೆ ಸಹಕಾರ ನೀಡಲಿದ್ದಾರೆ. ಪರಸ್ಪರ ಮಾಹಿತಿ ಹಂಚಿಕೊಂಡು, ಆರೋಪಿಯನ್ನು ಪತ್ತೆ ಮಾಡಬೇಕಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹೊರ ಜಿಲ್ಲೆ, ರಾಜ್ಯಗಳಿಗೆ ತಂಡ’

ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಪತ್ತೆ ಮಾಡಲು ಕಾರ್ಯಾಚರಣೆ ನಡೆಸುತ್ತಿರುವ ತನಿಖಾ ತಂಡಗಳು, ಹೊರ ಜಿಲ್ಲೆ ರಾಜ್ಯಗಳಲ್ಲಿ ಶೋಧ ಆರಂಭಿಸಿವೆ.

‘ಸ್ಫೋಟದ ನಂತರ ಪರಾರಿಯಾಗಿರುವ ಆರೋಪಿ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಕ್ಕೆ ಹೋಗಿರುವ ಮಾಹಿತಿ ಇದೆ. ಅಲ್ಲೆಲ್ಲ ಶೋಧ ನಡೆಯುತ್ತಿದೆ. ಆರೋಪಿ ಎಲ್ಲಿದ್ದಾನೆ ಎಂಬ ಬಗ್ಗೆ ಸದ್ಯಕ್ಕೆ ಯಾವುದೇ ಸುಳಿವು ಸಿಕ್ಕಿಲ್ಲ’ ಎಂದು ಮೂಲಗಳು ಹೇಳಿವೆ.

ಕಡಬ ಪಿ.ಯು ಕಾಲೇಜಿನಲ್ಲಿ ಘಟನೆ: ಕೇರಳದ ಆರೋಪಿ ಬಂಧನ • ಪ್ರೇಮ ವೈಫಲ್ಯದಿಂದ ಕೃತ್ಯದ ಶಂಕೆ- ಎಸ್‌ಪಿ

ಮೂವರು ವಿದ್ಯಾರ್ಥಿನಿಯರ ಮೇಲೆ ಆ್ಯಸಿಡ್ ದಾಳಿ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಇಲ್ಲಿಗೆ ಸಮೀಪದ ಕಡಬ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿ.ಯು ಪರೀಕ್ಷೆ ಬರೆಯಲು ಬಂದಿದ್ದ ಅದೇ ಕಾಲೇಜಿನ ಮೂವರು ವಿದ್ಯಾರ್ಥಿನಿಯರ ಮೇಲೆ ಯುವಕನೊಬ್ಬ ಆ್ಯಸಿಡ್ ದಾಳಿ ನಡೆಸಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳಿಗೆ ಆ್ಯಸಿಡ್ ಎರಚಿದ ಆರೋಪಿ ಅಬಿನ್ (23) ಕೇರಳದ ಮಲಪ್ಪುರಂ ಜಿಲ್ಲೆಯ ನಿಲಂಬೂರು ನಿವಾಸಿ. ಆ್ಯಸಿಡ್ ದಾಳಿಗೆ ಒಳಗಾದ ವಿದ್ಯಾರ್ಥಿನಿಯ ಅಕ್ಕಪಕ್ಕ ಇದ್ದ ಇಬ್ಬರು ವಿದ್ಯಾರ್ಥಿನಿಯರ ಮೇಲೂ ಸ್ವಲ್ಪ ಪ್ರಮಾಣದಲ್ಲಿ ಆ್ಯಸಿಡ್ ಬಿದ್ದಿದೆ. ವಿದ್ಯಾರ್ಥಿನಿ ಪ್ರಾಣಾಪಾಯದಿಂದ ಪಾರಾಗಿದ್ದು, ಆಕೆಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗುತ್ತಿದೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಸುದ್ದಿಗಾರರಿಗೆ ತಿಳಿಸಿದರು.

‘ದಾಳಿಗೊಳಗಾದ ವಿದ್ಯಾರ್ಥಿನಿಯ ತಾಯಿ ತವರು ಮನೆ ಸಮೀಪವೇ ಆರೋಪಿಯ ಮನೆ ಇದೆ. ವಿದ್ಯಾರ್ಥಿನಿ ಅಲ್ಲಿಗೆ ತೆರಳಿದ್ದಾಗ ಪರಸ್ಪರ ಪರಿಚಯವಾಗಿತ್ತು. ಪ್ರೇಮ ನಿರಾಕರಣೆಯಿಂದ ಹತಾಶನಾಗಿ ಕೃತ್ಯ ನಡೆಸಿದಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ಆರೋಪಿಯು ಕಾಲೇಜಿನ ಸಮವಸ್ತ್ರ ಧರಿಸಿ ಸ್ಥಳಕ್ಕೆ ಬಂದಿದ್ದ. ಆತನಿಗೆ ಸಮವಸ್ತ್ರವನ್ನು ಯಾರು ನೀಡಿದರು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ’ ಎದು ಅವರು ಹೇಳಿದರು.

‘ದ್ವಿತೀಯ ಪಿ.ಯು ಗಣಿತ ಪರೀಕ್ಷೆ ಸೋಮವಾರ ನಿಗದಿಯಾಗಿತ್ತು. ವಿದ್ಯಾರ್ಥಿನಿಯು ಪರೀಕ್ಷೆಗೆ ಹಾಜರಾಗುವ ವಿಚಾರವನ್ನು ಮೊದಲೇ ತಿಳಿದಿದ್ದ ಆರೋಪಿ ಆ್ಯಸಿಡ್ ಎರಚಲು ಸಿದ್ಧತೆ ಮಾಡಿಕೊಂಡು ಬಂದಿದ್ದ. ಕಾಲೇಜಿನ ಆವರಣಕ್ಕೆ ಬರುವಾಗ ಮಾಸ್ಕ್, ಟೋಪಿ ಧರಿಸಿದ್ದ. ಆತ ಎಲ್ಲಿಂದ ಆ್ಯಸಿಡ್ ತಂದಿದ್ದ ಎಂಬ ಬಗ್ಗೆ ಮಾಹಿತಿ ಕಲೆ ಹಾಕಬೇಕಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಡ ಕುಟುಂಬದ ಹುಡುಗಿ: ‘ಆ್ಯಸಿಡ್ ದಾಳಿಗೆ ಒಳಗಾದ ವಿದ್ಯಾರ್ಥಿನಿ ತೀರಾ ಬಡಕುಟುಂಬಕ್ಕೆ ಸೇರಿದವಳು. ಆಕೆಯ ತಂದೆ ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ಕಷ್ಟಪಟ್ಟು ಮಕ್ಕಳನ್ನು ಓದಿಸುತ್ತಿದ್ದಾರೆ. ಅಣ್ಣ ನರ್ಸಿಂಗ್ ವಿದ್ಯಾಭ್ಯಾಸದಲ್ಲಿ ತೊಡಗಿದ್ದು, ತಂಗಿ 8ನೇ ತರಗತಿ ವಿದ್ಯಾರ್ಥಿನಿ’ ಎಂದು ಸ್ಥಳೀಯರು ಹೇಳಿದರು.

ಕಡಬ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಮೇಲೆ ಸೋಮವಾರ ಆ್ಯಸಿಡ್ ದಾಳಿ ನಡೆದ ಸ್ಥಳಕ್ಕೆ ಪ್ರವೇಶ ನಿರ್ಬಂಧಿಸಲು ಪೊಲೀಸರು ಪಟ್ಟಿಯನ್ನು ಕಟ್ಟಿದ್ದಾರೆ

ವಿದ್ಯಾರ್ಥಿಗಳ ಸಮಯಪ್ರಜ್ಞೆಗೆ ಡಿಡಿಪಿಯು ಮೆಚ್ಚುಗೆ

ವಿದ್ಯಾರ್ಥಿನಿಯರ ಮೇಲೆ ಆ್ಯಸಿಡ್ ಎರಚಿದ ಆರೋಪಿಯನ್ನು ಸ್ಥಳದಲ್ಲಿದ್ದ ವಿದ್ಯಾರ್ಥಿಗಳೇ ಸೇರಿ ಹಿಡಿದಿದ್ದು, ಅವರ ಸಮಯಪ್ರಜ್ಞೆಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ದಕ್ಷಿಣ ಕನ್ನಡ ಜಿಲ್ಲಾ ಉಪನಿರ್ದೇಶಕ ಜಯಣ್ಣ ಸಿ.ಡಿ. ಮೆಚ್ಚುಗೆ ವ್ಯಕ್ತಪಡಿಸಿದರು. ‘ಆರೋಪಿಯನ್ನು ತಕ್ಷಣವೇ ವಿದ್ಯಾರ್ಥಿಗಳು ಹಿಡಿಯದಿದ್ದರೆ, ಆತ ಮತ್ತಷ್ಟು ಸಮಸ್ಯೆ ಸೃಷ್ಟಿಸುವ ಅಪಾಯವಿತ್ತು. ವಿದ್ಯಾರ್ಥಿಗಳ ನಡೆ ಮಾದರಿಯಾದುದು’ ಎಂದು ಅವರು ತಿಳಿಸಿದರು.

ಘಟನೆ ನಡೆದ ಪಿ.ಯು.ಕಾಲೇಜಿಗೆ ತೆರಳಿ ಪ್ರಕರಣದ ಬಗ್ಗೆ ಮಾಹಿತಿ ಪಡೆದ ಅವರು, ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳಿಗೆ ಘಟನೆಯಿಂದ ವಿಚಲಿತರಾಗದಂತೆ ಧೈರ್ಯ ತುಂಬಿದರು.

‘ಆ್ಯಸಿಡ್ ದಾಳಿಗೊಳಗಾದ ವಿದ್ಯಾರ್ಥಿನಿಗೆ ಕಡಬದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕೇಂದ್ರದಲ್ಲಿ ಗಣಿತ ವಿಷಯದ ಪರೀಕ್ಷೆ ಸಾಂಗವಾಗಿ ನೆರವೇರಿದೆ. ಪೋಷಕರು ಆತಂಕ ಪಡುವ ಅಗತ್ಯ ಇಲ್ಲ’ ಎಂದು ಅವರು ತಿಳಿಸಿದರು.

‘ಆಸಿಡ್ ದಾಳಿ: ಸೂಕ್ತ ಕ್ರಮಕ್ಕೆ ಸೂಚನೆ’

ಬೆಳಗಾವಿ: ‘ಮೂವರು ಕಾಲೇಜು ವಿದ್ಯಾರ್ಥಿನಿಯರ ಮೇಲೆ ನಡೆದ ಆ್ಯಸಿಡ್ ದಾಳಿ ಅತ್ಯಂತ ಕ್ರೂರವಾದದ್ದು. ಈ ಹೀನ ಕೃತ್ಯ ನಡೆಸಿದವರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಸೂಚಿಸಲಾಗಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದ್ದಾರೆ.

‘ಘಟನೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದಿರುವೆ. ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ. ಸಮಗ್ರ ತನಿಖೆ ಬಳಿಕ ಘಟನೆಗೆ ನಿಖರ ಕಾರಣ ಗೊತ್ತಾಗಲಿದೆ’ ಎಂದು ಅವರು ತಿಳಿಸಿದ್ದಾರೆ.

‘ದಕ್ಷಿಣ ಕನ್ನಡ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಘಟನೆ ಕುರಿತು ಮಾಹಿತಿ ಪಡೆದಿದ್ದಾರೆ. ರಾಜ್ಯ ಮಹಿಳಾ ಆಯೋಗ ತ್ವರಿತ ಕ್ರಮಕ್ಕೆ ಮುಂದಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಹನುಮಧ್ವಜ ಹಾರಿಸಿದ ಸಂಸದ

ಅನುಮತಿ ಪಡೆಯದೆ ನಾಮಫಲಕ ಅಳವಡಿಸಿದ ಅನಂತಕುಮಾರ ಹೆಗಡೆ

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಹೆಬಳೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೆಂಗಿನಗುಂಡಿ ಬೀಚ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಸಂಸದ ಅನಂತಕುಮಾರ ಹೆಗಡೆ ನೇತೃತ್ವದಲ್ಲಿ ಅನುಮತಿ ಪಡೆಯದೆ ಸೋಮವಾರ ಹನುಮಧ್ವಜ ಹಾರಿಸಲಾಯಿತು. 'ವೀರ ಸಾವರ್ಕರ್ ಬೀಚ್' ಎಂಬ ತಾತ್ಕಾಲಿಕ ಫಲಕವನ್ನು ಬಿಜೆಪಿ ಮುಖಂಡರು ಅಳವಡಿಸಿದರು.

ಅನುಮತಿ ಪಡೆಯದೆ ಅಳವಡಿಸಿದ್ದ ನಾಮಫಲಕವನ್ನು ಜನವರಿ 27ರಂದು ಗ್ರಾಮ ಪಂಚಾಯಿತಿ ಅಧಿಕಾರಿಗಳು ತೆರವುಗೊಳಿಸಿದ್ದರು. ಘಟನೆ ಸಂಬಂಧಿಸಿ ಆಗ ಸ್ಥಳೀಯ ಬಿಜೆಪಿ ಮುಖಂಡರು ಮತ್ತು ಹಿಂದೂ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯನ್ನೂ ನಡೆಸಿದ್ದರು. ಅದೇ ಸ್ಥಳದಲ್ಲಿ ಹನುಮಧ್ವಜ ಹಾರಿಸಿ, ನಾಮಫಲಕ ಅಳವಡಿಸಲಾಗಿದೆ.

ಈ ವೇಳೆ ಸಂಸದ ಅನಂತಕುಮಾರ ಹೆಗಡೆ ಮಾತನಾಡಿ, 'ರಾಜ್ಯದಲ್ಲಿ ಅಧಿಕಾರದಲ್ಲಿರುವ ಸಿದ್ದರಾಮಯ್ಯ ಸರ್ಕಾರ ಮುಸ್ಲಿಂ ತುಷ್ಟೀಕರಣದಲ್ಲಿ ತೊಡಗಿದೆ. ಅವರು ಸಿದ್ದರಾಮಯ್ಯ ಅಲ್ಲ ಸಿದ್ರಾಮುಲ್ಲಾ ಖಾನ್' ಎಂದರು.

'ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯದೆ ತೆಂಗಿನಗುಂಡಿ ಬೀಚ್ ರಸ್ತೆಯಲ್ಲಿ ಹನುಮಧ್ವಜ ಹಾರಿಸುವುದರ ಜೊತೆಗೆ ವೀರ ಸಾವರ್ಕರ್ ಹೆಸರಿನಲ್ಲಿ ನಾಮಫಲಕ ಅಳವಡಿಸಿದ್ದಾರೆ. ಇದನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಅವರ ನಿರ್ದೇಶನ ಪಾಲಿಸಲಾಗುವುದು' ಎಂದು ಹೆಬಳೆ ಗ್ರಾಮ ಪಂಚಾಯಿತಿ ಪಿಡಿಒ ಮಂಜುನಾಥ ಗೊಂಡ 'ಪ್ರಜಾವಾಣಿ'ಗೆ ತಿಳಿಸಿದರು.

ಭಟ್ಕಳ ತಾಲ್ಲೂಕಿನ ಹೆಬಳೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೆಂಗಿನಗುಂಡಿ ಬೀಚ್ ಸಮೀಪ ಸೋಮವಾರ ಹನುಮಧ್ವಜ ಹಾರಿಸಿ ನಾಮಫಲಕ ಅಳವಡಿಸಲಾಯಿತು

ನಾಸಿರ್ ಹುಸೇನ್ ವಿರುದ್ಧ ಪ್ರಕರಣ ದಾಖಲಿಸಲು ಅಶೋಕ್ ಆಗ್ರಹ

ಬೆಂಗಳೂರು: 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಸಭಾ ಕಾಂಗ್ರೆಸ್ ಸದಸ್ಯ ಸೈಯದ್ ನಾಸಿರ್ ಹುಸೇನ್ ಅವರ ವಿರುದ್ಧವೂ ಪ್ರಕರಣ ದಾಖಲಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದ್ದಾರೆ.

'ಈ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದರೆ ಸಾಲದು. ಇವರ ಮೇಲೆ ಐಪಿಸಿಯ ಸೆಕ್ಷನ್ 124 ಎ ಅಡಿ ದೇಶ ದ್ರೋಹ ಪ್ರಕರಣ ದಾಖಲಿಸಬೇಕು. ನಾಸಿರ್ ಅವರನ್ನೂ ಸೇರಿಸಬೇಕು' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಅಲ್ಲದೇ, 25 ಜನರಿಗೆ ಪಾಸ್ ನೀಡಿ, ಸುಮಾರು ನೂರು ಬೆಂಬಲಿಗರಿಗೆ ವಿಧಾನಸೌಧದ ಒಳಗೆ ಪ್ರವೇಶ ನೀಡಿ ಕರ್ತವ್ಯ ಲೋಪ ಎಸಗಿದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ ವಿಚಾರಣೆ ನಡೆಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹೋರಿ ತಿವಿದು ಯುವಕ ಸಾವು

ಹಂಸಬಾವಿ (ಹಾವೇರಿ ಜಿಲ್ಲೆ): ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಹಂಸಬಾವಿ ಗ್ರಾಮದಲ್ಲಿ ಸೋಮವಾರ ನಡೆದ ರಾಜ್ಯಮಟ್ಟದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಹೋರಿ ತಿವಿದ ಪರಿಣಾಮ ಅರಳಿಕಟ್ಟಿ ಗ್ರಾಮದ ಮಂಜಪ್ಪ ಚನ್ನಪ್ಪನವರ (38) ಎಂಬುವರು ಮೃತಪಟ್ಟಿದ್ದಾರೆ. 17 ಮಂದಿ ಗಾಯಗೊಂಡಿದ್ದಾರೆ. ಮಂಜಪ್ಪ ಪ್ರೇಕ್ಷಕರ ಗ್ಯಾಲರಿಯಲ್ಲಿ ನಿಂತಿದ್ದರು. ಜಾಗ ಬದಲಿಸಿ ಆಚೆ ಹೋದಾಗ, ಓಡಿ ಬಂದ ಹೋರಿ ತಿವಿದಿದೆ. ತೀವ್ರ ರಕ್ತಸ್ರಾವವಾಗಿ ಮೃತಪಟ್ಟರು.

ಟ್ರ್ಯಾಕ್ಟರ್ ಸಾಲ: ಒಂದೇ ಕುಟುಂಬದ ಮೂವರ ಆತ್ಮಹತ್ಯೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಸಾಲ ತೀರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಗೋವನಾಳ ಗ್ರಾಮದ ಒಂದೇ ಕುಟುಂಬದ ಮೂವರು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರೇಣುಕಾ ತೆಲಿ (50), ಸಹೋದರಿ ಸಾವಕ್ಕ ತೆಲಿ (45) ಮತ್ತು ರೇಣುಕಾ ಅವರ ಪುತ್ರ ಮಂಜುನಾಥ (22) ಮೃತರು.

'ಟ್ರ್ಯಾಕ್ಟರ್ ಸಾಲ ತೀರಿಸುವ ವಿಷಯದಲ್ಲಿ ಮನೆಯಲ್ಲಿ ಜಗಳವಾಗಿದೆ. ರೇಣುಕಾ ಮತ್ತು ಮಂಜುನಾಥ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಯಲವಿಗಿ ರೈಲ್ವೆ ನಿಲ್ದಾಣದ ಬಳಿ ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡರು. ಅವರ ಸಾವಿನ ಸುದ್ದಿ ಕೇಳಿ ಮನೆಯಲ್ಲಿ ಸಾವಕ್ಕ ನೇಣು ಹಾಕಿಕೊಂಡರು' ಎಂದು ಪೊಲೀಸರು ತಿಳಿಸಿದ್ದಾರೆ.

ಹಾವೇರಿ ರೈಲ್ವೆ ಪೊಲೀಸ್ ಠಾಣೆ ಮತ್ತು ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಪಿಎಂಸಿ: ಇಬ್ಬರು ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಎ.ಯೋಗೇಶ್

ಕೆ.ಕೊಡಿಗೌಡ

ಶಿವಮೊಗ್ಗ: ಮಳಿಗೆ ಹಂಚಿಕೆ ಮಾಡಲು ತರಕಾರಿ ವ್ಯಾಪಾರಿಯಿಂದ ₹50,000 ಲಂಚ ಪಡೆಯುತ್ತಿದ್ದ ವೇಳೆ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾರ್ಯದರ್ಶಿ ಕೆ.ಕೊಡಿಗೌಡ ಹಾಗೂ ಲೈಸೆನ್ಸ್ ವರ್ಕರ್ ಕೆ.ಎ. ಯೋಗೇಶ್ ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಎಪಿಎಂಸಿ ವ್ಯಾಪ್ತಿಯ ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ 16 ಮಳಿಗೆಗಳನ್ನು ವ್ಯಾಪಾರಿಗಳಿಗೆ ಹಂಚಿಕೆ ಮಾಡಲಾಗಿತ್ತು. ಆದರಲ್ಲಿ 16ನೇ ಸಂಖ್ಯೆಯ ಮಳಿಗೆಯನ್ನು ಶಿವಮೊಗ್ಗದ ಗೋಪಾಳದ ಕೆಎಚ್‌ಬಿ ಕಾಲೊನಿ ನಿವಾಸಿ ರವೀಂದ್ರ ವಿನೀಲರ ಸಗಟು ದರದಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದರು.

ಪ್ರಾಂಗಣದಲ್ಲಿನ 16 ಮಳಿಗೆಗಳ ಪೈಕಿ ಮೊದಲ 14 ಮಳಿಗೆಗಳ ಪುನರ್ ಹಂಚಿಕೆ ಮಾಡಲು ಹೈಕೋರ್ಟ್ ಇತ್ತೀಚೆಗೆ ಆದೇಶ ನೀಡಿದೆ. ಆ ಮಳಿಗೆಗಳ ಪುನರ್ ಹಂಚಿಕೆ ವೇಳೆ ತಮ್ಮನ್ನೂ ಪರಿಗಣಿಸುವಂತೆ ರವೀಂದ್ರ ಅವರು ಎಪಿಎಂಸಿ ಕಾರ್ಯದರ್ಶಿ ಕೆ.ಕೊಡಿಗೌಡ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದರು.

'ಪುನರ್ ಹಂಚಿಕೆ ವೇಳೆ ಮಳಿಗೆ ಮಂಜೂರು ಮಾಡಲು ಖರ್ಚು ಬರುತ್ತದೆ' ಎಂದು ಹೇಳಿದ್ದ ಕೊಡಿಗೌಡ, ಅದಕ್ಕೆ ಎಪಿಎಂಸಿ ಲೈಸೆನ್ಸ್ ವರ್ಕರ್ ಯೋಗೇಶ್‌ನನ್ನು ಭೇಟಿಯಾಗುವಂತೆ ಸೂಚಿಸಿದ್ದರು ಎನ್ನಲಾಗಿದೆ.

'ಕಾರ್ಯದರ್ಶಿ ಸೂಚನೆಯಂತೆ ಯೋಗೇಶ್ ಭೇಟಿ ಆದಾಗ ಅವರು ₹2 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬಳಿಕ ಕೊನೆಗೆ ₹1 ಲಕ್ಷಕ್ಕೆ ಒಪ್ಪಿಕೊಂಡಿದ್ದರು' ಎಂದು ರವೀಂದ್ರ ಅವರು ಶಿವಮೊಗ್ಗ ಲೋಕಾಯುಕ್ತ ಡಿವೈಎಸ್‌ಪಿ ಕಚೇರಿಗೆ ದೂರು ನೀಡಿದ್ದರು.

ಆರೋಪಿಗಳು ರವೀಂದ್ರ ಅವರಿಂದ ₹50,000 ಮುಂಗಡವಾಗಿ ಪಡೆಯುವಾಗ ಲೋಕಾಯುಕ್ತ ಇನ್‌ಸ್ಪೆಕ್ಟರ್ ಸುರೇಶ್ ನೇತೃತ್ವದಲ್ಲಿ ದಾಳಿ ನಡೆಸಿ ಬಂಧಿಸಲಾಯಿತು.

ಚುನಾವಣಾ ವೀಕ್ಷಕರಿಗೆ ಮಾ.11ರಂದು ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಿಂದ ಲೋಕಸಭಾ ಚುನಾವಣಾ ವೀಕ್ಷಕರಾಗಿ ನೇಮಕಗೊಂಡಿರುವ 37 ಐಎಎಸ್ ಅಧಿಕಾರಿಗಳಿಗೆ ಮಾರ್ಚ್ 11ರಂದು ತರಬೇತಿ ನಡೆಯಲಿದೆ. ಕೇಂದ್ರ ಚುನಾವಣಾ ಆಯೋಗವು ವರ್ಚುವಲ್ ಸ್ವರೂಪದಲ್ಲಿ ಕಾರ್ಯಾಗಾರ ಹಮ್ಮಿಕೊಂಡಿದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯ ಸೇರಿದಂತೆ 37 ಅಧಿಕಾರಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ.

ಕರ್ನಾಟಕ ಸರ್ಕಾರ (ಮೀನುಗಾರಿಕೆ ಇಲಾಖೆ)

ಮೀನುಗಾರಿಕೆ ಜಂಟಿ ನಿರ್ದೇಶಕರ ಕಛೇರಿ, ಹಬ್ಬುವಾಡ, ಕಾರವಾರ–581306

ದೂರವಾಣಿ: 08382–221407 Email: jdfisherieskarwar@gmail.com

ಸಂಖ್ಯೆ: ಮೀಜಂನಿ/18/2023–24 ದಿನಾಂಕ: 02/03/2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

Procurement of Manpower Agency of the Department of Fisheries in Karnataka for the year 2024-25. Total approximate value Rs.10.51 Lakhs. EMD: Rs.25,000.
(1) Last date to submit bids on e-portal: 11/03/2024 17.00 pm (2) Opening of Technical Bids: 13/03/2024 11.00 am (3) Opening of Financial Bids: 16/03/2024 11.00 am

ಹೆಚ್ಚಿನ ವಿವರಗಳಿಗೆ ಇ-ಪೋರ್ಟಲ್ https://kppp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಸಹಿ/- ಮೀನುಗಾರಿಕೆ ಜಂಟಿ ನಿರ್ದೇಶಕರು, ಕಾರವಾರ

DIPR/KWR/KSMCA/799/23-24 dt 02.03.2024

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, 1ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇಂವಿ/ಬೆನಜಿ/ಇ-1/ಟೆಂಡರ್/40/2023–24 ದಿನಾಂಕ: 04–03–2024

ಕೆಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MP, Muzarai, MLA & Deposite Grants ಅನುಮೋದನೆಯಾಗಿರುವ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 22–03–2024 ರಂದು ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗಳ ವಿವರಗಳನ್ನು ಕೆಪಿಪಿ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಬಹುದು ಅಥವಾ ವೆಬ್‌ಸೈಟ್: https://www.kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/4058/ಅಡ್ವರ್ಟೋರ್/2023–24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ್ ರಾಣೇಬೆನ್ನೂರ–581115

ನಂ.ತಾಪಂರಾ/ಆಡಳಿತ/ಕಾ.ನಿ.ಅ/ವಾ.ಬಾ/ಇ-ಟೆಂಡರ್/ವಹಿ–01/2023–24 ದಿನಾಂಕ : 26.02.2024

ಇ – ಪ್ರೊಕ್ಯೂರ್‌ಮೆಂಟ್ ಪ್ರಕಟಣೆ

ರಾಣೇಬೆನ್ನೂರ ತಾಲೂಕು ಪಂಚಾಯತ್ ಕಾರ್ಯಾಲಯಕ್ಕೆ ಏಪ್ರಿಲ್–2024 ರಿಂದ ಮಾರ್ಚ್–2025ರ ಅವಧಿಗೆ ಮಾಸಿಕ ಬಾಡಿಗೆ ದರವು ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಿದ ಮಾಸಿಕ ರೂ. 40,000/– ಗಳಲ್ಲಿ ಬಾಡಿಗೆ ವಾಹನ (ಚಾಲಕ ಸಮೇತ) (ಹವಾ ನಿಯಂತ್ರಿತ ವಾಹನ) ಪೂರೈಸಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ : 26.02.2024. (2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 11.03.2024 ರ ಅಪರಾಹ್ನ 1–00 ಗಂಟೆಗೆ (3) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ ಮತ್ತು ವೇಳೆ : 13.03.2024 ರ ಅಪರಾಹ್ನ 02.30 ಗಂಟೆಗೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 15.03.2024ರ ಅಪರಾಹ್ನ 12.00 ಗಂಟೆಗೆ (5) ಇ.ಎಂ.ಡಿ ಮೊತ್ತ ರೂ. 12,000/– ಗಳು

(1) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ದಾಖಲೆಗಳನ್ನು https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು. (2) ಹೆಚ್ಚಿನ ವಿವರಗಳಿಗಾಗಿ ತಾಲೂಕು ಪಂಚಾಯತ್, ರಾಣೇಬೆನ್ನೂರ ಕಾರ್ಯಾಲಯವನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–(ಸುಮಲತಾ ಎಸ್ ಪಿ) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ್, ರಾಣೇಬೆನ್ನೂರ

ವಾಸಾಸಂಇ/ಹಾವೇರಿ/ಕೆ.ಎಸ್.ಎಂ.ಸಿ.ಎ/495/2023–24

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು ಮಂಗಳೂರು ವಿಭಾಗ, ಲೋಕೋಪಯೋಗಿ ಕಟ್ಟಡ, ನೆಹರೂ ಮೈದಾನದ ಬಳಿ, ಮಂಗಳೂರು – 575001

ಸಂಖ್ಯೆ:ಆಯವ್ಯಯ/ವಿವ-4/ ಮುಂದುವರಿದ ಕಾಮಗಾರಿ ಟೆಂಡರ್/2024-25 ದಿನಾಂಕ: 02.03.2024

ಇ–ಟೆಂಡರ್ ಪ್ರಕಟಣೆ

2024-25ನೇ ಸಾಲಿನಲ್ಲಿ ಮಂಗಳೂರು ವಿಭಾಗದ ವ್ಯಾಪ್ತಿಗೊಳಪಡುವ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ, ನೆಡುತೋಪು ಪೋಷಣೆ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ- ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.inನಲ್ಲಿ ಪಡೆದು ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15-03-2024 ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 18-03-2024 ರಂದು ಪೂರ್ವಾಹ್ನ 11.00 ಗಂಟೆಗೆ ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ-ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ-ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 25-03-2024 ರಂದು ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 27-03-2024ರಂದು ಪೂರ್ವಾಹ್ನ 11.00 ಗಂಟೆಗೆ ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು, ಮಂಗಳೂರು ಉಪವಿಭಾಗ, ಮಂಗಳೂರು

DIPR / MNG /1507/ MPL / 23-24

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 21/2023–24 ದಿನಾಂಕ : 28.02.2024

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ:3054–0337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ, 3054–0–337–0–05–200 ಜಿಲ್ಲಾ ಇತರೇ ರಸ್ತೆಗಳ ಸೇತುವೆಗಳು ಮತ್ತು ಮೋರಿಗಳ ನಿರ್ವಹಣೆ, 2059–80–053–4–00–200 ವಿವಿದ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣಾ ಯೋಜನೆ ಹಾಗೂ 2216–07–053–0–01–200 ವಸತಿ ಗೃಹಗಳ ದುರಸ್ಥಿ/ನಿರ್ವಹಣಾ ಯೋಜನೆ ಹಾಗೂ 8443 ಠೇವಣಿ ವಂತಿಕೆ ಅಡಿಯಲ್ಲಿನ ಒಟ್ಟು 16 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document-KW-1,2,&4ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಟ ಅಂದಾಜು **ಮೊತ್ತ ರೂ.2.50 ಲಕ್ಷಗಳು** ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.100.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 16 ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: 9291, 9224 , 9401, 9263, 9402, 9627, 9400, 8638, 8987, 9217, 9258 ಹಾಗೂ 9403 ಕಾಮಗಾರಿಗಳಿಗೆ ದಿನಾಂಕ : 07.03.2024, ಇಂಡೆಂಟ್ ಸಂಖ್ಯೆ: 9576, ಹಾಗೂ 9621 ಕಾಮಗಾರಿಗಳಿಗೆ ದಿನಾಂಕ : 11.03.2024 ಹಾಗೂ ಇಂಡೆಂಟ್ ಸಂಖ್ಯೆ: 9464 ಹಾಗೂ 9463 ರ ಕಾಮಗಾರಿಗಳಿಗೆ ದಿನಾಂಕ : 13.03.2024 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ

ಜಿಲ್ಲಾ ಆಸ್ಪತ್ರೆ, ಬಳ್ಳಾರಿ DISTRICT HOSPITAL, BALLARI.

ಎಸ್‌ಟಿಡಿ–08392, ಜಿಲ್ಲಾ ಶಸ್ತ್ರಚಿಕಿತ್ಸಕರು–274255 ಸ.ಆ.ಅಧಿಕಾರಿ–274254

dsballari-hfws@karnataka.gov.in bellaryds@gmail.com

ಸಂ:ಜಿಆಬ/ಎ.ಆರ್.ಎಸ್./ಟೆಂಡರ್/ಹೆಚ್.ಎನ್.ಎಸ್./01/23–24/ Call - 2 ದಿನಾಂಕ: 01/03/2024

ಟೆಂಡರ್ ಪ್ರಕಟಣೆ

ಜಿಲ್ಲಾ ಆಸ್ಪತ್ರೆ, ಬಳ್ಳಾರಿ ಇಲ್ಲಿಗೆ ಒಂದು ವರ್ಷದ ಅವಧಿಗಾಗಿ ಹೆಚ್.ಎನ್.ಎಸ್. (ಆಸ್ಪತ್ರೆಯ ಅವಶ್ಯಕ ವಸ್ತುಗಳು) ಸರಬರಾಜು ಮಾಡಲು ಪ್ರತಿಷ್ಠಿತ/ಅಧಿಕೃತ ನೊಂದಾಯಿತ ಸಂಸ್ಥೆಯವರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಕರೆಯಲಾಗಿದೆ, ಟೆಂಡರ್‌ನ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಅವಧಿ: ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಟೆಂಡರ್ ವಿವರ : ಹೆಚ್.ಎನ್.ಎಸ್. (ಆಸ್ಪತ್ರೆಯ ಅವಶ್ಯಕ ವಸ್ತುಗಳು) **ಟೆಂಡರ್ ಮೊತ್ತ ರೂ:** 68,20,500.00/– **ಇ.ಎಂ.ಡಿ ಮೊತ್ತ ರೂ.:** 1,70,513/– **ಆನ್ಲೈನ್ ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ & ಸಮಯ:** ದಿನಾಂಕ: 09/03/2024 ಸಾಯಂಕಾಲ 4.30 pm ವರೆಗೆ **ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಸಮಯ & ಸ್ಥಳ:** 11/03/2024 ಸಾಯಂಕಾಲ 4.30 ಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ ಬಳ್ಳಾರಿ. **ಷರಾ:–**

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/955/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ–1:ಟೆಂಡರ್–31:2023–24 ದಿನಾಂಕ: 02.03.2024

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಕಾಮಗಾರಿಗಳ ವಿವರ:– ಇ–ಪ್ರೊಕ್ಯೂರ್‌ಮೆಂಟ್ ಮೂಲಕ–ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ: ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ (ಸಿ.ಇ.ಪಿ.ಎಂ.ಐ.ಜಡ್) ಕೆ.ಎಂ.ಇ.ಆರ್.ಸಿ. ಯೋಜನೆಯಡಿ:– (1) ಚಿತ್ರದುರ್ಗ ತಾಲ್ಲೂಕು ಹಿರೇಬೆನ್ನೂರು –ಸಿರಿಗೆರೆ ಸಾಸಲು ರಸ್ತೆ ಕಿ.ಮೀ. 0.00 ರಿಂದ 13.00 ಕಿ.ಮೀ. ಸಿ.ಸಿ. ರಸ್ತೆ ನಿರ್ಮಾಣ ಹಾಗೂ ಅಭಿವೃದ್ಧಿ (ಡಿ. ಮದಕರಿಪುರ ದವರೆಗೆ) (ವ.ಇಂ. 5864) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):– 6500.00

ಕಾಮಗಾರಿ ಟೆಂಡರ್ ದಿನಾಂಕಗಳು:– ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 02–04–2024 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 03–04–2024 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 04–04–2024 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 06–04–2024 ಸಮಯ 11–00

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/645/2023-24

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100

ಫೋನ್: 080–22111177, E-Mail:ka.doddathoguru.tp@gmail.com

ಸಂ: ದೊಪಂಪ/ತಾ.ಶಾ/ಟೆಂ/10/2023–24 ದಿನಾಂಕ:04.03.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ KG ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಪಟ್ಟಣ ಪಂಚಾಯಿತಿ ದೊಡ್ಡತೋಗೂರು ವ್ಯಾಪ್ತಿಯಲ್ಲಿ 2023–24ನೇ ಸಾಲಿನ ಪಟ್ಟಣ ಪಂಚಾಯಿತಿ ಸ್ವಂತ ನಿಧಿ ಅನುದಾನದಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಮಾನವ ಸಂಪನ್ಮೂಲ ಸಂಗ್ರಹಣೆ ಮಾಡಲು ಹಾಗೂ 2023–24ನೇ ಸಾಲಿನ **ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿಯಲ್ಲಿ ಕೊಳವೆ** ಮಾರ್ಗ ಅಳವಡಿಸಲು ಐಟಂವಾರು ಮತ್ತು ಇ–ಪ್ರೊಕ್ಯೂರ್‌ಮೆಂಟ್ kppp Portal ಮುಖಾಂತರ ನೋಂದಾಯಿಸಲ್ಪಟ್ಟ ತಾಂತ್ರಿಕವಾಗಿ ಅರ್ಹ ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.

Sl. No.	Indent No.	Amount Rs.in Lakhs
1	DMA/2023-24/OW/WORK_INDENT14776	3.98
2	DMA/2023-24/SE2360	91.21

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಫಾರಂಗಳನ್ನು ಸಲ್ಲಿಸಲು ಪ್ರಾರಂಭ: ಕೆಪಿಪಿ ಪೋರ್ಟಲ್ ನಂತೆ. ಟೆಂಡರ್‌ಗಳನ್ನು ಸಲ್ಲಿಸುವ ಅಂತಿಮ **ದಿನಾಂಕ: 12.03.2024 ಸಂಜೆ 5:00 ಗಂಟೆಗೆ, ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:14.03.2024 ರಂದು ಬೆಳಿಗ್ಗೆ 10:30 ಗಂಟೆಗೆ** ಮತ್ತು **ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ:15.03.2024 ರ ಬೆಳಿಗ್ಗೆ 11:00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯ ಕಿರಿಯ ಅಭಿಯಂತರರಿಂದ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಡಳಿತಾಧಿಕಾರಿಗಳು ದೊಡ್ಡತೋಗೂರು ಪಟ್ಟಣ ಪಂಚಾಯಿತಿ

ವಾಸಾಸಂಇ/ವಾಪ್ರ/ಜಿಎ/4063/2023–24

ಸಹಿ/– ಮುಖ್ಯಾಧಿಕಾರಿ ದೊಡ್ಡತೋಗೂರು ಪಟ್ಟಣ ಪಂಚಾಯಿತಿ

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್.ತಮ್ಮಯ್ಯ ರಸ್ತೆ), ಬೆಂಗಳೂರು – 25.

ದೂ: 080 – 25584102/25594893. ವೆಬ್‌ಸೈಟ್: www.ksphc.org

ಕಾರ್ಯನಿರ್ವಾಹಕ ಅಭಿಯಂತರರು – ಗುತ್ತಿಗೆ ಇ ಮೇಲ್ : eecontractksphc@gmail.com

ಸಂಖ್ಯೆ ಕಾಅ/ಕರಾಪೊವ&ಮೂಸೌಅನಿನಿ/ಕಾಂಟ್ರಾಕ್ಟ್ಸ್/ಟಿಎನ್‌ಡಿ/3/2023–24/557 ದಿನಾಂಕ: 04.03.2024

ಟೆಂಡರ್ ಆಹ್ವಾನ ಪ್ರಕಟಣೆ

ಕರಾಪೊವ ಮತ್ತು ಮೂಸೌಅನಿನಿ ಕರ್ನಾಟಕ ಪಾರದರ್ಶಕತೆ 2000 ಕಾಯ್ದೆ ಹಾಗೂ ಸ್ಟಾಂಡರ್ಡ್ ಟೆಂಡರ್ ದಾಖಲಾತಿ **ಕೆಡಬ್ಲ್ಯೂ– 4** (ದ್ವಿ ಟೆಂಡರ್ ದಾಖಲಾತಿ ಪದ್ಧತಿ) ಪ್ರಕಾರ ಕೆಳಕಂಡ ಕಾಮಗಾರಿಗಳಿಗೆ ಕೆಪಿಪಿಪಿ https://kppp.karnataka.gov.in ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದೆ.

"ಶಿವಮೊಗ್ಗದಲ್ಲಿ ಅತ್ಯುನ್ನತ ಭದ್ರತಾ ಕಾರಾಗೃಹ ಹಾಗೂ ವಸತಿ ಗೃಹಗಳ ನಿರ್ಮಾಣ" (ಟೆಂಡರಿಗಿಟ್ಟ ಮೊತ್ತ ರೂ. 7316.70 ಲಕ್ಷಗಳು ಜಿಎಸ್‌ಟಿ ಒಳಗೊಂಡಂತೆ).

ಆಸಕ್ತಿವುಳ್ಳ ಅರ್ಹ ಗುತ್ತಿಗೆದಾರರು ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳು, ಇತ್ಯಾದಿ ಮುಂತಾದ ವಿವರಗಳು **ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) ನಲ್ಲಿ 11.03.2024** ರಿಂದ ಲಭ್ಯವಿರುವುದು.

"ಕರಾಪೊವ ಮತ್ತು ಮೂಸೌಅನಿನಿ ಯಾವುದೇ ಕಾರಣವನ್ನು ನೀಡದೆ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿದೆ".

ಸೂಚನೆ: ಇನ್ನು ಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡು ಇದ್ದಲ್ಲಿ ಇದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ವಾ.ಸಾ.ಸಂ.ಇ/ವಾಪ್ರ/4047/ಆಕಾರ್/22–23

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು – ಗುತ್ತಿಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ–ಪೂರ್ವ), ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ (ಪಿಯುಬಿ), 21ನೇ ಮಹಡಿ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001.

ಸಂಖ್ಯೆ: ಕಾಅ/ಯೋ–ಪೂ/ಟೆಂಡರ್/06/2023–24 ದಿನಾಂಕ: 04–03–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ ವಿಭಾಗ), ಪೂರ್ವ ವಲಯ, ಬಿಬಿಎಂಪಿ ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ4**)

ಕ್ರ. ಸಂ.	ಕಾಮಗಾರಿಯ ಹೆಸರು
1	ಶಾಂತಿನಗರದಲ್ಲಿ 300 ಹಾಸಿಗೆಯುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 6600.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 66,00,000/– (ರೂ. 1,00,000/– ಇ–ಪೋರ್ಟಲ್ ಮೂಲಕ ಹಾಗೂ ಉಳಿದ ಬಾಕಿ ಮೊತ್ತ ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸುವುದು)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 07–03–2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **15–03–2024 ರಂದು ಬೆಳಿಗ್ಗೆ 11.30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, 18ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬಿಬಿಎಂಪಿ ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **20–03–2024 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **21–03–2024 ರಂದು ಬೆಳಿಗ್ಗೆ 11.00 ಗಂಟೆಗೆ (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ ವಿಭಾಗ), ಬಿಬಿಎಂಪಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲಸೌಕರ್ಯ – ಪೂರ್ವ ವಿಭಾಗ, 23ನೇ ಮಹಡಿ, ನೇತಾಜಿ ಸುಭಾಷ್‌ಚಂದ್ರಬೋಸ್ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560001

ನಂ.: ಕಾಪಾಅ/ರಮೂ/ಪೂರ್ವ/ಟೆಂಡರ್/04/2023–24 ದಿನಾಂಕ: 04.03.2024

ಟೆಂಡರ್ ಪ್ರಕಟಣೆ

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(https://kppp.karnataka.gov.in ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ರ.ಮೂ. – ಪೂರ್ವ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	"ಐಒಸಿ ಜಂಕ್ಷನ್‌ನಲ್ಲಿ ಎಲಿವೇಟೆಡ್ ರೋಟರಿ ಫ್ಲೈಓವರ್ ನಿರ್ಮಾಣ ಮತ್ತು ಬೈಯ್ಯಪ್ಪನಹಳ್ಳಿ ರೈಲ್ವೇ ಲೆವೆಲ್ ಕ್ರಾಸಿಂಗ್‌ನಲ್ಲಿ ಹೆಚ್ಚುವರಿ 2 ಲೇನ್ ಆರ್‌ಒಬಿ ನಿರ್ಮಾಣ" ಡಿಸೈನ್ ಬಿಲ್ಡ್ ಟ್ರಾನ್ಸ್‌ಫರ್ ಮತ್ತು ಲುಂಪ್‌ಸಮ್ – ಟರ್ನ್‌ಕೀ – ಬದಲಾವಣೆಯಿಲ್ಲದ – ಎಸ್ಕಲೇಷನ್‌ಯಿಲ್ಲದ ಆಧಾರದಲ್ಲಿ. **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 35,248.00 (ಜಿಎಸ್‌ಟಿ ಒಳಗೊಂಡಂತೆ), **ಇಎಂಡಿ (ಲಕ್ಷಗಳಲ್ಲಿ):** 353.00 ಲಕ್ಷಗಳು (ರೂ. 1.00 ಲಕ್ಷ ಕೆಪಿಪಿಪಿ ಪೋರ್ಟಲ್ ಮೂಲಕ ಹಾಗೂ ರೂ. 352.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ / ಇ–ಬ್ಯಾಂಕ್ ಗ್ಯಾರಂಟಿ ಮಾದರಿಯಲ್ಲಿ)

ಟೆಂಡರ್‌ನ ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳು ಹಾಗೂ ಇತರೆ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್ ಮೂಲಕ **04.03.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ: **14.03.2024ರ ಸಂಜೆ 4:00 ಗಂಟೆಗೆ.** (3) ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿಪಿ ಪೋರ್ಟಲ್ ಮೂಲಕ **04.04.2024ರ ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಕೆಪಿಪಿಪಿ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **05.04.2024ರ ಸಂಜೆ 4:30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ದೊರೆತನಂತರ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ – ಪೂರ್ವ ವಿಭಾಗ, ಬಿಬಿಎಂಪಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಆನೇಕಲ್, ಪಿ.ಎಲ್.ಡಿ. ಬ್ಯಾಂಕ್ ಕಟ್ಟಡ, ಅತ್ತಿಬೆಲೆ ರಸ್ತೆ, ಆನೇಕಲ್ ಟೌನ್

Email: cdpoanekal@gmail.com ದೂ.: 080–29906665

ಸಂಖ್ಯೆ: ಶಿಅಯೋ/ಆತಾ/ತೂ.ಯಂ:ಸತ್ಯಾಪನೆ:ದುರಸ್ತಿ/2023–24 ದಿನಾಂಕ: 29.02.2024

ಟೆಂಡರ್ ಪ್ರಕಟಣೆ

ಇ–ಟೆಂಡರ್ ಅಧಿಸೂಚನೆ ಸಂಖ್ಯೆ DWCD/2023-24/SE0246

2023–24ನೇ ಸಾಲಿಗೆ, ಶಿಶು ಅಭಿವೃದ್ಧಿ ಯೋಜನೆ, ಆನೇಕಲ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ 457 ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ತೂಕದ ಯಂತ್ರ, ವಯಸ್ಕರ ತೂಕದ ಯಂತ್ರಗಳನ್ನು (ಮ್ಯಾನ್ಯೂಲ್ ಮತ್ತು ಡಿಜಿಟಲ್) ಹಾಗೂ ಗೋದಾಮಿನಲ್ಲಿರುವ ಪ್ಲ್ಯಾಟ್‌ಫಾರಂ ಸ್ಕೇಲ್‌ನ್ನು ಬೆಂಗಳೂರು ನಗರ ಜಿಲ್ಲೆ ಕಾನೂನು ಮಾಪನ ಶಾಸ್ತ್ರ ಇಲಾಖೆ, ಇವರಿಂದ ಮಾನ್ಯತೆ ಪಡೆದವರು ತಾಲ್ಲೂಕಿನಲ್ಲಿ ಎಲ್ಲಾ ಬಗೆಯ ತೂಕದ ಯಂತ್ರಗಳನ್ನು ಅವಶ್ಯಕವಿದ್ದಲ್ಲಿ ಬಿಡಿ ಭಾಗಗಳನ್ನು ಅಳವಡಿಸಿ ದುರಸ್ತಿ ಮಾಡಿ, ಮತ್ತು ಸತ್ಯಾಪನೆಗೆ ಒಳಪಡಿಸಲು/ ಮಾಡಲು ಟೆಂಡರ್ ಬಿಡ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ದಿನಾಂಕ: 29.02.2024 ರಿಂದ ದಿನಾಂಕ: 14.03.2024ರ ಸಂಜೆ 05:00 ಗಂಟೆಯೊಳಗಾಗಿ, ಅರ್ಜಿಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸತಕ್ಕದ್ದು, ತಾಂತ್ರಿಕ ಬಿಡ್‌ನ್ನು ದಿನಾಂಕ: 15.03.2024ರ ಸಂಜೆ 05:01 ಗಂಟೆಗೆ ರಂದು ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ: 16.03.2024 ರಂದು ಸಂಜೆ 05:01 ಗಂಟೆಗೆ ತೆರೆಯಲಾಗುವುದು. ಟೆಂಡರ್ ಷರತ್ತಿಗನುಗುಣವಾಗಿ ಅತಿ ಕಡಿಮೆ ದರವನ್ನು ನಮೂದಿಸಿರುವ ಅರ್ಹ ಸಂಸ್ಥೆಗೆ ಮೇಲಿನಂತೆ ದುರಸ್ತಿ ಮಾಡಿ ನಂತರ ಸತ್ಯಾಪನೆಗೆ ಒಳಪಡಿಸಲು/ಮಾಡಲು ಮಂಜೂರಾತಿ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ: ಮೇಲ್ಕಂಡ ವಿಳಾಸದಲ್ಲಿ ವಿಚಾರಿಸಬಹುದು ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/–, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆನೇಕಲ್ ತಾಲ್ಲೂಕು

ವಾಸಾಸಂಇ/ವಾಪ್ರ/ಎಲ್‌ಸಿ/4065/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಸಂಕೀರ್ಣ, ಧನವಂತ್ರಿ ರಸ್ತೆ, ಬೆಂಗಳೂರು–560 009.

ಸಂಖ್ಯೆ:ಕಾಪಾಅ/ಗಾಂಧಿನಗರ/ಟೆಂಡರ್/ಇ–ಪ್ರೊಕ್/07/2023–24 ದಿನಾಂಕ:04.03.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು/ದ್ವಿಲಕೋಟೆ ಕಾಮಗಾರಿಗಳು
1	ವಾರ್ಡ್ ಸಂಖ್ಯೆ–122 (77) ದತ್ತಾತ್ರೇಯ ದೇವಸ್ಥಾನ ವಾರ್ಡ್‌ನಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.100.00 ಲಕ್ಷಗಳು ಇಎಂಡಿ ಮೊತ್ತ: ₹.1,00,000/–
2	ವಾರ್ಡ್ ಸಂಖ್ಯೆ–123 (94) ಗಾಂಧಿನಗರದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.200.00 ಲಕ್ಷಗಳು ಇಎಂಡಿ ಮೊತ್ತ: ₹.2,00,000/–
3	ವಾರ್ಡ್ ಸಂಖ್ಯೆ–124 (95) ಸುಭಾಷ್‌ನಗರದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.100.00 ಲಕ್ಷಗಳು ಇಎಂಡಿ ಮೊತ್ತ: ₹.1,00,000/–
4	ವಾರ್ಡ್ ಸಂಖ್ಯೆ–125 (96) ಓಕಳೀಪುರಂನಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.150.00 ಲಕ್ಷಗಳು ಇಎಂಡಿ ಮೊತ್ತ: ₹.1,50,000/–
5	ವಾರ್ಡ್ ಸಂಖ್ಯೆ–126 (121) ಬಿನ್ನಿಪೇಟೆಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.100.00 ಲಕ್ಷಗಳು ಇಎಂಡಿ ಮೊತ್ತ: ₹.1,00,000/–
6	ವಾರ್ಡ್ ಸಂಖ್ಯೆ–127 (120) ಕಾಟನ್‌ಪೇಟೆಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.150.00 ಲಕ್ಷಗಳು ಇಎಂಡಿ ಮೊತ್ತ: ₹.1,50,000/–
7	ವಾರ್ಡ್ ಸಂಖ್ಯೆ–128 (109) ಚಿಕ್ಕಪೇಟೆಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳಿಗೆ ಸುಧಾರಣೆಗಳನ್ನು ಒದಗಿಸುವುದು. ಅಂದಾಜು ಮೊತ್ತ: ₹.200.00 ಲಕ್ಷಗಳು ಇಎಂಡಿ ಮೊತ್ತ: ₹.2,00,000/–

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 16.03.2024ರ ಮಧ್ಯಾಹ್ನ 12:30 ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 19.03.2024ರ ಸಂಜೆ 4:00 ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 21.03.2024ರ ಮಧ್ಯಾಹ್ನ 12:30 ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರಯುವ ದಿನಾಂಕ ಮತ್ತು ಸಮಯ (ಕೆಪಿಪಿಪಿ ಮೂಲಕ ತಿಳಿಸಲಾಗುವುದು)

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

ಸಮಾಜ ಕಲ್ಯಾಣ ಇಲಾಖೆ

ರಾಮನಗರ ಜಿಲ್ಲಾ ಪಂಚಾಯತ್, ಜಂಟಿ ನಿರ್ದೇಶಕರ ಕಛೇರಿ, ಪಂಚಾಯತ್ ಭವನ, 2ನೇ ಮಹಡಿ, ಬಿ.ಎಂ. ರಸ್ತೆ, ರಾಮನಗರ ಜಿಲ್ಲೆ – 562159.

ದೂರವಾಣಿ: 080–2727 3003, ಇ–ಮೇಲ್: dswormgm12@gmail.com

ಸಂಖ್ಯೆ : ಉ.ನಿ.ಕ./ಸ.ಕ.ಇ./ರಾ./ಸಿಆರ್–2 (ಆಹಾರ ಟೆಂ)/2023–24 ದಿನಾಂಕ : 01–03–2024

ಪತ್ರಿಕಾ ಪ್ರಕಟಣೆ

ರಾಮನಗರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಡಿ ನಿರ್ವಹಿಸಲಾಗುತ್ತಿರುವ ರಾಮನಗರ, ಚನ್ನಪಟ್ಟಣ, ಕನಕಪುರ, ಮಾಗಡಿ ತಾಲ್ಲೂಕುಗಳ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹಾಗೂ / ಆಶ್ರಮ ಶಾಲೆಗಳಿಗೆ ಆರ್ಥಿಕ ವರ್ಷ 2024–25 ನೇ ಸಾಲಿಗೆ ಆಹಾರ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಸಲು **ಸರ್ಕಾರದ ಆದೇಶ ಸಂಖ್ಯೆ : ಸಕಇ97/ಪಕವಿ2023 ಬೆಂಗಳೂರು ದಿನಾಂಕ : 28–07–2023 ರಂತೆ ದ್ವಿ ಲಕೋಟೆ ಪದ್ಧತಿಯಲ್ಲಿ ಎ. ಬಿ. ಸಿ. ಡಿ. ಇ. ಎಫ್. ಜಿ. ಹೆಚ್ ಗುಂಪುಗಳ ಆಹಾರ ಸಾಮಗ್ರಿಗಳ ಪೂರೈಕೆಗಾಗಿ** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಲ್ಲೂಕುವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಇಚ್ಛೆಯುಳ್ಳ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ **ಪೋರ್ಟಲ್ :** https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ತಾಲ್ಲೂಕುವಾರು ಇಂಡೆಂಟ್ ನಂ ಈ ಕೆಳಕಂಡಂತಿದೆ.

ತಾಲ್ಲೂಕುವಾರು ಇಂಡೆಂಟ್ ನಂ. : 1) ತಾಲ್ಲೂಕು : ರಾಮನಗರ, ಇಂಡೆಂಟ್ ನಂಬರ್ : SWD/2023-24/IND0216, 2) ತಾಲ್ಲೂಕು : ಚನ್ನಪಟ್ಟಣ, ಇಂಡೆಂಟ್ ನಂಬರ್ : SWD/2023-24/IND0218, 3) ತಾಲ್ಲೂಕು : ಕನಕಪುರ, ಇಂಡೆಂಟ್ ನಂಬರ್ : SWD/2023-24/IND0217, 4) ತಾಲ್ಲೂಕು : ಮಾಗಡಿ, ಇಂಡೆಂಟ್ ನಂಬರ್ : SWD/2023-24/IND0219.

1) ಟೆಂಡರ್ ಸಂಖ್ಯೆ ಮತ್ತು ದಿನಾಂಕ : ಉ.ನಿ.ಕ./ಸ.ಕ.ಇ./ರಾ./ಸಿಆರ್–2 (ಆಹಾರ ಟೆಂ)/2023–24, ದಿನಾಂಕ : 01–03–2024, 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : ಎ) ತಾಲ್ಲೂಕುಗಳು – ರಾಮನಗರ, ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ) : 300.10 ಲಕ್ಷ, ಬಿ) ತಾಲ್ಲೂಕುಗಳು – ಚನ್ನಪಟ್ಟಣ, ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ) : 250.30 ಲಕ್ಷ, ಸಿ) ತಾಲ್ಲೂಕುಗಳು – ಕನಕಪುರ, ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ) : 400.25 ಲಕ್ಷ, ಡಿ) ತಾಲ್ಲೂಕುಗಳು – ಮಾಗಡಿ, ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ) : 150.15 ಲಕ್ಷ, 3) ಇ–ಪೋರ್ಟಲ್ ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : 01–03–2024, 4) ಪೂರ್ವ ಭಾವಿ ಸಭೆ ದಿನಾಂಕ : 28–03–2024 ರಂದು 3.00 ಗಂಟೆ, 5) ಇ–ಪೋರ್ಟಲ್ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ : 10–04–2024 ರ ಸಂಜೆ 5.00 ಗಂಟೆ, 6) ಮಾದರಿ ಸಾಮಗ್ರಿಗಳನ್ನು ಸಲ್ಲಿಸುವ ದಿನಾಂಕ (ಸ್ಯಾಂಪಲ್) ದಿನಾಂಕ : 06–04–2024 ರಂದು, 7) ಇ–ಪೋರ್ಟಲ್‌ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : 12–04–2024 ರಂದು ಸಂಜೆ 5.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.), 8) ಇ–ಪೋರ್ಟಲ್‌ನ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ : 16–04–2024 ರಂದು ಬೆಳಿಗ್ಗೆ 11.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.), 9) ಇ.ಎಂ.ಡಿ : ರಾಮನಗರ – 4.50 ಲಕ್ಷ, ಚನ್ನಪಟ್ಟಣ – 3.75 ಲಕ್ಷ, ಕನಕಪುರ – 6.00 ಲಕ್ಷ, ಮಾಗಡಿ – 2.25 ಲಕ್ಷ, ಒಟ್ಟು : 16.50 ಲಕ್ಷ, 10) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, 2ನೇ ಮಹಡಿ, ಬಿ. ಎಂ. ರಸ್ತೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ಜಿಲ್ಲೆ. ದೂರವಾಣಿ : (080) – 2727 3003 ಮೊಬೈಲ್ : 94808 43043, ಇ–ಮೇಲ್ : dswormgm12@gmail.com, ವೆಬ್‌ಸೈಟ್ : www.eproc.karnataka.gov.in.

ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ.

ಡಿಐಪಿಆರ್/ರಾಮನಗರ/553/ಮಣಿಪಾಲ್/2023–24

ಕ್ಷೇಮ ಕುಶಲ

ಕಂಟಕವಾಗದಿರಲಿ ಗರ್ಭಕಂಠದ ಕ್ಯಾನ್ಸರ್

ಡಾ. ಕಿರಣ್ ವಿ. ಎಸ್.

ಇತ್ತೀಚಿಗೆ ಅನೇಕ ಕಾರಣಗಳಿಂದ ಗರ್ಭಕಂಠದ ಕ್ಯಾನ್ಸರ್ (Cervical cancer) ಸುದ್ದಿಯಲ್ಲಿದೆ. ವಿಶ್ವದಾದ್ಯಂತ ಪ್ರತಿ ವರ್ಷ ಮೂರೂವರೆ ಲಕ್ಷಕ್ಕೂ ಹೆಚ್ಚು ಮಹಿಳೆಯರು ಗರ್ಭಕಂಠದ ಕ್ಯಾನ್ಸರ್‌ನಿಂದ ಮರಣಿಸುತ್ತಾರೆ. ಜಗತ್ತಿನಲ್ಲಿ ಸ್ತ್ರೀಯರನ್ನು ಕಾಡುವ ಕ್ಯಾನ್ಸರ್‌ಗಳ ಪೈಕಿ ಸ್ತನಗಳು, ಶ್ವಾಸಕೋಶಗಳು, ಕರುಳಿನ ನಂತರ ಗರ್ಭಕಂಠದ ಕ್ಯಾನ್ಸರ್‌ಗೆ ನಾಲ್ಕನೆಯ ಸ್ಥಾನ. ವಾರ್ಷಿಕವಾಗಿ ಸುಮಾರು ಆರೂವರೆ ಲಕ್ಷ ಸ್ತ್ರೀಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಇದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇದು ಪತ್ತೆಯಾಗದೇ ಉಳಿಯುತ್ತದೆ ಎಂದು ತಜ್ಞರ ಅಭಿಮತ. ಜಗತ್ತಿನ ಎಲ್ಲ ದೇಶಗಳಲ್ಲೂ ಗರ್ಭಕಂಠದ ಕ್ಯಾನ್ಸರ್ ಕಾಣುತ್ತದೆಯಾದರೂ, ಇದರಿಂದ ಮರಣಿಸುವವರು ಆಫ್ರಿಕಾ, ದಕ್ಷಿಣ ಏಷ್ಯಾ, ಮತ್ತು ಮಧ್ಯ ಅಮೆರಿಕಗಳಲ್ಲಿ ಹೆಚ್ಚಾಗಿ ಕಾಣುತ್ತಾರೆ. ಇದಕ್ಕೆ ಮುಖ್ಯ ಕಾರಣಗಳು ಈ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಾಣುವ ಸ್ತ್ರೀ-ಆರೋಗ್ಯದ ಅವಗಣನೆ, ಕ್ಯಾನ್ಸರ್ ಪತ್ತೆ ಮಾಡಲು ಅನುಕೂಲಗಳ ಅಭಾವ, ಚಿಕಿತ್ಸೆಯ ಅಲಭ್ಯತೆ, ಲಸಿಕೆಗಳ ಬಗೆಗಿನ ಅಜ್ಞಾನ. ಇದರ ಜೊತೆಗೆ ಜಗತ್ತಿನಲ್ಲೆಲ್ಲ ಪಸರಿಸಿರುವ ಎಚ್.ಐ.ವಿ. ಕಾಯಿಲೆ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸಿ, ಗರ್ಭಕಂಠದ ಕ್ಯಾನ್ಸರ್‌ನ ಸಾಧ್ಯತೆಯನ್ನು ಆರು ಪಟ್ಟು ಹೆಚ್ಚಿಸುತ್ತದೆ ಎಂದು ಸಂಶೋಧನೆಗಳು ತಿಳಿಸಿವೆ.

ಗರ್ಭಕಂಠ ಎಂದರೇನು? ಗರ್ಭಕೋಶ ಎನ್ನುವುದು ಸ್ತ್ರೀಯರ ಕಿಬ್ಬೊಟ್ಟೆಯಲ್ಲಿರುವ ಚೀಲದಂತಹ ಅಂಗ. ಇದರ ಆರಂಭಿಕ ಭಾಗ ಗರ್ಭಕಂಠ. ಇದು ಯೋನಿಯನ್ನು ಗರ್ಭಾಶಯಕ್ಕೆ ಸಂಪರ್ಕಿಸುವ ಕಿರಿದಾದ ಭಾಗ. ಗರ್ಭಾಶಯದಿಂದ ಮಾಸಿಕ ಋತುಸ್ರಾವ ಗರ್ಭಕಂಠದ ಮೂಲಕ ಹಾಯ್ದು ಯೋನಿಯ ದಾರಿಯಿಂದ ಹೊರಹೋಗುತ್ತದೆ. ಹೆಣ್ಣು ಗರ್ಭವನ್ನು ಧರಿಸಿದಾಗ ಬೆಳೆಯುತ್ತಿರುವ ಭ್ರೂಣಕ್ಕೆ ಸಮನಾಗಿ ಗರ್ಭಕೋಶದ ಮೇಲಿನ ಭಾಗ ಹಿಗ್ಗುತ್ತಾ ಹೋಗುತ್ತದೆ. ಇದಕ್ಕೆ ವಿರುದ್ಧವಾಗಿ ಗರ್ಭಕಂಠ ಕಿರಿದಾಗಿಯೇ ಇದ್ದು, ಭ್ರೂಣವು ಹೊರಗೆ ಜಾರದಂತೆ ಕಾಪಾಡುತ್ತದೆ. ಶಿಶುವಿನ ಜನನದ ವೇಳೆ ಗರ್ಭಕಂಠ ಹಿಗ್ಗಿ, ಹೆರಿಗೆಗೆ ಅನುವು ಮಾಡಿಕೊಡುತ್ತದೆ.

'ಹ್ಯೂಮನ್ ಪ್ಯಾಪಿಲೋಮ ವೈರಸ್ ಸೋಂಕು' ಎನ್ನುವ ಲೈಂಗಿಕವಾಗಿ ಹರಡುವ ಕಾಯಿಲೆ ಗರ್ಭಕಂಠದ ಕ್ಯಾನ್ಸರ್‌ನ ಅತಿ ಮುಖ್ಯ ಕಾರಣ.

ಲೈಂಗಿಕವಾಗಿ ಸಕ್ರಿಯರಾಗಿರುವ ಬಹುತೇಕ ಜನರಲ್ಲಿ ಈ ವೈರಸ್ ಸೋಂಕು ಸಣ್ಣ ಮಟ್ಟದಲ್ಲಿ ಇರುತ್ತದೆ. ಶರೀರದ ರಕ್ಷಕ ವ್ಯವಸ್ಥೆ ಇದರ ಸೋಂಕನ್ನು ಬಹುಮಟ್ಟಿಗೆ ನಿಗ್ರಹಿಸುತ್ತದೆ. ಆದರೆ ಈ ವೈರಸ್ ಸೋಂಕು ಪದೇ ಪದೇ ಗರ್ಭಕಂಠವನ್ನು ಗಾಸಿ ಮಾಡುತ್ತಲೇ ಹೋದರೆ ಸಾಮಾನ್ಯ ಜೀವಕೋಶಗಳು ನಶಿಸಿ, ಆ ಸ್ಥಾನದಲ್ಲಿ ಕ್ಯಾನ್ಸರ್ ಕೋಶಗಳು ಬೆಳೆಯುವ ಸಾಧ್ಯತೆಗಳು ಹೆಚ್ಚು. ಲೈಂಗಿಕ ಸಂಗಾತಿಗಳ ಸಂಖ್ಯೆ ಅಧಿಕವಾದಷ್ಟೂ ಗರ್ಭಕಂಠದ ಕ್ಯಾನ್ಸರ್ ಸಾಧ್ಯತೆ ಹೆಚ್ಚು. ಇದರ ಜೊತೆಗೆ ಸಣ್ಣವಯಸ್ಸಿನಲ್ಲೇ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು, ಶರೀರದ ರೋಗನಿರೋಧಕ ಶಕ್ತಿಯ ಇಳಿಕೆ, ಪೌಷ್ಟಿಕ ಆಹಾರದ ಕೊರತೆ, ಅಶುಚಿ, ಹೆಚ್ಚು ಬಾರಿ ಗರ್ಭವನ್ನು ಧರಿಸುವುದು, ಹಾರ್ಮೋನ್-ಯುಕ್ತ ಗರ್ಭನಿರೋಧಕಗಳ ಬಳಕೆ, ಧೂಮಪಾನ, ಮದ್ಯಪಾನಗಳ ಅಭ್ಯಾಸ, ಮಾದಕ ದ್ರವ್ಯಗಳ ವ್ಯಸನ, ಸ್ಟಿರಾಯ್ಡ್ ಔಷಧಗಳ ಚಿಕಿತ್ಸೆ, ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುವ ಎಚ್.ಐ.ವಿ. ಯಂತಹ ಕಾಯಿಲೆಗಳು ಗರ್ಭಕಂಠದ ಕ್ಯಾನ್ಸರ್ ಹೆಚ್ಚಳಕ್ಕೆ ಕಾರಣಗಳಾಗಿವೆ.

ಅಸಹಜ ಮತ್ತು ಅನಿಯಮಿತವಾಗಿ ಯೋನಿಯ ಮೂಲಕ ರಕ್ತಸ್ರಾವ ಆಗುವುದು ಗರ್ಭಕಂಠದ ಕ್ಯಾನ್ಸರ್‌ನ ಪ್ರಮುಖ ಲಕ್ಷಣ. ಎರಡು ಮಾಸಿಕ ಋತುಸ್ರಾವಗಳ ನಡುವೆ ಆಗಾಗ ರಕ್ತಸ್ರಾವ ಆಗುವುದು, ಸಂಭೋಗದ ನಂತರ ಸಣ್ಣಪ್ರಮಾಣದಲ್ಲಿ ರಕ್ತಸ್ರಾವ ಕಾಣುವುದು, ಕಿಬ್ಬೊಟ್ಟೆ, ಸೊಂಟ ಮತ್ತು ಬೆನ್ನಿನ ಹಿಂಭಾಗದ ನೋವು, ಯೋನಿಸ್ರಾವದಲ್ಲಿ ದುರ್ವಾಸನೆ, ಮಾಸಿಕ ಋತುಸ್ರಾವ ನಿಂತ ಕೆಲವರ್ಷಗಳ ಬಳಿಕೆ ಮತ್ತೆ ರಕ್ತಸ್ರಾವ ಕಾಣುವುದು, ಪದೇ ಪದೇ ನೋವುಯುಕ್ತ ಮೂತ್ರವಿಸರ್ಜನೆ ಆಗುವಿಕೆ, ಮೊದಲಾದವು ಗರ್ಭಕಂಠದ ಕ್ಯಾನ್ಸರ್‌ನ ಕೆಲವು ಲಕ್ಷಣಗಳು. ಆರಂಭಿಕ ಹಂತದಲ್ಲಿ ಗರ್ಭಕಂಠದ ಕ್ಯಾನ್ಸರ್‌ನ ಲಕ್ಷಣಗಳನ್ನು ನಿರ್ಲಕ್ಷ್ಯ ಮಾಡಿದರೆ ಕ್ಯಾನ್ಸರ್ ಕೋಶಗಳು ಶರೀರದ ಇತರ ಅಂಗಗಳಿಗೆ ವ್ಯಾಪಿಸುವ ಸಾಧ್ಯತೆಗಳಿರುತ್ತವೆ. ಒಮ್ಮೆ ಕ್ಯಾನ್ಸರ್ ಗರ್ಭಕಂಠದಿಂದ ಇತರ ಅಂಗಗಳಿಗೆ ಹರಡಿದರೆ ಚಿಕಿತ್ಸೆ ಬಹಳ ಕಷ್ಟ; ಫಲಿತಾಂಶವೂ ಕಡಿಮೆ.

ಗರ್ಭಕಂಠದ ಕ್ಯಾನ್ಸರ್ ಪತ್ತೆಗಾಗಿ ಸಾಕಷ್ಟು ಪರೀಕ್ಷೆಗಳಿವೆ. 'ಪ್ಯಾಪ್ ಸ್ಮಿಯರ್' ಎಂದು ಕರೆಯುವ ಪೂರ್ವಭಾವಿ ಪರೀಕ್ಷೆಯಲ್ಲಿ ಗರ್ಭಕಂಠದ ಮೇಲ್ಮೈಕೋಶಗಳನ್ನು ತೆಗೆದು ಸೂಕ್ಷ್ಮದರ್ಶಕದ ಅಡಿಯಲ್ಲಿಟ್ಟು ಪರೀಕ್ಷಿಸುತ್ತಾರೆ. ಕ್ಯಾನ್ಸರ್ ಕೋಶಗಳು ಸಾಮಾನ್ಯ ಜೀವಕೋಶಗಳಿಗಿಂತಲೂ ಭಿನ್ನವಾಗಿರುತ್ತವೆ. ಇದರಿಂದ ಗರ್ಭಕಂಠದ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಬಹುದು. ಪ್ಯಾಪ್ ಸ್ಮಿಯರ್ ಪರೀಕ್ಷೆ ಗರ್ಭಕಂಠದ ಕ್ಯಾನ್ಸರ್‌ನ ಸಾಧ್ಯತೆಗಳನ್ನು ತೋರಿದರೆ, ಅದನ್ನು ನಿಖರವಾಗಿ ಪತ್ತೆ ಮಾಡಲು ಇನ್ನಷ್ಟು ಪರೀಕ್ಷೆಗಳನ್ನು ಮಾಡಿ ಖಚಿತಪಡಿಸಿಕೊಳ್ಳಬಹುದು. ಈ ಹಂತದಲ್ಲಿ ಚಿಕಿತ್ಸೆ ಸರಳ ಮತ್ತು ಪರಿಣಾಮಕಾರಿ.

ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟುವ ಲಸಿಕೆ ಲಭ್ಯವಿದೆ. ಈ ಲಸಿಕೆ ಹ್ಯೂಮನ್ ಪ್ಯಾಪಿಲೋಮ ವೈರಸ್ ಸೋಂಕಿನ ವಿರುದ್ಧ ರಕ್ಷಣೆ ನೀಡುತ್ತದೆ. 12-13 ವರ್ಷಗಳ ವಯಸ್ಸಿನ ಮಕ್ಕಳಿಗೆ ಈ ಲಸಿಕೆಯನ್ನು ನೀಡುವುದು ಸೂಕ್ತ ಎಂದು ತಜ್ಞರ ಅಭಿಪ್ರಾಯ. ಈ ಬಗ್ಗೆ ಕಳೆದ ಕೇಂದ್ರ ಬಜೆಟ್‌ನಲ್ಲಿ ವಿಶೇಷ ಉಲ್ಲೇಖವನ್ನು ಮಾಡಲಾಗಿದೆ.

ಗರ್ಭಕಂಠದ ಕ್ಯಾನ್ಸರ್ ಬಗ್ಗೆ ನಿರ್ಲಕ್ಷ್ಯ ಸಲ್ಲದು. ಆರೋಗ್ಯಕರ ಜೀವನಶೈಲಿ, ಸಮತೋಲಿತ ಆಹಾರ, ಪ್ರಲೋಭನೆಗಳಿಗೆ ಒಳಗಾಗದ ಮಾನಸಿಕ ಧೃಢತೆ, ಶಿಸ್ತುಬದ್ಧ ಬದುಕು, ಆರೋಗ್ಯಕ್ಕೆ ಮಾರಕವಾಗುವ ಚಟಗಳಿಂದ ದೂರ ಉಳಿಯುವಿಕೆ, ಸಮಯೋಚಿತ ಪರೀಕ್ಷೆಗಳು, ಲಸಿಕೆ, ಮೊದಲಾದ ವಿಧಾನಗಳು ಗರ್ಭಕಂಠದ ಕ್ಯಾನ್ಸರ್‌ನಿಂದ ಆಗಬಹುದಾದ ಅನಾಹುತಗಳನ್ನು ತಡೆಯಬಲ್ಲವು. ಇದರ ಬಗ್ಗೆ ಪ್ರತಿಯೊಬ್ಬರೂ ಅರಿವನ್ನು ಮೂಡಿಸಿಕೊಂಡು ಕಾರ್ಯಪ್ರವೃತ್ತರಾಗುವುದು ಈ ನಿಟ್ಟಿನಲ್ಲಿ ಮಹತ್ತರ ಹೆಜ್ಜೆ.

ಅತಿಸೂಕ್ಷ್ಮ ಪ್ರವೃತ್ತಿಯೆ? ಹೆದರದಿರಿ

ಸುಷ್ಮ ಸಿಂಧು

ಸೂಕ್ಷ್ಮತೆ ಒಳ್ಳೆಯದು. ಅದು ಪ್ರಜ್ಞಾಪೂರ್ವಕವಾಗಿ ವರ್ತಿಸುತ್ತಾ ಜೀವನದಲ್ಲಿ ಎಚ್ಚರಿಕೆಯ ಹೆಜ್ಜೆಗಳನ್ನಿಡಲು ಸಹಕರಿಸುತ್ತದೆ. ಆದರೆ ಜರುಗಿದ್ದೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸುತ್ತಾ, ವಿಪರೀತಾರ್ಥಗಳನ್ನು ಕಲ್ಪಿಸಿಕೊಂಡು, ಅನವಶ್ಯಕವಾಗಿ ಮನನೋಯಿಸಿಕೊಂಡು, ತೀವ್ರವಾಗಿ ಪ್ರತಿಕ್ರಿಯಿಸುವ ಅತಿಸೂಕ್ಷ್ಮ ಪ್ರವೃತ್ತಿಯವರು ನಾವಾದರೆ, ಆಗ ನಮ್ಮ ಬದುಕು ಹೆಜ್ಜೆಹೆಜ್ಜೆಗೂ ನಲುಗುತ್ತದೆ. ಸೂಕ್ಷ್ಮವಾಗಿರುವುದು ಕೆಟ್ಟದಲ್ಲ. ಮಾತ್ರವಲ್ಲ, ಸೂಕ್ಷ್ಮ ಪ್ರವೃತ್ತಿಯನ್ನು ಪೂರ್ಣವಾಗಿ ಹೋಗಲಾಡಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ, ಎಲ್ಲದನ್ನೂ ನಕಾರಾತ್ಮಕವಾಗಿ ಗ್ರಹಿಸಿ ತೀವ್ರವಾಗಿ ಪ್ರತಿಕ್ರಿಯಿಸುವುದನ್ನು ನಮ್ಮ ಪ್ರಯತ್ನದಿಂದ ತಪ್ಪಿಸಬಹುದು. ಸೂಕ್ಷ್ಮತೆಯನ್ನು ಸಂಭಾಳಿಸಲು ಅರಿತುಕೊಂಡರೆ ಅದರಿಂದಾಗುವ ಮಾನಸಿಕ ತುಮುಲವನ್ನು ತಡೆಯಬಹುದು.

ಭಾವನೆಗಳ ತಾಕಲಾಟ: ಅತಿ ಸೂಕ್ಷ್ಮತೆ ಇರುವವರು ಭಾವನಾತ್ಮಕ ಹೊಯ್ದಾಟಗಳಲ್ಲಿ ಇರುತ್ತಾರೆ. ಭಾವನೆಗೆ ತಕ್ಕಂತೆ ಕುಣಿಯುವ ಈ ಮಾನಸಿಕತೆಯಿರುವವರಿಗೆ ದುಃಖವಾದರೆ ತೀವ್ರವಾದ ದುಃಖ, ಖುಷಿಯಾದರೆ ವಿಪರೀತವೆನಿಸುವ ಉತ್ಸಾಹ. ಅನಿಯಂತ್ರಿತವಾದ ಭಾವ ವ್ಯತ್ಯಯಗಳು ಮಾನಸಿಕ ಕಿರಿಕಿರಿಗೆ ಕಾರಣವಾಗುತ್ತವೆ. ಭಾವನಾತ್ಮಕ ವೈಪರೀತ್ಯಗಳು ಸಮಾಧಾನದ ಮತ್ತು ಆರಾಮದಾಯಕ ಜೀವನವನ್ನು ನಡೆಸಲು ಅಡ್ಡಿಯಾಗುತ್ತವೆ. ಇವು ತೀವ್ರ ಭಾವನೆಗಳ ಜೈಲಿನಲ್ಲಿ ಅಂಥವರನ್ನು ಬಂಧಿಯಾಗಿಯೇ ಉಳಿಸಿಬಿಡುತ್ತದೆ. ಅದರಲ್ಲೂ ಸಾಮಾಜಿಕ ಟೀಕೆ, ಸಂಘರ್ಷಗಳು, ಸಂಬಂಧಗಳಲ್ಲಿ ತಿರಸ್ಕಾರಗಳು ಇಂಥವನ್ನು ಎದುರಿಸಬೇಕಾಗಿ ಬಂದಾಗ ಅವರು ದುಃಖಿತರಾಗಿ ನಕಾರಾತ್ಮಕ ಆಲೋಚನೆಗಳ ಸುಳಿಗೆ ಸಿಲುಕುತ್ತಾರೆ.

ಸಮಸ್ಯೆಯಾಗುವ ಸಂವಹನ: ಬೇರೆಯವರ ಅಭಿಪ್ರಾಯಗಳನ್ನು ಸ್ವೀಕರಿಸುವ ವಿಧಾನದಲ್ಲಿಯೂ ಅತಿ ಸೂಕ್ಷ್ಮ ಪ್ರವೃತ್ತಿ ಪ್ರಭಾವ ಮೂಡಿಸುತ್ತದೆ. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ, ಅದನ್ನು ಹಾಗೆ ತೆಗೆದುಕೊಳ್ಳದೆ ತನಗೆ ಬೇಕಾದಂತೆ ತಿಳಿದುಕೊಳ್ಳುತ್ತಾರೆ. ಆಗ ಸಂವಹನ ಹದಗೆಟ್ಟು ಸಂಬಂಧ ಮುರುಟುತ್ತದೆ. ಕ್ಷುಲ್ಲಕ ವಿಚಾರವನ್ನೂ ವೈಯಕ್ತಿಕ ಪ್ರಹಾರವೆಂದು ಭಾವಿಸುವುದು, ಸಣ್ಣ ಭಿನ್ನಾಭಿಪ್ರಾಯವೂ ಸಂಬಂಧದಲ್ಲಿ ಬಿರುಕು ಮೂಡಿಸುತ್ತಿದೆಯೆಂದು ಹೆದರುವುದು ಇಂಥ ಮಾನಸಿಕತೆಗೆ ಒಳಗಾಗುತ್ತಾರೆ. ಟೀಕೆಗಳು ತನ್ನ ಅಸಮರ್ಥತೆಯಿಂದಲೇ ಬರುತ್ತಿವೆ. ಎಲ್ಲರೂ ತನ್ನ ಬಲಹೀನತೆಯ ಬಗ್ಗೆ ಬೊಟ್ಟು ಮಾಡುತ್ತಿದ್ದಾರೆ ಎಂದು ಅತಿಯಾಗಿ ಆಲೋಚಿಸುತ್ತ, ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುತ್ತಾರೆ. ಹೀಗಾಗಿ ಸಂಬಂಧಗಳ ಮೇಲೂ ಇದು ನಕಾರಾತ್ಮಕ ಪರಿಣಾಮವನ್ನು ಬೀರುತ್ತದೆ.

ಇಷ್ಟು ಸೂಕ್ಷ್ಮವೇಕೆ?: ಸುತ್ತಲಿನ ಸಮಸ್ಯೆಗಳು, ಗದ್ದಲ, ಅಡಚಣೆಗಳು, ಕೆಲವೊಮ್ಮೆ ಶಬ್ದಗಳಿಗೂ ತುಂಬಾ ವಿಚಲಿತರನ್ನಾಗಿಸಿ ಬೇಗನೇ ಹೈರಾಣಾಗಿಸಿಬಿಡುವ ಅತಿಸೂಕ್ಷ್ಮ ಸ್ವಭಾವ ಒಬ್ಬೊಬ್ಬರಲ್ಲಿ ಒಂದೊಂದು ರೀತಿ ವ್ಯಕ್ತವಾಗುವುದರ ಜೊತೆಗೆ ಅದಕ್ಕಿರುವ ಕಾರಣಗಳೂ ಬೇರೆಬೇರೆಯೇ ಆಗಿರಬಲ್ಲದು. ಆಘಾತ, ವೇದನೆ ಉಂಟುಮಾಡುವ ಅನುಭವಗಳು, ಒತ್ತಡದ ಪರಿಸ್ಥಿತಿಗಳಿಗೆ ನಿರಂತರ ಒಳಗಾಗುತ್ತಿದ್ದರೆ ಅದು ಮನಸ್ಸನ್ನು ಜರ್ಜರಿತಗೊಳಿಸಿ, ಆಯಾಸಗೊಳಿಸುತ್ತದೆ. ಬಾಲ್ಯದಲ್ಲಾದ ದೈಹಿಕ-ಮಾನಸಿಕ ಶೋಷಣೆಗಳು, ಆಟಿಸಂ, ಎಡಿಎಚ್‌ಡಿ ಮೊದಲಾದ ಸಮಸ್ಯೆಗಳೂ ಸೂಕ್ಷ್ಮ ಪ್ರವೃತ್ತಿಗೆ ಕಾರಣವಾಗಿರಬಲ್ಲವು. ಸೂಕ್ಷ್ಮತೆಗೆ ಆನುವಂಶಿಕ, ಜೈವಿಕ ಕಾರಣಗಳೂ ಇವೆ. ಹಾಗಾಗಿ ಕೆಲವರು ಹುಟ್ಟಿನಿಂದಲೇ ಸೂಕ್ಷ್ಮಪ್ರವೃತ್ತಿ ಹೊಂದಿರುತ್ತಾರೆ.

ಸೂಕ್ಷ್ಮತೆ ಶಕ್ತಿಯಾಗಬಲ್ಲದು : ಸೂಕ್ಷ್ಮತೆ ಇರುವವರಿಗೆ ಸ್ವ-ಪ್ರಜ್ಞೆ ಹೆಚ್ಚು. ಹಾಗಾಗಿ ಇದು ವ್ಯಕ್ತಿತ್ವದ ದೋಷಗಳನ್ನು ಅರಿತು ಸರಿಪಡಿಸಿಕೊಳ್ಳುವಲ್ಲಿ ಸಹಕಾರಿ. ಆತ್ಮವಿಮರ್ಶೆ ಉತ್ತಮವಾದ ಮೌಲ್ಯಪ್ರಧಾನ ಜೀವನವನ್ನು ಕಟ್ಟಿಕೊಳ್ಳುವಲ್ಲಿ ನೆರವಾಗಬಲ್ಲದು. ಸೂಕ್ಷ್ಮತೆ ಇದ್ದಷ್ಟೂ ಸೃಜನಶೀಲತೆಯೂ ಹೆಚ್ಚಿರುತ್ತದೆಯಂತೆ. ಆದ್ದರಿಂದ ಕ್ರಿಯಾತ್ಮಕ ಕೆಲಸಗಳಲ್ಲಿ ಈ ಪ್ರವೃತ್ತಿಯನ್ನು ಬಳಸಿಕೊಂಡರೆ ನಮ್ಮ ಶಕ್ತಿಯನ್ನು ಸಕಾರಾತ್ಮಕವಾಗಿ ಉಪಯೋಗಿಸಿಕೊಳ್ಳಬಹುದು. ಪುಟ್ಟ ಗೆಲುವಿಗೆ ಕಾರಣವಾಗುವ ಜೀವನದ ಔದಾರ್ಯಕ್ಕೆ ಕೃತಜ್ಞರಾಗಿರುವ, ಚಿಕ್ಕ ಸಂತಸಗಳನ್ನೂ ಪೂರ್ತಿಯಾಗಿ ಅನುಭವಿಸುವ ಮನಸ್ಸು ಇವರಿಗಿರುತ್ತದೆ. ಆಳವಾದ ಸಂಬಂಧಗಳನ್ನು ಹೊಂದುವ, ತನ್ನವರ ಮನಸ್ಸಿನ ತಾಕಲಾಟಗಳನ್ನು ಅರಿಯುವ, ಇತರರ ಕಷ್ಟಗಳಿಗೆ ಮರುಗುವ ಅವರು ಪುಟ್ಟ ಪ್ರಶಂಸೆಯಿಂದಲೇ ಪ್ರೇರೇಪಿತರಾಗುತ್ತಾರೆ. ಕಲೆಯಲ್ಲಿ ತಲ್ಲೀನರಾಗಬಲ್ಲ ಗುಣ ನಾವು ಸೂಕ್ಷ್ಮವಿದ್ದಾಗಲಷ್ಟೇ ಸಾಧ್ಯ. ಒಟ್ಟಿನಲ್ಲಿ ಸೂಕ್ಷ್ಮತೆಯನ್ನು ಚೆಂದವಾಗಿ ನಿರ್ವಹಿಸಬಲ್ಲವರಾದರೆ ಆಗ, ಅದೇ ನಮಗೆ ಚೈತನ್ಯವೂ ಆಗಬಲ್ಲದು. ಶಕ್ತಿಯೂ ಆಗಬಲ್ಲದು.

(ಲೇಖಕಿ: ಮನಃಶಾಸ್ತ್ರಜ್ಞೆ)

ನಿರ್ವಹಣೆ ಹೇಗೆ?

ಸುಮ್ಮನಿರಲು ಕಲಿಯಿರಿ: ಎಲ್ಲಾ ಟೀಕೆ ಟಿಪ್ಪಣಿಗಳಿಗೂ ಪ್ರತಿಕ್ರಿಯಿಸುವ ಅಗತ್ಯವಿರುವುದಿಲ್ಲ. ಉತ್ತರಿಸಿದಷ್ಟೂ ಆತಂಕ. ಆತಂಕಿಸಿದಷ್ಟೂ ನಮಗೇ ನಷ್ಟ! ಎಷ್ಟೋ ಬಾರಿ ನಾವು ಪ್ರತ್ಯುತ್ತರ ನೀಡದಿದ್ದಲ್ಲಿ ಚಿಕ್ಕ ವಿಷಯಗಳು ದೊಡ್ಡದಾಗದೇ ಹಾಗೇ ಹಿಂದೆ ಸರಿದು ಬಿಡುತ್ತವೆ.

ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಿ: ನಿಮ್ಮ ಭಾವನೆ ಹೇಗೆ ಸಂದರ್ಭಕ್ಕನುಗುಣವಾಗಿ ಏರುಪೇರಾಗುತ್ತಿದೆ ಹೊರಗೆ ನಿಂತು ಗಮನಿಸಿ. ಅದರೊಟ್ಟಿಗೆ ಮನಸ್ಸನ್ನು ಹರಿಯಬಿಡದೇ ಅಂತರ ಕಾಯ್ದುಕೊಳ್ಳಲೆತ್ನಿಸಿ.

ಆತ್ಮವಿಶ್ವಾಸಕ್ಕೆ ಆದ್ಯತೆ ನೀಡಿ: ಎಲ್ಲರಂತೆ ನಮ್ಮಲ್ಲೂ ಸಹಜವಾಗಿ ಕುಂದುಕೊರತೆಗಳು ಇರುವವು. ಗಮನವಿಟ್ಟರೆ ಎದ್ದು ಕಾಣುವವು. ನಮ್ಮ ವ್ಯಕ್ತಿತ್ವವನ್ನು ಸುಂದರಗೊಳಿಸುವ ಆತ್ಮವಿಶ್ವಾಸವ ವೃದ್ಧಿಗೊಳಿಸಿಕೊಳ್ಳುವತ್ತ ಚಿತ್ತವಿರಲಿ.

ಸ್ವ-ಸ್ವೀಕಾರವಿರಲಿ: ಹೇಗಿದ್ದೀರೋ ಹಾಗೆ ಸ್ವೀಕರಿಸಿಕೊಳ್ಳಲು ಕಲಿಯಿರಿ. ಬೇರೆಯವರ ಸ್ವೀಕೃತಿಗೆ ಕಾದು ಕೂರದೇ ಎಲ್ಲಾ ಹುಳುಕು, ಹೊಳಪುಗಳೊಡನೆ ಸ್ವ-ಸ್ವೀಕೃತಿಯನ್ನು ಆನಂದಿಸಿರಿ.

ನಿಮ್ಮ ಸುತ್ತಲೇ ಯೋಚಿಸದಿರಿ: ಎಲ್ಲವೂ ನಿಮ್ಮ ಬಗ್ಗೆಯೇ ಇರುವುದಿಲ್ಲ. ತಮ್ಮದೇ ನ್ಯೂನತೆಗಳಿಂದಲೂ ಜನರು ತುಚ್ಛವಾಗಿ ನಡೆದುಕೊಳ್ಳುತ್ತಾರೆ ಎಂಬುದನ್ನು ಮರೆಯದಿರಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

26). ಅನಿರುದ್ಧನು ಕೆಲವು ಪುಸ್ತಕಗಳನ್ನು ರೂ.60ಗೆ ಕೊಂಡನು. ಅಷ್ಟೇ ಹಣಕ್ಕೆ ಅವನು ಇನ್ನೂ 5 ಪುಸ್ತಕಗಳನ್ನು ಕೊಂಡಿದ್ದರೆ, ಪ್ರತಿ ಪುಸ್ತಕದ ಬೆಲೆ 1 ರೂಪಾಯಿ ಕಡಿಮೆಯಾಗುತ್ತಿತ್ತು. ಅನಿರುದ್ಧನು ಕೊಂಡುಕೊಂಡ ಪುಸ್ತಕಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

ಉತ್ತರ: ಪುಸ್ತಕಗಳ ಸಂಖ್ಯೆ x ಆಗಿರಲಿ.

ಪುಸ್ತಕಗಳ ಒಟ್ಟು ಬೆಲೆ = ರೂ. 60

ಪ್ರತಿ ಪುಸ್ತಕದ ಬೆಲೆ =

$$= Rs.\ \frac{60}{x}$$

ಐದು ಪುಸ್ತಕಗಳನ್ನು ಹೆಚ್ಚಾಗಿ ಕೊಂಡಾಗ, ಪುಸ್ತಕಗಳ ಸಂಖ್ಯೆ= $(x + 5)$

ಪ್ರತಿ ಪುಸ್ತಕದ ಬೆಲೆ $= Rs\ \frac{60}{x+5}$ ಆದರೆ,

$$\frac{60}{x} - \frac{60}{x+5} = 1$$

$$\frac{60(x+5) - 60x}{x(x+5)} = 1$$

$$\frac{60x + 300 - 60x}{x^2 + 5x} = 1$$

$$x^2 + 5x = 300$$

$$x^2 + 5x - 300 = 0$$

$$x^2 + 20 - 15x - 300 = 0$$

$$x(x + 20) - 15(x + 20) = 0$$

x = -20 ಅಥವಾ 15

X = -20 ಬೆಲೆಯನ್ನು ಕೈಬಿಡುವುದರಿಂದ

$\therefore x = 15$

$\Rightarrow$ ಪುಸ್ತಕಗಳ ಸಂಖ್ಯೆ = 15.

27) ಒಂದು ಘನಸಿಲಿಂಡರಿನ ಪೂರ್ಣ ಮೇಲ್ಮೈ ವಿಸ್ತೀರ್ಣ 462 ಚ.ಸೆಂ.ಮೀ. ಹಾಗೂ ಅದರ ವಕ್ರಮೇಲ್ಮೈ ವಿಸ್ತೀರ್ಣವು ಪೂರ್ಣ ವಿಸ್ತೀರ್ಣದ $\frac{1}{3}$ ರಷ್ಟಿದೆ. ಸಿಲಿಂಡರಿನ ತ್ರಿಜ್ಯದ ಅಳತೆಯನ್ನು ಕಂಡುಹಿಡಿಯಿರಿ.

ಅಥವಾ

12 ಸೆಂ.ಮೀ. ಪಾದ ತ್ರಿಜ್ಯ ಹಾಗೂ 20 ಸೆಂ.ಮೀ. ಎತ್ತರವಿರುವ ಶಂಕುವನ್ನು ಮೇಲ್ಭಾಗದಿಂದ ಪಾದ ತ್ರಿಜ್ಯ 3 ಸೆಂ.ಮೀ. ಇರುವಂತೆ ಒಂದು ಸಣ್ಣ ಶಂಕುವನ್ನು ಕತ್ತರಿಸಲಾಗಿದೆ. ಹೀಗೆ ಕತ್ತರಿಸಿದಾಗ ಶೃಂಗ ಬಿಂದು ಎಷ್ಟು ಕೆಳಗಡೆ ಇಳಿಯಬಹುದು? ಈ ರೀತಿ ಮಾಡಿದ ಭಿನ್ನಕದ ಘನಫಲವನ್ನು ಕಂಡುಹಿಡಿಯಿರಿ.

ಉತ್ತರ: ಸಿಲಿಂಡರ್‌ನ ವಕ್ರಮೇಲ್ಮೈ ವಿಸ್ತೀರ್ಣ = 1/3 ಸಿಲಿಂಡರ್‌ನ ಪೂರ್ಣ ಮೇಲ್ಮೈ ವಿಸ್ತೀರ್ಣ

$$2\pi rh = \frac{1}{3} \times 2\pi r(h + r) = \frac{1}{\cancel{3}} \times \cancel{462}^{154}\ cm^2$$

$$\therefore 2\pi rh = 154\ cm^2$$

ಸಿಲಿಂಡರ್‌ನ ಪೂರ್ಣ ಮೇಲ್ಮೈ ವಿಸ್ತೀರ್ಣ = $2\pi r(h+r)$

$$462\ cm^2 = 2\pi rh + 2\pi r^2 = 154\ cm^2 + 2\pi r^2$$

$$462\ cm^2 - 154\ cm^2 = 2\pi r^2 \Rightarrow 308\ cm^2 = 2 \times \frac{22}{7} \times r^2$$

$$\Rightarrow \frac{\cancel{308}^{\cancel{14}^{7}} \times 7}{\cancel{2} \times \cancel{22}} = r^2 \ ;\ r^2 = 49 \Rightarrow \therefore r = 7\ cm$$

ಅಥವಾ

$r_1 = 12$ cm, $h_1 = 20$ cm, $r_2 = 3$ cm, $h_2 = ?$

$$\frac{r_1}{r_2} = \frac{h_1}{h_2} \quad \therefore \frac{12}{3} = \frac{20}{h_2}$$

$$\therefore h_2 = \frac{3 \times 20}{12} = 5\ cm$$



ಭಿನ್ನಕದ ಘನಫಲ

$$= \frac{1}{3}\pi h(r_1^2 + r_2^2 + r_1 r_2)$$

$$= \frac{1}{3} \times \frac{22}{7} \times 15(12^2 + 3^2 + 12 \times 3)$$

$$= \frac{110}{7} \times (144 + 9 + 36)$$

$$= \frac{110}{7} \times 189 = 2,970$$

$\therefore$ ಭಿನ್ನಕದ ಘನಫಲ = 2,970 cu.cm.

28) ಚಿತ್ರದಲ್ಲಿ ಒಂದು ವೃತ್ತದ AB ಮತ್ತು CD ಜ್ಯಾಗಳು ವೃತ್ತದ ಹೊರಭಾಗದ P ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ (ವೃದ್ಧಿಸಿದಾಗ) ಆದರೆ (i) $\Delta PAC \sim \Delta PDB$

(ii) PA . PB = PC . PD. ಎಂದು ಸಾಧಿಸಿ



ಉತ್ತರ:-

(i) ΔPAC ಮತ್ತು ΔPDB ದಲ್ಲಿ

$\angle P = \angle P$ (ಸಾಮಾನ್ಯ ಕೋನಗಳು)

$\angle PAC = \angle PDB$

$\Delta PAC \sim \Delta PDB$ (ಕೋ ಕೋ ಸಿದ್ಧಾಂತ)

(ಮುಂದುವರಿಯುವುದು.......)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

1). Which of the following vitamins is not stored in the adipose tissue?

a. D b. E

c. A d. B_6

Answer: (d)

Expln:- Adipose tissue stores those vitamins which are fat-soluble. Among the given vitamins, only A, D and E are fat-soluble. Vitamin B_6 is water-soluble and hence, is not stored in adipose tissue.

2) Hypothyroidism is caused by the deficiency of:

a. Thyroxine b. Glucocorticoid

c. Vitamin B-12 d. Adrenalin

Answer: (a)

Expln:- Hypothyroidism is caused by the deficiency of the hormone thyroxine which is produced by the thyroid gland.

3) Which of the following is NOT a characteristic of a covalent compound?

a) Low melting point b) No definite geometry

c) Insoluble in polar solvent

d) Small difference in electronegativity between the combining atoms

Ans:- (a)

4) On heating with concentrated NaOH solution in an inert atmosphere of CO_2, white phosphorous gives a gas. Which of the following statements is incorrect about the gas?

a) It is more basic than NH_3.

b) Its solution in water decomposes in the presence of lights

c) It is less basic than NH_3.

d) It is highly poisonous and has smell like rotten fish.

Ans: (a)

5) Conductivity of a saturated solution of a sparingly salt AB at 298 K is 1.85×10^{-5} S m^{-1}. Solubility product of the salt AB at 298 K is

Given: $\Lambda^o_m (AB) = 140 \times 10^{-4}\ S\ m^2\ mol^{-1}$

a) 5.7×10^{-12} b) 1.32×10^{-12}

c) 7.5×10^{-12} d) 1.74×10^{-12}

Ans:- (d)

Expln:-using the relationship between solubility of sparingly soluble salt and Λ^o_m,

$$K = 1.85 \times 10^{-5}\ S\ m^{-1} = 1.85 \times 10^{-7}\ S\ cm^{-1}$$

$$\Lambda^0_m = 140 \times 10^{-4}\ S\ m^2\ mol^{-1} = 140\ S\ cm^2\ mol^{-1}$$

$$s = \frac{k \times 1000}{\Lambda^0_m} = \frac{1.85 \times 10^{-7} \times 1000}{140}$$

$$= 1.32 \times 10^{-6}$$

$$K_{sp} = (s)^2 \qquad [\text{For AB type of salt}]$$

$$= (1.32 \times 10^{-6})^2 = 1.74 \times 10^{-12}$$

6) The last element of the p-block in the 6th period is represented by the outermost electronic configuration:

a) $4f^{14}\ 5d^{10}6s^2 6p^4$ b) $4f^{14}\ 5d^{10}6s^2\ 6p^6$

c) $7s^2\ 7p^6$ d) $4f^{14}\ 6d^{10}7s^2\ 7p^6$

Answer: (b)

Expln:- The last element of the p-block in 6th period is Radon (Rn)

The electronic configuration of Rn is

$[Xe]4f^{14}\ 5d^{10}6s^2\ 6p^6$

7) Which one of the following is an example for homogeneous catalysis?

a) Manufacture of ammonia by Haber's process

b) Manufacture of sulphuric acid by contact process

c) Hydrogenation of oil

d) Hydrolysis of sucrose in the presence of dil. HCl

Ans:- d

8) H_2O_2 cannot oxidize.............

(a) Na_2SO_3 (b) KI

(c) PbS (d) O_3

Ans: - d

Expln:- O_3 is a stronger oxidizing agent than H_2O_2.

9) The set of quantum numbers for the outermost electron for copper in its ground state is ....

a) 3, 2 , 2 , + ½ **b) 4, 1, 1, + ½**

c) 4 , 2 , 2 , + ½ **d) 4 , 0 , 0 , + ½**

Ans:- d

10) For the reversible reaction $A_{(g)} + B_{(g)} \rightleftharpoons C_{(g)} + D_{(g)};\ \Delta G^0 = -350\,kJ$

Which of the following statements is true?

a) Equilibrium constant is greater than 1

b) The entropy change is negative

c) The reaction is thermodynamically not feasible

d) The reaction should be instantaneous

Ans:- a

11) Copper is extracted from copper pyrites by heating in a Bessemer converter. The method is based on the principle that

a) Iron has less affinity for oxygen than sulphur at high temperature.

b) Sulphur has less affinity for oxygen at high temperature.

c) Copper has more affinity for oxygen than sulphur at high temperature.

d) Copper has less affinity for oxygen than sulphur at high temperature.

Ans: (C) Copper has more affinity for oxygen than sulphur at high temperature.

1998ರ ತೀರ್ಪನ್ನು ಅಸಿಂಧುಗೊಳಿಸಿದ ಕ್ರಮದ ಬಗ್ಗೆ ಸಂವಿಧಾನ ಪೀಠದ ವಿವರಣೆ

‘ಎದ್ದು ಕಾಣುವ ತಪ್ಪು ಸರಿಪಡಿಸಲಾಗಿದೆ’

ಪ್ರಜಾವಾಣಿ ವಾರ್ತೆ

ನವದೆಹಲಿ: 1998ರಲ್ಲಿ ಜೆಎಂಎಂ ಲಂಚ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ನೀಡಿದ್ದ ತೀರ್ಪನ್ನು ಅಸಿಂಧುಗೊಳಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಪೀಠವು ‘ಕಣ್ಣಿಗೆ ಕಾಣುವ ತಪ್ಪೊಂದನ್ನು ಸರಿಪಡಿಸದೆ ಇದ್ದಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಹಾಗೂ ಸಮಾಜದ ಸುವ್ಯವಸ್ಥೆಗೆ ಕೆಡುಕು ಉಂಟಾಗುತ್ತದೆ’ ಎಂದು ಹೇಳಿದೆ.

ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿರುವ ತೀರ್ಪುಗಳು ಬಹುಕಾಲದಿಂದ ಚಾಲ್ತಿಯಲ್ಲಿ ಇದ್ದರೂ ಅವುಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಬಹುದು ಎಂದು ಏಳು ನ್ಯಾಯಮೂರ್ತಿಗಳ ಪೀಠವು ಹೇಳಿದೆ.

1998ರ ಪ್ರಕರಣದ ತೀರ್ಪನ್ನು ಪುನರ್ ಪರಿಶೀಲನೆಗೆ ಒಳಪಡಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, ಸಮಾಜದಲ್ಲಿನ ವ್ಯವಸ್ಥೆಯ ಮೇಲೆ ಅದರಿಂದ ಆಗುವ ಪರಿಣಾಮದ ಬಗ್ಗೆ ಅವಲೋಕಿಸಿದೆ. ಅಲ್ಲದೆ, ಸಾರ್ವಜನಿಕ ಜೀವನದಲ್ಲಿ ಸಚ್ಚಾರಿತ್ರ್ಯವನ್ನು ಕಾಪಾಡುವ ಅಗತ್ಯದ ಬಗ್ಗೆಯೂ ಗಮನ ಹರಿಸಿದೆ.

ಒಂದು ತೀರ್ಪು ಎಷ್ಟು ವರ್ಷಗಳಿಂದ ಚಾಲ್ತಿಯಲ್ಲಿ ಇದೆ ಎಂಬುದು ಮುಖ್ಯವಲ್ಲ ಎಂದು ಪೀಠವು ಹೇಳಿದೆ. ‘ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದ ಕೆಲವು ತೀರ್ಪುಗಳು ಬಹುಕಾಲದಿಂದ ಚಾಲ್ತಿಯಲ್ಲಿ ಇದ್ದಿದ್ದರೂ, ಅಂತಹ ತೀರ್ಪುಗಳು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಇರಲಿಲ್ಲ ಎಂದಾದರೆ ಅವುಗಳನ್ನು ಅಸಿಂಧುಗೊಳಿಸುವ ಕೆಲಸವನ್ನು ಈ ನ್ಯಾಯಾಲಯ ಮಾಡಿದೆ’ ಎಂದು ಪೀಠವು ಸ್ಪಷ್ಟಪಡಿಸಿದೆ.

ಸಾರ್ವಜನಿಕರ ಒಳಿತಿಗೆ ಕೆಟ್ಟದನ್ನು ಮಾಡುವ ರೀತಿಯಲ್ಲಿ ಒಂದು ತಪ್ಪು ಉಳಿದುಕೊಳ್ಳಲು ಬಿಡಲಾಗದು ಎಂದು ಕೋರ್ಟ್ ಹೇಳಿದೆ.

‘ತಪ್ಪು ಇದೆ ಎಂಬ ಅಭಿಪ್ರಾಯ ಕೋರ್ಟ್‌ಗೆ ಮೂಡಿದಲ್ಲಿ ತಾನೇ ಹಿಂದೆ ನೀಡಿದ್ದ ತೀರ್ಪುಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಲು ಈ ಕೋರ್ಟ್‌ಗೆ ಅವಕಾಶ ಇದೆ. ಅಥವಾ, ತೀರ್ಪಿನ ಪರಿಣಾಮವು ಸಾರ್ವಜನಿಕರ ಹಿತಾಸಕ್ತಿಗೆ ಧಕ್ಕೆ ತರುವಂಥದ್ದಾಗಿದ್ದರೆ ಅಂತಹ ತೀರ್ಪನ್ನು ಮರುಪರಿಶೀಲಿಸಬಹುದು. ಸಂವಿಧಾನದ ತಾತ್ವಿಕತೆಗೆ ವಿರುದ್ಧವಾಗಿ ಇರುವ ತೀರ್ಪುಗಳನ್ನು ಕೂಡ ಮರುಪರಿಶೀಲಿಸಬಹುದು’ ಎಂದು ನ್ಯಾಯಪೀಠವು ಹೇಳಿದೆ.

ತೀರ್ಪುಗಳ ಮರುಪರಿಶೀಲನೆಯ ಕೆಲಸವನ್ನು ಸಂವಿಧಾನದ ವ್ಯಾಖ್ಯಾನಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಈ ನ್ಯಾಯಾಲಯವು ಸ್ವಇಚ್ಛೆಯಿಂದ ಮಾಡುತ್ತದೆ. ಏಕೆಂದರೆ ಎದ್ದು ಕಾಣುವಂತಹ ತಪ್ಪನ್ನು ಸರಿಪಡಿಸದೆ ಇದ್ದರೆ ಅದರಿಂದ ಸಾರ್ವಜನಿಕ ಹಿತಕ್ಕೆ ಧಕ್ಕೆ ಆಗುತ್ತದೆ’ ಎಂದು ಪೀಠವು ವಿವರಿಸಿದೆ.

ಶಾಸನಸಭೆಗಳ ವಿಚಾರವಾಗಿ ಸಂವಿಧಾನದಲ್ಲಿ ವಿವರಿಸಿರುವ ಅಧಿಕಾರ, ಹಕ್ಕು ಮತ್ತು ರಕ್ಷಣೆಗಳನ್ನು ಕಡಿಮೆ ಮಾಡುವ ಕೆಲಸವನ್ನು ಈ ತೀರ್ಪು ಮಾಡುವುದಿಲ್ಲ. ಆದರೆ, ಈ ತೀರ್ಪು ಸಂವಿಧಾನದ 105 ಹಾಗೂ 194ನೇ ವಿಧಿಗಳ ಸರಿಯಾದ ವ್ಯಾಖ್ಯಾನಕ್ಕೆ ಸಂಬಂಧಿಸಿದೆ ಎಂದು ಸ್ಪಷ್ಟಪಡಿಸಿದೆ.

ಸ್ವಾಗತಂ! ಸುಪ್ರೀಂ ಕೋರ್ಟ್ ನೀಡಿರುವ ದೊಡ್ಡ ತೀರ್ಪು ಇದು. ವ್ಯವಸ್ಥೆಯಲ್ಲಿ ಜನರಿಗಿರುವ ನಂಬಿಕೆಯನ್ನು ಇನ್ನಷ್ಟು ಬಲಪಡಿಸುತ್ತದೆ

ನರೇಂದ್ರ ಮೋದಿ, ಪ್ರಧಾನಿ

ಇದು ಅಪೇಕ್ಷಣೀಯವಾದ, ಸ್ವಾಗತಾರ್ಹವಾದ ತೀರ್ಪು. ಇದು ಕಾನೂನನ್ನು ಸರಿಪಡಿಸುವ ಕೆಲಸ ಮಾಡಿದೆ. ಈ ಕೆಲಸವು ಮೊದಲೇ ಆಗಬೇಕಿತ್ತು

ಅಭಿಷೇಕ್ ಸಿಂಘ್ವಿ, ಕಾಂಗ್ರೆಸ್ ವಕ್ತಾರ

ಎರಡು ವಿಧಿಗಳ ಬಗ್ಗೆ ಪರಿಶೀಲನೆ

ಒಂದನೇ ಪುಟದಿಂದ

ಶಾಸನ ಸಭೆಗಳಲ್ಲಿ ಚರ್ಚೆಗಳು, ಪರ್ಯಾಲೋಚನೆಗಳು ನಡೆಯುವ ವಾತಾವರಣ ಇರಲಿ ಎಂಬ ಉದ್ದೇಶವನ್ನು ಈ ಎರಡು ವಿಧಿಗಳು (105 ಹಾಗೂ 194) ಹೊಂದಿವೆ. ಆದರೆ, ಲಂಚದ ಮೂಲಕ ಸದಸ್ಯರೊಬ್ಬರು ನಿರ್ದಿಷ್ಟ ರೀತಿಯಲ್ಲಿ ಮತ ಚಲಾಯಿಸುವಂತೆ ಮಾಡಿದಾಗ ಅಥವಾ ನಿರ್ದಿಷ್ಟ ರೀತಿಯಲ್ಲಿ ಮಾತನಾಡುವಂತೆ ಮಾಡಿದಾಗ ಈ ಉದ್ದೇಶಕ್ಕೆ ಧಕ್ಕೆ ಬರುತ್ತದೆ ಎಂದು ಪೀಠವು ವಿವರಿಸಿದೆ.

‘ಮತ ಚಲಾಯಿಸಲು ಅಥವಾ ಮತವನ್ನು ಹೇಗೆ ಚಲಾಯಿಸಬೇಕು ಎಂಬುದನ್ನು ತೀರ್ಮಾನಿಸಲು ಲಂಚ ಪಡೆಯುವ ಅಗತ್ಯ ಅಲ್ಲ. ಹೀಗಾಗಿ, ಮತ ಚಲಾಯಿಸಲು ಲಂಚ ಪಡೆಯುವ ಸದಸ್ಯನು ಅಪರಾಧ ಎಸಗಿದಂತಾಗುತ್ತದೆ. ಇದೇ ಮಾತು, ಸದನದಲ್ಲಿ ಅಥವಾ ಸದನದ ಸಮಿತಿ ಸಭೆಯಲ್ಲಿ ಮಾತನಾಡಲು ಲಂಚ ಪಡೆದಿದ್ದಕ್ಕೂ ಅನ್ವಯವಾಗುತ್ತದೆ’ ಎಂದು ಪೀಠವು ಹೇಳಿದೆ.

ಸಂಸತ್ತಿನಲ್ಲಿ ಹಾಗೂ ವಿಧಾನ ಮಂಡಲಗಳಲ್ಲಿ ಚರ್ಚೆಗಳು, ಆಲೋಚನೆಗಳ ವಿನಿಮಯವು ನಿರ್ಭೀತಿಯಿಂದ ನಡೆಯುವ ವಾತಾವರಣ ಸೃಷ್ಟಿಸುವುದು ಈ ಎರಡು ವಿಧಿಗಳ ಉದ್ದೇಶ ಎಂದು ಕೋರ್ಟ್ ವಿವರಿಸಿದೆ. ‘ಶಾಸನಸಭೆಗಳ ಸದಸ್ಯರು, ಸಮಿತಿಗಳ ಸದಸ್ಯರು ಮುಕ್ತವಾಗಿ ಕಾರ್ಯನಿರ್ವಹಣೆ ಮಾಡುವಂತೆ ಆಗಬೇಕು, ಸದನದ ಕಲಾಪಗಳನ್ನು ಇನ್ನಷ್ಟು ಶ್ರೀಮಂತಗೊಳಿಸಬೇಕು. ಆದರೆ, ಲಂಚ ಪಡೆದು ಮತ ಚಲಾಯಿಸಿದಾಗ ಈ ಉದ್ದೇಶ ಈಡೇರುವುದಿಲ್ಲ’ ಎಂದು ಕೋರ್ಟ್ ವಿವರಿಸಿದೆ.

ಶಾಸನ ಸಭೆಯ ಸದಸ್ಯ ಲಂಚ ಪಡೆದ ನಂತರದಲ್ಲಿ ಆ ಲಂಚ ಪಡೆಯುವಾಗ ಒಪ್ಪಿಕೊಂಡಿದ್ದಕ್ಕೆ ಅನುಗುಣವಾಗಿ ಮತ ಚಲಾಯಿಸಿದ್ದನೇ ಇಲ್ಲವೇ ಎಂಬುದು ಅಪ್ರಸ್ತುತ. ಲಂಚ ಪಡೆದಾಕ್ಷಣಕ್ಕೆ ಅಪರಾಧ ಘಟಿಸಿರುತ್ತದೆ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಉದಯನಿಧಿಗೆ ‘ಸುಪ್ರೀಂ’ ಛೀಮಾರಿ

ನವದೆಹಲಿ (ಪಿಟಿಐ): ‘ಸನಾತನ ಧರ್ಮದ ನಿರ್ಮೂಲನೆ’ ಆಗಬೇಕು ಎಂಬ ಹೇಳಿಕೆ ನೀಡಿದ್ದ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ಛೀಮಾರಿ ಹಾಕಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಂಡ ನಂತರದಲ್ಲಿ, ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳನ್ನು ಒಗ್ಗೂಡಿಸಿ ವಿಚಾರಣೆ ನಡೆಸಬೇಕು ಎಂಬ ಮನವಿಯೊಂದಿಗೆ ಕೋರ್ಟ್ ಮೆಟ್ಟಿಲೇರಿರುವುದು ಏಕೆ ಎಂದು ಉದಯನಿಧಿ ಅವರನ್ನು ಪ್ರಶ್ನಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇದ್ದ ವಿಭಾಗೀಯ ಪೀಠವು ಉದಯನಿಧಿ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿತು. ಸಚಿವರಾಗಿ ಉದಯನಿಧಿ ಅವರು ತಮ್ಮ ಹೇಳಿಕೆಗಳ ಬಗ್ಗೆ, ಹೇಳಿಕೆಯು ಉಂಟುಮಾಡಬಹುದಾದ ಪರಿಣಾಮಗಳ ಬಗ್ಗೆ ಎಚ್ಚರಿಕೆ ಹೊಂದಿರಬೇಕಿತ್ತು ಎಂದು ಹೇಳಿದೆ.

‘ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀವು ದುರ್ಬಳಕೆ ಮಾಡಿಕೊಳ್ಳುತ್ತೀರಿ, ಧಾರ್ಮಿಕ ಆಚರಣೆಯ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಳ್ಳುತ್ತೀರಿ. ಈಗ ನೀವು ಸುಪ್ರೀಂ ಕೋರ್ಟ್‌ನಲ್ಲಿ ನೇರವಾಗಿ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯವನ್ನು ಬಳಸುತ್ತಿದ್ದೀರಿ. ನಿಮ್ಮ ಹೇಳಿಕೆಯ ಪರಿಣಾಮಗಳ ಬಗ್ಗೆ ನಿಮಗೆ ಗೊತ್ತಿಲ್ಲವೇ? ನೀವು ಸಾಮಾನ್ಯ ವ್ಯಕ್ತಿ ಅಲ್ಲ. ನೀವೊಬ್ಬ ಸಚಿವ. ಪರಿಣಾಮಗಳ ಬಗ್ಗೆ ನಿಮಗೆ ಗೊತ್ತಿರಬೇಕು’ ಎಂದು ಪೀಠವು ಹೇಳಿತು. ಅರ್ಜಿಯ ವಿಚಾರಣೆಯನ್ನು ಮಾರ್ಚ್ 15ಕ್ಕೆ ಮುಂದೂಡಲಾಗಿದೆ.

ಉದಯನಿಧಿ ಅವರು 2023ರ ಸೆಪ್ಟೆಂಬರ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡುವ ಸಂದರ್ಭದಲ್ಲಿ, ಸನಾತನ ಧರ್ಮವು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ವಿರುದ್ಧವಾಗಿದೆ, ಅದನ್ನು ನಿರ್ಮೂಲನಗೊಳಿಸಬೇಕು ಎಂದು ಹೇಳಿದ್ದರು. ಸನಾತನ ಧರ್ಮವನ್ನು ಕೊರೊನಾ ವೈರಾಣು, ಮಲೇರಿಯಾ ಮತ್ತು ಡೆಂಗಿಗೆ ಹೋಲಿಸಿದ್ದ ಅವರು ಅದನ್ನು ನಾಶ ಮಾಡಬೇಕು ಎಂದು ಹೇಳಿದ್ದರು.

ಉದಯನಿಧಿ ಅವರ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುತ್ತಿಲ್ಲ. ಆದರೆ, ಅವರ ವಿರುದ್ಧ ಆರು ರಾಜ್ಯಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳನ್ನು ಒಗ್ಗೂಡಿಸಬೇಕು ಎಂದು ಅವರ ಪರ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಹೇಳಿದರು.

ಪತ್ರಕರ್ತ ಅರ್ನಾಬ್ ಗೋಸ್ವಾಮಿ, ಬಿಜೆಪಿಯ ನೂಪುರ್ ಶರ್ಮ ಮತ್ತು ಇತರ ಕೆಲವರ ಪ್ರಕರಣಗಳಲ್ಲಿ ಎಫ್‌ಐಆರ್‌ಗಳನ್ನು ಒಂದೇ ಕಡೆ ತರುವುದಕ್ಕೆ ಅವಕಾಶ ಕಲ್ಪಿಸಲಾಗಿತ್ತು ಎಂದು ಸಿಂಘ್ವಿ ಅವರು ಪೀಠಕ್ಕೆ ವಿವರಿಸಿದರು.

ಸಮನ್ಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸನಾತನ ಧರ್ಮಕ್ಕೆ ಅವಮಾನಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಉದಯನಿಧಿ ಸ್ಟಾಲಿನ್ ಅವರಿಗೆ ಸಮನ್ಸ್ ಜಾರಿ ಮಾಡಿ ಸೋಮವಾರ ಬೆಂಗಳೂರಿನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿದೆ.

ಸಚಿವ ಉದಯನಿಧಿ ಸ್ಟಾಲಿನ್ ಸೇರಿ ನಾಲ್ವರ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ (ಮ್ಯಾಜಿಸ್ಟ್ರೇಟ್) ನ್ಯಾಯಾಲಯದ ನ್ಯಾಯಾಧೀಶರಾದ ಜೆ. ಪ್ರೀತ್ ಅವರು ನಡೆಸಿದರು.

ತಮಿಳುನಾಡಿನ ಬರಹಗಾರರೂ ಆಗಿರುವ ಎರಡನೇ ಆರೋಪಿ ಎಸ್. ವೆಂಕಟೇಶ್, ತಮಿಳುನಾಡಿನ ಪ್ರಗತಿಪರ ಬರಹಗಾರರು ಮತ್ತು ಕಲಾವಿದರ ಸಂಘದ ರಾಜ್ಯಾಧ್ಯಕ್ಷ ಮೂರನೇ ಆರೋಪಿ ಮಧುಕರ್ ರಾಮಲಿಂಗಂ ಮತ್ತು ಸಂಘದ ಕಾರ್ಯದರ್ಶಿ ಹಾಗೂ ನಾಲ್ಕನೇ ಆರೋಪಿ ಆದವನ್ ಡಿಚನ್ಯ ಅವರಿಗೆ ಖುದ್ದು ಹಾಜರಾಗಲು ಆದೇಶಿಸಿರುವ ನ್ಯಾಯಾಲಯವು, ಮೊದಲ ಆರೋಪಿ ತಮಿಳುನಾಡಿನ ಯುವ ಜನ ಕ್ಷೇಮಾಭಿವೃದ್ಧಿ, ಕ್ರೀಡೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಚಿವ ಉದಯನಿಧಿ ಸ್ಟಾಲಿನ್ ಅವರಿಗೆ ವ್ಯಾಪ್ತಿ ಹೊಂದಿದ ಪೊಲೀಸ್ ಠಾಣೆಯ ಮೂಲಕ ಸಮನ್ಸ್ ಜಾರಿ ಮಾಡಲು ಆದೇಶಿಸಿದ್ದು, ವಿಚಾರಣೆಯನ್ನು ಏಪ್ರಿಲ್ 26ಕ್ಕೆ ಮುಂದೂಡಿದೆ.

ಸುಗ್ಗಿ ಕಾಲ ಉತ್ತರ ಪ್ರದೇಶದ ಆಗ್ರಾದಲ್ಲಿ ರೈತರು ಆಲೂಗಡ್ಡೆ ರಾಶಿ ಮಾಡುವ ಕಾರ್ಯದಲ್ಲಿ ತೊಡಗಿದ್ದರು -ಪಿಟಿಐ ಚಿತ್ರ

ಚಂಡೀಗಢ ಹಿರಿಯ ಉಪ ಮೇಯರ್, ಉಪ ಮೇಯರ್ ಸ್ಥಾನ ಬಿಜೆಪಿಗೆ

ಚಂಡೀಗಢ (ಪಿಟಿಐ): ಚಂಡೀಗಢ ಮಹಾನಗರ ಪಾಲಿಕೆಯ ಹಿರಿಯ ಉಪ ಮೇಯರ್ ಮತ್ತು ಉಪ ಮೇಯರ್ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಕ್ರಮವಾಗಿ ಬಿಜೆಪಿಯ ಕುಲ್ದೀಪ್ ಸಿಂಗ್ ಸಂಧು ಮತ್ತು ರಾಜೀಂದರ್ ಶರ್ಮಾ ಅವರು ಗೆಲುವು ಸಾಧಿಸಿದ್ದಾರೆ.

ಹಿರಿಯ ಉಪ ಮೇಯರ್ ಆಗಿ ಚುನಾಯಿತರಾದ ಸಂಧು ಮತ್ತು ಉಪ ಮೇಯರ್ ರಾಜೀಂದರ್ ಶರ್ಮಾ ತಲಾ 19 ಮತಗಳನ್ನು ಪಡೆದಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳಾದ ಗುರ್‌ಪ್ರೀತ್ ಗಾಬಿ ಮತ್ತು ನಿರ್ಮಲಾ ದೇವಿ ಅವರು ಕ್ರಮವಾಗಿ 16 ಮತ್ತು 17 ಮತ ಪಡೆದಿದ್ದಾರೆ. ಹಿರಿಯ ಉಪ ಮೇಯರ್ ಚುನಾವಣೆಯಲ್ಲಿ ಒಂದು ಮತವನ್ನು ಅಮಾನ್ಯ ಮಾಡಲಾಗಿದೆ. 35 ಸದಸ್ಯ ಬಲದ ಚಂಡೀಗಢ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ 17 ಸದಸ್ಯರ ಬಲವನ್ನು ಹೊಂದಿದೆ. ಶಿರೋಮಣಿ ಅಕಾಲಿ ದಳದ ಒಬ್ಬ ಸದಸ್ಯ ಮತ್ತು ಸ್ಥಳೀಯ ಸಂಸದರ ಮತ ಸೇರಿ ಒಟ್ಟು 19 ಮತಗಳನ್ನು ಬಿಜೆಪಿ ಅಭ್ಯರ್ಥಿಗಳು ಪಡೆದರು.

ದೆಹಲಿಯಲ್ಲಿ ಮಹಿಳೆಗೆ ₹1,000 ಹಿಮಾಚಲದಲ್ಲಿ ₹1,500 ನೆರವು

ನವದೆಹಲಿ: 18 ವರ್ಷ ಮೇಲ್ಪಟ್ಟ ವಯಸ್ಸಿನ ಮಹಿಳೆಯರಿಗೆ ಮಾಸಿಕ ₹1,000 ನೀಡುವುದಾಗಿ ದೆಹಲಿ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದೆ. ಇದೇ ವೇಳೆ, ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರ್ಕಾರವೂ ಇಂಥದ್ದೇ ಯೋಜನೆ ಘೋಷಿಸಿದ್ದು, ಮಹಿಳೆಯರಿಗೆ ಮಾಸಿಕ ₹1,500 ನೀಡುವುದಾಗಿ ಹೇಳಿದೆ.

ದೆಹಲಿ ಹಣಕಾಸು ಸಚಿವೆ ಆತಿಶಿ ಅವರು ₹76,000 ಕೋಟಿ ಮೊತ್ತದ ಬಜೆಟ್ ಅನ್ನು ಸೋಮವಾರ ಮಂಡಿಸಿದರು. ರಾಮ ರಾಜ್ಯದಿಂದ ಪ್ರೇರಣೆ ಪಡೆದು ಮಹಿಳೆಯರಿಗಾಗಿ ‘ಮುಖ್ಯಮಂತ್ರಿ ಮಹಿಳಾ ಸಮ್ಮಾನ ಯೋಜನೆ’ ಜಾರಿ ಮಾಡಿರುವುದಾಗಿ ಹೇಳಿದರು. ದೆಹಲಿ ಸರ್ಕಾರವು ರಾಷ್ಟ್ರ ರಾಜಧಾನಿಯಲ್ಲಿ ‘ರಾಮ ರಾಜ್ಯ’ ನಿರ್ಮಿಸುವ ನಿರ್ಣಯ ಕೈಗೊಂಡಿದೆ ಎಂದು ಹೇಳಿದರು.

ಲೋಕಸಭೆಗೆ ಕೆಲ ದಿನಗಳು ಬಾಕಿ ಇರುವುದರಿಂದ ಮತದಾರರನ್ನು ಗಮನದಲ್ಲಿರಿಸಿಕೊಂಡು ಬಜೆಟ್ ಮಂಡಿಸಿದ ಅವರು 23 ಬಾರಿ ‘ರಾಮ ರಾಜ್ಯ’ವನ್ನು ಉಲ್ಲೇಖಿಸಿದರು. ರಾಮ ರಾಜ್ಯ ನಿರ್ಮಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರ ಒಂಬತ್ತು ವರ್ಷಗಳಿಂದ ಏನೆಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂಬ ಕುರಿತು ವಿವರಿಸಿದರು.

ಭರವಸೆ ಈಡೇರಿಸಿದ ಸುಖು: ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆ ವೇಳೆ ನೀಡಿದ್ದ ಭರವಸೆಯ ಭಾಗವಾಗಿ ರಾಜ್ಯದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ಮಹಿಳೆಯರಿಗೆ ಮಾಸಿಕ ₹1,500 ನೀಡುವ ‘ಇಂದಿರಾ ಗಾಂಧಿ ಪ್ಯಾರಿ ಬೆಹೆನಾ ಸುಖ ಸಮ್ಮಾನ ನಿಧಿ ಯೋಜನೆ’ಯನ್ನು ಜಾರಿಗೊಳಿಸಿದರು. ಇದಕ್ಕಾಗಿ ಪ್ರತಿವರ್ಷ ₹800 ಕೋಟಿ ವೆಚ್ಚಮಾಡಲಾಗುವುದು. 18ರಿಂದ 80 ವರ್ಷ ವಯಸ್ಸಿನ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಲಿದ್ದಾರೆ.

ಐಎನ್‌ಎಲ್‌ಡಿ ಮುಖಂಡ ರಾಠೀ ಹತ್ಯೆ ಪ್ರಕರಣ: ಬಂಧನ

ಚಂಡೀಗಢ/ನವದೆಹಲಿ (ಪಿಟಿಐ): ಐಎನ್‌ಎಲ್‌ಡಿ ಹರಿಯಾಣ ಘಟಕದ ಅಧ್ಯಕ್ಷ ನಫೆ ಸಿಂಗ್ ರಾಠೀ ಹತ್ಯೆಗೆ ಸಂಬಂಧಿಸಿದಂತೆ ಗೋವಾದಲ್ಲಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಹರಿಯಾಣದ ಝಜ್ಜರ್ ಜಿಲ್ಲೆಯ ಬಹದ್ದೂರ್‌ಗಡದಲ್ಲಿ ಫೆ.25ರಂದು ಆರೋಪಿಗಳು ರಾಠೀ ಮತ್ತು ಐಎನ್‌ಎಲ್‌ಡಿ ಕಾರ್ಯಕರ್ತ ಜೈಕಿಶನ್ ಮೇಲೆ ಗುಂಡಿನ ದಾಳಿ ನಡೆಸಿ, ಹತ್ಯೆ ಮಾಡಿದ್ದರು.

ಹರಿಯಾಣ ಪೊಲೀಸ್‌ನ ವಿಶೇಷ ಟಾಸ್ಕ್ ಫೋರ್ಸ್, ಜಿಲ್ಲಾ ಪೊಲೀಸರು ಹಾಗೂ ದೆಹಲಿ ಪೊಲೀಸ್‌ನ ವಿಶೇಷ ಘಟಕದ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಗೋವಾದ ಹೋಟೆಲ್‌ನಲ್ಲಿ ತಂಗಿದ್ದ ಆರೋಪಿಗಳಾದ ಆಶೀಶ್ ಮತ್ತು ಸೌರಭ್‌ನನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಠೀ ವಾಹನದ ಮೇಲೆ ಆಶೀಶ್, ಸೌರಭ್, ನಕುಲ್, ಅತುಲ್ ಗುಂಡಿನ ಮಳೆಗರೆದಿದ್ದರು ಎಂದು ದೆಹಲಿಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಜೂನ್ 15ರ ಒಳಗೆ ಕಚೇರಿ ತೆರವು ಎಎಪಿಗೆ ‘ಸುಪ್ರೀಂ’ ಗಡುವು

ನವದೆಹಲಿ (ಪಿಟಿಐ): ಇಲ್ಲಿನ ರೋಸ್ ಅವೆನ್ಯೂನಲ್ಲಿರುವ ಎಎಪಿ ಕಚೇರಿಯನ್ನು ತೆರವುಗೊಳಿಸಲು ಸುಪ್ರೀಂ ಕೋರ್ಟ್ ಜೂನ್ 15ರವರೆಗೆ ಕಾಲಾವಕಾಶ ನೀಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ಪೀಠವು ಸೋಮವಾರ ಈ ಕುರಿತ ತೀರ್ಪು ನೀಡಿದೆ.

‘ನ್ಯಾಯಾಂಗಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಎಎಪಿಯ ಕಚೇರಿ ಇರುವ ಜಾಗವನ್ನು ದೆಹಲಿ ಹೈಕೋರ್ಟ್‌ಗೆ ನೀಡಲಾಗಿದೆ. ಹೀಗಾಗಿ ಜೂನ್ 15ರ ಒಳಗೆ ಕಚೇರಿ ತೆರವುಗೊಳಿಸಬೇಕು’ ಎಂದು ಎಎಪಿಗೆ ಹೇಳಿದೆ.

‘ಎಎಪಿ ಕಚೇರಿ ಇರುವ ಜಾಗದ ಮೇಲೆ ಆ ಪಕ್ಷಕ್ಕೆ ಯಾವುದೇ ಅಧಿಕಾರ ಇಲ್ಲ. ಲೋಕಸಭೆ ಚುನಾವಣೆ ಇರುವುದರಿಂದಾಗಿ ಈ ಜಾಗವನ್ನು ತೆರವುಗೊಳಿಸಲು 2024ರ ಜೂನ್ 15ರವರೆಗೆ ಕಾಲಾವಕಾಶ ನೀಡಲಾಗುತ್ತಿದೆ’ ಎಂದು ಪೀಠ ಹೇಳಿತು.

‘ರೈತರನ್ನು ವೈರಿಗಳಂತೆ ನೋಡುವ ಮೋದಿ’

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರೈತರ ವಿರೋಧಿಯಾಗಿದ್ದು, ಕೃಷಿಕರನ್ನು ‘ವೈರಿಗಳಂತೆ’ ನೋಡುತ್ತಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಟೀಕಿಸಿದರು.

ರೈತ ಮುಖಂಡರಾದ ಸರವಣ ಸಿಂಗ್ ಪಂಢೇರ ಮತ್ತು ಜಗಜೀತ್ ಸಿಂಗ್ ದಲ್ಲೇವಾಲ್ ಅವರು ಮಾರ್ಚ್ 6ರಂದು ರಾಷ್ಟ್ರ ರಾಜಧಾನಿಯಲ್ಲಿ ರೈತರ ಚಳವಳಿಗೆ ಕರೆ ನೀಡಿರುವ ಹಿಂದೆಯೇ ಖರ್ಗೆ ಅವರು ಈ ಮಾತು ಹೇಳಿದ್ದಾರೆ.

‘ಕೆಲ ಬಂಡವಾಳಶಾಹಿ ಗೆಳೆಯ’ರಿಗೆ ನೆರವಾಗಲು ಮೋದಿ ನೇತೃತ್ವದ ಸರ್ಕಾರವು ರೈತರ ಹಿತಾಸಕ್ತಿಗಳನ್ನು ನಿರಂತರವಾಗಿ ಕಡೆಗಣಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಕರ್ನಾಟಕ ಸರ್ಕಾರ – ಮುಜರಾಯಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು –571301, ಮೈಸೂರು ಜಿಲ್ಲೆ
ದೂರವಾಣಿ ಸಂಖ್ಯೆ: 08221–226245, 227245 Mail ID : sstnanjangud@gmail.com

ಸಂ:ಎಸ್‌ಎಸ್‌ಟಿ/ಎ.ಇ/ಡಿ.ವಿ.ಪಿ/ /2023–24 ದಿನಾಂಕ : 26–02–2024

ಅಲ್ಪಾವಧಿ ಟೆಂಡರ್ ಪತ್ರಿಕಾ ಪ್ರಕಟಣೆ

ವಿಷಯ : ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2024 ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀ ಅಮ್ಮನವರ ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣಮಟ್ಟದ ತೆಂಗಿನ ನಾರಿನ ಹಗ್ಗವನ್ನು (ದೇವಸ್ಥಾನದ ಪ್ರಾಂಗಣದವರೆಗೆ ಸಾಗಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ.

ನಂಜನಗೂಡು ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2024ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀ ಅಮ್ಮನವರ ರಥ ಎಳೆಯಲು ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳೆಯ ಉತ್ತಮ ಗುಣಮಟ್ಟದ ತೆಂಗಿನ ನಾರಿನ ಹಗ್ಗವನ್ನು ದೇವಸ್ಥಾನದ ಪ್ರಾಂಗಣದವರೆಗೆ ಸಾಗಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹರು ದರಸೂಚಿಯನ್ನು ಸೀಲಾದ ಲಕೋಟೆಯಲ್ಲಿರಿಸಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯ ನಂಜನಗೂಡು ರವರ ವಿಳಾಸದೊಂದಿಗೆ ದಿನಾಂಕ : 07–03–2024 ರಂದು ಸಂಜೆ 4.00 ಗಂಟೆಯ ಒಳಗೆ ಸಲ್ಲಿಸತಕ್ಕದ್ದು. ಆ ನಂತರ ಬರುವ ದರಪಟ್ಟಿಗಳನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು.

ಕ್ರ.ಸಂ.	ವಿಷಯ	ಇ.ಎಂ.ಡಿ. ಮೊತ್ತ
1.	ನಂಜನಗೂಡು ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2024ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀಯವರ, ರಥ ಎಳೆಯಲು ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣಮಟ್ಟದ ತೆಂಗಿನ ನಾರಿನ ಹಗ್ಗವನ್ನು ದೇವಸ್ಥಾನದ ಪ್ರಾಂಗಣದವರೆಗೆ ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ.	10000.00

1. ನಿಗಧಿತ ಅರ್ಜಿ ಶುಲ್ಕ ಪಾವತಿಸಿ, ನಮೂನೆಯನ್ನು ಪಡೆಯತಕ್ಕದ್ದು.
2. ಟೆಂಡರ್ ದಾರರು ಅರ್ಜಿಯ ಜೊತೆಯಲ್ಲಿ ಇ.ಎಂ.ಡಿ. ಯನ್ನು ಡಿ.ಡಿ. ಮೂಲಕ ಪಾವತಿಸತಕ್ಕದ್ದು.
3. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 07–03–2024 ಸಂಜೆ 4.00 ಗಂಟೆ ವರೆಗೆ ಮಾತ್ರ.
4. ಟೆಂಡರ್ ತೆರೆಯುವ ದಿನಾಂಕ : 07–03–2024 ರಂದು ಸಂಜೆ 5.00 ಗಂಟೆಗೆ
5. ಹೆಚ್ಚಿನ ವಿವರಗಳಿಗೆ ಆಡಳಿತ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 08221–226245.

ಕಾರ್ಯನಿರ್ವಾಹಕಅಧಿಕಾರಿಗಳು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ನಗರ ಯೋಜನಾ ಪ್ರಾಧಿಕಾರ, ರಬಕವಿ–ಬನಹಟ್ಟಿ
ಕದಂ ಕಟ್ಟಡ ಬನಹಟ್ಟಿ ಬಸ್ ನಿಲ್ದಾಣ ಎದುರುಗಡೆ, ರಬಕವಿ–ಬನಹಟ್ಟಿ – 587 311,
ತಾಲ್ಲೂಕು : ರಬಕವಿ–ಬನಹಟ್ಟಿ, ಜಿಲ್ಲೆ : ಬಾಗಲಕೋಟೆ. ದೂರವಾಣಿ : 08353–231411,
ಇ–ಮೇಲ್: msplanningrabakavi-banahatti@gmail.com ವೆಬ್‌ಸೈಟ್: www.rabavi-banahatti.tpa.gov.in

ಸಂಖ್ಯೆ : ನ.ಯೋ.ಪಾ.ರ.ಬ್ರ./ಭೂ.ಉ.ನಿ./ಪ್ರಕಟಣೆ/2023–24 ದಿನಾಂಕ : 02–03–2024

ಪ್ರಕಟಣೆ

ರಬಕವಿ–ಬನಹಟ್ಟಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ಜಮೀನಿನ ರಬಕವಿ–ಬನಹಟ್ಟಿ ತಾಲೂಕಿನ ಹೋಸೂರು ಗ್ರಾಮದ ರಿ.ಸ. ನಂ. 51/9 ರ ಕ್ಷೇತ್ರ 00–ಎಕರೆ, 11–ಗುಂಟೆ, 00–ಆಣೆ ಜಮೀನಿನ ಭೂ ಉಪಯೋಗವನ್ನು ಸರ್ಕಾರದಿಂದ ಅನುಮೋದಿಸಲ್ಪಟ್ಟ, ಮಹಾಯೋಜನೆ ಪರಿಷ್ಕೃತ–1 (ಅಂತಿಮ) ರಲ್ಲಿ ವಸತಿ (Residential) ವಲಯದಲ್ಲಿ ನಿಗದಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(A) ರನ್ವಯ ಭೂ ಉಪಯೋಗ ಬದಲಾವಣೆಗಾಗಿ ಅರ್ಜಿದಾರರು ಮನವಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಭೂ ಉಪಯೋಗವನ್ನು ಬದಲಾಯಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14(A) ರಲ್ಲಿರುವ ಪ್ರದತ್ತವಾದ ಅಧಿಕಾರದನ್ವಯ ಈ ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸಲಾಗಿದೆ. **ಈ ಪ್ರಕಟಣೆಯಲ್ಲಿರುವ ಜಮೀನಿಗೆ ಸಂಬಂಧಿಸಿದ ಭೂ ಉಪಯೋಗ ಬದಲಾವಣೆ ಕುರಿತು ಸಾರ್ವಜನಿಕ ಸಲಹೆ ಮತ್ತು ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆಯಾದ ದಿನಾಂಕದಿಂದ 16 (ಹದಿನಾರು) ದಿನಗಳೊಗಾಗಿ ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ರಬಕವಿ–ಬನಹಟ್ಟಿ ಇವರಿಗೆ ಲಿಖಿತವಾಗಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ನಿಗಧಿಪಡಿಸಲಾದ ಅವಧಿಯ ನಂತರ ಈ ಕಛೇರಿಯಲ್ಲಿ ಸ್ವೀಕೃತಗೊಂಡ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಜಮೀನಿನ ವಿವರ ಈ ಕೆಳಕಂಡಂತೆ ನಮೂದಿಸಲಾಗಿದೆ.**

ರಿ.ಸ.ನಂ/ ಅರ್ಜಿದಾರರ ಹೆಸರು	ಕ್ಷೇತ್ರ ಎಕರೆ ಗುಂಟೆ ಆಣೆ –ಪೈ	ಮಹಾಯೋಜನೆ ಪರಿಷ್ಕೃತ–1 (ಅಂತಿಮ) ಸರ್ಕಾರದ ಆದೇಶ ಸಂಖ್ಯೆ : ನಅಇ/92/ ಬೆಮುಪ್ರಾ/2010 ದಿನಾಂಕ : 28–12–2010 ರಲ್ಲಿ ಸರ್ಕಾರದಿಂದ ಅಂತಿಮ ಅನುಮೋದನೆಗೊಂಡಿರುವ ಮಹಾಯೋಜನೆರಲ್ಲಿ ನಿಗದಿ ಪಡಿಸಲಾದ ಭೂ ಉಪಯೋಗ	ಅರ್ಜಿದಾರರು ಬದಲಾವಣೆ ಕೋರಿರುವ ಭೂ ಉಪಯೋಗ
ಹೊಸೂರು ಗ್ರಾಮ ರಿ.ಸ. ನಂ. : 51/9 ಅರ್ಜಿದಾರರು : ಶ್ರೀ. ಕಲ್ಲಪ್ಪ ಶಂಕರಪ್ಪ ಕುಳ್ಳಿ ಸಾ. ಬನಹಟ್ಟಿ	00 ಎಕರೆ 11 ಗುಂಟೆ 00 ಆಣೆ	ವಸತಿ (Residential)	ವಾಣಿಜ್ಯ (Commercial)

ಸಹಿ/– ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ, ರಬಕವಿ–ಬನಹಟ್ಟಿ.

ಡಿಐಪಿಆರ್/ಬಾಗಲಕೋಟೆ/421/ಮಣಿಪಾಲ್/2023–24

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in

ಸಂಖ್ಯೆ: DMG/MLS/Auction/2023-24 ದಿನಾಂಕ : 04.03.2024

ಟೆಂಡರ್ ಪ್ರಕಟಣೆ

ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅವಧಿ ಮೀರಿದ ಮತ್ತು ರದ್ದುಗೊಂಡಿರುವ ಗಣಿಗಾರಿಕೆ ಗುತ್ತಿಗೆಗಳ ಬಳಿ ಇರುವ ಹಳೆಯ ದಾಸ್ತಾನನ್ನು MSTC ಮೂಲಕ ಹರಾಜು ಮಾಡಲು ಟೆಂಡರ್ ಕರೆಯಲಾಗಿತ್ತು.
ಅರ್ಹತಾ ಷರತ್ತುಗಳು, ನಿಯಮಗಳು ಮತ್ತು ಷರತ್ತುಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸುವ ದಿನಾಂಕ ಮತ್ತು ಸಮಯವನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನೀಡಲಾಗಿದೆ. MSTC ಪೋರ್ಟಲ್‌ನಲ್ಲಿ ಪ್ರತ್ಯೇಕ ಲಾಟ್ ವೈಸ್ ಹರಾಜು ಅಧಿಸೂಚನೆಗಳನ್ನು ಪ್ರಕಟಿಸಲಾಗಿದೆ. ಆಯಾ ಲಾಟ್‌ಗಳ ಇ–ಹರಾಜು ಪ್ರಕ್ರಿಯೆಗಾಗಿ ಟೆಂಡರ್ ದಾಖಲೆಗಳು, ಅಧಿಸೂಚನೆಗಳು, ಇತ್ತೀಚಿನ ಮಾಹಿತಿಗಳು ಮತ್ತು ಇತರ ವಿವರಗಳು MSTC Ltd ನ ವೆಬ್‌ಸೈಟ್ htpps://www.mstcecommerce.com/auctionhome/aucsearch/search.jsp–ಇದರಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಲಭ್ಯವಿರುತ್ತವೆ.
ಹಳೆಯ ದಾಸ್ತಾನಿನ ಪ್ರತಿ ಲಾಟ್ ಅನ್ನು "ಎಲ್ಲಿ ಹೇಗಿದೆಯೋ ಹಾಗೆ ಮತ್ತು ಯಾವುದೇ ದೂರು ರಹಿತ" ಆಧಾರದ ಮೇಲೆ ಹರಾಜು ಮಾಡಲಾಗುತ್ತದೆ. ಭಾಗವಹಿಸುವ ಮೊದಲು ಆಸಕ್ತ ಬಿಡ್‌ದಾರರು ಕಬ್ಬಿಣ/ಮ್ಯಾಂಗನೀಸ್ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತ ಪಡಿಸಿಕೊಳ್ಳಬೇಕು. ಬಿಡ್‌ನ ದೃಢೀಕರಣದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಲ್ಲ.
ಆಸಕ್ತ ಬಿಡ್ ದಾರರು MSTC Ltd ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸಹಿ/–
ನಿರ್ದೇಶಕರು
ಗಣಿ ಮತ್ತು ಭೂವಿಜ್ಞಾನ ಇಲಾಖೆ

DIPR/CP/4067/Zenkar/2023-24

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ದೂರವಾಣಿ: 080–23460460 (5 ಲೈನ್ಸ್),
ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–03/2024 (ಕೆಕೆ) ದಿನಾಂಕ: 26–02–2024
ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–03/2024 (ಆರ್‌ಪಿಸಿ) ದಿನಾಂಕ: 26–02–2024

ಅಧಿಸೂಚನೆ

ಬೆಂಗಳೂರು ಮಹಾನಗರ ಸಂಸ್ಥೆಯಲ್ಲಿ ಖಾಲಿ ಇರುವ ನಿರ್ವಾಹಕ (ದರ್ಜೆ–3) ಹುದ್ದೆಗಳಿಗೆ ನೇರ ನೇಮಕಾತಿ

ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂ ಇವರ ದಿನಾಂಕ 04–12–2023, 15–02–2024 ರ ಪತ್ರದ ಅನ್ವಯ ಖಾಲಿ ಇರುವ ಉಳಿಕೆ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ (ಸ್ಥಳೀಯ) ವೃಂದದ ನಿರ್ವಾಹಕ (ದರ್ಜೆ–3) ಹುದ್ದೆಗಳ ನೇರ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ **ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು** ನಡೆಸಲಾಗುವುದು. ಅಭ್ಯರ್ಥಿಗಳು ಪ್ರಾಧಿಕಾರವು ನಡೆಸುವ **ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ** ಹಾಜರಾಗಬೇಕು.

ಪ್ರಾಧಿಕಾರದ ವೆಬ್‌ಸೈಟ್: **https://kea.kar.nic.in** ನಲ್ಲಿ ತೋರಿಸಿರುವ **“Conductor (Class III) Recruitment - 2024”** ಲಿಂಕ್ ಅನ್ನು ಆಯ್ಕೆ ಮಾಡಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡಬೇಕು. ಪೆನ್ ಮತ್ತು ಪೇಪರ್ ಉಪಯೋಗಿಸಿ ಅರ್ಜಿಯನ್ನು ಸಲ್ಲಿಸುವ ವಿಧಾನ ಇರುವುದಿಲ್ಲ.

i	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	10–03–2024 ರ ಬೆಳಿಗ್ಗೆ 11.00 ರಿಂದ
ii	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	10–04–2024 ರ ರಾತ್ರಿ 11.59 ರವರೆಗೆ
iii	ಆನ್‌ಲೈನ್ ಮುಖಾಂತರ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	13–04–2024

1) ಒಟ್ಟು ಹುದ್ದೆಗಳು: **2286 + 214 (15 ಹಿಂಬಾಕಿ ಹುದ್ದೆಗಳೂ ಸೇರಿದಂತೆ)**
2) ಶೈಕ್ಷಣಿಕ ವಿದ್ಯಾರ್ಹತೆ : **ಎರಡನೇ ಪಿಯುಸಿ ಅಥವಾ ತತ್ಸಮಾನತೆ**
3) ವೇತನ ಶ್ರೇಣಿ: **18660–25300**
4) ಅಭ್ಯರ್ಥಿಗಳ ಅರ್ಹತೆ ವಿವರ, ವಯೋಮಿತಿ, ಸಾಮಾನ್ಯ ಸಾಮರ್ಥ್ಯ ಪರೀಕ್ಷೆ, ಆಯ್ಕೆ ಪ್ರಕ್ರಿಯೆ ಮತ್ತು ನೇಮಕಾತಿಯ ವಿವರ ಹಾಗೂ ಪ್ರವರ್ಗವಾರು ಹುದ್ದೆಗಳ ವಿವರಗಳು ಹಾಗು ಇನ್ನಿತರ ಮಾಹಿತಿಗಾಗಿ ಕೆಇಎ ವೆಬ್‌ಸೈಟ್: **https://kea.kar.nic.in** ಗೆ ಭೇಟಿ ನೀಡಲು ಕೋರಿದೆ.

ಸೂಚನೆ:

I) ಕೇವಲ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗುವುದು ಮತ್ತು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವುದು ಅಭ್ಯರ್ಥಿಗಳಿಗೆ **ನಿರ್ವಾಹಕ (ದರ್ಜೆ–3)** ನೇಮಕಾತಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ, ನೇಮಕಾತಿಯು ಸರ್ಕಾರ / ಸಕ್ಷಮ ಪ್ರಾಧಿಕಾರ / ನೇಮಕಾತಿ ಪ್ರಾಧಿಕಾರವು ನಿಗದಿಪಡಿಸಬಹುದಾದ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.

II) ಮೇಲಿನ ಯಾವುದೇ ನಿಯಮಗಳು / ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಅಥವಾ ಅಸ್ಪಷ್ಟತೆ ಕಂಡು ಬಂದಲ್ಲಿ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ತಿದ್ದುಪಡಿಗಳು), ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 (ತಿದ್ದುಪಡಿಗಳು) ಮತ್ತು **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ** (ಪದವೃಂದ & ನೇಮಕಾತಿ) ನಿಯಮಾವಳಿ 1982 (ತಿದ್ದುಪಡಿ) 2021 ರಲ್ಲಿರುವಂತೆ ಅನ್ವಯಿಸುತ್ತದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/4060/2023–24

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ
ದೂರವಾಣಿ ಸಂಖ್ಯೆ : 08225–272128 ಫ್ಯಾಕ್ಸ್ ಸಂಖ್ಯೆ : 08225–272123
Email: sec.mmtemple@gmail.com

ಸಂಖ್ಯೆ: ಶ್ರೀ ಮ.ಮ.ಕ್ಷೇತ್ರ.ಅ.ಪ್ರಾ/ಗುತ್ತಿಗೆ/8/ಪಿಆರ್/42/2023–24 ದಿನಾಂಕ : 24–02–2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (3ನೇ ಕರೆ)
ಕರ್ನಾಟಕ ಸಾರ್ವಜನಿಕ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ.ಸಂ.	ಹಕ್ಕುಭಾಧ್ಯತೆ ವಿವರ	ಗುತ್ತಿಗೆ ಅವಧಿ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ಶೇ. 1 ರೂ.ಗಳಲ್ಲಿ)
1	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ **ಮುಡಿ ಮತ್ತು ಮುಡಿ ಕಾಣಿಕೆ ವಸೂಲಾತಿಯ** ಹಕ್ಕು ಭಾಧ್ಯತೆಯನ್ನು **ಇ–ಟೆಂಡರ್**ನಲ್ಲಿ ದಿನಾಂಕ: 01–04–2024 ರಿಂದ ದಿನಾಂಕ : 31–03–2026 ರ ವರೆಗೆ **2 ವರ್ಷದ** ಅವಧಿಗೆ ಪಡೆಯುವ ಬಗ್ಗೆ	2 ವರ್ಷ	300.00	3,00,000.00

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ಶ್ರೀ ಜಿ.ಎಲ್. ಚಂದ್ರಶೇಖರ್, ಉಪ ಕಾರ್ಯದರ್ಶಿ ರವರ ಮೊಬೈಲ್ ನಂ. **9902593369** ರವರಿಂದ ಮಾಹಿತಿ ಪಡೆಯಬಹುದು. ಸ್ಪಷ್ಟೀಕರಣಬೇಕಾದಲ್ಲಿ ಕಾರ್ಯದರ್ಶಿಯವರ ಮೊಬೈಲ್ ನಂ. **8277682882** ಸಂಪರ್ಕಿಸ ತಕ್ಕದ್ದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ

ಕ್ರ.ಸಂ.	ವಿವರ	ದಿನಾಂಕ	ಷರಾ
1	ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಗೆ ಬರುವ ದಿನಾಂಕ	26–02–2024	ರ ನಂತರ
2	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ವೇಳೆ	15–03–2024	ಸಂಜೆ 5.00 ಗಂಟೆವರೆಗೆ
3	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	16–03–2024	ಇ–ಟೆಂಡರ್ ಸಂಜೆ 5.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಕಾರ್ಯದರ್ಶಿ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ
ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ

ಸಂ:ವಾಸಾಸಂಇ:ಚಾನಗರ:449:2023–24

ಸುಭಾಷಿತ

ಮದುವೆ ಹೇಗಾಯಿತು ಎಂಬುದಕ್ಕಿಂತ ಮದುವೆ ಆದವರು ಹೇಗೆ ಬಾಳುತ್ತಾರೆ ಎಂಬುದು ಮುಖ್ಯ.

–ಬೀಚಿ

ಕೃತಕ ಬುದ್ಧಿಮತ್ತೆಯ ಬಳಕೆಗೆ ನಿಯಂತ್ರಣ ಆಶಾಭಾವ ಮೂಡಿಸುವ ಒಪ್ಪಂದ

ಕೃತಕ ಬುದ್ಧಿಮತ್ತೆಯನ್ನು ಕೆಡುಕು ಉಂಟುಮಾಡಬಹುದಾದ ಬಗೆಯಲ್ಲಿ ಸಾರ್ವಜನಿಕ ಬಳಕೆಗೆ ಮುಕ್ತವಾಗಿಸುವುದನ್ನು ತಡೆಯಲು ತಾವೆಲ್ಲ ಒಟ್ಟಾಗಿ ಕೆಲಸ ಮಾಡುವುದಾಗಿ ಹೇಳುವ ಒಪ್ಪಂದಕ್ಕೆ ಜಾಗತಿಕ ಮಟ್ಟದ ತಂತ್ರಜ್ಞಾನ ಕಂಪನಿಗಳು ಹಾಗೂ ಸಾಮಾಜಿಕ ಜಾಲತಾಣ ವೇದಿಕೆಗಳು ಈಚೆಗೆ ಮ್ಯೂನಿಕ್‌ನಲ್ಲಿ ಸಹಿ ಮಾಡಿವೆ. ಇದು ತಂತ್ರಜ್ಞಾನದ ಕಾರಣದಿಂದಾಗಿ ಎದುರಾಗಬಹುದಾದ ಒಂದು ಅಪಾಯವನ್ನು ನಿಯಂತ್ರಿಸುವತ್ತ ಇರಿಸಿರುವ ಸ್ವಾಗತಾರ್ಹ ಹೆಜ್ಜೆ. ಕೃತಕ ಬುದ್ಧಿಮತ್ತೆಯ ದುರ್ಬಳಕೆಯು ಚುನಾವಣೆಗಳ ಸಂದರ್ಭದಲ್ಲಿ ಆಗದಂತೆ ನಿಗಾ ವಹಿಸುವ ಉದ್ದೇಶವು ಈ ಒಪ್ಪಂದಕ್ಕೆ ಇದೆ. ಭಾರತ, ಅಮೆರಿಕ, ಬ್ರಿಟನ್ ಸೇರಿದಂತೆ ಜಗತ್ತಿನ ಹಲವು ಪ್ರಮುಖ ದೇಶಗಳಲ್ಲಿ ಈ ವರ್ಷ ಚುನಾವಣೆ ಇರುವ ಹಿನ್ನೆಲೆಯಲ್ಲಿ ಈ ಒಪ್ಪಂದವು ಬಹಳ ಮಹತ್ವ ಪಡೆಯುತ್ತದೆ. ‘ಈ ಒಪ್ಪಂದವು ಕೆಟ್ಟ ಪರಿಣಾಮ ಉಂಟುಮಾಡಬಹುದಾದ ಕೃತಕ ಬುದ್ಧಿಮತ್ತೆಯ ವಸ್ತು–ವಿಷಯಗಳಿಂದ ಆನ್‌ಲೈನ್ ಬಳಕೆದಾರ ಸಮುದಾಯಗಳನ್ನು ರಕ್ಷಿಸಲು ಇರಿಸಿರುವ ಒಂದು ಪ್ರಮುಖ ಹೆಜ್ಜೆ, ಕಂಪನಿಗಳು ತಾವು ಈ ದಿಸೆಯಲ್ಲಿ ಈಗಾಗಲೇ ಮಾಡುತ್ತಿರುವ ಕೆಲಸಗಳ ಮುಂದುವರಿಕೆಯಾಗಿ ಇದು ಕೂಡ ಇರಲಿದೆ’ ಎಂಬ ಮಾತನ್ನು ಒಪ್ಪಂದಕ್ಕೆ ಸಹಿ ಮಾಡಿರುವವರು ಹೇಳಿದ್ದಾರೆ. ಮೆಟಾ, ಎಕ್ಸ್, ಗೂಗಲ್, ಲಿಂಕ್ಡ್‌ಇನ್, ಐಬಿಎಂ, ಅಡೋಬ್, ಓಪನ್‌ಎಐ, ಅಮೆಜಾನ್, ಟಿಕ್‌ಟಾಕ್, ಮೈಕ್ರೊಸಾಫ್ಟ್‌ನಂತಹ ಪ್ರಮುಖ ಕಂಪನಿಗಳು ಈ ಒಪ್ಪಂದಕ್ಕೆ ಸಹಿ ಮಾಡಿವೆ. ಕೃತಕ ಬುದ್ಧಿಮತ್ತೆಯ ದುರ್ಬಳಕೆಯನ್ನು ತಡೆಯಲು ತಂತ್ರಜ್ಞಾನ ವಲಯದ ದೈತ್ಯ ಕಂಪನಿಗಳು ವಾಣಿಜ್ಯ ಉದ್ದೇಶದಿಂದ ಅಥವಾ ರಾಜಕೀಯ ಕಾರಣಗಳಿಂದಾಗಿ ಸಕ್ರಿಯವಾದ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬ ಟೀಕೆಗಳು ಇವೆ. ಇಂತಹ ಟೀಕೆಗಳನ್ನು ಎದುರಿಸುವ ಯತ್ನದ ಭಾಗವಾಗಿ ಕಂಪನಿಗಳು ಈ ಒಪ್ಪಂದಕ್ಕೆ ಬಂದಿರಬಹುದು.

ಕಂಪನಿಗಳು ತೋರಿರುವ ಬದ್ಧತೆಯು ಒಳ್ಳೆಯದೇ. ಆದರೆ, ಕೃತಕ ಬುದ್ಧಿಮತ್ತೆಯನ್ನು ಚುನಾವಣಾ ಅಭಿಯಾನಗಳಲ್ಲಿ ಮತ್ತು ಒಟ್ಟಾರೆಯಾಗಿ ರಾಜಕೀಯದಲ್ಲಿ ತಪ್ಪಾಗಿ ಬಳಸಿಕೊಳ್ಳುವುದನ್ನು ಸಂಪೂರ್ಣವಾಗಿ ತಡೆಯುವುದು ಸುಲಭದ ಕೆಲಸ ಅಲ್ಲ

ಕೃತಕ ಬುದ್ಧಿಮತ್ತೆಯ ಸಾಧನಗಳನ್ನು ಬಳಸಿ ಸೃಷ್ಟಿಸುವ ಸುಳ್ಳು ಹಾಗೂ ಕಿಡಿಗೇಡಿತನದ ವಸ್ತು–ವಿಷಯಗಳು ಮತದಾರರ ವರ್ತನೆಯ ಮೇಲೆ ಪ್ರಭಾವ ಬೀರಬಲ್ಲವು. ಆ ಮೂಲಕ ಅವು ಪ್ರಜಾತಾಂತ್ರಿಕ ಪ್ರಕ್ರಿಯೆಯನ್ನು ಬುಡಮೇಲು ಮಾಡಬಲ್ಲವು. ಕೃತಕ ಬುದ್ಧಿಮತ್ತೆಯ ನೆರವಿನಿಂದ ಸೃಷ್ಟಿಸಿದ ಸುಳ್ಳು ವಸ್ತು–ವಿಷಯಗಳನ್ನು ಗುರುತಿಸಲು, ಜನಜಾಗೃತಿಯ ಅಭಿಯಾನ ಕೈಗೊಳ್ಳಲು ಮತ್ತು ರಾಜಕೀಯಕ್ಕೆ ಸಂಬಂಧಿಸಿದ ವಸ್ತು–ವಿಷಯಗಳನ್ನು ಸೃಷ್ಟಿಸಲು ಕೃತಕ ಬುದ್ಧಿಮತ್ತೆಯ ಬಳಕೆಯಲ್ಲಿ ಪಾರದರ್ಶಕತೆ ತರಲು ಕೈಜೋಡಿಸುವುದಾಗಿ ಈ ಒಪ್ಪಂದಕ್ಕೆ ಸಹಿ ಮಾಡಿರುವ ಕಂಪನಿಗಳು ಹೇಳಿವೆ. ಜನರನ್ನು ವಂಚಿಸುವ ಉದ್ದೇಶದ, ರಾಜಕೀಯಕ್ಕೆ ಸಂಬಂಧಿಸಿದ ವಸ್ತು–ವಿಷಯಗಳ ಮೂಲವನ್ನು ಗುರುತಿಸುವುದು ಮಹತ್ವದ ಕೆಲಸ. ಆ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯ ಇದೆ ಎಂಬ ವಿಚಾರದಲ್ಲಿ ತಾವು ಸಹಮತ ಹೊಂದಿದ್ದೇವೆ ಎಂದು ಕೂಡ ಅವು ಹೇಳಿವೆ. ಕೃತಕ ಬುದ್ಧಿಮತ್ತೆಯ ಸಾಧನಗಳು ಸೃಷ್ಟಿಸುವ ರಾಜಕೀಯ ವಸ್ತು–ವಿಷಯಗಳಿಂದ ಆಗುವ ಅಪಾಯಗಳನ್ನು ಕಡಿಮೆ ಮಾಡಲು ಅಗತ್ಯವಿರುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಕಂಪನಿಗಳು ತೀರ್ಮಾನಿಸಿವೆ. ಇಂತಹ ವಸ್ತು–ವಿಷಯಗಳು ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ಇಂಟರ್ನೆಟ್ ಶೋಧಿಸಲು ಬಳಸುವ ವೇದಿಕೆಗಳ ಮೂಲಕ ಪಸರಿಸುವುದನ್ನು ನಿಯಂತ್ರಿಸುವಲ್ಲಿ ಕಂಪನಿಗಳು ಒಂದಾಗಿ ನಡೆಸುವ ಯತ್ನಗಳು ನೆರವಿಗೆ ಬರಬಲ್ಲವು. ಕೃತಕ ಬುದ್ಧಿಮತ್ತೆಯ ಉಪಕರಣಗಳ ಬಳಕೆಯ ಮೇಲೆ ನಿಗಾ ಇರಿಸಲು ಅಥವಾ ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳನ್ನು ಸೃಷ್ಟಿಸಲು ಈ ಉಪಕರಣಗಳ ಬಳಕೆಗೆ ಅವಕಾಶ ನಿರಾಕರಿಸಲು ಕಂಪನಿಗಳು ಯತ್ನಿಸಲಿವೆ. ಇಂತಹ ವಿಷಯಗಳು ಇಂಟರ್ನೆಟ್ ಮೂಲಕ ಹರಡುವುದು ಆರಂಭವಾದಾಗ ಕಂಪನಿಗಳು ತ್ವರಿತವಾಗಿ ಹಾಗೂ ಅಗತ್ಯ ಪ್ರಮಾಣದ ಕ್ರಮವನ್ನು ಕೈಗೊಳ್ಳಲಿವೆ.

ಕಂಪನಿಗಳು ತೋರಿರುವ ಬದ್ಧತೆಯು ಒಳ್ಳೆಯದೇ. ಆದರೆ, ಕೃತಕ ಬುದ್ಧಿಮತ್ತೆಯನ್ನು ಚುನಾವಣಾ ಅಭಿಯಾನಗಳಲ್ಲಿ ಮತ್ತು ಒಟ್ಟಾರೆಯಾಗಿ ರಾಜಕೀಯದಲ್ಲಿ ತಪ್ಪಾಗಿ ಬಳಸಿಕೊಳ್ಳುವುದನ್ನು ಸಂಪೂರ್ಣವಾಗಿ ತಡೆಯುವುದು ಸುಲಭದ ಕೆಲಸ ಆಗಲಿಕ್ಕಿಲ್ಲ. ಏಕೆಂದರೆ ತಂತ್ರಜ್ಞಾನದ ಸರಿಯಾದ ಬಳಕೆ ಹಾಗೂ ತಪ್ಪಾದ ಬಳಕೆಯನ್ನು ಎಲ್ಲ ಸಂದರ್ಭಗಳಲ್ಲಿಯೂ ಸ್ಪಷ್ಟವಾಗಿ ಪ್ರತ್ಯೇಕಿಸುವುದು ಬಹಳ ಕಷ್ಟದ ಕೆಲಸ. ಕೃತಕ ಬುದ್ಧಿಮತ್ತೆಯನ್ನು ತಪ್ಪಾಗಿ ಬಳಸಿಕೊಳ್ಳುವುದನ್ನು ಪತ್ತೆ ಮಾಡಲು, ಸುಳ್ಳು ಮಾಹಿತಿ ಹಾಗೂ ಕಿಡಿಗೇಡಿತನದ ಮಾಹಿತಿ ಹರಡುವುದನ್ನು ತಡೆಯಲು ತಾಂತ್ರಿಕವಾಗಿ ಬಹಳ ಶ್ರಮದ ಪ್ರಯತ್ನವೊಂದರ ಅಗತ್ಯ ಇದೆ. ಇಂತಹ ವಸ್ತು–ವಿಷಯಗಳ ವ್ಯಾಖ್ಯೆಯ ವಿಚಾರದಲ್ಲಿ ಒಮ್ಮತವೊಂದು ಮೂಡುವುದು ಕೂಡ ಬಹಳ ಕಷ್ಟ. ಸುಳ್ಳು ಮಾಹಿತಿ ಹರಡುವುದನ್ನು ತಡೆಯುವ ಕೆಲಸಕ್ಕೆ ಅಡ್ಡಿ ಉಂಟುಮಾಡಲು ಸರ್ಕಾರ ಅಥವಾ ಇತರ ಸಂಸ್ಥೆಗಳ ಶಕ್ತಿ ಹಾಗೂ ಪ್ರಭಾವದ ಬಳಕೆ ಆಗಬಹುದು, ಕೆಲವು ಸಂದರ್ಭಗಳಲ್ಲಿ ಕಾನೂನನ್ನು ಕೂಡ ಬಳಕೆ ಮಾಡಿಕೊಳ್ಳಬಹುದು. ಈಗ ಮಾಡಿಕೊಂಡಿರುವ ಒಪ್ಪಂದವನ್ನು ಮೀರಲು ಕೂಡ ಅವಕಾಶಗಳು ಇವೆ ಎಂಬ ಮಾತುಗಳು ಇವೆ. ಆದರೆ ಒಪ್ಪಂದದ ಆಶಯಗಳನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನವೊಂದು ನಡೆದಲ್ಲಿ ಒಳ್ಳೆಯ ಪರಿಣಾಮವು ಕಂಡುಬರಬಹುದು.

ಉಕ್ರೇನ್ ಯುದ್ಧ ಆರಂಭವಾದ ಬಳಿಕ ಎದ್ದ ಪ್ರಶ್ನೆಗಳಿಗೆ ಈ ಚುನಾವಣೆ ಉತ್ತರ ಒದಗಿಸಬಹುದು

ಇನ್ನಷ್ಟು ಹೆಚ್ಚೀತೇ ಪುಟಿನ್ ಪ್ರಾಬಲ್ಯ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ವ್ಲಾಡಿಮಿರ್ ಪುಟಿನ್ ಅವರು ಐದನೆಯ ಅವಧಿಗೆ ರಷ್ಯಾದ ಅಧ್ಯಕ್ಷರಾಗುವತ್ತ ಮುನ್ನಡೆದಿದ್ದಾರೆ. ಈ ತಿಂಗಳ 15ರಿಂದ 17ರವರೆಗೆ ರಷ್ಯಾದಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಯಲಿದೆ. ತಾಂತ್ರಿಕವಾಗಿ ನೋಡಿದರೆ ಪುಟಿನ್ ಅವರ ವಿರುದ್ಧ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಆದರೆ ಪುಟಿನ್ ಅವರಿಗೆ ಸ್ಪರ್ಧೆ ಒಡ್ಡುವಷ್ಟು ಬಲಿಷ್ಠರಾಗಿಲ್ಲ.

ಇದೇ ಸಂದರ್ಭದಲ್ಲಿ ಉಕ್ರೇನ್ ಯುದ್ಧಕ್ಕೆ ಎರಡು ವರ್ಷ ತುಂಬಿದೆ. ಹಾಗಾಗಿ ರಷ್ಯಾದ ಅಧ್ಯಕ್ಷೀಯ ಚುನಾವಣೆ ಮತ್ತು ಉಕ್ರೇನ್ ಯುದ್ಧವನ್ನು ಜೊತೆಯಾಗಿಯೇ ನೋಡಬೇಕಾಗುತ್ತದೆ. ಉಕ್ರೇನ್ ಯುದ್ಧ ಆರಂಭವಾದ ಬಳಿಕ ಎದ್ದ ಹಲವು ಪ್ರಶ್ನೆಗಳಿಗೆ, ಈ ಚುನಾವಣೆ ಉತ್ತರ ಒದಗಿಸಬಹುದು. ಆ ಕಾರಣದಿಂದಲೂ ರಷ್ಯಾದ ಅಧ್ಯಕ್ಷೀಯ ಚುನಾವಣೆ ಮಹತ್ವ ಪಡೆದುಕೊಂಡಿದೆ.

ಉಕ್ರೇನ್ ಯುದ್ಧ ಆರಂಭವಾದಾಗ, ಇದು ಪುಟಿನ್ ಅವರು ಪ್ರತಿಷ್ಠೆಗಾಗಿ ನಡೆಸುತ್ತಿರುವ ಯುದ್ಧ, ರಷ್ಯಾದ ಜನ ಉಕ್ರೇನ್ ಯುದ್ಧದ ವಿರುದ್ಧ ಇದ್ದಾರೆ, ಪಾಶ್ಚಿಮಾತ್ಯ ರಾಷ್ಟ್ರಗಳು ವಿಧಿಸಿರುವ ಆರ್ಥಿಕ ದಿಗ್ಬಂಧನದ ಬಿಸಿ ನೇರವಾಗಿ ರಷ್ಯಾದ ಜನರನ್ನು ತಟ್ಟಲಿದೆ, ಜನಾಂದೋಲನ ನಡೆದು ಪುಟಿನ್ ಪದಚ್ಯುತಿಯಾದರೆ ಅಚ್ಚರಿಯಿಲ್ಲ, ಆಗ ಯುದ್ಧ ನಿಲ್ಲಬಹುದು ಎಂಬ ಒಂದು ಸಾಧ್ಯತೆಯನ್ನು ಪಶ್ಚಿಮ ಜಗತ್ತು ಚರ್ಚಿಸಿತ್ತು.

ಆದರೆ ಈ ಎರಡು ವರ್ಷಗಳ ಅವಧಿಯಲ್ಲಿ ಅಂತಹ ಬೆಳವಣಿಗೆಗಳು ನಡೆಯಲಿಲ್ಲ. ರಷ್ಯಾ ತೈಲ ಮಾರಾಟದಿಂದ ಗಳಿಸುತ್ತಿದ್ದ ಆದಾಯವನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು ಅಮೆರಿಕ ಸೇರಿದಂತೆ ಪಶ್ಚಿಮ ರಾಷ್ಟ್ರಗಳಿಗೆ ಸಾಧ್ಯವಾಗಲಿಲ್ಲ. ದಕ್ಷಿಣ ಜಗತ್ತಿನ ಬಹುತೇಕ ರಾಷ್ಟ್ರಗಳು ರಷ್ಯಾದೊಂದಿಗಿನ ವ್ಯವಹಾರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡವು. ಹಾಗಾಗಿ ರಷ್ಯಾಕ್ಕೆ ಆರ್ಥಿಕ ಆಘಾತ ನೀಡುವ ಅಮೆರಿಕದ ತಂತ್ರಗಾರಿಕೆಗೆ ಸೋಲಾಯಿತು. ಹಾಗಂತ ನಿಜಕ್ಕೂ ರಷ್ಯಾದ ಜನ ಪುಟಿನ್ ಅವರನ್ನು ಬೆಂಬಲಿಸುತ್ತಿಲ್ಲವೇ, ಉಕ್ರೇನ್ ಯುದ್ಧದ ವಿರುದ್ಧ ಅಭಿಪ್ರಾಯ ದಾಖಲಿಸಲಿದ್ದಾರೆಯೇ ಎನ್ನುವುದಕ್ಕೆ ಈ ಚುನಾವಣೆ ಉತ್ತರ ಹೇಳಬಹುದು.

ಕಳೆದ ವರ್ಷ ಪುಟಿನ್ ಅವರ ಒಂದು ಕಾಲದ ಆಪ್ತ ಪ್ರಿಗೋಷಿನ್ ತನ್ನ ವ್ಯಾಗ್ನರ್ ಪಡೆಯ ಮೂಲಕ ಪುಟಿನ್ ಅವರ ಎದೆಯಲ್ಲಿ ದಿಗಿಲು ಹುಟ್ಟಿಸಿದ್ದು ನಿಜ. 20 ವರ್ಷಗಳಿಗೂ ಹೆಚ್ಚಿನ ತಮ್ಮ ಆಡಳಿತದಲ್ಲಿ, ಪುಟಿನ್ ಎದುರಿಸಿದ ಅತಿದೊಡ್ಡ ಬೆದರಿಕೆ ಎಂದರೆ ಅದು ವ್ಯಾಗ್ನರ್ ಪಡೆಯದ್ದಾಗಿತ್ತು. ಆ ಸಂದರ್ಭದಲ್ಲಿ ಪುಟಿನ್ ಅವರ ಕುರಿತು ರಷ್ಯಾದ ಸೇನೆಗೆ ಅಸಮಾಧಾನವಿದೆ. ವ್ಯಾಗ್ನರ್ ದಂಗೆಯ ನೆಪದಲ್ಲಿ ಸೇನೆ ಆಡಳಿತವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು, ಪುಟಿನ್ ಅವರನ್ನು ಪದಚ್ಯುತಿಗೊಳಿಸಬಹುದು ಎಂಬ ವದಂತಿ ಹಬ್ಬಿತ್ತು.

ಪುಟಿನ್ ಆಂತರಿಕ ವಿರೋಧವನ್ನು ಎದುರಿಸುತ್ತಿದ್ದಾರೆಯೇ, ಜಗತ್ತಿನ ಬಲಿಷ್ಠ ನಾಯಕರ ಪೈಕಿ ಒಬ್ಬರಾಗಿರುವ ಪುಟಿನ್ ಅವರ ಪ್ರಾಬಲ್ಯ ರಷ್ಯಾದಲ್ಲಿ ಕುಗ್ಗುತ್ತಿದೆಯೇ ಎಂಬ ಪ್ರಶ್ನೆಗಳು ಎದ್ದಿದ್ದವು. ಆದರೆ ವ್ಯಾಗ್ನರ್ ದಂಗೆಯನ್ನು ತಮ್ಮದೇ ಶೈಲಿಯಲ್ಲಿ ತ್ವರಿತವಾಗಿ ಮಟ್ಟಹಾಕುವಲ್ಲಿ ಪುಟಿನ್ ಯಶಸ್ವಿಯಾದರು. ಪ್ರಿಗೋಷಿನ್ ವಿಮಾನ ಅಪಘಾತದಲ್ಲಿ ಮರಣ ಹೊಂದಿದ್ದರ ಕುರಿತು ಹೆಚ್ಚು ಚರ್ಚೆಯಾಗಲಿಲ್ಲ! ಒಂದೊಮ್ಮೆ ಪುಟಿನ್ ಆಂತರಿಕ ವಿರೋಧ ಎದುರಿಸುತ್ತಿದ್ದರೆ, ಅದು ಈ ಚುನಾವಣೆಯಲ್ಲಿ ಯಾವುದಾದರೂ ಮಾದರಿಯಲ್ಲಿ ಅಭಿವ್ಯಕ್ತಗೊಳ್ಳಬಹುದು. ಆ ಕಾರಣದಿಂದಲೂ ರಷ್ಯಾದ ಅಧ್ಯಕ್ಷೀಯ ಚುನಾವಣೆಯನ್ನು ಜಗತ್ತು ಗಮನಿಸುತ್ತಿದೆ.

ಪುಟಿನ್ ಅವರ ವಿಷಯ ನೋಡುವುದಾದರೆ, ಜೋಸೆಫ್ ಸ್ಟಾಲಿನ್ ಅವರ ಬಳಿಕ ಹೆಚ್ಚು ಅವಧಿಗೆ ರಷ್ಯಾದ ಅಧ್ಯಕ್ಷ ಗಾದಿಯಲ್ಲಿ ಕುಳಿತ ನಾಯಕ ಎಂದರೆ ಅದು ಪುಟಿನ್. ಕೆಲವು ಸಮೀಕ್ಷೆಗಳ ಪ್ರಕಾರ ರಷ್ಯಾದಲ್ಲಿ ಅತಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡ ಮತ್ತು ಈಗಲೂ ಉಳಿಸಿಕೊಂಡಿರುವ ನಾಯಕ ಕೂಡ ಹೌದು.

ಸೋವಿಯತ್ ಅವಧಿಯಲ್ಲಿ ಅದರ ಗುಪ್ತಚರ ಸಂಸ್ಥೆ ಕೆಜಿಬಿಯ ಏಜೆಂಟ್ ಆಗಿ ವೃತ್ತಿ ಆರಂಭಿಸಿದ್ದ ಪುಟಿನ್, ನಂತರ ರಾಜಕೀಯವಾಗಿ ಬೆಳೆದು ಪ್ರಧಾನಿ ಪಟ್ಟಕ್ಕೆ ಏರಿದರು. 1999ರ ಡಿಸೆಂಬರ್ 31ರಂದು ರಷ್ಯಾದ ಹಂಗಾಮಿ ಅಧ್ಯಕ್ಷರಾಗಿ, ಆ ಪದವಿಯಲ್ಲಿ ಕುಳಿತ ಮೇಲೆ ಅವರು ರಷ್ಯಾದ ಮೇಲಿನ ತಮ್ಮ ಹಿಡಿತವನ್ನು, ಅಗ್ರ ನಾಯಕನ ಪಟ್ಟವನ್ನು ಬಿಟ್ಟುಕೊಡಲಿಲ್ಲ. ಅಧಿಕಾರ ಉಳಿಸಿಕೊಳ್ಳಲು ಬೇಕಾದ ಎಲ್ಲ ಸಾಂವಿಧಾನಿಕ ಮಾರ್ಪಾಡುಗಳನ್ನೂ ಮಾಡಿಕೊಂಡರು.

2000ನೇ ಇಸವಿಯಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಶೇಕಡ 53ರಷ್ಟು ಮತ ಪಡೆದು ಅಧ್ಯಕ್ಷರಾಗಿ ಚುನಾಯಿತರಾದರು. 2004ರಲ್ಲಿ ಎರಡನೆಯ ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ ಪುಟಿನ್, ಶೇಕಡ 71ರಷ್ಟು ಮತ ಪಡೆದು ಪುನರಾಯ್ಕೆಯಾದರು.

ರಷ್ಯಾದ ಸಂವಿಧಾನ, ನಾಲ್ಕು ವರ್ಷಗಳ ಎರಡು ಸತತ ಅವಧಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬಹುದು ಎಂಬ ನಿಬಂಧನೆಯನ್ನು ಹೊಂದಿತ್ತು. ಅದು ಪುಟಿನ್ ಅವರಿಗೆ ತೊಡಕಾಗಿತ್ತು. 2008ರಲ್ಲಿ ಪುಟಿನ್, ತಮ್ಮ ಆಪ್ತ ಡಿಮಿಟ್ರಿ ಮೆಡ್ವೆಡೆವ್ ಅವರನ್ನು ಆ ಸ್ಥಾನಕ್ಕೆ ತಂದರು. ತಾವು ಪ್ರಧಾನಿ ಹುದ್ದೆಯಲ್ಲಿ ಕುಳಿತರು. 2008ರಲ್ಲಿ ತರಲಾದ ಸಾಂವಿಧಾನಿಕ ತಿದ್ದುಪಡಿಯು ಅಧ್ಯಕ್ಷರ ಅವಧಿಯನ್ನು ಆರು ವರ್ಷಗಳಿಗೆ ಏರಿಸಿತು.



2012ರಲ್ಲಿ ಮತ್ತು 2018ರ ಅಧ್ಯಕ್ಷೀಯ ಚುನಾವಣೆಯಲ್ಲಿ ಪುಟಿನ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದರು. 2020ರಲ್ಲಿ ತರಲಾದ ಮತ್ತೊಂದು ಸಾಂವಿಧಾನಿಕ ತಿದ್ದುಪಡಿಯು ಇನ್ನೂ ಎರಡು ಅವಧಿಗೆ ಪುಟಿನ್ ಅಧ್ಯಕ್ಷರಾಗಬಹುದು ಎಂಬ ಅವಕಾಶವನ್ನು ಒದಗಿಸಿತು.

ಹೀಗೆ ತಮಗೆ ಅಡ್ಡಿಯಾಗಿದ್ದ ಕಾನೂನುಗಳನ್ನು ಕಾಲಕಾಲಕ್ಕೆ ಬದಲಿಸಿ, ಸತತವಾಗಿ ಅಧಿಕಾರ ಕಾಯ್ದುಕೊಂಡ ಪುಟಿನ್ ಅವರ ಅವಧಿಯಲ್ಲಿ ಭ್ರಷ್ಟಾಚಾರ, ಮಾನವ ಹಕ್ಕುಗಳ ಉಲ್ಲಂಘನೆ ಹೆಚ್ಚಿತು. ರಾಜಕೀಯ ವಿರೋಧಿಗಳನ್ನು, ಮಾಧ್ಯಮಗಳನ್ನು ಮಟ್ಟಹಾಕಲಾಯಿತು. ರಷ್ಯಾ ನಿಜಕ್ಕೂ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ದೇಶವೇ ಎಂಬ ಪ್ರಶ್ನೆ ಏಳಲು ಪುಟಿನ್ ಕಾರಣರಾದರು.

ಪುಟಿನ್ ಅವರ ಆಡಳಿತವನ್ನು ‘ಕಳ್ಳರು ಮತ್ತು ದುಷ್ಟರ ಆಡಳಿತ’ ಎಂದು ಬಣ್ಣಿಸಿದ್ದ, ಭ್ರಷ್ಟಾಚಾರ ವಿರೋಧಿ ಹೋರಾಟ ಕಟ್ಟಿದ್ದ ವಿರೋಧ ಪಕ್ಷದ ಅಲೆಕ್ಸಿ ನವಲ್ನಿ ರಾಜಕೀಯ ಕೈದಿಯಾಗಿ ಸೆರೆವಾಸ ಅನುಭವಿಸಬೇಕಾಯಿತು. ‘ಈ ಬಾರಿಯ ಚುನಾವಣೆಯಲ್ಲಿ ಪುಟಿನ್ ವಿರುದ್ಧ ಮತ ಚಲಾಯಿಸಿ’ ಎಂಬ ಸಂದೇಶವನ್ನು ರಷ್ಯಾದ ಮತದಾರರಿಗೆ ಫೆಬ್ರುವರಿ ಮೊದಲ ವಾರದಲ್ಲಿ ಅಲೆಕ್ಸಿ ನೀಡಿದ್ದರು. ಫೆಬ್ರುವರಿ 16ರಂದು ಜೈಲಿನಲ್ಲಿ ವಾಕ್ ಮಾಡುತ್ತಿದ್ದ ವೇಳೆ ಅವರು ಕುಸಿದುಬಿದ್ದು ತೀರಿಕೊಂಡರು!

ಕಳೆದ ಕಾಲು ಶತಮಾನದಿಂದ ರಷ್ಯಾದ ಪ್ರಧಾನ ಅಂಶವಾಗಿರುವ ಪುಟಿನ್, ದೇಶದ ಒಳಗೆ ಜನಪ್ರಿಯತೆಯನ್ನು ಮತ್ತು ಜಾಗತಿಕವಾಗಿ ಹಲವು ವಿಷಯಗಳಲ್ಲಿ ಕುಖ್ಯಾತಿಯನ್ನು ಹೊಂದಿರುವ ನಾಯಕ. ಆದರೆ ಪುಟಿನ್ ಅವರ ಅವಧಿಯಲ್ಲಿ ರಷ್ಯಾ ಸ್ಥಿರತೆಯನ್ನು ಸಾಧಿಸಿದೆ ಮತ್ತು ಆರ್ಥಿಕವಾಗಿ ಸಬಲಗೊಂಡಿದೆ ಎಂಬುದೂ ದಿಟ. ಆ ಕಾರಣದಿಂದಲೇ ಅಲ್ಲಿನ ಜನ ಪುಟಿನ್ ಅವರನ್ನು ಬೆಂಬಲಿಸುತ್ತಾರೆ ಎನ್ನುವ ಅಭಿಪ್ರಾಯವೂ ಇದೆ. ಹಾಗಾಗಿ ಪುಟಿನ್ ನಂತರ ಯಾರು ಅಥವಾ ಪುಟಿನ್ ಬದಲಿಗೆ ಯಾರು ಎಂಬ ಪ್ರಶ್ನೆ ಸದ್ಯಕ್ಕಂತೂ ಅಪ್ರಸ್ತುತ. ಈ ಚುನಾವಣೆಯಲ್ಲಿ ಗೆದ್ದು ಅವರು ತಮ್ಮ ಪ್ರಾಬಲ್ಯವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬಹುದು.

ಚುನಾವಣೆಯ ವಿಜಯವನ್ನು ಪುಟಿನ್, ಉಕ್ರೇನ್ ಯುದ್ಧಕ್ಕೆ ರಷ್ಯಾದ ಜನರ ಅನುಮೋದನೆ ಎಂಬಂತೆ ಬಿಂಬಿಸಬಹುದು. ರಷ್ಯಾದಲ್ಲಿ ಅಧ್ಯಕ್ಷೀಯ ಚುನಾವಣೆ ನಿರಾತಂಕವಾಗಿ ನಡೆದರೆ, ಉಕ್ರೇನ್ ಯುದ್ಧದಿಂದ ರಷ್ಯಾ ಯಾವುದೇ ರೀತಿಯಲ್ಲೂ ಬಾಧಿತವಾಗಿಲ್ಲ ಎಂಬ ಸಂದೇಶ ಹೊರಹೊಮ್ಮುತ್ತದೆ. ಅಧ್ಯಕ್ಷೀಯ ಚುನಾವಣೆಯನ್ನು ರಷ್ಯಾ ಆಕ್ರಮಿತ ಉಕ್ರೇನ್ ಭಾಗಗಳಿಗೂ ವಿಸ್ತರಿಸಿರುವುದರಿಂದ, ಆ ಪ್ರದೇಶಗಳು ರಷ್ಯಾದ ಭಾಗ ಎಂದು ಜಗತ್ತಿಗೆ ಮತ್ತೊಮ್ಮೆ ಸಾರಿದಂತೆ ಆಗುತ್ತದೆ. ಪುಟಿನ್ ಅವರಿಗೆ ಬೇಕಿರುವುದು ಅದೇ. 71ರ ವಯಸ್ಸಿನ ಪುಟಿನ್, ಆರು ವರ್ಷಗಳ ಮತ್ತೆರಡು ಅವಧಿಗೆ ಅಂದರೆ 2036ರವರೆಗೆ ಅಧ್ಯಕ್ಷ ಗಾದಿಯಲ್ಲಿ ಉಳಿಯಲು ಬೇಕಾದ ಸಿದ್ಧತೆ ಮಾಡಿಕೊಂಡಂತೆ ಕಾಣುತ್ತಿದೆ. ಆ ವೇಳೆಗೆ ಪುಟಿನ್ 85 ವರ್ಷದ ಆಸುಪಾಸಿನಲ್ಲಿರುತ್ತಾರೆ. ಸದ್ಯಕ್ಕೆ ಸಾಂವಿಧಾನಿಕ ತೊಡಕನ್ನಂತೂ ಪುಟಿನ್ ನಿವಾರಿಸಿಕೊಂಡಿದ್ದಾರೆ, ವಿಧಿ ಸಹಕರಿಸಬೇಕಷ್ಟೇ.

ಚುರುಮುರಿ

ಬಡವರು ಯಾರು?

● ಲಿಂಗರಾಜು ಡಿ.ಎಸ್.

‘ಭಾರತದಲ್ಲಿ 25 ಕೋಟಿ ಬಡವರನ್ನ ಬಡತನದಿಂದ ಮ್ಯಾಲಕ್ಕೆ ತಂದುದವಿ ಅಂತ ಕೇಂದ್ರ ಸರ್ಕಾರ ಹೇಳಿಕ್ಯತಾ ಅದೆ! ಬಡತನ ಅನ್ನದ್ನ ಹ್ಯಂಗೆ ತೀರ್ಮಾನ ಮಾಡ್ತಾವ್ರೆ ಸಾ?’ ಅಂತ ಚಂದ್ರು ಕೇಳಿದ.

‘ಗ್ಯಾಸ್, ಶೌಚಾಲಯ, ನೀರು-ಕರಂಟು, ಮನೆ ತಗಂಡಿರ ನೀವು ಬಡವರಲ್ಲ!’ ಅಂತಂದ್ರ ಹ್ಯಂಗೆ ಸಾ? ಮಂತನಸ್ಥರು ಒಪ್ಪೋ ಮಾತ ಇದು?’ ಅಂತ ತುರೇಮಣೆಗೆ ಕೇಳಿದೆ.

‘ಅಲ್ಲ ಕನ್ರೋ ಬಡವರಿಗು-ಸಾವ್ಕಾರರಿಗೂ ಸಾಮಾಜಿಕ, ಆರ್ಥಿಕ ಅಂತರವೇ ಜಾಸ್ತಿ ಅದಲ್ಲೋ?’ ತುರೇಮಣೆ ಪ್ರಶ್ನೆ ಮಾಡಿದರು.

‘ಸಮಾಜದಲ್ಲಿ ಬಡವರು- ಭಂಡರು ಅಂತ ಎರಡು ವರ್ಗ ಅದೆ ಸಾ. ಅಪೌಷ್ಟಿಕತೆ, ರಕ್ತಹೀನತೆ ಇರೋರು, ಕೈಲಿ ಕಾಸಿಲ್ಲೋರು ನಿಜವಾದ ಬಡವರು. ಅಂಕೆ-ಶಂಕೆ ಇಲ್ಲದೆ ಕಾಸು ಮಾಡೋ ಭಂಡರಲ್ಲಿ ಕುಪೌಷ್ಟಿಕತೆ, ರಕ್ತದಾಹ ಜಾಸ್ತಿ ಇರುತ್ತೆ’ ಅಂತಂದೆ.

‘ಬೊಡ್ಡಿಹೈದ್ನೆ ಸ್ಯಾನೆ ಬುದುವಂತಾಗಿದ್ದೀಯ! ಭಂಡರ ವರ್ಗದಲ್ಲಿ ಯಾರ್‍ಯಾರು ಕುಂತವ್ರೆ ಹೇಳ್ಲಾ?’ ಅಂತ ಪ್ರಶ್ನೆ ಹಾಕಿದರು.

‘ಭಂಡರಲ್ಲಿ ದಿನಾ ಕಾಸು ಮಾಡೋ ಪುಡಿ ರೋಜುಗಾರ್ ಭಂಡರು, ಅಲಾಯಿದವಾಗಿ ಬಂದ ಕಾಸು ಉಡಾಯಿಸೊ ಮೋಜುಗಾರ ಭಂಡರು. ಮಿನಿಸ್ಟರು, ಎಂಎಲ್‌ಎ, ಎಂಪಿಯಂತಾ ಅಡವಾದ ಜಾಗಕ್ಕೆ ಕಾಸು ಕಟ್ಟಿ ಅಧಿಕಾರ ಹೊಡೆಯೋ ಜೂಜುಗಾರ ಭಂಡರು ಇರತರೆ’ ಅಂತಂದೆ.

‘ಭೇಷ್ ಕಲಾ. ಆಮೇಲೆ!’ ಅಂತ ತುರೇಮಣೆ ಬೆನ್ನು ತಟ್ಟಿದರು.

‘ಸಾ ಇಂತಾ ಭಂಡರು ಯಾವಾಗಲೂ ಬಿಪಿಎಲ್ ಅಂದ್ರೆ ಬಿಲೋ ಪ್ರಾಪರ್ಟಿ ಲಿಸ್ಟಲ್ಲೇ ಇರತರೆ. ತಮ್ಮ ಹೆಸರಲ್ಲಿ ಒಂದೂ ಕಾರು, ಬೈಕು, ಮನೆ ಇಲ್ಲ. ಬರೀ ಸಾಲವೇ ಅದೆ ಅಂತ ಚುನಾವಣಾ ಆಯೋಗಕ್ಕೆ ಅಫಿಡವಿಟ್ ಕೊಡ್ತರೆ’ ಅಂತ ವಿವರಿಸಿದೆ.

‘ಇವರ ಹೆಂಡ್ರು, ಮಕ್ಕಳು, ಸೊಸೆಯರಿಗೆ ಮಾತ್ರ ಎಲೆಕ್ಷನ್ನಿಗೆ ನಿಲ್ಲೋ ಯೋಗ್ತೆ ಇರದು ಅಂತೂ ಹೇಳು!’ ಅಂದು ಯಂಟಪ್ಪಣ್ಣ ಶರಾ ಬರೆಯಿತು.

ದಿನದ ಟ್ವೀಟ್

ಮಳೆ ಕಂಡಾಗ ಮರೆಯುತ್ತೇವೆ

ಬೆಂಗಳೂರು ನಗರವು ನೀರಿನ ತೀವ್ರ ಕೊರತೆಯನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ನಾವು ಸಂರಕ್ಷಣೆ, ಮಳೆನೀರಿನ ಸಂಗ್ರಹ, ಪುನರ್ ಬಳಕೆ, ಅಂತರ್ಜಲ ಮರುಪೂರಣ, ಕೆರೆಗಳ ಪುನರುಜ್ಜೀವನದ ಬಗ್ಗೆ ಮಾತನಾಡುತ್ತೇವೆ. ಆದರೆ ಮಳೆಯ ಮೊದಲ ಸೂಚನೆ ಸಿಕ್ಕ ತಕ್ಷಣ ಇವೆಲ್ಲವನ್ನೂ ಮರೆತುಬಿಡುತ್ತೇವೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ಭ್ರಷ್ಟಾಚಾರದ ಭೂತ ನಿಮಗೂ (ಗುತ್ತಿಗೆದಾರರು) ಅಂಟಿದೆ, ನಮಗೂ ಅಂಟಿದೆ. ಇಬ್ಬರೂ ಈ ಕಷ್ಟದಿಂದ ಪಾರಾಗಬೇಕಿದೆ. ಹಂತ ಹಂತವಾಗಿ ಭ್ರಷ್ಟಾಚಾರ ಕಡಿಮೆ ಮಾಡಲಾಗುವುದು.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 5-3-1999

● **ರಾಜ್ಯದ ಯೋಜನಾ ಗಾತ್ರ ರೂ. 5800 ಕೋಟಿಗೆ ಹೆಚ್ಚಿಸಲು ಆಯೋಗ ಒಪ್ಪಿಗೆ**

ನವದೆಹಲಿ, ಮಾರ್ಚ್ 4– ಕರ್ನಾಟಕದ ವಾರ್ಷಿಕ ಯೋಜನಾ ಗಾತ್ರವನ್ನು ರೂ. 5,800 ಕೋಟಿಗೆ ಹೆಚ್ಚಿಸಲು ಯೋಜನಾ ಆಯೋಗ ಇಂದು ಒಪ್ಪಿಗೆ ನೀಡಿದೆ.

ಪಂಚಾಯಿತಿಗಳಿಗೆ ಕೂಡಲೇ ಚುನಾವಣೆ ನಡೆಸಲು ಸಲಹೆ ಮಾಡುವುದರ ಜತೆಗೆ ಆಯೋಗವು ಮಾರುಕಟ್ಟೆ ಸಾಲ ಎತ್ತುವಳಿಗೆ ಕಡಿವಾಣ ಹಾಕಿದೆ. ಕೃಷಿ ವಲಯಕ್ಕೆ ಪೂರೈಸುತ್ತಿರುವ ವಿದ್ಯುತ್ ಮತ್ತು ಬಸ್ ಪ್ರಯಾಣ ದರವು ಕರ್ನಾಟಕದಲ್ಲಿ ತೀರಾ ಕಡಿಮೆ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಸ್ತುತ ಯೋಜನಾ ಗಾತ್ರದಿಂದಾಗಿ 1998–99ರ ಸಾಲಿನ ಯೋಜನಾ ಗಾತ್ರಕ್ಕಿಂತ 1999–2000 ಸಾಲಿನಲ್ಲಿ ಶೇ 8.3 ಏರಿಕೆ ಆಗಿದೆ. ಕಳೆದ ಸಾಲಿನ ಯೋಜನಾ ಗಾತ್ರ ರೂ. 5,353 ಕೋಟಿ ಇದ್ದಿತು.

50 ವರ್ಷಗಳ ಹಿಂದೆ

ಮಂಗಳವಾರ, 5-3-1974

● **ಮೈಸೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸ್ ‘ದೌರ್ಜನ್ಯ’ ಕುರಿತು ವಿಚಾರಣೆ ಭರವಸೆ**

ಬೆಂಗಳೂರು, ಮಾರ್ಚ್ 4– ಕೆಲವು ವಿದ್ಯಾರ್ಥಿಗಳ ಮೇಲೆ ಶನಿವಾರ ಮೈಸೂರಿನಲ್ಲಿ ಪೊಲೀಸರು ದೌರ್ಜನ್ಯ ನಡೆಸಿದರೆಂಬ ಆಪಾದನೆ ಬಗೆಗೆ ವಿಚಾರಣೆ ನಡೆಸುವ ಭರವಸೆಯನ್ನು ಲೋಕೋಪಯೋಗಿ ಸಚಿವ ಎಚ್.ಎಂ.ಚನ್ನಬಸಪ್ಪ ಅವರು ಇಂದು ವಿಧಾನಸಭೆಯಲ್ಲಿ ನೀಡಿದರು.

ಪ್ರಶ್ನೋತ್ತರವಾದ ಕೂಡಲೇ ಆ ಬಗ್ಗೆ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಎಚ್.ಡಿ.ದೇವೇಗೌಡ ಅವರು ‘ಸಾರ್ವಜನಿಕ ಸಭೆಯಲ್ಲಿ ವಿದ್ಯಾರ್ಥಿಗಳು ಕೆಲವರು ಚೀಟಿಯೊಂದನ್ನು ಕಳುಹಿಸಿ ಬದರಿನಾರಾಯಣ್ ಅವರನ್ನು ಮಂತ್ರಿ ಮಂಡಲದಿಂದ ತೆಗೆದುಹಾಕಿದ ಬಗೆಗೆ’ ವಿವರಣೆ ಕೇಳಿದುದಕ್ಕೆ ಪೊಲೀಸರು ಅವರ ಮೇಲೆ ಕ್ರಮ ತೆಗೆದುಕೊಂಡರೆಂದೂ, ಆ ಸಭೆಯಲ್ಲಿ ಬದರಿನಾರಾಯಣ್, ಮುಖ್ಯಮಂತ್ರಿ, ಅಜೀಜ್ ಸೇಠ್, ರಾಚಯ್ಯ ಅವರು ಉಪಸ್ಥಿತರಿದ್ದರೆಂದೂ ಹೇಳಿದರು.

● **ಗೋಲಿಬಾರ್ ಇಬ್ಬರು ಬಾಲಕರ ಸಾವು**

ಅಹಮದಾಬಾದ್, ಮಾರ್ಚ್ 4– ಇಲ್ಲಿನ ಖಾಡಿಯಾ ಕ್ರಾಸ್ ರಸ್ತೆ ಮತ್ತು ಧಾರಿಯಾಪುರ ಪ್ರದೇಶದಲ್ಲಿ ಪೊಲೀಸರು ಇಂದು ಗೋಲಿಬಾರ್ ಮಾಡಿದಾಗ ಇಬ್ಬರು ಬಾಲಕರು ಗಾಯಗೊಂಡು ನಂತರ ಅವರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ದೊಂಬಿ ಎದ್ದಿದ್ದ ಕೆಲವರು, ಜನರು ಹಾಗೂ ಪೊಲೀಸ್ ವಾಹನಗಳ ಮೇಲೆ ಕಲ್ಲೆಸೆದು ಬೆಂಕಿ ಹಚ್ಚಲು ಪ್ರಯತ್ನಿಸಿದಾಗ ಪೊಲೀಸರು, ಗೋಲಿಬಾರ್ ಮಾಡಿದರೆಂದು ಅಧಿಕೃತ ವಕ್ತಾರರೊಬ್ಬರು ಹೇಳಿದ್ದಾರೆ.

ಸಂಗತ

ಕಾಲ ಕೆಟ್ಟಿಲ್ಲ, ಪ್ರಾಮಾಣಿಕತೆ ಉಳಿದಿದೆ!

‘ಸ್ವಾರ್ಥ’ ಎನ್ನುವುದು ನಾವಂದುಕೊಂಡಷ್ಟು ನಮ್ಮೆಲ್ಲರ ಪ್ರಮುಖ ಗುಣವಲ್ಲ, ಪ್ರಾಮಾಣಿಕವಾಗಿ ಇರುವುದೇ ನಮ್ಮೆಲ್ಲರ ಸಹಜ ಗುಣ ಎಂಬುದು ಸಮೀಕ್ಷೆಯಿಂದ ಸಾಬೀತಾಗಿದೆ

● ಡಾ.ಕೆ.ಎಸ್.ಪವಿತ್ರ

ಹೀಗೊಂದು ಸಂದರ್ಭ ಊಹಿಸಿಕೊಳ್ಳಿ. ನೀವು ಒಂದು ಉದ್ಯಾನಕ್ಕೆ ಹೋಗಿದ್ದೀರಿ. ಅಲ್ಲಿ ಒಂದು ಪರ್ಸ್ ಬಿದ್ದಿದೆ. ತೆರೆದು ನೋಡಿದರೆ, ಒಂದು ಕೀಲಿಕೈ, ದಿನಸಿ ಸಾಮಾನಿನ ಪಟ್ಟಿ, ₹ 500ರ ಎರಡು ನೋಟುಗಳು, ವಿಸಿಟಿಂಗ್ ಕಾರ್ಡುಗಳು, ಅದರ ಮೇಲೆ ಹೆಸರು, ಫೋನ್ ನಂಬರ್ ಇವಿಷ್ಟೂ ಇವೆ. ಆಗ ನೀವೇನು ಮಾಡುತ್ತೀರಿ?

ಸುಮಾರು 8 ವರ್ಷಗಳ ಹಿಂದೆ, ಮೂರು ವರ್ಷಗಳ ಕಾಲ ಅಂದರೆ 2013ರಿಂದ 2016ರವರೆಗೆ ಜಗತ್ತಿನಾದ್ಯಂತ 17,000 ಜನರಿಗೆ ಈ ‘ಪರ್ಸ್ ಪರೀಕ್ಷೆ’ ಮಾಡಲಾಯಿತು. ಏಕೆ?! ಪ್ರಾಮಾಣಿಕತೆಯ ಬಗ್ಗೆ ಅಧ್ಯಯನ ಮಾಡುವುದೇ ಇದರ ಹಿಂದಿನ ಮುಖ್ಯ ಉದ್ದೇಶ. ಅಧ್ಯಯನದಲ್ಲಿ ಬಂದ ಫಲಿತಾಂಶಗಳು ಸಂಶೋಧಕರು, ಆರ್ಥಿಕ ತಜ್ಞರಿಗೆ ಅಚ್ಚರಿ ಮೂಡಿಸುವಂತಿದ್ದವು.

ಪ್ರಯೋಗದ ಫಲಿತಾಂಶಗಳ ಬಗ್ಗೆ ಗಮನಹರಿಸುವ ಮುನ್ನ, ಪ್ರಾಮಾಣಿಕತೆಯನ್ನು ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಿಸಬೇಕು. ಸತ್ಯವನ್ನು ಹೇಳುವುದು, ಇದ್ದುದನ್ನು ಇದ್ದಂತೆ ಹೇಳುವುದು ಪ್ರಾಮಾಣಿಕತೆ ಎನಿಸಿಕೊಳ್ಳುತ್ತದೆ. ಪ್ರತಿ ಸ್ವಸ್ಥ ಸಮಾಜವೂ ಪ್ರಾಮಾಣಿಕತೆಯ ತಳಹದಿಯ ಮೇಲೆಯೇ ನಿಂತಿರುತ್ತದೆ. ವ್ಯಾಪಾರ-ವಾಣಿಜ್ಯ, ಸಂಚಾರ, ಸಾರ್ವಜನಿಕ ಸೇವೆಗಳು ಇಲ್ಲೆಲ್ಲ ಪ್ರಾಮಾಣಿಕತೆಯ ನಿರೀಕ್ಷೆ, ಜೊತೆಯಲ್ಲಿಯೇ ಸಾಧ್ಯವಾಗುವ ನಂಬಿಕೆಯೂ ಮುಖ್ಯವಾದದ್ದು. ದೊಡ್ಡ ಜನಸಂಖ್ಯೆಯ ಭಾರತದಂತಹ ದೇಶದಲ್ಲಿಯೂ ಪ್ರತಿನಿತ್ಯ ಕಳ್ಳತನ, ದರೋಡೆ ಎಲ್ಲೆಡೆ ನಡೆಯುವುದಿಲ್ಲ ಎಂದರೆ, ಅದಕ್ಕೆ ಕಾರಣ ಬರೀ ಸುಭದ್ರ ಸುರಕ್ಷತಾ ವ್ಯವಸ್ಥೆಯಲ್ಲ; ಜನರಲ್ಲಿರುವ ಪ್ರಾಮಾಣಿಕತೆ ಎಂದೇ ಹೇಳಬಹುದು.

ವಾಹನದ ಕೀಲಿಕೈ ಕಳೆದುಹೋದರೆ, ಕೀ ತೆಗೆಯಲು ಮೆಕ್ಯಾನಿಕ್ಕನ್ನು ಕರೆಸುತ್ತೇವೆ. ಆತನ ಬಳಿ ಇರುವ ಅಸಂಖ್ಯಾತ ಕೀಲಿಕೈಗಳು, ಕೆಲವೊಮ್ಮೆ ಸಾದಾ ಹೇರ್ ಪಿನ್ನಿನಿಂದಲೂ ತೆಗೆಯುವ ಅವನ ಕೈಚಳಕ ನೋಡಿದರೆ, ಆತನ ಪ್ರಾಮಾಣಿಕತೆಯಷ್ಟೇ ನಮ್ಮೆಲ್ಲರ ವಾಹನಗಳನ್ನು ಕದಿಯದಿರುವುದರಿಂದ ಉಳಿಸಿರುವುದು ಎನ್ನುವುದು ನಮಗೆ ಖಾತರಿಯಾಗಿಬಿಡುತ್ತದೆ!

ಒಬ್ಬ ವ್ಯಕ್ತಿ ತನ್ನ ಸುತ್ತಲಿರುವ ಜನರನ್ನು ‘ಪ್ರಾಮಾಣಿಕರು’ ಎಂದು ನಂಬುವುದು, ಆ ನಂಬಿಕೆಯ ಮೇಲೆ ಜೀವನ ನಡೆಸುವುದು ಇಡೀ ಸಮಾಜಕ್ಕೆ ಮುಖ್ಯವಾಗುತ್ತದೆ. ಹಾಗಾಗಿಯೇ ಪ್ರಾಮಾಣಿಕತೆಯ ಬಗ್ಗೆ ಆರ್ಥಿಕ ತಜ್ಞರು, ಮನೋವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಎಲ್ಲರಿಗೂ ಕುತೂಹಲವೇ. ಆದರೆ ಪ್ರಾಮಾಣಿಕತೆಯ ಬಗೆಗಿನ ಅಧ್ಯಯನ ಅಷ್ಟು ಸುಲಭವಲ್ಲ. ತಮ್ಮನ್ನು ಮತ್ತೊಬ್ಬರು ನೋಡುತ್ತಿದ್ದಾರೆ ಎಂಬ ಅರಿವು ‘ಪ್ರಾಮಾಣಿಕತೆ’ಯನ್ನು ಸರಿಯಾಗಿ ಅಧ್ಯಯನ ಮಾಡಲು ಇರುವ ಬಹು ದೊಡ್ಡ ಅಡ್ಡಿ. ಹಾಗಾಗಿಯೇ ಅಧ್ಯಯನಗಳ ಪ್ರಯೋಗಶಾಲೆಯ ಹೊರಗೆ, ಸಹಜ ಪರಿಸರದಲ್ಲಿ ಒಂದು ಪ್ರಯೋಗವನ್ನು ಮಿಷಿಗನ್, ಉಟಾಹ್, ಜೂರಿಚ್ ವಿಶ್ವವಿದ್ಯಾಲಯಗಳು ನಡೆಸಿದವು. ಅವುಗಳ ಮುಂದಿದ್ದ ಪ್ರಶ್ನೆ ಒಂದೇ, ‘ಸಿಕ್ಕಿಹಾಕಿಕೊಳ್ಳುವುದು’ ಎನ್ನುವ ಅಪಾಯವಿರದಿದ್ದರೆ ತಮಗೆ ಅನುಕೂಲವಾಗುವ ರೀತಿಯಲ್ಲಿ ಜನರು ವರ್ತಿಸುತ್ತಾರೆಯೇ? ಈ ಪ್ರಯೋಗವನ್ನು ‘ಕಳೆದ ಪರ್ಸ್ ಪರೀಕ್ಷೆ’ (ದಿ ಲಾಸ್ಟ್ ವಾಲೆಟ್ ಟೆಸ್ಟ್) ಎಂದು ಕರೆಯಲಾಯಿತು. 13 ಸಂಶೋಧಕರು 40 ಬೇರೆ ಬೇರೆ ದೇಶಗಳ 355 ನಗರಗಳಿಗೆ ತೆರಳಿದರು. ಹೋಟೆಲ್, ಬ್ಯಾಂಕ್, ಕಚೇರಿಗಳು, ಉದ್ಯಾನ, ರಂಗಮಂದಿರ... ಹೀಗೆ ಬೇರೆ ಬೇರೆ ಸ್ಥಳಗಳಲ್ಲಿ ಈ ಪ್ರಯೋಗ ನಡೆಯಿತು.

ಅರ್ಧದಷ್ಟು ಜನರಿಗೆ ಸಿಕ್ಕ ಪರ್ಸ್‌ನಲ್ಲಿ ಬರೀ ವಿಳಾಸದ ಕಾರ್ಡು, ದಿನಸಿ ಪಟ್ಟಿ, ಕೀ ಇದ್ದರೆ, ಉಳಿದ ಅರ್ಧ ಜನರಿಗೆ ಇವುಗಳೊಂದಿಗೆ ದುಡ್ಡೂ ಸಿಗುವಂತೆ ಏರ್ಪಾಡಾಗಿತ್ತು. ದುಡ್ಡು ಇದ್ದಾಗ ಅದು ಪ್ರಾಮಾಣಿಕತೆಯನ್ನು ಕಳಗೆಳೆಯುತ್ತದೆ ಎಂದು ಸಂಶೋಧಕರು ನಿರೀಕ್ಷಿಸಿದ್ದರು. ಆದರೆ ಅವರ ಊಹೆ ತಪ್ಪಾಗಿತ್ತು! ದುಡ್ಡಿದ್ದ ಶೇ 61ರಷ್ಟು ಪರ್ಸುಗಳು ಹಿಂತಿರುಗಿ ಬಂದಿದ್ದವು, ದುಡ್ಡಿರದ ಪರ್ಸುಗಳಲ್ಲಿ ಶೇ 46ರಷ್ಟು ಮಾತ್ರ ಹಿಂತಿರುಗಿ ಬಂದಿದ್ದವು! ಅಚ್ಚರಿಯ ಮಾತೆಂದರೆ, ವಯಸ್ಸು, ಲಿಂಗ, ದೇಶ, ಸಂಸ್ಕೃತಿಗಳ ಅಂತರವಿದ್ದೂ ಇದು ನಿಜವಾಗಿತ್ತು. ಅಷ್ಟೇ ಅಲ್ಲ ಇತರರು ನೋಡುತ್ತಿರಲಿ, ಇಲ್ಲದಿರಲಿ ಈ ಬೆಳವಣಿಗೆ ಕಂಡುಬಂದಿತ್ತು.

ಸಂಶೋಧಕರು ಕುತೂಹಲದಿಂದ ಹಣದ ಆಮಿಷದ ಮೊತ್ತವನ್ನು ಏರಿಸಿದರು. ಆದರೂ ಈ ಬಾರಿಯೂ ಅವರಿಗೆ ಆಘಾತವೇ ಆಯಿತು! ಶೇ 72ರಷ್ಟು ಜನ ಪರ್ಸ್ ಹಿಂತಿರುಗಿಸಿಬಿಟ್ಟರು! ‘ಪ್ರಾಮಾಣಿಕತೆ’ ಏರಿಬಿಟ್ಟಿತ್ತು. ಹೇಗೆ? ಅಂತರರಾಷ್ಟ್ರೀಯವಾಗಿ ನಡೆಸಿದ ಈ ಸಮೀಕ್ಷೆಗಳ ಸರಣಿಯ ಫಲಿತಾಂಶಗಳನ್ನು ವಿಜ್ಞಾನಿಗಳು ಇನ್ನೂ ಕೆದಕಿ ಕೆದಕಿ ನೋಡುತ್ತಲೇ ಇದ್ದಾರೆ. ಕೆಲವು ಸ್ವಾರಸ್ಯಕರ ಅಂಶಗಳು ಹೊರಬಿದ್ದಿವೆ. ದೊಡ್ಡ ಮೊತ್ತದ ಹಣವನ್ನು ತೆಗೆದುಕೊಳ್ಳುವುದು ‘ಕದ್ದ ಹಾಗೆ’ ಎಂಬ ಮನೋಭಾವ ಜನರಲ್ಲಿ ಆಳವಾಗಿತ್ತು. ತಮ್ಮ ‘ಇಮೇಜ್’ಗೆ ಧಕ್ಕೆ ಉಂಟಾಗಬಹುದು ಎಂಬ ಭಾವನೆಯೂ ಕಂಡುಬಂತು. ಹಾಗೆಯೇ ದುಡ್ಡು ಹೆಚ್ಚಿದಷ್ಟೂ ಅದನ್ನು ಕಳೆದುಕೊಳ್ಳುವ ವ್ಯಕ್ತಿಗೆ ಆಗುವ ತೊಂದರೆಯೂ ಹೆಚ್ಚು ಎಂದು ಜನರು ಭಾವಿಸಿದ್ದರು.

ಕಾಲ ಕೆಟ್ಟಿಲ್ಲ! ‘ಸ್ವಾರ್ಥ’ ಎನ್ನುವುದು ನಾವಂದುಕೊಂಡಷ್ಟು ನಮ್ಮೆಲ್ಲರ ಪ್ರಮುಖ ಗುಣವಲ್ಲ! ಪ್ರಾಮಾಣಿಕವಾಗಿ ಇರುವುದೇ ನಮ್ಮೆಲ್ಲರ ಸಹಜ ಗುಣ. ನಮ್ಮ ಪ್ರಾಮಾಣಿಕತೆ ಇತರರಲ್ಲಿಯೂ ಪ್ರಾಮಾಣಿಕತೆಯನ್ನು ಪ್ರಚೋದಿಸಬಲ್ಲದು. ಇಡೀ ಸಮಾಜ ಪ್ರಾಮಾಣಿಕವಾದರೆ ಅದರ ಲಾಭ ಎಲ್ಲರಿಗೆ. ಆಗ ನೆಮ್ಮದಿಯ ಜೀವನ ನಮ್ಮದೂ ಹೌದು, ಇತರರದ್ದೂ ಹೌದು.

ವಾಚಕರ ವಾಣಿ

ಔಷಧ ದರ: ಕಡಿವಾಣ ಬೇಕು

ರಾಜ್ಯದಾದ್ಯಂತ ಇರುವ ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಚಿಕಿತ್ಸಾ ದರಪಟ್ಟಿ ಪ್ರದರ್ಶಿಸಿರುವ ಬಗ್ಗೆ ಮಾರ್ಚ್ 20ರೊಳಗೆ ಅನುಪಾಲನಾ ವರದಿ ಸಲ್ಲಿಸುವಂತೆ ಆರೋಗ್ಯ ಇಲಾಖೆ ಆಯುಕ್ತರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿರುವುದಾಗಿ ವರದಿಯಾಗಿದೆ. ಇದು, ಸ್ವಾಗತಾರ್ಹ.

ಇದರ ಜೊತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ಇರುವ ಔಷಧಾಲಯಗಳು ಅತ್ಯಂತ ದುಬಾರಿ ಬೆಲೆಗೆ ಔಷಧಿ ಹಾಗೂ ಇತರ ಪರಿಕರಗಳನ್ನು ಮಾರಾಟ ಮಾಡುತ್ತಿರುವುದಕ್ಕೆ ಕಡಿವಾಣ ಹಾಕಬೇಕಾಗಿದೆ. ಈ ಬಗ್ಗೆ ಆಸ್ಪತ್ರೆಗಳಲ್ಲಿ ಪ್ರಶ್ನಿಸಿದರೆ, ಫಾರ್ಮಸಿಯನ್ನು ನಡೆಸಲು ಬೇರೆ ಸಂಸ್ಥೆಯವರಿಗೆ ಹೊರಗುತ್ತಿಗೆ ನೀಡಿರುವುದರಿಂದ ಅದರ ಮೇಲೆ ತಮಗೆ ನಿಯಂತ್ರಣ ಇಲ್ಲ ಎಂದು ಕೈಚೆಲ್ಲುತ್ತಾರೆ. ಬಹಳಷ್ಟು ಸಲ ವೈದ್ಯರು ಸೂಚಿಸಿದ ಔಷಧ ಅಥವಾ ಪರಿಕರಕ್ಕೆ ಬದಲಾಗಿ ಬೇರೊಂದು ಔಷಧ, ಪರಿಕರ ನೀಡುತ್ತಾರೆ. ರೋಗಿಗಳ ಅಸಹಾಯಕ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುವ ಪರಿಪಾಟಕ್ಕೆ ಲಗಾಮು ಹಾಕಬೇಕು.

ಟಿ. ಜಯರಾಂ, ಕೋಲಾರ

ಧ್ವನಿ ಕಳೆದುಕೊಂಡವರು...

ನಮ್ಮ ಶಾಸನಸಭೆಗಳು ಧ್ವನಿ ಕಳೆದುಕೊಂಡಿವೆ. ವಿರೋಧ ಪಕ್ಷಗಳು ತಮ್ಮ ಗುಂಡಿಯನ್ನು ತಾವೇ ತೋಡಿಕೊಂಡಿವೆ. ಕಾಂಗ್ರೆಸ್ ಪಕ್ಷ ಸೋತು ಸುಣ್ಣವಾಗಿದೆ. ರಾಜಕಾರಣಿಗಳು ಮೂರನ್ನೂ ಬಿಟ್ಟಿದ್ದಾರೆ. ಚುನಾವಣಾ ಆಯೋಗ ನಿಶ್ಶಕ್ತವಾಗಿದೆ. ಜನ ಮೂಕರಾಗಿದ್ದಾರೆ. ಕಂಡು–ಕೇಳಿ ಅರಿಯದ ಪ್ರಪಾತ ನಮ್ಮ ಕಾಲಿನ ಬುಡದಲ್ಲೇ ಇದೆಯೇನೊ ಎಂಬ ಅನುಮಾನ ಕಾಡತೊಡಗಿದೆ.

ಗೋಪಾಲರಾವ್, ಬೆಂಗಳೂರು

ಕಿರುಚಾಟ: ಕಡೆಗಣಿಸಲಷ್ಟೇ ಯೋಗ್ಯ

ವಿಧಾನ ಪರಿಷತ್ತಿನಲ್ಲಿ ಪ್ರಜ್ಞಾವಂತರ ‘ಪ್ರಜ್ಞೆ’ ಎಲ್ಲಿಹೋಯಿತು ಎಂದು ಮಲ್ಲತ್ತಹಳ್ಳಿ ಎಚ್. ತುಕಾರಾಂ (ವಾ.ವಾ., ಮಾರ್ಚ್ 1) ಪ್ರಶ್ನಿಸಿದ್ದಾರೆ. ಪ್ರಜ್ಞಾವಂತರು ಇದ್ದರೆ ‘ಪ್ರಜ್ಞೆ’ ಎಲ್ಲಿಯೂ ಹೋಗುವುದಿಲ್ಲ ಅಲ್ಲವೇ? ಜನಪ್ರತಿನಿಧಿಗಳು ರೌಡಿಗಳಂತೆ ವರ್ತಿಸುವುದು, ಪರಸ್ಪರ ಏಕವಚನ ಪ್ರಯೋಗ ಮಾಡುವುದು, ತೊಡೆ ತಟ್ಟುವುದು, ಕಿರುಚಾಡಿ ಆರ್ಭಟ ಮಾಡುವಂತಹ ವರ್ತನೆಗಳು ನಾಯಕತ್ವದ ಗುಣಸೂಚಕವಲ್ಲ. ಇಂಥ ಕನಿಷ್ಠ ಮಟ್ಟದ ವರ್ತನೆಯ ದೃಶ್ಯಗಳನ್ನು ನಮ್ಮ ದೃಶ್ಯಮಾಧ್ಯಮಗಳು ಪ್ರಸಾರ ಮಾಡುವುದನ್ನು ನಿಲ್ಲಿಸುವುದು ಸೂಕ್ತ. ಇಲ್ಲದಿದ್ದರೆ ಯುವ ಮತದಾರರು ಹಾಗೂ ರಾಜಕೀಯ ಪ್ರವೇಶಾಕಾಂಕ್ಷಿಗಳಿಗೆ ಕನಿಷ್ಠ ಮಟ್ಟದ ರಾಜಕೀಯ ಪರಿಸರವನ್ನು ಪರಿಚಯಿಸಿದಂತೆ ಆಗುತ್ತದೆ.

ಉಪಯುಕ್ತ ಮತ್ತು ಆರೋಗ್ಯಕರ ಚರ್ಚೆ, ಹೇಳಿಕೆಗಳಿಗೆ ಮಾತ್ರ ಮಾಧ್ಯಮಗಳು ಮನ್ನಣೆ ನೀಡಿದಲ್ಲಿ ನಮ್ಮ ಸಾರ್ವಜನಿಕ ಸಂವಾದದ ಸ್ವರೂಪ ತಾನಾಗಿಯೇ ಬದಲಾಗುತ್ತದೆ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ದಾರಿದ್ರ್ಯಕ್ಕೆ ಕೊನೆ ಇಲ್ಲವೇ?

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ತಮ್ಮ ಮೈತ್ರಿಕೂಟದ ಬಾಗಿಲು ಸದಾ ತೆರೆದಿರುತ್ತದೆ ಎಂಬರ್ಥದಲ್ಲಿ ಆರ್‌ಜೆಡಿ ಮುಖಂಡ ಲಾಲೂ ಪ್ರಸಾದ್ ಕೆಲವು ದಿನಗಳ ಹಿಂದೆ ಪ್ರತಿಕ್ರಿಯಿಸಿದ್ದಾರೆ. ಅದನ್ನು ಓದಿದಾಗ ಹೀಗೆ ಅನ್ನಿಸಿತು: ‘ಆಹಾ! ನಿತೀಶ್‌ರ ಭಾಗ್ಯವೇ! ಇಂತಹ ಪರಮ ಅದೃಷ್ಟವಂತ ರಾಜಕಾರಣಿ ಇಡೀ ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಎಲ್ಲಿಯೂ ಇರಲಾರರು! ಇರಲೂಬಾರದು!’ ಈ ದರಿದ್ರ ರಾಜಕಾರಣಿಗಳ ದಾರಿದ್ರ್ಯಕ್ಕೆ ಅಂತ್ಯವೇ ಇಲ್ಲವೆ? ನಾಚಿಕೆಗೇಡು!

ಎಸ್.ಕೆ. ಕುಮಾರ್, ಬೆಂಗಳೂರು

ಪ್ರಚೋದನೆಗೆ ಮರುಳಾಗಬೇಡಿ

ಲೋಕಸಭಾ ಚುನಾವಣೆಗೆ ಕೆಲವೇ ದಿನಗಳಲ್ಲಿ ಅಧಿಸೂಚನೆ ಹೊರಬೀಳಲಿದೆ. ಜನಸಮೂಹ ಅದರಲ್ಲೂ ಯುವಕರು ಎಚ್ಚರದಿಂದ ಇರುವುದು ಒಳ್ಳೆಯದು. ಚುನಾವಣೆ ಸಮೀಪಿಸಿದಾಗ ರಾಜಕೀಯ ಪಕ್ಷಗಳು ಗಲಭೆ– ಘರ್ಷಣೆಗಳಿಗೆ ಪ್ರಚೋದಿಸುವುದು ಮಾಮೂಲಿ. ಬಿಸಿರಕ್ತದ ಯುವಕರು ಇಂತಹ ಪ್ರಚೋದನೆಗಳಿಗೆ ಮರುಳಾಗಬಾರದು. ಯಾವುದೇ ಅಹಿತಕರ ಕೃತ್ಯ ಜರುಗಿದರೂ ಅದಕ್ಕೆ ಬಲಿಪಶು ಆಗುವುದು ಬಡವರ ಮಕ್ಕಳೇ. ಇದನ್ನು ಮರೆಯಬಾರದು.

ಎಲ್ಲ ರಾಜಕೀಯ ಪಕ್ಷಗಳ ಆಡಳಿತವನ್ನೂ ನೋಡಿ ಆಗಿದೆ. ದುಡಿಯುವ ಮಂದಿಯ ಬವಣೆ ನಿವಾರಣೆಯಾಗುವ ಯಾವ ಭರವಸೆಯೂ ಇಲ್ಲ. ನಿಮ್ಮ ದುಡಿಮೆಯಿಂದ ಮಾತ್ರ ಕುಟುಂಬದ ರಥ ಮುಂದೆ ಸಾಗುತ್ತದೆ ಎಂಬುದು ಸದಾ ನೆನಪಿನಲ್ಲಿ ಇರಲಿ. ನಿಮಗೆ ಯಾರು ಹಿತ ಅನ್ನಿಸುವರೋ ಅವರಿಗೆ ಮತ ನೀಡಿ. ಪ್ರಚೋದನೆಗಳಿಗೆ ಮಾತ್ರ ಈಡಾಗಬೇಡಿ.

ಅಶ್ವತ್ಥನಾರಾಯಣ ಆರ್., ಬೆಂಗಳೂರು

ಜೈಲುಪಾಲಾದವರ ಕಥನ ಬಿಡುಗಡೆ ಮಾಡುತ್ತಿರಬೇಕು

ದಿ ರಾಮೇಶ್ವರಂ ಕೆಫೆಯ ಸ್ಫೋಟದಂಥ ‘ಕೃತ್ಯ ಮಾಡಲು ಬೇರೆಯವರೂ ಭಯಪಡುವಂತೆ ಆರೋಪಿಗೆ (ಅಪರಾಧಿಗೆ) ಶಿಕ್ಷೆ ವಿಧಿಸಬೇಕಿದೆ’ ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಹೇಳಿದ್ದಾರೆ (ಕಿಡಿನುಡಿ, ಪ್ರ.ವಾ., ಮಾರ್ಚ್ 4). ಒಪ್ಪತಕ್ಕ ಮಾತೇನೊ ಹೌದು. ಆದರೆ, ನಮ್ಮ ನ್ಯಾಯತೀರ್ಮಾನ ವ್ಯವಸ್ಥೆ ಅದೆಷ್ಟು ನಿಧಾನವೆಂದರೆ ಅಪರಾಧಿಯ ಕತೆ ಏನಾಯ್ತು ಎಂಬುದು ನೆನಪೇ ಇರುವುದಿಲ್ಲ. ತೀರ ಕುಖ್ಯಾತ ಅಪರಾಧಿಗಳು ಈಗ ಜೈಲಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನು ಜನರಿಗೆ ಆಗಾಗ ನೆನಪಿಸುವಂಥ ವ್ಯವಸ್ಥೆ ನಮ್ಮಲ್ಲಿ ಬರಬೇಕು. ಜೈಲಿನ ಅಧಿಕಾರಿಗಳು ತಮ್ಮ ಆತಿಥ್ಯದಲ್ಲಿ ಕ್ರೂರ ಶಿಕ್ಷೆ ಅನುಭವಿಸುತ್ತಿರುವವರ ಈಗಿನ ಸ್ಥಿತಿಗತಿಯನ್ನು (ಅವರು ರಾಗಿ ಬೀಸುತ್ತಿದ್ದಾರೆಯೆ, ಹೊಸ ವಿದ್ಯೆ–ವೃತ್ತಿ ಕಲಿತರೆ, ಯೋಗಾಭ್ಯಾಸ ಮಾಡುತ್ತಿದ್ದಾರೆಯೆ, ಏನು ಕತೆ ಎಂಬುದನ್ನು) ಪ್ರತಿ ಆರು ತಿಂಗಳಿಗೆ ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತಿರಬೇಕು. ಅಂಥ ಪಾರದರ್ಶಕತೆ ಇಲ್ಲದಿದ್ದರೆ ಭಾವಿ ಅಪರಾಧಿಗಳು ಪಾಠ ಕಲಿಯಲು ಹೇಗೆ ಸಾಧ್ಯ?

ಗುರುಪ್ರಸಾದ ಕೆ., ಹೂವಿನಹಡಗಲಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮತಕ್ಕಾಗಿ ಲಂಚ ಅಪರಾಧವೇ ಸರಿ...

ಸಂಸತ್ತಿನಲ್ಲಿ ಮತ ಚಲಾಯಿಸಲು ಮತ್ತು ಮಾತನಾಡಲು ಲಂಚ ಪಡೆದುಕೊಂಡ ಸಂಸದರಿಗೆ ಕಾನೂನು ಕ್ರಮದಿಂದ ವಿನಾಯಿತಿ ಇದೆ ಎಂದು 1998ರಲ್ಲಿ ಸಂವಿಧಾನ ಪೀಠವು ಬಹುಮತದ (ಮೂವರು ನ್ಯಾಯಮೂರ್ತಿಗಳು) ತೀರ್ಪು ನೀಡಿದ್ದು ಸರಿಯಷ್ಟೆ. ಚುನಾಯಿತ ಜನಪ್ರತಿನಿಧಿಗಳು ಸಂಸದೀಯ ಕರ್ತವ್ಯಗಳನ್ನು ನಿರ್ವಹಿಸಲು ಲಂಚ ಪಡೆದರೆ ಕಾನೂನು ಕ್ರಮ ಇಲ್ಲ ಎಂದು ಈವರೆಗೆ ಹಲವು ಪ್ರಕರಣಗಳಲ್ಲಿ 1998ರ ತೀರ್ಪನ್ನೇ ಉಲ್ಲೇಖಿಸಲಾಗುತ್ತಿತ್ತು. ಆದರೆ ಈಗ ಸೀತಾ ಸೊರೇನ್ ಪ್ರಕರಣದಲ್ಲಿ ತೀರ್ಪು ನೀಡಿರುವ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು, 'ಶಾಸನಸಭೆಗಳಲ್ಲಿ ಮತ ಚಲಾಯಿಸಲು ಲಂಚ ಪಡೆಯುವ ಸಂಸದ/ಶಾಸಕರಿಗೆ ಕಾನೂನು ಕ್ರಮದಿಂದ ವಿನಾಯಿತಿ ಇಲ್ಲ' ಎಂದು ಹೇಳಿದೆ. ಈ ಕಾರಣದಿಂದ 1998ರ ತೀರ್ಪು ಈಗ ಅನೂರ್ಜಿತವಾಗಿದೆ. ಆ ತೀರ್ಪು ನೀಡಿದ್ದ ಪೀಠದಲ್ಲಿದ್ದ ಇನ್ನಿಬ್ಬರು ನ್ಯಾಯಮೂರ್ತಿಗಳು ಲಂಚ ಪಡೆದುಕೊಂಡ ಸಂಸದರಿಗೆ ಅಂತಹ ವಿನಾಯಿತಿ ನೀಡಬಾರದು ಎಂದೇ ಹೇಳಿದ್ದರು...

ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯ ವಿರುದ್ಧ ಮತ ಚಲಾಯಿಸಲು ಲಂಚ ಪಡೆದ ಸಂಸದರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತಿಲ್ಲ ಎಂದು 1998ರ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ತೀರ್ಪು ನೀಡಿತ್ತು. ಈಗ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಇದಕ್ಕೆ ಸಂಪೂರ್ಣ ವಿರುದ್ಧವಾದ ತೀರ್ಪನ್ನು ನೀಡಿದೆ. ಲಂಚ ಪಡೆದು ಸಂಸತ್ತು ಮತ್ತು ವಿಧಾನಸಭೆಯಲ್ಲಿ ಮತ ಚಲಾಯಿಸುವುದು ಮತ್ತು ಭಾಷಣ ಮಾಡುವುದು ಅಪರಾಧ ಎಂದು ಏಳು ನ್ಯಾಯಮೂರ್ತಿಗಳ ಪೀಠವು ಈಗ ತೀರ್ಪು ನೀಡಿದೆ. ಆದರೆ 1998ರಲ್ಲಿ ನೀಡಲಾಗಿದ್ದ ತೀರ್ಪು ಬಹುಮತದ ತೀರ್ಪಾಗಿತ್ತು. ಐವರು ನ್ಯಾಯಮೂರ್ತಿಗಳಲ್ಲಿ ಮೂವರು ಇದನ್ನು ಅಪರಾಧವಲ್ಲ ಎಂದು ಹೇಳಿದ್ದರು. ಉಳಿದ ಇಬ್ಬರು ನ್ಯಾಯಮೂರ್ತಿಗಳು ಇದು ಅಪರಾಧ ಎಂದೇ ಹೇಳಿದ್ದರು.

ಸಂಸದರೊಬ್ಬರು ಸಂಸತ್ತಿನಲ್ಲಿ ಮಾಡಿದ ಭಾಷಣ, ಚಲಾಯಿಸಿದ ಮತ ಮತ್ತು ಸಂಸದೀಯ ಸಮಿತಿಗಳಲ್ಲಿ ಚಲಾಯಿಸಿದ ಮತಗಳನ್ನು ದೇಶದ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಈ ಸಂಬಂಧ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತಿಲ್ಲ ಎಂದು ಸಂವಿಧಾನದ 105ನೇ ವಿಧಿ ಹೇಳುತ್ತದೆ. ಈ ಎಲ್ಲಾ ಕ್ರಿಯೆಗಳು ಸಂಸದರೊಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯ ಎಂದೇ ಈ ವಿಧಿ ಹೇಳುತ್ತದೆ. ಮತ ಚಲಾಯಿಸುವುದು ಸಹ ಒಂದು ಸ್ವರೂಪದ ಅಭಿವ್ಯಕ್ತಿ ಸ್ವಾತಂತ್ರ್ಯ. ಸಂವಿಧಾನವು ನೀಡಿದ ವಿವಿಧ ಅವಕಾಶಗಳು ಮತ್ತು ಸಂಸತ್ತಿನ ನಡಾವಳಿಗೆ ಸಂಬಂಧಪಟ್ಟ ನಿಯಮಗಳಿಗೆ ಒಳಪಟ್ಟು ಎಲ್ಲಾ ಸಂಸದರಿಗೂ ಇಂತಹ ಅಭಿವ್ಯಕ್ತಿ ಸ್ವಾತಂತ್ರ್ಯ ಇರಬೇಕು ಎಂದು 105(1) ವಿಧಿಯಲ್ಲಿ ವಿವರಿಸಲಾಗಿದೆ. ಈ ಪ್ರಕಾರ ಸಂಸದರು ಚಲಾಯಿಸಿದ ಮತವನ್ನು ನ್ಯಾಯಾಲಯಗಳಲ್ಲಿ ಕಾನೂನಿನ ವಿಮರ್ಶೆಗೆ ಒಳಪಡಿಸುವಂತಿಲ್ಲ. ರಾಜ್ಯ ವಿಧಾನಸಭೆಯ ಶಾಸಕರಿಗೆ ಇಂಥದ್ದೇ ವಿನಾಯಿತಿಯನ್ನು ಸಂವಿಧಾನದ 194ನೇ ವಿಧಿ ನೀಡುತ್ತದೆ.

1993ರಲ್ಲಿ ಪಿ.ವಿ.ನರಸಿಂಹರಾವ್ ಸರ್ಕಾರದ ಪರವಾಗಿ ಸಂಸತ್ತಿನಲ್ಲಿ ಮತ ಚಲಾಯಿಸಲು ಹಣ ಪಡೆದುಕೊಂಡಿದ್ದ ಜೆಎಂಎಂನ ಸಂಸದರು ಮತ್ತು ಇತರ ಕೆಲವು ಸಂಸದರ ವಿರುದ್ಧದ ಪ್ರಕರಣದಲ್ಲಿ ಸಂವಿಧಾನದ 105ನೇ ವಿಧಿಯಡಿ ಸಂಸದರಿಗೆ ರಕ್ಷಣೆ ನೀಡಲಾಗಿತ್ತು. ಈ ಸಂಸದರ ವಿರುದ್ಧ ಕಾನೂನು ಕ್ರಮ ಜರುಗಿಸುವಂತಿಲ್ಲ ಎಂದು ಮೂವರು ನ್ಯಾಯಮೂರ್ತಿಗಳು 1998ರಲ್ಲಿ ತೀರ್ಪು ನೀಡಿದ್ದರು.

ಅದೇ ಪೀಠದಲ್ಲಿದ್ದ ಇನ್ನಿಬ್ಬರು ನ್ಯಾಯಮೂರ್ತಿಗಳು ಇದಕ್ಕೆ ವ್ಯತಿರಿಕ್ತವಾಗಿದ್ದ ತೀರ್ಪು ನೀಡಿದ್ದರು. 'ಸಂಸತ್ತಿನಲ್ಲಿ ಮಾತನಾಡಲು ಅಥವಾ ಮತ ಚಲಾಯಿಸಲು ಲಂಚ ಪಡೆದಿದ್ದರೆ, ಅಂತಹ ಸಂಸದರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬಹುದು. ಲಂಚ ಪಡೆದು ಸಂಸತ್ತಿನಲ್ಲಿ ಮತ ಚಲಾಯಿಸಿದ್ದರೆ ಅಥವಾ ಮಾತನಾಡಿದ್ದರೆ ಸಂವಿಧಾನದ 105ನೇ ವಿಧಿಯ ಅಡಿ ವಿನಾಯಿತಿ ಪಡೆಯಲು ಸಾಧ್ಯವಿಲ್ಲ' ಎಂದು ಆ ಇಬ್ಬರು ನ್ಯಾಯಮೂರ್ತಿಗಳು ಹೇಳಿದ್ದರು. ಅಲ್ಲದೆ ಸಂಸತ್ತಿನಲ್ಲಿ ಸಂಪೂರ್ಣ ಸ್ವತಂತ್ರವಾಗಿ ಚಲಾಯಿಸಿದ ಮತ ಅಥವಾ ಆಡಿದ ಮಾತುಗಳನ್ನು ಮಾತ್ರ ದೇಶದ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಆದರೆ ಲಂಚ ಪಡೆದುಕೊಂಡು ಯಾವುದೋ ವ್ಯಕ್ತಿ/ಗುಂಪು/ಸರ್ಕಾರಕ್ಕೆ ಅನುಕೂಲವಾಗುವಂತೆ ವರ್ತಿಸುವಾಗ ಸಂಸದನ ಕ್ರಿಯೆಯು ಸ್ವತಂತ್ರವಾಗಿ ಇರುವುದಿಲ್ಲ. ಆತನ ಕ್ರಿಯೆಯು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವ್ಯತಿರಿಕ್ತವಾಗಿ ಇರುತ್ತದೆ. ಹೀಗಾಗಿ ಅಂತಹ ಸಂಸದರ ವಿರುದ್ಧ ಸಂಬಂಧಿತ ಕಾನೂನುಗಳ ಅಡಿಯಲ್ಲಿ ಕ್ರಮ ಜರುಗಿಸಬೇಕು ಎಂದು ಆ ಇಬ್ಬರು ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಹೇಳಿದ್ದರು.

'ಸಂಸದ ಅಥವಾ ಶಾಸಕ ಲಂಚ ಪಡೆದ ತಕ್ಷಣವೇ ಅಲ್ಲಿ ಅಪರಾಧ ನಡೆದು ಹೋಗಿರುತ್ತದೆ. ಲಂಚ ಪಡೆದುಕೊಂಡು ಮತ್ತು ಲಂಚ ಸ್ವೀಕರಿಸಿದ ಉದ್ದೇಶಕ್ಕೆ ಬದ್ಧವಾಗಿರುತ್ತೇನೆ ಎಂದು ಒಪ್ಪಿಕೊಂಡ ತಕ್ಷಣವೇ ಅದು ಅಪರಾಧ ಕೃತ್ಯವಾಗಿಬಿಡುತ್ತದೆ. ಅದು ಸಂಸತ್ತಿನ ಹೊರಗೆ ನಡೆದ ಅಪರಾಧ ಕೃತ್ಯ. ಸಂವಿಧಾನದ 105ನೇ ವಿಧಿಯಲ್ಲಿ ನೀಡಲಾಗುವ ವಿನಾಯಿತಿಗಳು ಸಂಸತ್ತಿನಲ್ಲಿನ ಚಟುವಟಿಕೆಗಳಿಗೆ ಅನ್ವಯವಾಗುತ್ತದೆ. ಆ ವಿನಾಯಿತಿಗಳು ಸಂಸತ್ತಿನ ಹೊರಗೆ ನಡೆದ ಈ ಅಪರಾಧ ಕೃತ್ಯಕ್ಕೆ ಅನ್ವಯ ಆಗುವುದಿಲ್ಲ' ಎಂದು ಆ ಇಬ್ಬರು ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಹೇಳಿದ್ದರು.

ಆ ತೀರ್ಪಿಗೆ ಬಹುಮತ ದೊರೆಯದೇ ಇದ್ದ ಕಾರಣ, ಅದು ಮಾನ್ಯವಾಗಲಿಲ್ಲ. ಆದರೆ ಈಗ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನೀಡಿರುವ ತೀರ್ಪು ಸರಿಸುಮಾರು ಇದೇ ರೀತಿ ಇದೆ. ಸಂಸತ್ತಿನಲ್ಲಿ ಮತ ಚಲಾಯಿಸಲು ಮತ್ತು ಮಾತನಾಡಲು ಅಥವಾ ಪ್ರಶ್ನೆ ಕೇಳಲು ಲಂಚ ಪಡೆದರೂ ಕಾನೂನು ಕ್ರಮದಿಂದ ವಿನಾಯಿತಿ ಪಡೆಯಲು ಸಂಸದರಿಗೆ 1998ರ ಬಹುಮತದ ತೀರ್ಪು ನೆರವಾಗುತ್ತಿತ್ತು. ಈಗ ಅಂತಹ ವಿನಾಯಿತಿಯನ್ನು ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಪೀಠವು ತೆಗೆದುಹಾಕಿರುವುದರಿಂದ, ಸಂಸದರೂ ಕಾನೂನು ಕ್ರಮದ ವ್ಯಾಪ್ತಿಗೆ ಒಳಪಡುತ್ತಾರೆ.

ಲಂಚಕ್ಕೆ ವಿರುದ್ಧವಾಗಿ ವರ್ತಿಸಿದವರ ಮೇಲೇಯೇ ಕ್ರಮ

1993ರಲ್ಲಿ ನರಸಿಂಹರಾವ್ ಅವರ ಸರ್ಕಾರದ ಪರವಾಗಿ ಮತ ಚಲಾಯಿಸಲು ಅಜಿತ್ ಸಿಂಗ್ ಅವರು ಲಂಚ ಪಡೆದುಕೊಂಡಿದ್ದರು ಎಂದು ಪ್ರಕರಣದಲ್ಲಿ ವಿವರಿಸಲಾಗಿತ್ತು. ಆದರೆ ಅವರು ಮತ ಚಲಾವಣೆಯಿಂದ ದೂರ ಉಳಿದಿದ್ದರು. ಆದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು 1998ರಲ್ಲಿ ಸಂವಿಧಾನ ಪೀಠವು ನೀಡಿದ್ದ ಬಹುಮತದ ತೀರ್ಪಿನಲ್ಲಿ ಉಲ್ಲೇಖಿಸಿತ್ತು. 'ಈ ಸಂಸದರಿಗೆ ಸಂವಿಧಾನದ 105ನೇ ವಿಧಿಯ ಅಡಿ ಇರುವ ಕಾನೂನು ಕ್ರಮದ ವಿನಾಯಿತಿ ಅನ್ವಯವಾಗುವುದಿಲ್ಲ. ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಮೂವರು ನ್ಯಾಯಮೂರ್ತಿಗಳ ಬಹುಮತದ ತೀರ್ಪಿನಲ್ಲಿ ಆದೇಶಿಸಲಾಗಿತ್ತು.

ಆಗ ಅಲ್ಪಮತದ ತೀರ್ಪು ನೀಡಿದ್ದ ಇಬ್ಬರು ನ್ಯಾಯಮೂರ್ತಿಗಳು, ಲಂಚ ಪಡೆದುಕೊಂಡ ಆರೋಪದ ಅಡಿಯಲ್ಲಿ ಎಲ್ಲಾ ಸಂಸದರ ವಿರುದ್ಧವೂ ಪ್ರಕರಣ ದಾಖಲಾಗಬೇಕು ಮತ್ತು ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದರು.

1998ರ ತೀರ್ಪಿನಲ್ಲಿನ ಈ ಅಂಶವನ್ನು ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ತನ್ನ ತೀರ್ಪಿನಲ್ಲಿ ಪ್ರಸ್ತಾಪಿಸಿದೆ. 'ಲಂಚ ಪಡೆದುಕೊಂಡು ಮತ ಚಲಾಯಿಸಿದ ಸಂಸದರಿಗೆ ಕಾನೂನು ಕ್ರಮದಿಂದ ವಿನಾಯಿತಿ ನೀಡಲಾಗಿದೆ. ಆದರೆ ಲಂಚ ಪಡೆದುಕೊಂಡರೂ, ಅದಕ್ಕೆ ಅಡಿಯಾಳಾಗದೇ ಸ್ವತಂತ್ರವಾಗಿ ತನ್ನಿಚ್ಛೆಯಂತೆ ಮತ ಚಲಾಯಿಸಿದ ಸಂಸದ ಮಾತ್ರ ಕಾನೂನು ಕ್ರಮವನ್ನು ಎದುರಿಸಬೇಕಾಯಿತು. ಅದು ವಿರೋಧಭಾಸದ ತೀರ್ಪು' ಎಂದು ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಅಭಿಪ್ರಾಯಪಟ್ಟಿದೆ.

'ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ'

'ಲಂಚ ಪಡೆದುಕೊಂಡು, ಅದರ ಪ್ರಕಾರ ಸಂಸತ್ತಿನಲ್ಲಿ ಮತ ಚಲಾಯಿಸಿದ ಅಥವಾ ಮಾತನಾಡಿದ ಸಂಸದರಿಗೆ ಕಾನೂನು ಕ್ರಮದ ವಿನಾಯಿತಿ ನೀಡುವುದು ಸರಿಯಲ್ಲ. ಲಂಚ ಪಡೆದುಕೊಂಡ ಅಪರಾಧವೆಸಗಿದ ಸಂಸದನನ್ನು ದೇಶದ ಕಾನೂನಿಗಿಂತ ಮೇಲೆ ಎಂದು ಪರಿಗಣಿಸುವುದು ಸಂಸದೀಯ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದು. ಅಲ್ಲದೆ ಅದರಿಂದ ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತರುವಂತಹ ನಿರೂಪಣೆ ಇದು. ಹೀಗಾಗಿ ಇಂತಹ ಅಪರಾಧ ಕೃತ್ಯವೆಸಗಿದ ಸಂಸದರನ್ನು ಕಾನೂನು ವಿಮರ್ಶೆಗೆ ಒಳಪಡಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು 1998ರ ಅಲ್ಪಮತದ ತೀರ್ಪಿನಲ್ಲಿ ಇಬ್ಬರು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟಿದ್ದರು.

ಈಗಿನ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವೂ ಇದೇ ಸ್ವರೂಪದ ಅಭಿಪ್ರಾಯಗಳನ್ನು ತನ್ನ ತೀರ್ಪಿನಲ್ಲಿ ವ್ಯಕ್ತಪಡಿಸಿದೆ. 'ಸಂಸದರು ಮತ್ತು ಶಾಸಕರು ಲಂಚ ಪಡೆಯುವುದು ಮತ್ತು ಭ್ರಷ್ಟಾಚಾರ ಎಸಗುವುದು ಸಂಸದೀಯ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯನ್ನು ಧ್ವಂಸಗೊಳಿಸುತ್ತದೆ' ಎಂದು ಪೀಠವು ಹೇಳಿದೆ.

ಜೆಎಂಎಂ ಲಂಚ ಪ್ರಕರಣ

1991ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಸರ್ಕಾರಕ್ಕೆ ಬಹುಮತ ಇಲ್ಲ ಎಂದು ಅದರ ವಿರುದ್ಧ ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲಾಗಿತ್ತು. ಅವಿಶ್ವಾಸ ಗೊತ್ತುವಳಿಯ ವಿರುದ್ಧ 265 ಮತಗಳು ಬಂದಿದ್ದರೆ, ಗೊತ್ತುವಳಿಯ ಪರವಾಗಿ 251 ಮತಗಳು ಬಂದಿದ್ದವು. ಪಿ.ವಿ.ನರಸಿಂಹರಾವ್ ಅವರ ಸರ್ಕಾರವು ಉಳಿದಿತ್ತು.

ಆದರೆ ನರಸಿಂಹರಾವ್ ಮತ್ತಿತರರು ಅವಿಶ್ವಾಸ ಗೊತ್ತುವಳಿ ವಿರುದ್ಧ ಮತ ಚಲಾಯಿಸುವಂತೆ ಕೆಲವು ಸಂಸದರನ್ನು ಒತ್ತಾಯಿಸಲು ಸಂಚು ರೂಪಿಸಿದ್ದರು ಎಂದು ದೂರು ದಾಖಲಿಸಲಾಗಿತ್ತು. ಸಿಬಿಐ ಆ ಪ್ರಕರಣವನ್ನು ಕೈಗೆತ್ತಿಕೊಂಡಿತ್ತು. ಲಂಚ ನೀಡಿದವರು ಮತ್ತು ಲಂಚ ಪಡೆದುಕೊಂಡವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಲಂಚ ಪಡೆದುಕೊಂಡು ಮತ ಚಲಾಯಿಸಿದ್ದವರಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಸಂಸದರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಹೀಗಾಗಿ ಅದನ್ನು ಜೆಎಂಎಂ ಲಂಚ ಪ್ರಕರಣ ಎಂದೇ ಕರೆಯಲಾಗುತ್ತಿತ್ತು. ಈ ಪ್ರಕರಣದಲ್ಲಿ ಒಟ್ಟು ₹2.80 ಕೋಟಿಯಷ್ಟು ಮೊತ್ತವನ್ನು ಲಂಚವಾಗಿ ನೀಡಲಾಗಿತ್ತು ಎಂದು ಸಿಬಿಐ ಆರೋಪಪಟ್ಟಿ ಸಲ್ಲಿಸಿತ್ತು.

ಆಧಾರ: 1998ರಲ್ಲಿ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನೀಡಿದ್ದ ತೀರ್ಪು, ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ತೀರ್ಪು, ಪಿಟಿಐ

ಸಿನಿ ಬಿಟ್ಸ್

ಮಾರ್ಚ್ 7ಕ್ಕೆ 'ಜೋಗ್ 101'

ತೇಜಸ್ವಿನಿ, ವಿಜಯ ರಾಘವೇಂದ್ರ

ಕಳೆದೊಂದು ವರ್ಷದಲ್ಲಿ ವಿಜಯ ರಾಘವೇಂದ್ರ ನಟನೆಯ ಸಾಲು ಸಾಲು ಸಿನಿಮಾಗಳು ತೆರೆಕಂಡಿವೆ. ಇದೀಗ 'ಕೇಸ್ ಆಫ್ ಕೊಂಡಾಣ' ಸಿನಿಮಾ ಬಳಿಕ ವಿಜಯ್ ನಟನೆಯ 'ಜೋಗ್ 101' ಸಿನಿಮಾ ಇದೇ ಗುರುವಾರ(ಮಾರ್ಚ್ 7) ಬಿಡುಗಡೆಯಾಗುತ್ತಿದೆ.

ರಾಘು ಅವರ ಸೆವೆನ್ ಸ್ಟಾರ್ ಪಿಕ್ಚರ್ಸ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ವಿಜಯ್ ಕನ್ನಡಿಗ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಹಾಗೂ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ. ಈ ಚಿತ್ರದಲ್ಲಿ ಪ್ರೀತಿ, ಹಾಸ್ಯ ಸೇರಿದಂತೆ ಎಲ್ಲ ಅಂಶಗಳೂ ಇವೆ. ನನ್ನ ಚಿತ್ರಗಳಲ್ಲಿ ಒಂದೆರೆಡು ಹಿಟ್ ಹಾಡುಗಳು ಇರುತ್ತಿದ್ದವು. ಆದರೆ ಇತ್ತೀಚಿನ ನನ್ನ ಸಿನಿಮಾಗಳಲ್ಲಿ ಅಂತಹ ಹಿಟ್ ಹಾಡುಗಳು ಯಾವುದು ಇರಲಿಲ್ಲ. 'ಜೋಗ್ 101' ಚಿತ್ರದ ಹಾಡುಗಳು ಆ ಕೊರತೆಯನ್ನು ನೀಗಿಸಿವೆ. ಈ ಚಿತ್ರದಲ್ಲಿ ವಿಕ್ರಮ್ ಎಂಬ ಪಾತ್ರವನ್ನು ನಿಭಾಯಿಸಿದ್ದು, ಸುನೀತ್ ಹಲಗೇರಿ ಅವರ ಕ್ಯಾಮೆರಾ ಮೂಲಕ ಜೋಗವನ್ನು ನೋಡುವುದೇ ಅದ್ಭುತ' ಎಂದರು ವಿಜಯ ರಾಘವೇಂದ್ರ.

ಚಿತ್ರದಲ್ಲಿ ನಾಯಕಿಯಾಗಿ ತೇಜಸ್ವಿನಿ ನಟಿಸಿದ್ದು, 'ದಿಶಾ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವಿನಾಶ್ ಆರ್. ಬಾಸೂತ್ಕರ್ ಸಂಗೀತ ನಿರ್ದೇಶನ, ಸುನೀತ್ ಹಲಗೇರಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಥ್ರಿಲ್ಲರ್ ಮಂಜು ಸಾಹಸ ದೃಶ್ಯಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಗೋವಿಂದೇ ಗೌಡ, ಕಡ್ಡಿಪುಡಿ ಚಂದ್ರು, ರಾಜೇಶ್ ನಟರಂಗ, ತಿಲಕ್, ನಿರಂಜನ್ ದೇಶಪಾಂಡೆ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ತಮನ್ನಾ ಜೊತೆ ವಸಿಷ್ಠ ಸಿನಿಮಾ

ಓದೆಲ ಚಿತ್ರತಂಡ

ಅಭಿನಯ ಹಾಗೂ ಕಂಚಿನ ಕಂಠದ ಮೂಲಕ ಪ್ರೇಕ್ಷಕರನ್ನು ಸೆಳೆಯುತ್ತಿರುವ ನಟ ವಸಿಷ್ಠ ಸಿಂಹ, ಬಹುಭಾಷಾ ನಟಿ ತಮನ್ನಾ ಜೊತೆ ಸಿನಿಮಾವೊಂದರಲ್ಲಿ ನಟಿಸುತ್ತಿದ್ದಾರೆ.

ಗಾಯಕನಾಗಿ ತೆಲುಗು ಚಿತ್ರಕ್ಕೆ ಪರಿಚಿತರಾಗಿದ್ದ ವಸಿಷ್ಠ 'ಓದೆಲ ರೈಲ್ವೆ ಸ್ಟೇಷನ್' ಸಿನಿಮಾ ಮೂಲಕ ನಾಯಕನಾಗಿ ತೆಲುಗು ಪ್ರೇಕ್ಷಕರಿಗೆ ಪರಿಚಿತವಾಗಿದ್ದರು. 2022ರಲ್ಲಿ 'ಆಹಾ' ಒಟಿಟಿಯಲ್ಲಿ ಬಿಡುಗಡೆಯಾಗಿದ್ದ ಈ ಸಿನಿಮಾಗೆ ಉತ್ತಮವಾದ ಪ್ರತಿಕ್ರಿಯೆ ದೊರೆತಿತ್ತು. ಅಶೋಕ್ ತೇಜ ಆ್ಯಕ್ಷನ್ ಕಟ್ ಹೇಳಿದ್ದ ಈ ಚಿತ್ರದಲ್ಲಿ ವಸಿಷ್ಠ ವಿಭಿನ್ನ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದರು. ಇದೀಗ ಇದೇ ಸಿನಿಮಾದ ಎರಡನೇ ಭಾಗ ಸೆಟ್ಟೇರಿದ್ದು, ಇತ್ತೀಚೆಗೆ ಉತ್ತರ ಪ್ರದೇಶದ ವಾರಾಣಸಿಯಲ್ಲಿ ಮುಹೂರ್ತ ನಡೆದಿದೆ. 'ಮಿಲ್ಕಿ ಬ್ಯೂಟಿ' ತಮನ್ನಾ ಹಾಗೂ ವಸಿಷ್ಠ ಸಿಂಹ ಈ ಸಿನಿಮಾದಲ್ಲಿ ನಟಿಸಲಿದ್ದಾರೆ. ವಸಿಷ್ಠ ಅವರ ಪತ್ನಿ, ನಟಿ ಹರಿಪ್ರಿಯಾ ಅವರೂ ಈ ಸಿನಿಮಾದಲ್ಲಿ ಇದ್ದಾರೆ.

ನೈಜ ಘಟನೆ ಆಧಾರಿತ 'ಓದೆಲ ರೈಲ್ವೆ ಸ್ಟೇಷನ್' ಮೊದಲ ಭಾಗದಲ್ಲಿ ನಟಿ ಹೆಭಾ ಪಟೇಲ್ ಜೊತೆ ವಸಿಷ್ಠ ಅಭಿನಯಿಸಿದ್ದರು. ಎರಡನೇ ಭಾಗದಲ್ಲೂ ಹೆಭಾ ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ ಎಂದಿದೆ ಚಿತ್ರತಂಡ. ಡಿ. ಮಧು ಈ ಚಿತ್ರ ನಿರ್ಮಾಣ ಮಾಡುತ್ತಿದ್ದು, ಸೌಂದರ್ ರಾಜನ್ ಎಸ್. ಛಾಯಾಚಿತ್ರಗ್ರಹಣ, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'ಉತ್ತರ ಪ್ರದೇಶದ ಎಲ್ಲಾ 57 ಜಿಲ್ಲೆಗಳಲ್ಲಿ ಸೈಬರ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದ್ದೇವೆ. ರಾಜ್ಯವೊಂದರ ಎಲ್ಲಾ ಜಿಲ್ಲೆಗಳಲ್ಲೂ ಸೈಬರ್ ಪೊಲೀಸ್ ಠಾಣೆ ಸ್ಥಾಪಿಸಿದ ದೇಶದ ಮೊದಲ ರಾಜ್ಯ ಉತ್ತರ ಪ್ರದೇಶ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಿಜೆಪಿ ಅಧಿಕಾರದಲ್ಲಿ ಇದ್ದರೆ ಇವೆಲ್ಲವೂ ಸಾಧ್ಯ ಎಂದು ಹಲವರು ಆ ವಿಡಿಯೊಗೆ ಪ್ರತಿಕ್ರಿಯೆ ನೀಡಿದ್ದಾರೆ. ಯೋಗಿ ಅವರ ಹೇಳಿಕೆಯ ಆಧಾರದಲ್ಲಿ ಹಲವು ಸುದ್ದಿ ಮಾಧ್ಯಮಗಳು ವರದಿ ಪ್ರಕಟಿಸಿವೆ. ಆದರೆ, ಯೋಗಿ ಅವರು ವಿಡಿಯೊದಲ್ಲಿ ನೀಡಿರುವುದು ತಪ್ಪು ಮಾಹಿತಿ.

ದೇಶದಲ್ಲೇ ಮೊದಲ ಸೈಬರ್ ಪೊಲೀಸ್ ಠಾಣೆ ಆರಂಭವಾಗಿದ್ದು ಬೆಂಗಳೂರಿನಲ್ಲಿ (2001). ರಾಜ್ಯವೊಂದರ ಎಲ್ಲಾ ಜಿಲ್ಲೆಗಳಲ್ಲೂ ಸೈಬರ್ ಪೊಲೀಸ್ ಠಾಣೆಗಳನ್ನು ಆರಂಭಿಸಿದ ಮೊದಲ ರಾಜ್ಯ ಮಹಾರಾಷ್ಟ್ರ. ಹರಿಯಾಣದ ಎಲ್ಲಾ ಜಿಲ್ಲೆಗಳಲ್ಲೂ ಸೈಬರ್ ಪೊಲೀಸ್ ಠಾಣೆಗಳಿವೆ. ಬಿಹಾರ ಸರ್ಕಾರವು 2023ರಲ್ಲಿ ತನ್ನೆಲ್ಲಾ ಜಿಲ್ಲೆಗಳಲ್ಲಿ ಸೈಬರ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿತ್ತು. ಆ ರಾಜ್ಯಗಳ ಸಾಲಿಗೆ ಉತ್ತರ ಪ್ರದೇಶವು ಈಗ ಸೇರಿದೆಯಷ್ಟೆ. ಹೀಗಾಗಿ ಎಲ್ಲಾ ಜಿಲ್ಲೆಗಳಲ್ಲೂ ಸೈಬರ್ ಪೊಲೀಸ್ ಠಾಣೆ ಸ್ಥಾಪಿಸಿದ ಮೊದಲ ರಾಜ್ಯ ಉತ್ತರ ಪ್ರದೇಶ ಎಂದು ಯೋಗಿ ಅವರು ಹೇಳಿರುವುದು ಸುಳ್ಳು ಮಾಹಿತಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದುಡ್ಡಿನ ಅಹಂಕಾರ

ನುಡಿ ಬೆಳಗು



ಪಿ. ಚಂದ್ರಿಕಾ

ಬಡ ಹುಡುಗಿಯೊಬ್ಬಳು ದೊಡ್ಡ ಸಾಹುಕಾರನ ಮನೆಗೆ ಮದುವೆಯಾಗಿ ಹೋಗುತ್ತಾಳೆ. ಅವಳು ಮನೆಗೆ ಬಂದ ಮೇಲೆ ಆ ಮನೆಯ ಸಂಪತ್ತು ಇನ್ನಷ್ಟು ವೃದ್ಧಿಸುತ್ತದೆ. ಎಲ್ಲರೂ ಆಕೆಯ ಅದೃಷ್ಟವನ್ನು ಹೊಗಳುತ್ತಲಿರುತ್ತಾರೆ. ಅವಳು ಅದೃಷ್ಟ ದೇವತೆ ಎಂದು ಅವಳ ಗಂಡನ ಮನೆಯವರು ಕೂಡಾ ಭಾವಿಸುತ್ತಾರೆ. ಅವಳೂ ಬರಿಯ ವಜ್ರಾಭರಣವನ್ನಲ್ಲದೆ ಬೇರೆ ಆಭರಣವನ್ನು ಧರಿಸುತ್ತಿರಲಿಲ್ಲ. ರೇಷ್ಮೆ ಸೀರೆಯನ್ನಲ್ಲದೆ ಬೇರೆಯದನ್ನು ಉಡುತ್ತಿರಲಿಲ್ಲ. ಇದರಿಂದಾಗಿ ಅವಳ ಮನಸ್ಸಿನಲ್ಲಿ ಒಂದು ಅಹಂಭಾವ ಹುಟ್ಟಿಕೊಳ್ಳುತ್ತದೆ, ಈ ಜಗತ್ತಿನಲ್ಲಿ ನನಗಿಂತ ಅಪೂರ್ವವಾದ ಜೀವ ಇನ್ನೊಂದಿಲ್ಲ ಎಂದು. ಅವಳ ನಡೆ ನುಡಿಗಳೆಲ್ಲವೂ ಬದಲಾಗುತ್ತಾ ಬಂದವು.

ಅವಳ ಸ್ನೇಹಿತೆಯೊಬ್ಬಳು ಒಂದು ದಿನ ಅಚಾನಕ್ ಆಗಿ ಭೇಟಿಯಾದಳು. ತನ್ನ ಜೊತೆಯವಳು ಇಷ್ಟು ಎತ್ತರಕ್ಕೆ ಬೆಳೆದದ್ದು ಅವಳಿಗೆ ತುಂಬಾ ಸಂತಸ ತಂದಿತ್ತು. ಆದರೆ ಶ್ರೀಮಂತೆಯಾಗಿದ್ದ ಹುಡುಗಿಗೆ ಬಡವಳಾದ ತನ್ನ ಸ್ನೇಹಿತೆಯ ಮೇಲೆ ತಾತ್ಸಾರ. ತನ್ನ ಮಟ್ಟ ಎಂಥಾದ್ದು ಎಂದು ಜಂಭದಿಂದ ಹೇಳಿಕೊಳ್ಳ ತೊಡಗಿದ್ದಳು. ತನ್ನ ಅದೃಷ್ಟವನ್ನು ತಾನೇ ಹೊಗಳಿಕೊಳ್ಳುತ್ತಿದ್ದಳು. ಬಡ ಸ್ನೇಹಿತೆ ಇದನ್ನು ನಿರೀಕ್ಷಿಸಿರಲಿಲ್ಲ. ಈ ಅಹಮ್ಮಿನ ಮಾತುಗಳನ್ನು ಕೇಳಿ ಕೇಳಿ ಸಾಕಾಗಿಹೋಯಿತು ಅವಳಿಗೆ. 'ನೀನು ಮುಂಚಿನ ಹಾಗೆ ಇಲ್ಲ. ಹಿಂದಿನದನ್ನೆಲ್ಲಾ ಮರೆತು ಬಿಟ್ಟಿದ್ದೀಯ. ನಾವೆಲ್ಲಾ ಸಾಧಾರಣ ಬಾಲ್ಯವನ್ನು ಅನುಭವಿಸಿದರೂ ಎಂಥಾ ಅದ್ಭುತವಾದ ಅನುಭವಗಳನ್ನು ಪಡೆದಿದ್ದೆವು. ಅವೆಲ್ಲಾ ನಿನಗೆ ನೆನಪೇಕೆ ಆಗುತ್ತಿಲ್ಲ' ಎಂದು ತನ್ನ ಶ್ರೀಮಂತ ಗೆಳತಿಯನ್ನು ಕೇಳುತ್ತಾಳೆ. ಅದಕ್ಕೆ ಶ್ರೀಮಂತೆ ನಗುತ್ತಾ, 'ನನಗದರ ಅಗತ್ಯ ಇಲ್ಲ. ಈಗ ನನ್ನ ಬಳಿ ಇರುವ ಎಲ್ಲವೂ ಅಸಾಧಾರಣವಾದದ್ದು' ಎಂದು ನಗುತ್ತಾ 'ನೋಡು ಈ ಹಾರದ ಬೆಲೆ ಕೋಟಿಗಳಲ್ಲಿದೆ ನೀನು ಊಹೆ ಮಾಡಲಾರೆ' ಎನ್ನುತ್ತಾಳೆ.

ಶ್ರೀಮಂತೆಗೆ ಬುದ್ಧಿ ಕಲಿಸುವ ತೀರ್ಮಾನಕ್ಕೆ ಬಂದ ಗೆಳತಿ, 'ಹೌದಾ ಈ ಹಾರ ನಿನಗೆ ಚೆನ್ನಾಗಿ ಕಾಣುತ್ತಿದೆಯೋ ಇಲ್ಲವೋ ಎಂದು ನೋಡಿಕೋ' ಎಂದು ತನ್ನ ಬಳಿಯಿರುವ ಕನ್ನಡಿಯನ್ನು ಕೊಡುತ್ತಾಳೆ. ಜಂಭದಿಂದ, 'ಅಷ್ಟು ಹಣ ಕೊಟ್ಟ ಹಾರ ಚೆನ್ನಾಗಿಲ್ಲದೆ ಏನಾಗಿರುತ್ತದೆ?' ಎನ್ನುತ್ತಾ ಕನ್ನಡಿಯಲ್ಲಿ ನೋಡಿಕೊಳ್ಳುವ ಶ್ರೀಮಂತೆಯನ್ನು ಕೇಳುತ್ತಾಳೆ, 'ಈ ಕನ್ನಡಿಯ ಬೆಲೆ ಎಷ್ಟು ಗೊತ್ತಾ?'. ಅದಕ್ಕೆ ಶ್ರೀಮಂತೆ 'ಹಾ ಮಹಾ ಎಷ್ಟಿದ್ದೀತು ಅಬ್ಬಬ್ಬಾ ಎಂದರೆ ನೂರು ರೂಪಾಯಿ' ಎನ್ನುತ್ತಾಳೆ. ಅದಕ್ಕೆ ಬಡಸ್ನೇಹಿತೆ ನಗುತ್ತಾ 'ಇಲ್ಲ, ಬರಿಯ ಇಪ್ಪತ್ತು ರೂಪಾಯಿ, ಜಾತ್ರೆಯಲ್ಲಿ ಕೊಂಡಿದ್ದು' ಎನ್ನುತ್ತಾಳೆ. ಆ ಮಾತನ್ನು ಕೇಳುತ್ತಾ ತಾತ್ಸಾರದಿಂದ ಓಹ್ ಎನ್ನುತ್ತಾಳೆ ಶ್ರೀಮಂತೆ. ಆಗ ಬಡಸ್ನೇಹಿತೆ ನಿನ್ನ ಕೋಟಿಯ ಹಾರವನ್ನು ಕಾಣಿಸಲಿಕ್ಕೆ ಸಾಧಾರಣವಾದ ಕನ್ನಡಿಯೇ ಬೇಕೆನ್ನುವುದನ್ನು ನೆನಪಿಟ್ಟುಕೋ. ಇಲ್ಲದಿದ್ದರೆ ನಿನ್ನನ್ನೂ ನಿನ್ನ ಹಾರವನ್ನೂ ಯಾವುದೂ ಕಾಣಿಸುವುದಿಲ್ಲ. ಮತ್ತು ಕನ್ನಡಿಗೆ ನಾನು ನೀನು ಎನ್ನುವ ಭೇದವೂ ಇರುವುದಿಲ್ಲ. ಕನ್ನಡಿಯ ಹಾಗೆ ಎಲ್ಲವನ್ನೂ ತಾಳಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು' ಎನ್ನುತ್ತಾಳೆ. ಈ ಮಾತುಗಳು ಶ್ರೀಮಂತೆಯ ಅಹಂ ಮುರಿದು ಸ್ನೇಹದ ಮುಂದೆ ದುಡ್ಡಿನ ದುರಹಂಕಾರ ಸಲ್ಲದು ಎಂದು ತಿಳಿಯುತ್ತಾಳೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮಾರ್ಚ್ 5, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣನವಮಿ ಗಂ. 08-04 ನಕ್ಷತ್ರ: ಮೂಲಾ ಗಂ. 16-00 ಯೋಗ: ಸಿದ್ಧಿ (ಆಸ್ರಿಕ್) ಗಂ. 14-08 ಕರಣ: ಗರ ಗಂ. 08-04, ಕುಂಭ ಮಾಸದ 21 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-47 ಸೂರ್ಯಾಸ್ತ : 06-36

ಮುಸ್ಲಿಂ ದಿನಾಂಕ : 23 ಶಬನ್

ಅದೃಷ್ಟ ಸಂಖ್ಯೆ : 11, 6

ಮೇಷ: ಅತಿಯಾದ ಮಾತುಗಳಿಂದ ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು. ಕುಟುಂಬ ವರ್ಗದಲ್ಲಿ ಭಿನ್ನಾಭಿಪ್ರಾಯ ಕಂಡುಬರಬಹುದು. ದೇವತಾನುಗ್ರಹವನ್ನು ಸಂಪಾದಿಸಬೇಕು.

ವೃಷಭ: ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಸಮಾಜ ಸೇವೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಿರಿ. ನೀರಿನ ವ್ಯತ್ಯಾಸಗಳಾಗಿ ಅನಾರೋಗ್ಯ ಸಂಭವಿಸಬಹುದು.

ಮಿಥುನ: ವಿದ್ಯಾರ್ಥಿಗೆ ಶಿಕ್ಷಣ ಮುಂದುವರಿಸಲು ಸರ್ಕಾರದಿಂದ ಅಥವಾ ಬಂಧುಗಳಿಂದ ಸಹಾಯ ದೊರಕುವುದು. ಸಾಮಾಜಿಕ ಕಾರ್ಯಕ್ರಮಗಳಿಂದ ಖ್ಯಾತಿ ಪಡೆಯಲಿದ್ದೀರಿ. ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಯಾಗುವಿರಿ.

ಕರ್ಕಾಟಕ: ಮನೆ ಮತ್ತು ಕೆಲಸದ ನಡುವೆ ಸಮನ್ವಯತೆ ಕಾಪಾಡಿಕೊಳ್ಳಲು ಕಷ್ಟವೆನಿಸಬಹುದು. ಪತ್ನಿ ವರ್ಗದವರ ಆಗಮನದಿಂದ ಸಂತಸದ ವಾತಾವರಣವಿರುವುದು. ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವೆನಿಸಲಿದೆ.

ಸಿಂಹ: ದಾಂಪತ್ಯದಲ್ಲಿ ಕಿರಿಕಿರಿ ಉಂಟಾಗಿ ಮನೆಯಲ್ಲಿ ಅಶಾಂತಿಯ ವಾತಾವರಣ ತೋರಿಬರಲಿದೆ. ಅಧಿಕಾರಿಗಳ ಮೇಲೆ ಗೌರವಾನ್ವಿತ ದೃಷ್ಟಿಕೋನವನ್ನು ಇಟ್ಟುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನ ಪಡೆಯಲಿದ್ದೀರಿ.

ಕನ್ಯಾ: ಹಿತಶತ್ರುಗಳ, ಪ್ರತಿಸ್ಪರ್ಧಿಗಳ ವಿದ್ರೋಹ ಅನುಭವಕ್ಕೆ ಬಂದೀತು. ಮಾತಿನ ಚತುರತೆಯಿಂದ ನೀವಾಡುವ ಮಾತಿಗೆ ಮರುಳಾಗುವರು. ಕಲಾವಿದರಿಗೆ ಇಂದು ಅತ್ಯುತ್ತಮ ದಿನವಾಗಿರುವುದು.

ತುಲಾ: ವ್ಯಕ್ತಿ ಗೌರವ ಕಾಪಾಡಿಕೊಳ್ಳಲು ಸುತ್ತಲಿನ ವಾತಾವರಣಕ್ಕೆ ಹೊಂದಿಕೊಳ್ಳಲೇಬೇಕಾದ ಅನಿವಾರ್ಯತೆ ಬರಲಿದೆ. ಮನೋಭಿಲಾಷೆಗಳು ಈಡೇರಿ ಮನಸ್ಸಿಗೆ ಸಂತೋಷವಾಗುವುದು.

ವೃಶ್ಚಿಕ: ಜೀವನ ಶೈಲಿಗೆ ಸಂಬಂಧಿಸಿದಂತೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸುಸಮಯ. ಆಭರಣ ಅಥವಾ ಕಲಾವಸ್ತುಗಳನ್ನು ಖರೀದಿಸುವ ಮನಸ್ಸಾಗುವುದು. ಈ ದಿನ ಕೃಷಿಕರಿಗೆ ವರಮಾನ ಹೆಚ್ಚಲಿದೆ.

ಧನು: ಚರ್ಮಸಂಬಂಧ ಅನಾರೋಗ್ಯವು ಕಾಣಿಸಿದಲ್ಲಿ ಆಯುರ್ವೇದದ ಮೊರೆ ಹೋಗುವುದರಿಂದ ಸಮಸ್ಯೆಗೆ ಶಾಶ್ವತವಾಗಿ ಉತ್ತರ ದೊರಕಲಿದೆ. ಲೇವಾದೇವಿ ವ್ಯವಹಾರದಿಂದ ಸಮಸ್ಯೆ ಉದ್ಭವಿಸಬಹುದು.

ಮಕರ: ಹೊಸದನ್ನು ಕಲಿಯುವ ಉತ್ಸಾಹ ನಿಮ್ಮಲ್ಲಿದೆ. ಅದರ ಜೊತೆಗೆ ಬದುಕಿನ ಅನುಭವಗಳು ನಿಮ್ಮನ್ನು ಯಶಸ್ಸಿನತ್ತ ಕರೆದೊಯ್ಯಬಹುದು. ಸಹನೆಯನ್ನು ಪರೀಕ್ಷಿಸುವ ಸಂದರ್ಭ ಎದುರಾಗಬಹುದು.

ಕುಂಭ: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಪೌಷ್ಟಿಕವಾದ ಆಹಾರ ಸೇವನೆ ಮತ್ತು ಕೆಲಸದ ತೀವ್ರತೆಯ ಸಡಿಲಿಕೆಯಂಥ ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ನಿರ್ದಿಷ್ಟ ಕೆಲಸಗಳಿಗೆ ಗಮನ ಕೊಡುವುದು ಒಳ್ಳೆಯದು.

ಮೀನ: ಸ್ವಾರ್ಥಕ್ಕಾಗಿ ಅಥವಾ ಇಷ್ಟಾರ್ಥದ ಈಡೇರಿಕೆಗಾಗಲಿ ಪರರಿಗೆ ಹಿಂಸೆಯನ್ನು ಮಾಡಬೇಡಿ. ಕಮಿಷನ್ ವ್ಯಾಪಾರದ ವೃತ್ತಿಯಲ್ಲಿರುವವರಿಗೆ ಈ ದಿನ ಲಾಭಾಂಶ ವೃದ್ಧಿಯಾಗುವುದು. ಆರೋಗ್ಯದ ಕಡೆ ಗಮನವಿರಲಿ.

ಪದಬಂಧ 5611

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
2.ಕಡಿದಾದ ಕೊರಕಲು (3)
4.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
6.ಉಮೇದುವಾರನ ಹೊಟ್ಟೆ! (3)
7.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಬಣ್ಣ ಹಚ್ಚಿಕೊಂಡು ಮಾಡಿದ ವರ್ಣನೆ (3)
13.ಪ್ರತ್ಯಕ್ಷ ಪದದ ವಿರುದ್ಧ ಪದ (3)
14.ನವಜೀವನವಿದು (4)

ಮೇಲಿಂದ ಕೆಳಕ್ಕೆ

1.ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
2.ಅತಿ ತೀಕ್ಷ್ಣವಾದುದನ್ನು ಹೀಗೆನ್ನಿ (3)
3.ತಲೆ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
5.ಬೆಡಗು ಅಥವಾ ಕ್ರೀಡೆ ಎಂದರೂ ಆದೀತು (3)
6.ದಾಹವಿದ್ದಾಗ ನೀಡಿದ ದೃಷ್ಟಾಂತ (5)
8.ಮುಸಲ್ಮಾನರ ದೊರೆಯಿವನು (3)
9.ಆರೋಪದಲ್ಲಿ ಕೊನೆಗೊಂಡಿರುವ ಮುತ್ತಾಯ! (4)
10.ಸಂಬಂಧಾವಲಂಬಿಯಾದುದು (3)
12.ಮರಳು ನೋಡುತ್ತಿರುವವನ ಛಾಯೆಯಿದು (3)



5610 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಣಯಕಲಹ 4.ರಸಮಯ
5.ಫಲಕ 7.ಸ್ಥಾವರ
10.ಉಬ್ಬಕ 12.ವಲ್ಲರಿ
13.ಬಾಲರವಿ 15.ಪ್ರತ್ಯಕ್ಷಪ್ರಮಾಣ

ಮೇಲಿಂದ ಕೆಳಕ್ಕೆ:
1.ಪ್ರತಿಫಲ 2.ಹರ
3.ಆಯುಷ್ಕರ್ಮ 6.ಕಮಂಡಲು
7.ಸ್ಥಾಪಕ 8.ರಕ್ತಸ್ರಾವ
9.ಪುಷ್ಪಬಾಣ 11.ಹರಿವಾಣ
14.ವಿಪ್ರ

ಸುಡೊಕು 5996

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5995 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಷೇರುಪೇಟೆ ವಹಿವಾಟು 66



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,378
ಇಂದಿನ ಅಂತ್ಯ	22,405
▲	27
ದಿನದ ಗರಿಷ್ಠ	22,440

ವಿನಿಮಯ ದರ

$ ಡಾಲರ್	82.90
£ ಪೌಂಡ್	105.10
€ ಯುರೊ	89.95
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1500 (1510)
ಸೋಯಾ (ರಿಫೈನ್ಡ್)	₹925 (925)
ಸೂರ್ಯಕಾಂತಿ (ರಿಫೈನ್ಡ್)	₹920 (930)
ಪಾಮೋಲಿನ್	₹878 (878)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹312-460
ದ್ವಿತಳಿ (ಬಿ.ವಿ) ₹339-555

ಎನ್.ಆರ್.ಪುರ ರಬ್ಬರ್
(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹163.50
ಆರ್‌ಎಸ್‌ಎಸ್-5 ₹158.50
ಗುಡ್ ಲಾಟ್ ₹146

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹4000-4000
ಬಂಟ್ವಾಳ	₹7000-8000
ಬೆಂಗಳೂರು	₹13000-14000
ತಿಪಟೂರು	₹8000-10000

ವಿಶ್ವಂಬರಿ ಸ್ತುತಿಗೆ ನೀತಾ ಅಂಬಾನಿ ನೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಹಾಗೂ ನೀತಾ ಅಂಬಾನಿ ಅವರ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹಪೂರ್ವ ಕಾರ್ಯಕ್ರಮ ಗುಜರಾತ್‌ನ ಜಾಮ್ ನಗರದಲ್ಲಿ ನಡೆಯಿತು.

ನೀತಾ ಅಂಬಾನಿ ಅವರು, ಇತರೆ ನೃತ್ಯಪಟುಗಳ ಜೊತೆಗೂಡಿ ವಿಶ್ವಂಬರಿ ಸ್ತುತಿಗೆ ಶಾಸ್ತ್ರೀಯ ನೃತ್ಯವನ್ನು ಪ್ರಸ್ತುತಪಡಿಸಿದರು. ತಾಯಿ ಭಗವತಿ ಹಾಗೂ ಸ್ತ್ರೀ ಶಕ್ತಿಯ ಮಹತ್ವವನ್ನು ನೃತ್ಯದ ಮೂಲಕ ಸಾದರಪಡಿಸಿದರು.

ರಾಧಿಕಾ ಮರ್ಚೆಂಟ್ ಕೂಡ ನೃತ್ಯಪಟು. ಕುಟುಂಬದ ಕಾರ್ಯಕ್ರಮಗಳಲ್ಲಿ ಸ್ವತಃ ನೀತಾ ಅಂಬಾನಿ ಅವರು ಈ ಹಿಂದೆಯೂ ನೃತ್ಯ ಪ್ರದರ್ಶನ ನೀಡಿದ್ದರು.

ದೇಶ, ವಿದೇಶಗಳಿಂದ ಕಾರ್ಯಕ್ರಮಕ್ಕೆ ನೂರಾರು ಗಣ್ಯರು ಆಗಮಿಸಿದ್ದು, ಎಲ್ಲರಿಗೂ ಭಾರತೀಯ ಸಂಪ್ರದಾಯದಂತೆಯೇ ಸ್ವಾಗತ ಕೋರಲಾಗಿದೆ.

ಸಾರ್ವಕಾಲಿಕ ಗರಿಷ್ಠಕ್ಕೆ ಷೇರು ಸೂಚ್ಯಂಕಗಳು

ಮುಂಬೈ (ಪಿಟಿಐ): ದಿನದ ವಹಿವಾಟಿನಲ್ಲಿ ಇಂಧನ ಮತ್ತು ಬ್ಯಾಂಕ್ ಷೇರುಗಳು ಗಳಿಕೆ ಕಂಡಿದ್ದರಿಂದ ಷೇರು ಸೂಚ್ಯಂಕಗಳು ಸೋಮವಾರ ಗರಿಷ್ಠ ಮಟ್ಟ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 66 ಅಂಶ ಏರಿಕೆಯಾಗಿ 73,872ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 73,990 ಅಂಶಕ್ಕೆ ಜಿಗಿತ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 27 ಅಂಶ ಹೆಚ್ಚಳವಾಗಿ 22,405ಕ್ಕೆ ಕೊನೆಗೊಂಡಿತು. ವಹಿವಾಟಿನ ವೇಳೆ ಸೂಚ್ಯಂಕವು 22,440 ಅಂಶಕ್ಕೆ ಮುಟ್ಟಿತ್ತು. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ.

ಎನ್‌ಟಿಪಿಸಿ, ಪವರ್‌ಗ್ರಿಡ್, ರಿಲಯನ್ಸ್ ಇಂಡಸ್ಟ್ರೀಸ್, ಬಜಾಜ್ ಫಿನ್‌ಸರ್ವ್, ಎಕ್ಸಿಸ್ ಬ್ಯಾಂಕ್, ಟೆಕ್ ಮಹೀಂದ್ರ, ಐಸಿಐಸಿಐ ಬ್ಯಾಂಕ್, ಭಾರ್ತಿ ಏರ್‌ಟೆಲ್ ಮತ್ತು ಇಂಡಸ್‌ಇಂಡ್ ಬ್ಯಾಂಕ್ ಗಳಿಕೆ ಕಂಡಿವೆ.

ಜೆಎಸ್‌ಡಬ್ಲ್ಯು ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಅಲ್ಟ್ರಾ ಟೆಕ್ ಸಿಮೆಂಟ್, ಇನ್ಫೊಸಿಸ್ ಮತ್ತು ಟೈಟನ್ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-34000
ಹಳತು	34000-42500
ಚಿತ್ರದುರ್ಗ	
ಅಪಿ	46629-47059
ಬೆಟ್ಟೆ	33619-34099
ಕೆಂಪುಗೋಟು	26600-27000
ರಾಶಿ	46139-46569
ಕಾರ್ಕಳ	
ಹೊಸತು	25000-34500
ಹಳತು	30000-43500
ಕುಮಟ	
ಚಿಪ್ಪು	25069-28999
ಕೋಕ	14569-25399
ಫ್ಯಾಕ್ಟರಿ	11309-21400

ಹಳೆಚಾಲಿ	33099-35239
ಹೊಸಚಾಲಿ	30899-34019
ಪುತ್ತೂರು	
ಹೊಸತು	26500-34000
ಸಾಗರ	
ಬಿಳಿಗೋಟು	16869-24599
ಚಾಲಿ	27290-34000
ಕೋಕ	20199-26499
ಕೆಂಪುಗೋಟು	18569-34309
ರಾಶಿ	28889-47999
ಸಿಪ್ಪೆಗೋಟು	8290-17370
ಸಿದ್ದಾಪುರ	
ಬಿಳಿಗೋಟು	24319-33899
ಚಾಲಿ	34039-36339
ಕೋಕ	24369-28800
ಹೊಸಚಾಲಿ	29111-33400
ಕೆಂಪುಗೋಟು	30389-33689

ರಾಶಿ	42099-46399
ತಟ್ಟಿಬೆಟ್ಟೆ	39019-43899
ಶಿರಸಿ	
ಬೆಟ್ಟೆ	37009-44581
ಬಿಳಿಗೋಟು	23899-29699
ಚಾಲಿ	30891-34581
ಕೆಂಪುಗೋಟು	25899-34808
ರಾಶಿ	43909-48209
ಯಲ್ಲಾಪುರ	
ಅಪಿ	57199-57199
ಬಿಳಿಗೋಟು	20692-28711
ಚಾಲಿ	30899-37741
ಕೋಕ	14899-25120
ಕೆಂಪುಗೋಟು	28899-34109
ರಾಶಿ	43450-54299
ತಟ್ಟಿಬೆಟ್ಟೆ	36899-42869

ಮುಂಬೈ ಧಾರಣೆ

ಶೇಂಗಾ
04-03-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1520)
ಒಂದು ವಾರದ ಡೆಲಿವರಿ	1505 (1515)
ಸೋಯಾ ಕಚ್ಚಾ	920 (920)
ಪಾಮ್ ವಾರದ ಡೆಲಿವರಿ	880 (877)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹63,350 (63,300)
ಬೆಳ್ಳಿ ಕೆ.ಜಿ ₹70,900 (70,650)

ಆವರಣದಲ್ಲಿ ಶನಿವಾರದ ಧಾರಣೆ

ಹೆಚ್ಚುವರಿಯಾಗಿ 6,750 ಟನ್ ಉಂಡೆ ಕೊಬ್ಬರಿ ಖರೀದಿಸಲು ಕೇಂದ್ರ ಸರ್ಕಾರ ಒಪ್ಪಿಗೆ

69,250 ಟನ್ ಖರೀದಿಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಮನವಿಗೆ ಕೇಂದ್ರ ಸರ್ಕಾರವು ಸ್ಪಂದಿಸಿದ್ದು, ಪ್ರಸಕ್ತ ಋತುವಿನಡಿ ರಾಜ್ಯದಲ್ಲಿ ಒಟ್ಟು 69,250 ಟನ್ ಉಂಡೆ ಕೊಬ್ಬರಿ ಖರೀದಿಗೆ ಅನುಮತಿ ನೀಡಿದೆ.

ಕೇಂದ್ರವು ಬೆಂಬಲ ಬೆಲೆ ಯೋಜನೆಯಡಿ ರಾಜ್ಯದಲ್ಲಿ ಉತ್ಪಾದನೆಯಾಗುವ ಶೇ 25ರಷ್ಟು ಕೊಬ್ಬರಿಯನ್ನು ಮಾತ್ರ ಖರೀದಿಸಲಿದೆ.

ಈ ಮೊದಲು 62,500 ಟನ್ ಖರೀದಿಸಲು ಅನುಮತಿ ನೀಡಿತ್ತು. ಆದರೆ, ಮುಕ್ತ ಮಾರುಕಟ್ಟೆಯಲ್ಲಿ ಕೊಬ್ಬರಿ ಧಾರಣೆಯು ಕುಸಿದಿದೆ. ರೈತರ ಬಳಿ ದಾಸ್ತಾನು ಇರುವ ಕೊಬ್ಬರಿ ಪೈಕಿ ಅರ್ಧದಷ್ಟನ್ನು ಖರೀದಿಸಬೇಕು. ಕೇರಳ, ತಮಿಳುನಾಡಿಗೆ ನಿಗದಿಪಡಿಸಿರುವ ಮಾನದಂಡವನ್ನೇ ಕರ್ನಾಟಕಕ್ಕೂ ಅನ್ವಯಿಸಬಾರದು ಎಂದು ರಾಜ್ಯ ಸರ್ಕಾರ ಕೋರಿತ್ತು. ಈ ಮನವಿಯನ್ನು ಕೇಂದ್ರವು ಪುರಸ್ಕರಿಸಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳೆಗಾರರ ಹೆಸರಲ್ಲಿ ವರ್ತಕರು ನೋಂದಣಿ ಮಾಡಿಸಿದ್ದಾರೆ ಎಂಬ ಆರೋಪ ಕೇಳಿಬಂದಿದ್ದರಿಂದ ರಾಜ್ಯ ಸರ್ಕಾರವು ಹಳೆಯ ನೋಂದಣಿಯನ್ನು ರದ್ದುಪಡಿಸಿದ್ದು, ಹೊಸ ನೋಂದಣಿಗೆ 45 ದಿನಗಳ ಕಾಲಾವಕಾಶ ನೀಡಿದೆ.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದಿಂದ ರೈತರ ಹೆಸರು ನೋಂದಣಿ ಆರಂಭವಾಗಿದ್ದು, ಒಟ್ಟು 76 ಕೇಂದ್ರಗಳನ್ನು ತೆರೆಯಲಾಗಿದೆ.

'ಬೆಳಿಗ್ಗೆ ಕೆಲವು ಕೇಂದ್ರಗಳಲ್ಲಿ ಸರ್ವರ್ ಸಮಸ್ಯೆ ತಲೆದೋರಿತ್ತು. ಅದನ್ನು ಸರಿಪಡಿಸಲಾಗಿದೆ. ಇಂಟರ್‌ನೆಟ್ ಸಮಸ್ಯೆ ಇರುವ ಕೇಂದ್ರಗಳಲ್ಲಿ ನೋಂದಣಿ ಪ್ರಕ್ರಿಯೆಗೆ ವಿಳಂಬವಾಗುತ್ತಿದೆ' ಎಂದು ಮಹಾಮಂಡಳದ ಅಧಿಕಾರಿಗಳು ಹೇಳಿದ್ದಾರೆ.

ನೋಂದಣಿ ಮಂದಗತಿ: ಚಿಕ್ಕಮಗಳೂರು ಜಿಲ್ಲೆಯಲ್ಲಿ ನಾಲ್ಕು ನೋಂದಣಿ ಕೇಂದ್ರ ತೆರೆಯಲಾಗಿದೆ. ರೈತರು ಸರದಿ ಸಾಲಿನಲ್ಲಿ ನಿಂತು ನೋಂದಣಿ ಮಾಡಿಸುತ್ತಿದ್ದ ದೃಶ್ಯ ಕಂಡುಬಂದಿತು.

ಕಡೂರು ಎಪಿಎಂಸಿ ಆವರಣದಲ್ಲಿ ಎರಡು ಕಡೆ, ಬೀರೂರಿನಲ್ಲಿ ಒಂದು ಮತ್ತು ಪಂಚನಹಳ್ಳಿಯಲ್ಲಿ ಒಂದು ಕೇಂದ್ರ ಆರಂಭವಾಗಿದೆ. ಕೇಂದ್ರದಲ್ಲಿ ಒಂದು ಕಂಪ್ಯೂಟರ್ ಮತ್ತು ಒಂದು ಬೆರಳಚ್ಚು ಯಂತ್ರ ಅಳವಡಿಸಲಾಗಿದೆ. ಒಬ್ಬರೇ ಸಿಬ್ಬಂದಿ ಎಲ್ಲಾ ರೈತರ ಹೆಸರನ್ನು ನೋಂದಣಿ ಮಾಡಬೇಕಿದೆ. ಹಾಗಾಗಿ, ನೋಂದಣಿ ಮಂದಗತಿಯಲ್ಲಿ ನಡೆಯಿತು. ಸಂಜೆ ತನಕ ರೈತರು ನೋಂದಣಿ ಮಾಡಿಸಿದರು.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಕೊಬ್ಬರಿ ಖರೀದಿ ಕೇಂದ್ರದಲ್ಲಿ ಸೋಮವಾರ ನೋಂದಣಿಗೆ ರೈತರು ಮುಗಿಬಿದ್ದಿರು

ಜಿಲ್ಲೆ	ಖರೀದಿ ಪ್ರಮಾಣ (ಕ್ವಿಂಟಲ್‌ಗಳಲ್ಲಿ)
ತುಮಕೂರು	3,50,000
ಹಾಸನ	1,75,000
ಚಿಕ್ಕಮಗಳೂರು	55,000
ಚಿತ್ರದುರ್ಗ	40,000
ಮಂಡ್ಯ	40,000
ರಾಮನಗರ	25,000
ಮೈಸೂರು	5,000
ಚಾಮರಾಜನಗರ	1,500
ದಕ್ಷಿಣ ಕನ್ನಡ	1,000

ಮಾರಾಟಕ್ಕೆ ಬೆಳೆಗಾರರ ನಿರಾಸಕ್ತಿ

ಮಂಗಳೂರು: ಬೆಂಬಲ ಬೆಲೆಯಡಿ ಕೊಬ್ಬರಿ ಮಾರಾಟ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ತೆಂಗು ಬೆಳೆಗಾರರು ಆಸಕ್ತಿ ತೋರಿಸಿಲ್ಲ.

'ಜಿಲ್ಲೆಯಲ್ಲಿ ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ಮೂಡುಬಿದಿರೆ ಹಾಗೂ ಮಂಗಳೂರಿನಲ್ಲಿ ಎರಡು ಕಡೆ ಸೇರಿ ಒಟ್ಟು ಏಳು ಕೇಂದ್ರಗಳನ್ನು ತೆರೆಯಲಾಗಿದೆ. ಇದುವರೆಗೆ ಯಾವ ತೆಂಗು ಬೆಳೆಗಾರರೂ ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಾಯಿಸಿಲ್ಲ' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಹೆಸರು ನೋಂದಣಿಗೆ ಇಲ್ಲಿ ಸರ್ವರ್ ಸಮಸ್ಯೆ ಇಲ್ಲ. ಕರಾವಳಿ ಪ್ರದೇಶದಲ್ಲಿ ತೇವಾಂಶ ಹೆಚ್ಚು ಇರುವುದರಿಂದ ಉಂಡೆ ಕೊಬ್ಬರಿ ಬೇಗ ಹಾಳಾಗುತ್ತದೆ. ಅದರ ಬದಲು ಇಲ್ಲಿನ ತೆಂಗು ಬೆಳೆಗಾರರು ಮಿಲ್ಲಿಂಗ್ ಕೊಬ್ಬರಿಯನ್ನೇ (ಚಿಕ್ಕ ಚಿಕ್ಕ ತುಂಡು) ಹೆಚ್ಚಾಗಿ ತಯಾರಿಸುತ್ತಾರೆ. ಅವರು ಅದನ್ನು ನೇರವಾಗಿ ಗಾಣಗಳಿಗೆ ಒಯ್ದು ತೆಂಗಿನ ಎಣ್ಣೆ ಮಾಡಿಸುತ್ತಾರೆ. ಇಲ್ಲವಾದರೆ ಚಿಪ್ಪುಸಹಿತ ತೆಂಗಿನ ಕಾಯಿ ಮಾರುತ್ತಾರೆ' ಎಂದು ಅವರು ವಿವರಿಸಿದರು.

> **ಕಳೆದ ಬಾರಿಯ ನೋಂದಣಿ ವೇಳೆಯೂ ಇದೇ ರೀತಿಯ ಸಮಸ್ಯೆಯಾಗಿತ್ತು. ಈಗಲೂ ಅದೇ ಮಾದರಿಯ ತಾಂತ್ರಿಕ ಸಮಸ್ಯೆ ಮುಂದುವರಿದಿದೆ**
>
> **ಸಿದ್ಧರಾಜು,** ರೈತ, ಕಂಚೇನಹಳ್ಳಿ, ತುಮಕೂರು ತಾಲ್ಲೂಕು

> **ಬಿಸಿಲಿನಲ್ಲಿ ದಿನಗಟ್ಟಲೆ ಕಾದು ನಿಂತುಕೊಳ್ಳುವಂತಾಗಿದೆ. ಕುಡಿಯಲು ನೀರು ಸಹ ಸಿಗದಾಗಿದೆ. ನೋಂದಣಿಗೆ ಇನ್ನೂ ಎಷ್ಟು ದಿನ ಬೇಕಾಗುತ್ತದೆಯೋ ಗೊತ್ತಿಲ್ಲ**
>
> **ಬ್ರಹ್ಮಸಂದ್ರ ದೊಡ್ಡಯ್ಯ,** ರೈತ, ತುಮಕೂರು

ಕೇಂದ್ರದ ಬಳಿ ಬೀಡುಬಿಟ್ಟ ರೈತರು

ಚಿತ್ರದುರ್ಗ: ಜಿಲ್ಲೆಯ ಹೊಸದುರ್ಗದ ಎಪಿಎಂಸಿ ಆವರಣದಲ್ಲಿ 2, ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ ಹಾಗೂ ಶ್ರೀರಾಂಪುರದಲ್ಲಿ ತಲಾ 1 ಖರೀದಿ ಕೇಂದ್ರ ತೆರೆಯಲಾಗಿದೆ. ಬೆಳಿಗ್ಗೆ 8ರಿಂದ ಆರಂಭವಾದ ನೋಂದಣಿ ಪ್ರಕ್ರಿಯೆ ಸಂಜೆ 6ಕ್ಕೆ ಕೊನೆಗೊಂಡಿತು.

ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ ಕೇಂದ್ರಗಳ ಬಳಿ ಹೊಸದುರ್ಗದಿಂದ ಬಂದಿದ್ದ ರೈತರು ಜಮಾಯಿಸಿದ್ದರು. ಹೊಸದುರ್ಗದಲ್ಲಿ ಭಾನುವಾರ ರಾತ್ರಿಯಿಂದಲೇ ರೈತರು ಖರೀದಿ ಕೇಂದ್ರದತ್ತ ಧಾವಿಸಿದ್ದರು.

ಮೊದಲ ದಿನ 918 ರೈತರು 11,862 ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ನೋಂದಣಿ ಮಾಡಿಸಿದ್ದಾರೆ. ರಾತ್ರಿಯವರೆಗೂ ಕೇಂದ್ರದ ಆವರಣದಲ್ಲಿ ರೈತರು ಬೀಡುಬಿಟ್ಟಿದ್ದರು. 'ಎರಡೂ ಕಡೆ ನೋಂದಣಿಗೆ ಅವಕಾಶ ಕಲ್ಪಿಸಿದ್ದರೂ ಜನದಟ್ಟಣೆ ಕಡಿಮೆಯಾಗಿಲ್ಲ. ಭಾನುವಾರ ರಾತ್ರಿ 8ಗಂಟೆಗೆ ಖರೀದಿ ಕೇಂದ್ರಕ್ಕೆ ಬಂದಿದ್ದೇವೆ. ಸೋಮವಾರ ಬೆಳಿಗ್ಗೆ 8ಕ್ಕೆ ನೋಂದಣಿ ಆರಂಭವಾಗಿದೆ. ಬಿಸಿಲಿಗೆ ಸಾಕಾಗಿ ಹೋಗಿದೆ. ಶಾಮಿಯಾನ, ಶೌಚಾಲಯದ ವ್ಯವಸ್ಥೆ ಸರಿ ಇರಲಿಲ್ಲ' ಎಂದು ಮುತ್ತಾಗೊಂದಿ ರೈತ ನಿಂಗಪ್ಪ ದೂರಿದರು.

ಬೆಳಿಗ್ಗೆ 11ಗಂಟೆಯಲ್ಲಿ ಸರ್ವರ್ ಸಮಸ್ಯೆ ಕಾಡಿತು. ನೋಂದಣಿ ಸ್ಥಗಿತಗೊಂಡಿದ್ದರಿಂದ ರೈತರು ಅಸಮಾಧಾನ ವ್ಯಕ್ತಪಡಿಸಿದರು. ಕೆಲವೇ ಹೊತ್ತಿನಲ್ಲಿ ಸರ್ವರ್ ಸರಿಯಾಯಿತು. ಬಳಿಕ ನೋಂದಣಿ ಸರಾಗವಾಗಿ ನಡೆಯಿತು. ಸಾಲಿನಲ್ಲಿ ನಿಲ್ಲುವ ರೈತರಿಗೆ ಅನುಕೂಲ ಆಗುವಂತೆ ಶಾಮಿಯಾನ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು.

ರೈತರ ತಳ್ಳಾಟ: ಮಂಡ್ಯ ಜಿಲ್ಲೆಯ ಕಿಕ್ಕೇರಿ ಪಟ್ಟಣದ ಎಪಿಎಂಸಿಯಲ್ಲಿ ತೆರೆದಿದ್ದ ನೋಂದಣಿ ಕೇಂದ್ರದಲ್ಲಿ ರೈತರು ತಳ್ಳಾಟ ನಡೆಸಿದರು.

ತಡರಾತ್ರಿಯಿಂದಲೇ ಕೇಂದ್ರದ ಮುಂದೆ ರೈತರು ನೆರೆದಿದ್ದರು. ಮಧ್ಯಾಹ್ನದ ವೇಳೆಗೆ ರೈತರ ಸಂಖ್ಯೆ ಹೆಚ್ಚಾಯಿತು.

ಕೆಲವರು ಸರದಿ ಬಿಟ್ಟು ನೂಕಾಟ ನಡೆಸಿ ನೋಂದಣಿಗೆ ಮುಂದಾದರು. ಇದರಿಂದ ಕೆಲಕಾಲ ಗದ್ದಲ ಉಂಟಾಯಿತು. ರೈತ ಸಂಘದ ಮುಖಂಡರ ಮನವಿಗೂ ಕಿವಿಗೊಡಲಿಲ್ಲ. ಕೊನೆಗೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಬಾಂಗ್ಲಾ, ಯುಎಇಗೆ ಈರುಳ್ಳಿ ರಫ್ತು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ನ್ಯಾಷನಲ್ ಕೋಆಪರೇಟಿವ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಮೂಲಕ ಯುಎಇ ಮತ್ತು ಬಾಂಗ್ಲಾದೇಶಕ್ಕೆ 64,400 ಟನ್ ಈರುಳ್ಳಿ ರಫ್ತಿಗೆ ಅನುಮತಿ ನೀಡಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ತಿಳಿಸಿದೆ.

ಬಾಂಗ್ಲಾಕ್ಕೆ 50 ಸಾವಿರ ಟನ್ ಮತ್ತು ಯುಎಇಗೆ 14,400 ಟನ್ ರಫ್ತು ಮಾಡಲಾಗುತ್ತದೆ ಎಂದು ವಾಣಿಜ್ಯ ಸಚಿವಾಲಯದ ಅಧೀನದಲ್ಲಿ ಬರುವ ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ದೇಶೀಯ ಮಾರುಕಟ್ಟೆಯಲ್ಲಿ ಧಾರಣೆ ನಿಯಂತ್ರಿಸಲು ಕೇಂದ್ರವು ಈರುಳ್ಳಿ ರಫ್ತಿಗೆ ಮಾರ್ಚ್ 31ರ ವರೆಗೆ ನಿಷೇಧ ಹೇರಿದೆ. ಆದರೆ, ಭಾರತದ ಮಿತ್ರರಾಷ್ಟ್ರಗಳಿಗೆ ರಫ್ತು ಮಾಡುವುದಕ್ಕೆ ಈ ನಿರ್ಬಂಧ ಅನ್ವಯಿಸುವುದಿಲ್ಲ ಎಂದು ತಿಳಿಸಿದೆ.

2023ರ ಏಪ್ರಿಲ್‌ನಿಂದ ಅದೇ ವರ್ಷದ ಆಗಸ್ಟ್‌ವರೆಗೆ ಬಾಂಗ್ಲಾ, ಮಲೇಷ್ಯಾ ಹಾಗೂ ಯುಎಇಗೆ ಒಟ್ಟು 9.75 ಲಕ್ಷ ಟನ್‌ನಷ್ಟು ಈರುಳ್ಳಿ ರಫ್ತು ಮಾಡಲಾಗಿದೆ.

ಭಾರತ್ ಬ್ರ್ಯಾಂಡ್: ಸಂಸ್ಕರಣೆಯಿಂದ ವಿಳಂಬ

10 ಸಾವಿರ ಟನ್ ಅಕ್ಕಿ ಮಾರಾಟ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ತಿಂಗಳಿನಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 1 ಲಕ್ಷ ಕ್ವಿಂಟಲ್ (10 ಸಾವಿರ ಟನ್) 'ಭಾರತ್ ಬ್ರ್ಯಾಂಡ್' ಅಕ್ಕಿ ಮಾರಾಟಕ್ಕೆ ನಾಫೆಡ್ ನಿರ್ಧರಿಸಿದೆ.

ದೇಶದಲ್ಲಿ ಫೆಬ್ರುವರಿಯಲ್ಲಿ 'ಭಾರತ್ ಬ್ರ್ಯಾಂಡ್' ಅಕ್ಕಿ ಮಾರಾಟಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿತ್ತು. ಪ್ರತಿ ಕೆ.ಜಿ ಅಕ್ಕಿಗೆ ₹29 ದರ ನಿಗದಿಪಡಿಸಲಾಗಿದ್ದು, ನಾಫೆಡ್, ಎನ್‌ಸಿಸಿಎಫ್ ಹಾಗೂ ಕೇಂದ್ರೀಯ ಭಂಡಾರವು ನೋಡಲ್ ಏಜೆನ್ಸಿಯಾಗಿವೆ.

ರಾಜ್ಯದಲ್ಲಿ ಇಲ್ಲಿಯವರೆಗೆ ನಾಫೆಡ್ ಮೂಲಕ 2,800 ಟನ್ ಅಕ್ಕಿ ಮಾರಾಟ ಮಾಡಲಾಗಿದೆ.

ಬೆಂಗಳೂರಿನಲ್ಲಿರುವ ನಾಫೆಡ್ ಕಚೇರಿಯಲ್ಲಿ ಮಾರಾಟಕ್ಕೆ ಒಂದು ಮಳಿಗೆ ತೆರೆಯಲಾಗಿದೆ. ಇದರ ಹೊರತಾಗಿ ರಾಜ್ಯದಲ್ಲಿ ಎಲ್ಲಿಯೂ ಪ್ರತ್ಯೇಕ ಮಾರಾಟ ಮಳಿಗೆಗಳನ್ನು ತೆರೆದಿಲ್ಲ. ವಾಹನಗಳ ಮೂಲಕ ಮಾರಾಟ ಮಾಡಲಾಗುತ್ತಿದೆ.

ವಿಳಂಬ ಏಕೆ?: 'ಭಾರತೀಯ ಆಹಾರ ನಿಗಮದ ಮೂಲಕ ಅಕ್ಕಿಯನ್ನು ಎತ್ತುವಳಿ ಮಾಡಿದ ಬಳಿಕ ಸಂಸ್ಕರಿಸಲಾಗುತ್ತದೆ. ನಂತರ ಪ್ಯಾಕೆಟ್‌ಗಳನ್ನು ಮಾಡಲಾಗುತ್ತದೆ. ಹಾಗಾಗಿ, ಮಾರಾಟಕ್ಕೆ ವಿಳಂಬವಾಗುತ್ತಿದೆ' ಎಂದು ನಾಫೆಡ್‌ನ ರಾಜ್ಯ ಮುಖ್ಯಸ್ಥೆ ಜ್ಯೋತಿ ಪಾಟೀಲ್ 'ಪ್ರಜಾವಾಣಿ'ಗೆ ವಿವರಿಸಿದರು.

'ಅಕ್ಕಿಗೆ ಬೇಡಿಕೆ ಹೆಚ್ಚಿದೆ. ಹಾಗಾಗಿ, ಬಡಾವಣೆಗಳು ಅಥವಾ ಗ್ರಾಮಗಳಿಗೆ ಮಾರಾಟದ ವಾಹನಗಳು ತೆರಳಿದ ವೇಳೆ ಒಂದು ಅಥವಾ ಎರಡು ಗಂಟೆಯೊಳಗೆ ಅಕ್ಕಿ ಖಾಲಿಯಾಗುತ್ತಿದೆ. ಕೆಲವೊಮ್ಮೆ ಮುಂದಿನ ಸ್ಥಳಗಳಿಗೆ ಮಾರಾಟಕ್ಕೆ ತೆರಳಲು ವಾಹನಗಳಲ್ಲಿ ಅಕ್ಕಿ ಸಂಗ್ರಹ ಇರುವುದಿಲ್ಲ' ಎಂದರು.

'ಭಾರತ್ ಬ್ರ್ಯಾಂಡ್' ಅಕ್ಕಿ

'ಪ್ಯಾಕೆಟ್‌ಗಳ ಮೇಲೆ ಮುದ್ರಿತವಾಗಿರುವ ದಿನಾಂಕಕ್ಕೂ ಮೊದಲೇ ಅಕ್ಕಿ ಮಾರಾಟಕ್ಕೆ ಅವಕಾಶವಿಲ್ಲ. ಅಂತಹ ಪ್ರಕರಣಗಳ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ನಿಯಮ ಉಲ್ಲಂಘಿಸಿದ್ದರೆ ಈ ಬಗ್ಗೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದರು.

ಇ-ಕಾಮರ್ಸ್‌ನಲ್ಲಿ ಲಭ್ಯ: ಇ-ಕಾಮರ್ಸ್ ವೇದಿಕೆಗಳಲ್ಲೂ 'ಭಾರತ್ ಬ್ರ್ಯಾಂಡ್' ಅಕ್ಕಿ ದೊರೆಯಲಿದೆ. ಸದ್ಯ ರಿಲಯನ್ಸ್ ರಿಟೇಲ್ ಮಳಿಗೆಗಳು ಮತ್ತು ಸ್ಟಾರ್ ಬಜಾರ್‌ನಲ್ಲಿ ದೊರೆಯುತ್ತಿದೆ. ಬ್ಲಿಂಕಿಟ್ ಹಾಗೂ ಬಿಗ್‌ಬಾಸ್ಕೆಟ್ ಜೊತೆಗೆ ಒಪ್ಪಂದ ಪ್ರಕ್ರಿಯೆ ಇನ್ನೂ ಅಂತಿಮಗೊಂಡಿಲ್ಲ ಎಂದು ವಿವರಿಸಿದರು.

ಭಾರತದ ಜಿಡಿಪಿ ಶೇ 6.8ರಷ್ಟು ಪ್ರಗತಿ: ಮೂಡಿಸ್

ನವದೆಹಲಿ (ಪಿಟಿಐ): ಮೂಡಿಸ್ ಇನ್‌ವೆಸ್ಟರ್ಸ್ ಸರ್ವಿಸಸ್ ಸಂಸ್ಥೆಯು ಭಾರತದ ಜಿಡಿಪಿ ಮುನ್ನೋಟವನ್ನು ಪರಿಷ್ಕರಿಸಿದ್ದು, 2024ರಲ್ಲಿ ಶೇ 6.8ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಿದೆ.

2025ರಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 6.4 ಆಗಲಿದೆ. ಜಿ–20 ರಾಷ್ಟ್ರಗಳ ಪೈಕಿ ಭಾರತದ ಆರ್ಥಿಕತೆಯು ಅತಿವೇಗವಾಗಿ ಬೆಳವಣಿಗೆ ಕಾಣುತ್ತಿದೆ ಎಂದು ತಿಳಿಸಿದೆ.

2024ರಲ್ಲಿ ಆರ್ಥಿಕ ಬೆಳವಣಿಗೆ ದರವು ಶೇ 6.1ರಷ್ಟು ಪ್ರಗತಿ ಕಾಣಲಿದೆ ಎಂದು ಈ ಮೊದಲು ಅಂದಾಜಿಸಿತ್ತು. ಆದರೆ, 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 8.4ರಷ್ಟು ದಾಖಲಾಗಿದೆ. ಹಾಗಾಗಿ, ಮೂಡಿಸ್ ಸಂಸ್ಥೆಯು ಅಂದಾಜನ್ನು ಪರಿಷ್ಕರಿಸಿದೆ.

ಜಾಗತಿಕ ಆರ್ಥಿಕತೆಯು ಮಂದಗತಿಯಲ್ಲಿದೆ. ಆದರೆ, 2023ರಲ್ಲಿ ಭಾರತದ ಆರ್ಥಿಕತೆಯು ನಿರೀಕ್ಷೆಗಿಂತ ದೃಢವಾಗಿದೆ. ಸರ್ಕಾರದ ಬಂಡವಾಳ ವೆಚ್ಚ ಮತ್ತು ತಯಾರಿಕಾ ಚಟುವಟಿಕೆಗಳು ಸದೃಢವಾಗಿರುವುದೇ ಇದಕ್ಕೆ ಕಾರಣ ಎಂದು ತಿಳಿಸಿದೆ.

ಕೊಬ್ಬರಿ ನೋಂದಣಿ: ನೂಕುನುಗ್ಗಲು

ಒಂದನೇ ಪುಟದಿಂದ

'ವೃದ್ಧರು, ಮಹಿಳೆಯರು, ಅಂಗವಿಕಲರು ಸಹ 24 ಗಂಟೆ ಸರದಿಯಲ್ಲಿದ್ದು, ನೂಕುನುಗ್ಗಲಿನಿಂದ ಹೊರ ಬಂದು ರಸ್ತೆ ಪಕ್ಕ ಕುಳಿತುಕೊಳ್ಳುವಂತಾಯಿತು. ಪೊಲೀಸ್ ಬಂದೋಬಸ್ತ್ ಮಾಡಿ, ಕೇಂದ್ರದ ಎದುರು ಬ್ಯಾರಿಕೇಡ್ ಅಳವಡಿಸಿದ್ದರೆ, ಈ ಸಮಸ್ಯೆ ಆಗುತ್ತಿರಲಿಲ್ಲ' ಎಂದು ಹೇಳಿದರು.

ಟೋಕನ್ ಇಲ್ಲ: 'ಈ ಬಾರಿ ರೈತರಿಗೆ ಟೋಕನ್ ಕೊಡಲಾಗುತ್ತಿಲ್ಲ. ಹಾಗಾಗಿ ಎಲ್ಲರೂ ಒಮ್ಮೆಲೇ ಕೇಂದ್ರಕ್ಕೆ ಬರುತ್ತಿದ್ದು, ನೂಕುನುಗ್ಗಲು ಉಂಟಾಗುತ್ತಿದೆ' ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದರು.

ಅವ್ಯವಸ್ಥೆ, ನೂಕುನುಗ್ಗಲು: ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಹಾಗೂ ಶ್ರೀರಾಂಪುರ ಕೇಂದ್ರಗಳಲ್ಲಿ 30 ನಿಮಿಷ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಕೆಲಕಾಲ ನೂಕುನುಗ್ಗಲು ಉಂಟಾಯಿತು. ಬಿಸಿಲಲ್ಲಿ ಕಾದು ನಿಂತ ರೈತರಿಗೆ ಮಧ್ಯಾಹ್ನದ ವೇಳೆ ಶಾಮಿಯಾನ ಅಳವಡಿಸಿ ನೆರಳಿನ ವ್ಯವಸ್ಥೆ ಕಲ್ಪಿಸಲಾಯಿತು.

ನೂಕುನುಗ್ಗಲು ಹೆಚ್ಚಾಗಿದ್ದರಿಂದ ಪದೇ ಪದೇ ನೋಂದಣಿ ಅಧಿಕಾರಿಗಳು ನೋಂದಣಿ ನಿಲ್ಲಿಸಿ, ಸಾಲಿನಲ್ಲಿ ಬರುವಂತೆ ಸೂಚಿಸಿದರು. ನೂಕುನುಗ್ಗಲು, ತಳ್ಳಾಟ ಜೋರಾದಾಗ ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು.

ಮಧ್ಯಾಹ್ನದವರೆಗೆ ಐವರ ನೋಂದಣಿ

ತುಮಕೂರು ಎಪಿಎಂಸಿ ಕೇಂದ್ರದಲ್ಲಿ ಸರ್ವರ್ ಸಮಸ್ಯೆಯಿಂದಾಗಿ ಮಧ್ಯಾಹ್ನ 1 ಗಂಟೆ ವರೆಗೆ ಕೇವಲ ಐವರು ರೈತರ ನೋಂದಣಿ ಮಾಡಲು ಸಾಧ್ಯವಾಗಿತ್ತು. ಮಧ್ಯಾಹ್ನದ ನಂತರ ಸ್ವಲ್ಪ ಮಟ್ಟಿಗೆ ನೋಂದಣಿ ಬಿರುಸು ಪಡೆದುಕೊಂಡಿತು. ತಿಪಟೂರು, ತುರುವೇಕೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ ಸೇರಿದಂತೆ ಜಿಲ್ಲೆಯ ಎಲ್ಲೆಡೆಯೂ ಇದೇ ರೀತಿಯ ಸಮಸ್ಯೆ ಎದುರಾಗಿದೆ.

'ನೋಂದಣಿ ನಿಧಾನವಾದುದಕ್ಕೆ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ತಡವಾದರೆ ಇತರೆ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ರೈತರು ನೋಂದಣಿ ಮಾಡಿಸಿದರೆ ನಮಗೆ ಅವಕಾಶ ಕೈತಪ್ಪುತ್ತದೆ. ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ. ಯಾವಾಗಲೂ ಇದೇ ಗೋಳು' ಎಂದು ಅಸಮಾಧಾನ ತೋಡಿಕೊಂಡರು.

ಹೆಚ್ಚುವರಿ ಕೇಂದ್ರ: ಸದ್ಯ ಜಿಲ್ಲೆಯಲ್ಲಿ 23 ಖರೀದಿ ಕೇಂದ್ರ ತೆರೆಯಲಾಗಿದ್ದು, ಹೆಚ್ಚುವರಿಯಾಗಿ ಇನ್ನೂ 10 ಕೇಂದ್ರ ತೆರೆಯುವಂತೆ ಜಿಲ್ಲಾಧಿಕಾರಿ ಶನಿವಾರ ಸೂಚಿಸಿದ್ದಾರೆ. ಆದರೆ, ಇನ್ನೂ ಹೆಚ್ಚುವರಿ ಕೇಂದ್ರಗಳನ್ನು ಆರಂಭಿಸಿಲ್ಲ.

ಪಾಕ್ ಪ್ರಧಾನಿಯಾಗಿ ಶೆಹಬಾಜ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ 24ನೇ ಪ್ರಧಾನಮಂತ್ರಿಯಾಗಿ ಶೆಹಬಾಜ್ ಷರೀಫ್ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ದೇಶವು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಹೊತ್ತಿನಲ್ಲಿ ಅವರು ಎರಡನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ರಾಷ್ಟ್ರಪತಿ ಅರೀಫ್ ಅಲ್ವಿ ಅವರು, 72 ವರ್ಷ ವಯಸ್ಸಿನ ಶೆಹಬಾಜ್ ಷರೀಫ್ ಅವರಿಗೆ ರಾಷ್ಟ್ರಪತಿಗಳ ನಿವಾಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿದರು.

ಸಮ್ಮಿಶ್ರ ಸರ್ಕಾರ ರಚನೆಗೆ ಪಾಕಿಸ್ತಾನ ಮುಸ್ಲಿಂ ಲೀಗ್–ನವಾಜ್ ಮತ್ತು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಮೈತ್ರಿ ಮಾಡಿಕೊಂಡಿದ್ದು, ಪ್ರಧಾನಿ ಸ್ಥಾನಕ್ಕೆ ಭಾನುವಾರ ಶೆಹಬಾಜ್ ಅವರನ್ನು ಆಯ್ಕೆ ಮಾಡಲಾಗಿತ್ತು. ಹಿಂದೆ ಏಪ್ರಿಲ್ 2022ರಿಂದ ಆಗಸ್ಟ್ 2023ರ ವರೆಗೆ ಪ್ರಧಾನಿಯಾಗಿದ್ದರು.

ಮಾಜಿ ಪ್ರಧಾನಿ ನವಾಜ್ ಷರೀಫ್, ಪಂಜಾಬ್ ಮುಖ್ಯಮಂತ್ರಿ ಮರಿಯಂ ನವಾಜ್, ಪಿಎಂಎಲ್–ಎನ್ ಕಾರ್ಯಕರ್ತರು, ಸಿಂಧ್ ಮುಖ್ಯಮಂತ್ರಿ ಮುರದ್ ಅಲಿ ಶಾ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

336 ಸದಸ್ಯ ಬಲದ ಸಂಸತ್ತಿನಲ್ಲಿ ಮೈತ್ರಿಕೂಟವು ಒಟ್ಟು 201 ಸದಸ್ಯರ ಬಲ ಹೊಂದಿದೆ. ಇವರಿಗೆ ಸ್ಪರ್ಧಿಯಾಗಿದ್ದ ಒಮರ್ ಅಯೂಬ್ ಖಾನ್ ಮತ್ತು ಈಗ ಜೈಲಿನಲ್ಲಿರುವ, ಪಿಟಿಐ ಪಕ್ಷದ ನಾಯಕ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಒಟ್ಟಾಗಿ 92 ಸದಸ್ಯರ ಬಲವನ್ನು ಹೊಂದಿದ್ದಾರೆ.

ಸೆನೆಟ್ ಅಧ್ಯಕ್ಷರಾಗಿ ಗಿಲಾನಿ?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಸೆನೆಟ್‌ನ ಅಧ್ಯಕ್ಷ ಸ್ಥಾನಕ್ಕೆ, ಮಾಜಿ ಪ್ರಧಾನಿ ಯೂಸುಫ್ ರಾಜಾ ಗಿಲಾನಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಫೆ. 8ರಂದು ನಡೆದಿದ್ದ ಚುನಾವಣೆಯಲ್ಲಿ ಅವರು ಸಂಸತ್ತಿಗೆ ಪಂಜಾಬ್ ಪ್ರಾಂತ್ಯದ ಮುಲ್ತಾನ್‌ನಿಂದ ಆಯ್ಕೆ ಆಗಿದ್ದರು.

ಪಾಕ್ ಪ್ರಧಾನಿ ಸ್ಥಾನದ ಅಭ್ಯರ್ಥಿ ಆಯ್ಕೆಗೆ ನಡೆದಿದ್ದ ಚುನಾವಣೆಯಲ್ಲಿ ಅವರು ಶೆಹಬಾಜ್ ಷರೀಫ್ ಅವರನ್ನು ಬೆಂಬಲಿಸಿದ್ದರು. ಮೈತ್ರಿ ಸರ್ಕಾರದ ಅಧಿಕಾರ ಹಂಚಿಕೆಯ ಒಪ್ಪಂದದ ಭಾಗವಾಗಿ, 71 ವರ್ಷ ವಯಸ್ಸಿನ ಗಿಲಾನಿ ಅವರು ಸೆನೆಟ್‌ನ ಅಧ್ಯಕ್ಷರಾಗಲಿದ್ದಾರೆ ಎಂದು 'ದ ಡಾನ್' ವರದಿ ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕನ್ನಡ ಟೆಲಿಕಾಲರ್‌ಗಳು ಬೇಕು. (ತಾಜಾ/ ಅನುಭವಿ)ಸ್ಥಳ: ಮಲ್ಲೇಶ್ವರಂ, ಬೆಂಗಳೂರುಸಂಬಳ (ಮಾಸಿಕ ರೂ. 15000/-), ಕೆಲಸದ ಸಮಯ : ಮಧ್ಯಾಹ್ನ 2:00 ರಿಂದ ರಾತ್ರಿ 8:30, ಆಸಕ್ತರು 7669250202 ಗೆ ಮಿಸ್ಡ್ ಕಾಲ್ ನೀಡಿ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈಯಕ್ತಿಕ

Change of Name

I, FAIROZ Khan S/o M. Amjad Khan aged about 38 Years R/o No 210/1 Kutub ShainshaNagar Kolar. Have changed My name to A. Fairoz Khan S/o M. Amjad Khan vide affidavit dated 29.02.2024 before Notary N Krishne Gowda Kolar. Henceforth I shall be called as A. Fairoz Khan S/o M. Amjad Khan only.

EDUCATION CORNER

ಸ್ಪರ್ಧಾ ಮಿತ್ರ
KAS- Prelims & Mains
ONLINE & OFFLINE CLASSES
ಕನ್ನಡ & ENGLISH MEDIUM
WEEK DAYS & WEEK END CLASSES
ADMISSION OPEN
Opp. Maruthi Medicals, Near Attiguppe Metro Station, Service Road, RPC Layout, Bengaluru - 40.
9535111188 / 9535111199

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Out-Station

ಯಾದಗಿರಿಯಲ್ಲಿ ಎರಡು ಕಮರ್ಷಿಯಲ್ ಸೈಟುಗಳು, 12000 ಮತ್ತು 6500 sft ಮಾರಟಕ್ಕೆ ಇವೆ. ಮುನಿಸಿಪಲ್ ಲಿಮಿಟ್ ಒಳಗಡೆ, RTO ಆಫೀಸ ಹತ್ತಿರ ಯಾದಗಿರಿ ಕಲ್ಬುರ್ಗಿಯ ರಾಷ್ಟ್ರೀಯ ಹೆದ್ದಾರಿಯ ಮೇಲೆ ಇದೆ. ಸಂಪರ್ಕಿಸಿ: ಮೊಬೈಲ್ ನಂ 9880042441.

ಶಿಕ್ಷಣ

Admission

B.ED ADMISSION, ದೇಗುಲ ಮಠ ಕನಕಪುರದಲ್ಲಿ ಬಿ.ಇಡಿ ಕೋರ್ಸಿಗೆ ಪ್ರವೇಶಾತಿ ಇದೆ. ಹಾಸ್ಟೆಲ್ ಉಚಿತ. ಸಂಪರ್ಕಿಸಿ: 8970942618 / 9844358513

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಲಾಲು ಪ್ರಸಾದ್ ಹೇಳಿಕೆಗೆ ಪ್ರಧಾನಿ ತಿರುಗೇಟು • ಬಿಜೆಪಿ ನಾಯಕರಿಂದ 'ಮೋದಿ ಕಾ ಪರಿವಾರ್' ಅಭಿಯಾನ

ನನ್ನ ಭಾರತ, ನನ್ನ ಕುಟುಂಬ: ಮೋದಿ

ಅದಿಲಾಬಾದ್ (ತೆಲಂಗಾಣ) (ಪಿಟಿಐ): 'ದೇಶದ 140 ಕೋಟಿ ಜನರೇ ನನ್ನ ಕುಟುಂಬ. ಮೇರಾ ಭಾರತ್, ಮೇರಾ ಪರಿವಾರ್' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದರು.

'ಮೋದಿ ಅವರಿಗೆ ಕುಟುಂಬ ಇಲ್ಲ' ಎಂದು ವ್ಯಂಗ್ಯವಾಡಿದ್ದ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೆ ಈ ಮೂಲಕ ತಿರುಗೇಟು ನೀಡಿದರು.

ಇಲ್ಲಿ ಸಾರ್ವಜನಿಕ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ನನ್ನ ಜೀವನವು ತೆರೆದ ಪುಸ್ತಕವಿದ್ದಂತೆ. ದೇಶದ ಜನರಿಗೆ ಅದು ತಿಳಿದಿದೆ. ಜನರ ಸೇವೆ ಮಾಡುವ ಕನಸಿನೊಂದಿಗೆ ಸಣ್ಣ ವಯಸ್ಸಿನಲ್ಲಿಯೇ ಮನೆ ಬಿಟ್ಟು ಬಂದೆ. ಅದೇ ರೀತಿ 'ಸೇವಕ'ನಾಗಿ ನನ್ನ ಜೀವನವನ್ನು ಜನರಿಗಾಗಿ ಮುಡಿಪಿಟ್ಟಿದ್ದೇನೆ' ಎಂದು ಹೇಳಿದರು.

'ತಾಯಂದಿರು ಮತ್ತು ಸಹೋದರಿಯರು, ಬಡವರು, ಯುವಕರು ಮತ್ತು ಹಿರಿಯ ನಾಗರಿಕರೆಲ್ಲರೂ ಮೋದಿ ಕುಟುಂಬಕ್ಕೆ ಸೇರಿದವರು. ಅನಾಥರು ಮೋದಿಗೆ ಸೇರಿದವರು ಹಾಗೂ ಮೋದಿ ಅವರಿಗೆ (ಅನಾಥರಿಗೆ) ಸೇರಿದ್ದಾರೆ. ಇದೇ ಕಾರಣದಿಂದ ಇಡೀ ದೇಶದ ಜನರು ನನ್ನನ್ನು ಕುಟುಂಬದ ಸದಸ್ಯನಂತೆಯೇ ಪ್ರೀತಿಸುತ್ತಿದ್ದಾರೆ' ಎಂದು ಅವರು ಹೇಳಿದರು.

'ಅಜಯ್ ಮಿಶ್ರಾ, ಬ್ರಿಜ್‌ಭೂಷಣ್ ಮೋದಿ ಕುಟುಂಬಸ್ಥರು'

ನವದೆಹಲಿ: ಬಿಜೆಪಿಯ 'ಮೋದಿ ಕಾ ಪರಿವಾರ್' ಆಂದೋಲನದ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಅಜಯ್ ಮಿಶ್ರಾ ಟೇನಿ ಮತ್ತು ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಂಥ ಸಂಸದರು ಮೋದಿಯವರ ನೈಜ ಕುಟುಂಬಸ್ಥರು ಎಂದು ತಿರುಗೇಟು ನೀಡಿದೆ.

ಪಕ್ಷದ ಹಿರಿಯ ನಾಯಕ ಜೈರಾಮ್ ರಮೇಶ್ ಅವರು ಅಜಯ್ ಮಿಶ್ರಾ ಮತ್ತು ಬ್ರಿಜ್‌ಭೂಷಣ್ ಸಿಂಗ್ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ 'ಮೋದಿ ಕಾ ಪರಿವಾರ್' ಎಂದು ಬರೆದುಕೊಂಡಿರುವುದರ ಸ್ಕ್ರೀನ್‌ಶಾಟ್ ಹಂಚಿಕೊಂಡು, 'ರೈತರನ್ನು ಕೊಂದವರು, ಮಹಿಳೆಯರಿಗೆ ಕಿರುಕುಳ ನೀಡಿದವರು ಮೋದಿ ಕುಟುಂಬಸ್ಥರು' ಎಂದು ಟೀಕಿಸಿ ಬರೆದಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, 'ಪಟ್ನಾದಲ್ಲಿ ನಡೆದ ರ್‍ಯಾಲಿಯಲ್ಲಿ ಭಾಗಿಯಾಗಿದ್ದ ಜನರ ಉತ್ಸಾಹವನ್ನು ನೀವು ನೋಡಬೇಕಿತ್ತು. 'ಇಂಡಿಯಾ' ಮೈತ್ರಿಕೂಟ ದಿನ ಕಳೆದಂತೆ ಬಲ ಹೆಚ್ಚಿಸಿಕೊಳ್ಳುತ್ತಿದೆ. ಅದೇ ಕಾರಣಕ್ಕಾಗಿ ಬಿಜೆಪಿ ನಾಯಕರು ಆತಂಕಕ್ಕೆ ಒಳಗಾಗಿದ್ದಾರೆ' ಎಂದು ಹೇಳಿದರು.

ಮೋದಿ ಪರಿವಾರದಲ್ಲಿ ಮಣಿಪುರದ ಮಹಿಳೆಯರು, ದೆಹಲಿಯ ಗಡಿಗಳಲ್ಲಿ ಪ್ರತಿಭಟಿಸುತ್ತಿರುವ ರೈತರು, ನಿರುದ್ಯೋಗಿಗಳಿಗೆ ಜಾಗ ಇದೆಯೇ, ಅವರನ್ನೇಕೆ ಪ್ರಧಾನಿ ಮೋದಿ ತಮ್ಮ ಪರಿವಾರದವರು ಎಂದು ಕರೆದುಕೊಳ್ಳುವುದಿಲ್ಲ ಎಂದು 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.

ಅವರ (ವಿರೋಧ ಪಕ್ಷದವರ) ಕುಟುಂಬ ರಾಜಕಾರಣವನ್ನು ಪ್ರಶ್ನಿಸಿದ್ದಕ್ಕೆ, ಮೋದಿ ಅವರಿಗೆ ಯಾವುದೇ ಕುಟುಂಬವಿಲ್ಲ ಎಂದು ಹೇಳಲಾರಂಭಿಸಿದ್ದಾರೆ
ನರೇಂದ್ರ ಮೋದಿ, ಪ್ರಧಾನಿ

ಪಟ್ನಾದಲ್ಲಿ ಭಾನುವಾರ ನಡೆದ ರ್‍ಯಾಲಿ ಸಂದರ್ಭದಲ್ಲಿ ಲಾಲು ಪ್ರಸಾದ್ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕುಟುಂಬ ಇಲ್ಲದಿದ್ದರೆ ನಾವೇನು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದ್ದರು.

ಪ್ರಧಾನಿ ಅವರು ಕುಟುಂಬ ರಾಜಕಾರಣದ ವಿಚಾರದಲ್ಲಿ ವಿರೋಧ ಪಕ್ಷಗಳನ್ನು ಟೀಕಿಸುತ್ತಿರುವುದಕ್ಕೆ ಪ್ರತಿಯಾಗಿ ಲಾಲು ಈ ಮಾತುಗಳನ್ನಾಡಿದ್ದರು.

'ಮೋದಿ ಕಾ ಪರಿವಾರ್' ಅಭಿಯಾನ: ಪ್ರಧಾನಿ ನರೇಂದ್ರ ಮೋದಿ ಅವರು 'ದೇಶವೇ ನನ್ನ ಕುಟುಂಬ' ಎಂದು ಹೇಳಿದ ಬೆನ್ನಲ್ಲೇ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ರಾಜನಾಥ ಸಿಂಗ್, ಅನುರಾಗ್ ಠಾಕೂರ್ ಸೇರಿದಂತೆ ಬಿಜೆಪಿಯ ಹಲವು ಹಿರಿಯ ನಾಯಕರು ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ತಮ್ಮ ಹೆಸರಿನೊಂದಿಗೆ 'ಮೋದಿ ಕಾ ಪರಿವಾರ್' ಎಂಬ ಒಕ್ಕಣೆ ಸೇರಿಸಿಕೊಂಡಿದ್ದಾರೆ.

ಪ್ರಧಾನಿ ಮೋದಿ ಬೆಂಬಲಿತ ಸಾಮಾಜಿಕ ಜಾಲತಾಣದ ಪೇಜ್‌ಗಳು ಸಹ 'ಮೋದಿ ಕಾ ಪರಿವಾರ್' ಎಂದು ಘೋಷಿಸಿಕೊಂಡಿವೆ.

ಲಾಲು ಪ್ರಸಾದ್ ಅವರ ಟೀಕೆ ಬೆನ್ನಲ್ಲೇ, ಬಿಜೆಪಿ ನಾಯಕರು ಪ್ರಧಾನಿ ಪರ ವಹಿಸಿ ಈ ಅಭಿಯಾನ ಆರಂಭಿಸಿದ್ದಾರೆ.

'ಅಶ್ಲೀಲ ವಿಡಿಯೊ': ಚುನಾವಣೆಗೆ ಸ್ಪರ್ಧಿಸಲು ಬಿಜೆಪಿ ಅಭ್ಯರ್ಥಿ ನಕಾರ

ಪ್ರಜಾವಾಣಿ ವಾರ್ತೆ

ಲಖನೌ: ಲೋಕಸಭೆ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಲಾಗಿದ್ದ ಉಪೇಂದ್ರ ಸಿಂಗ್ ರಾವತ್, ಸ್ಪರ್ಧಿಸಲು ನಿರಾಕರಿಸಿದ್ದಾರೆ. ಬಿಜೆಪಿ ಟಿಕೆಟ್ ಘೋಷಣೆ ಬಳಿಕ ಸ್ಪರ್ಧಿಸಲು ನಿರಾಕರಿಸುತ್ತಿರುವ ಎರಡನೇ ಅಭ್ಯರ್ಥಿ ಇವರು.

ಭೋಜಪುರಿ ಗಾಯಕ ಪವನ್ ಸಿಂಗ್ ಅವರು ಸ್ಪರ್ಧಿಸಲು ಈಗಾಗಲೇ ನಿರಾಕರಿಸಿದ್ದಾರೆ. ಉಪೇಂದ್ರ ಅವರದ್ದು ಎನ್ನಲಾದ 'ಅಶ್ಲೀಲ ವಿಡಿಯೊ' ಜಾಲತಾಣದಲ್ಲಿ ಹರಿದಾಡುತ್ತಿದೆ. ಅದರ ಹಿಂದೆಯೇ ಈ ನಿರ್ಧಾರ ತಳೆದಿದ್ದಾರೆ.

'ವಿಡಿಯೊ ನಕಲಿಯಾಗಿದ್ದು, ಎ.ಐ ತಂತ್ರಜ್ಞಾನ ಬಳಸಿ ತಿರುಚಲಾಗಿದೆ' ಎಂದು ಆರೋಪಿಸಿರುವ ಅವರು, ಈ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಪೊಲೀಸರಿಗೆ ಒತ್ತಾಯಿಸಿದ್ದಾರೆ. ಈ ಸಂಬಂಧ ರಾವತ್ ಅವರ ಕಚೇರಿಯು ಪೊಲೀಸರಿಗೂ ದೂರು ನೀಡಿದ್ದಾರೆ.

'ನನ್ನದು ಎನ್ನಲಾದ ತಿರುಚಿದ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ. ಡೀಪ್‌ಫೇಕ್ ತಂತ್ರಜ್ಞಾನ ಬಳಸಿ ಇದನ್ನು ಸೃಷ್ಟಿಸಲಾಗಿದೆ. ಈ ಬಗ್ಗೆ ದೂರು ನೀಡಿದ್ದೇನೆ. ತನಿಖೆಯಾಗಬೇಕು ಎಂದು ಪಕ್ಷದ ಅಧ್ಯಕ್ಷರಲ್ಲಿ ಕೋರಿದ್ದೇನೆ. ನನ್ನದು ತಪ್ಪಿಲ್ಲ ಎಂದು ದೃಢಪಡುವವರೆಗೆ ಚುನಾವಣೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದೇನೆ' ಎಂದು ರಾವತ್ ಅವರು ಎಕ್ಸ್ ಜಾಲತಾಣದಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ರಾವತ್ ಅವರದ್ದು ಎನ್ನಲಾದ ಎರಡು ವಿಡಿಯೊಗಳು ಭಾನುವಾರ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದ್ದವು. ಎರಡೂ ವಿಡಿಯೊಗಳು ಎಂಟು ವರ್ಷ ಹಳೆಯದ್ದು ಎನ್ನಲಾಗಿದೆ. ಪೊಲೀಸರು ಈ ಕುರಿತು ತನಿಖೆ ಕೈಗೊಂಡಿದ್ದಾರೆ.

'ಕೈ' ತೊರೆದ ಅರ್ಜುನ್, ಅಂಬರೀಷ್

ಪ್ರಜಾವಾಣಿ ವಾರ್ತೆ/ ಪಿಟಿಐ

ಅಹಮದಾಬಾದ್: ಗುಜರಾತ್‌ನ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ, ಪೋರಬಂದರ್ ಶಾಸಕ ಅರ್ಜುನ್ ಮೋಢವಾಡಿಯಾ ಮತ್ತು ರಾಜ್ಯ ಕಾಂಗ್ರೆಸ್ ಘಟಕದ ಕಾರ್ಯಾಧ್ಯಕ್ಷ ಅಧ್ಯಕ್ಷ ಅಂಬರೀಷ್ ಡೇರ್ ಸೋಮವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮದ ಆಹ್ವಾನವನ್ನು ಪಕ್ಷವು ತಿರಸ್ಕರಿಸಿರುವುದೇ ಈ ನಿರ್ಧಾರಕ್ಕೆ ಪ್ರಮುಖ ಕಾರಣ ಎಂದು ಇಬ್ಬರೂ ಹೇಳಿದ್ದಾರೆ.

ಇವರಿಬ್ಬರೂ ಮಂಗಳವಾರ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಇವರ ರಾಜೀನಾಮೆಯು ಪಕ್ಷಕ್ಕೆ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸ ಲಾಗಿದೆ.

ಮೋಢವಾಡಿಯಾ ಅವರು ನಾಲ್ಕು ದಶಕಗಳಿಂದ ಪಕ್ಷದಲ್ಲಿದ್ದು, ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದರು.

'ಪಕ್ಷವು ಜನರೊಂದಿಗಿನ ಸಂಪರ್ಕ ಕಳೆದುಕೊಂಡರೆ ಅದು ಸರ್ಕಾರೇತರ ಸಂಸ್ಥೆಯಾಗುತ್ತದೆ (ಎನ್‌ಜಿಒ). ರಾಮ ಮಂದಿರವು ಜನರ ನಂಬಿಕೆಯ ವಿಚಾರ. ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಆಹ್ವಾನವನ್ನು ನಿರಾಕರಿಸುವ ಮೂಲಕ ಕಾಂಗ್ರೆಸ್ ಪಕ್ಷವು ಜನರ ಭಾವನೆಗೆ ಧಕ್ಕೆ ತಂದಿದೆ' ಎಂದು ಅವರು ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ.

ಅಂಬರೀಷ್ ಡೇರ್ ಅವರು ತಮ್ಮ ನಿರ್ಧಾರ ಘೋಷಣೆ ಮಾಡುವ ಮುನ್ನ ಗುಜರಾತ್‌ನ ಕಾಂಗ್ರೆಸ್ ಘಟಕದ ಅಧ್ಯಕ್ಷ ಶಕ್ತಿಸಿನ್ಹಾ ಗೋಹಿಲ್ ಅವರು, 'ಭಾನುವಾರ ನಡೆದ ಸಭೆಯಲ್ಲಿ ಶಿಸ್ತುಪಾಲನಾ ಸಮಿತಿಯು ಡೇರ್ ಅವರನ್ನು ಪಕ್ಷದ ಎಲ್ಲಾ ಹುದ್ದೆಗಳಿಂದ ಮತ್ತು ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಅಮಾನತು ಮಾಡಿದೆ' ಎಂದು ಹೇಳಿದರು.

ಪಕ್ಷದ ಕ್ರಮದ ಬೆನ್ನಲ್ಲೇ ಡೇರ್, ತಮ್ಮ ನಿವಾಸದಲ್ಲಿಯೇ ಪತ್ರಿಕಾಗೋಷ್ಠಿ ಕರೆದು, ಮಂಗಳವಾರ ಬಿಜೆಪಿ ಸೇರುವುದಾಗಿ ತಿಳಿಸಿದರು.

ಟಿಎಂಸಿ ಶಾಸಕ ಸ್ಥಾನಕ್ಕೆ ತಪಸ್ ರಾಯ್ ರಾಜೀನಾಮೆ

ಕೋಲ್ಕತ್ತ (ಪಿಟಿಐ): 'ಕಷ್ಟಕಾಲದಲ್ಲಿ ಜೊತೆಗೆ ನಿಲ್ಲದ ತೃಣಮೂಲ ಕಾಂಗ್ರೆಸ್ ಪಕ್ಷ ಮತ್ತು ನಾಯಕಿ ಮಮತಾ ಬ್ಯಾನರ್ಜಿ ಅವರ ನಡೆಯಿಂದ ತೀವ್ರ ನೋವು, ಅಪಮಾನವಾಗಿದೆ' ಎಂದು ಹೇಳಿರುವ ಟಿಎಂಸಿ ಮುಖಂಡ ತಪಸ್ ರಾಯ್, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಟಿಎಂಸಿ ಉಪ ಮುಖ್ಯ ಸಚೇತಕರೂ ಆಗಿದ್ದ ಅವರು ರಾಜೀನಾಮೆ ಪತ್ರವನ್ನು ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರಿಗೆ ಸಲ್ಲಿಸಿದರು. ಲೋಕಸಭೆ ಚುನಾವಣೆ ಘೋಷಣೆಗೂ ಮೊದಲು ನಡೆದಿರುವ ಈ ಬೆಳವಣಿಗೆಯು ಟಿಎಂಸಿ ಪಕ್ಷಕ್ಕೆ ಹಿನ್ನಡೆ ಎಂದೇ ವ್ಯಾಖ್ಯಾನಿಸಲಾಗಿದೆ.

ಹಿರಿಯ ನಾಯಕ ತಪಸ್ ರಾಯ್, ಟಿಎಂಸಿಗೆ ರಾಜೀನಾಮೆ ನೀಡಿ ಬಿಜೆಪಿ ಅಥವಾ ಬೇರೆ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಈ ಹಿಂದೆ ವದಂತಿ ಕೇಳಿಬಂದಿತ್ತು. 'ಸಕಾಲದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇನೆ' ಎಂದು ಬೇರೆ ಪಕ್ಷ ಸೇರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ರಾಯ್ ಪ್ರತಿಕ್ರಿಯಿಸಿದ್ದಾರೆ.

ವಿಧಾನಸಭೆಯಲ್ಲಿ ಬಾರಾನಗರ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅವರ ಮನವೊಲಿಸಲು ಸಚಿವ ಬ್ರಾತ್ಯಾ ಬಸು ಮತ್ತು ಟಿಎಂಸಿಯ ಮಾಜಿ ವಕ್ತಾರ ಕುನಾಲ್ ಘೋಷ್ ಸೋಮವಾರ ರಾತ್ರಿ ಅವರ ಮನೆಗೆ ತೆರಳಿದ್ದರು. ಆದರೆ, ಈ ಯತ್ನ ಫಲ ನೀಡಿಲ್ಲ.

ರಾಯ್ ಮತ್ತು ಪಕ್ಷದ ಸಂಸದ ಸುದೀಪ್ ಬಂದೋಪಾಧ್ಯಾಯ ನಡುವೆ ಭಿನ್ನಾಭಿಪ್ರಾಯವಿತ್ತು. ಕೆಲ ದಿನಗಳಿಂದ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. ಕ್ಷೇತ್ರಕ್ಕೂ ಭೇಟಿ ನೀಡಿರಲಿಲ್ಲ.

ರಾಯ್ ನಿವಾಸದ ಮೇಲೆ ಇ.ಡಿ ಅಧಿಕಾರಿಗಳು ಜನವರಿ 12ರಂದು ದಾಳಿ ಮಾಡಿದ್ದರು. ಸುದ್ದಿಗಾರರ ಜೊತೆಗೆ ಮಾತನಾಡಿದ ರಾಯ್, 'ದಾಳಿ ವೇಳೆ ಪಕ್ಷ, ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಅವರು ತಮಗೆ ಬೆಂಬಲವಾಗಿ ನಿಲ್ಲಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಟಿಕೆಟ್ ವಂಚಿತ ಚುರು ಸಂಸದ ಕಾಂಗ್ರೆಸ್ ಸೇರುವ ಸಾಧ್ಯತೆ

ಜೈಪುರ: ಬಿಜೆಪಿಯು ಲೋಕಸಭೆ ಚುನಾವಣೆ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಗೊಳಿಸಿದ ಬೆನ್ನಲ್ಲೇ ರಾಜಸ್ಥಾನದಲ್ಲಿ ಅಸಮಾಧಾನ ಸ್ಫೋಟಗೊಂಡಿದ್ದು, ಟಿಕೆಟ್ ವಂಚಿತರಾದ ಚುರು ಜಿಲ್ಲೆಯ ಸಂಸದ ರಾಹುಲ್ ಕಸ್ವನ್ ಅವರು ಕಾಂಗ್ರೆಸ್ ಸೇರುವ ಅಥವಾ ಪಕ್ಷೇತರರಾಗಿ ಸ್ಪರ್ಧಿಸುವ ಸುಳಿವು ನೀಡಿದ್ದಾರೆ.

ಟಿಕೆಟ್ ಕೈತಪ್ಪಿರುವ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಸ್ವನ್ ಅವರು, 'ನಾನು ಮಾಡಿರುವ ತಪ್ಪೇನು? ನನ್ನ ಪ್ರಾಮಾಣಿಕತೆಯ ಬಗ್ಗೆ ಅನುಮಾನವೇ? ನಾನು ನನ್ನ ಕ್ಷೇತ್ರದ ಜನರ ಒಳಿತಿಗಾಗಿ ಕಷ್ಟಪಟ್ಟಿದ್ದೇನೆ. ಪ್ರಧಾನಿ ಮೋದಿಯವರ ಎಲ್ಲ ಯೋಜನೆಗಳನ್ನು ಜನರಿಗೆ ತಲುಪಿಸಿದ್ದೇನೆ. ನನ್ನ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಬಿಜೆಪಿ ಅಭ್ಯರ್ಥಿಗಳ ಪಟ್ಟಿ ನಾಳೆ ಅಂತಿಮ'

ಪ್ರಜಾವಾಣಿ ವಾರ್ತೆ


ಯಡಿಯೂರಪ್ಪ

ಶಿವಮೊಗ್ಗ: 'ಲೋಕಸಭಾ ಚುನಾವಣೆ ಟಿಕೆಟ್ ಹಂಚಿಕೆ ಬಗ್ಗೆ ಚರ್ಚಿಸಲು ದೆಹಲಿಯಲ್ಲಿ ಬುಧವಾರ ಪಕ್ಷದ ಸಭೆ ಕರೆಯಲಾಗಿದ್ದು, ನಾನೂ ಭಾಗವಹಿಸುತ್ತಿದ್ದೇನೆ. ರಾಜ್ಯದ 28 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಲಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೆಹಲಿ ನಾಯಕರ ಮನಸ್ಸಿನಲ್ಲಿ ಏನಿ ದೆಯೋ ಗೊತ್ತಿಲ್ಲ. ಅವರ ತೀರ್ಮಾನವೇ ಅಂತಿಮ. ಬಿಜೆಪಿ–ಜೆಡಿಎಸ್ ಹೊಂದಾಣಿಕೆ ನಿಶ್ಚಿತ. ಆದರೆ, ಸ್ಥಾನ ಹಂಚಿಕೆ ಅಂತಿಮವಾಗಿಲ್ಲ' ಎಂದರು.

'ಮಂಡ್ಯದಿಂದ ಸುಮಲತಾ ಸ್ಪರ್ಧೆ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಗೋ ಬ್ಯಾಕ್ ಶೋಭಾ ಕರಂದ್ಲಾಜೆ ಅಭಿಯಾನಕ್ಕೆ ಯಾವುದೇ ಅರ್ಥವಿಲ್ಲ. ಅವರ ಒಳ್ಳೆಯ ಕೆಲಸಗಳನ್ನು ಸಹಿಸದೇ ಕೆಲವರು ಈ ರೀತಿ ಮಾಡಿದ್ದಾರೆ. ಅದಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ' ಎಂದರು.

ಚುನಾವಣೆಯಲ್ಲಿ ಹೊಸಬರಿಗೆ ಆದ್ಯತೆ ನೀಡಲಾಗುವುದೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು. ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಕೂಗಿರುವ ಪ್ರಕರಣಕ್ಕೆ ಸಂಬಂಧಿಸಿದ ವರದಿ ಕೈಸೇರಿ ಮೂರು ನಾಲ್ಕು ದಿನ ಕಳೆದರೂ ಸರ್ಕಾರ ಅದನ್ನು ಬಿಡುಗಡೆ ಮಾಡಿಲ್ಲ. ಎಫ್‌ಎಸ್‌ಎಲ್ ವರದಿಯನ್ನು ಏಕೆ ಬಚ್ಚಿಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಆ ವರದಿಯಲ್ಲಿರುವ ಅಂಶಗಳನ್ನು ಬಹಿರಂಗಗೊಳಿಸಬೇಕು' ಎಂದು ಒತ್ತಾಯಿಸಿದರು.

ವಿಚಾರಣೆಗೆ ಕೇಜ್ರಿವಾಲ್ ಮತ್ತೆ ಗೈರು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಇ.ಡಿ ವಿಚಾರಣೆಗೆ ಸತತ 8ನೇ ಬಾರಿಯೂ ಗೈರು ಹಾಜರಾದರು. ಆದರೆ, 12ರ ನಂತರ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಲು ಸಿದ್ಧ ಎಂದು ಅವರು ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ವರ್ಚುವಲ್ ಆಗಿ ಹಾಜರಾಗಲು ತನಿಖಾ ಸಂಸ್ಥೆಯು ಬಹುಶಃ ಅವಕಾಶ ನೀಡುವುದಿಲ್ಲ. ಇನ್ನೊಮ್ಮೆ ಸಮನ್ಸ್ ಜಾರಿ ಮಾಡಬಹುದು ಎಂದು ತಿಳಿಸಿವೆ.

ಚುನಾವಣಾ ಬಾಂಡ್ ವಿವರ: ಸಮಯ ಕೇಳಿದ ಎಸ್‌ಬಿಐ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಸಲ್ಲಿಸುವುದಕ್ಕೆ ಜೂನ್ 30ರವರೆಗೂ ಸಮಯ ನೀಡಬೇಕು ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಸೋಮವಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

'ಏಪ್ರಿಲ್ 12, 2019ರಿಂದ ಈ ವಿವರಗಳನ್ನು ಕ್ರೋಡಿಕರಿಸಬೇಕಾಗಿದೆ. ಇದು ಸಂಕೀರ್ಣವಾದ ಪ್ರಕ್ರಿಯೆ' ಎಂದು ಈ ಕುರಿತು ಸಲ್ಲಿಸಿದ ಅರ್ಜಿಯಲ್ಲಿ ಎಸ್‌ಬಿಐ ಕಾರಣವನ್ನು ನೀಡಿದೆ.

ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕ ಎಂದು ಫೆ.15ರಂದು ಘೋಷಿಸಿದ್ದ ಸುಪ್ರೀಂ ಕೋರ್ಟ್, ಬಾಂಡ್‌ಗಳ ಸಮಗ್ರ ವಿವರಗಳನ್ನು ಮಾರ್ಚ್ 6ರೊಳಗೆ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಅಲ್ಲದೆ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಸೂಚಿಸಿತ್ತು.

ಚುನಾವಣಾ ಬಾಂಡ್‌ಗಳನ್ನು ಎಸ್‌ಬಿಐ ಮೂಲಕ ಮಾರಾಟ ಮಾಡಲಾಗಿತ್ತು. ಬ್ಯಾಂಕ್, ಈಗ ಕೆಲವೊಂದು ವ್ಯಾವಹಾರಿಕವಾದ ಸಮಸ್ಯೆಗಳನ್ನು ಉಲ್ಲೇಖಿಸಿದೆ. ಸುಪ್ರೀಂ ಕೋರ್ಟ್ ನಿಗದಿಪಡಿಸಿದ್ದ ಮೂರು ವಾರಗಳ ಗಡುವಿನಲ್ಲಿ ಇವುಗಳನ್ನು ಸಲ್ಲಿಸುವುದು ಕಷ್ಟಕರ ಎಂದು ಹೇಳಿದೆ. 'ಸುಪ್ರೀಂ'ಗೆ ಸಲ್ಲಿಸಿರುವ ಅರ್ಜಿಯಲ್ಲಿ ಎಸ್‌ಬಿಐ, '2019ರ ಏಪ್ರಿಲ್ 12ರಿಂದ ತೀರ್ಪು ಪ್ರಕಟವಾದ ದಿನದವರೆಗೂ ಒಟ್ಟಾರೆ 22,217 ಚುನಾವಣಾ ಬಾಂಡ್‌ಗಳನ್ನು ಬಳಸಿ ವಿವಿಧ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲಾಗಿದೆ' ಎಂದು ಉಲ್ಲೇಖಿಸಿದೆ.

ನಗದೀಕರಣಗೊಂಡ ಬಾಂಡ್ ಗಳನ್ನು ಮುದ್ರೆ ಹಾಕಿದ ಲಕೋಟೆಗಳಲ್ಲಿ ಮುಂಬೈನ ಬ್ಯಾಂಕ್‌ನ ಕೇಂದ್ರ ಕಚೇರಿಯಲ್ಲಿ ಇಡಲಾಗಿದೆ. ಆಯೋಗಕ್ಕೆ ಸಲ್ಲಿಸಬೇಕಾದ ವಿವರಗಳಂತೆ 44,434 ಮಾಹಿತಿಗಳನ್ನು ಪ್ರತ್ಯೇಕಗೊಳಿಸಿ, ಹೋಲಿಕೆ ಮಾಡಿ, ಕ್ರೋಡೀಕರಿಸಬೇಕಿದೆ ಎಂದು ಹೇಳಿದೆ.

ಈ ಪ್ರಕ್ರಿಯೆಗನ್ನು ಕೋರ್ಟ್ ನಿಗದಿ ಪಡಿಸಿರುವ ಮೂರು ವಾರಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗದು ಎಂದು ತಿಳಿಸಿರುವ ಬ್ಯಾಂಕ್, ಗಡುವನ್ನು ಜೂನ್ 30ರವರೆಗೂ ವಿಸ್ತರಿಸುವಂತೆ ಮನವಿ ಮಾಡಿದೆ.

ದಾನಿಗಳ ವಿವರಗಳನ್ನು ಗೋಪ್ಯವಾಗಿಡಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಇದೇ ಕಾರಣದಿಂದ ಬಾಂಡ್‌ಗಳ ವಿವರಗಳು ಹಾಗೂ ದಾನಿಗಳ ಹೆಸರನ್ನು ಪರಸ್ಪರ ಹೋಲಿಸಿ ವಿವರ ಸಂಗ್ರಹಿಸಬೇಕಾಗಿದೆ. ಈ ಎಲ್ಲವೂ ಸಂಕೀರ್ಣವಾದ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದೆ.

'ದಾನಿಗಳ ವಿವರ ಸಂಗ್ರಹಿಸಲು ಪ್ರತಿ ಬಾಂಡ್ ವಿತರಿಸಿದ ದಿನಾಂಕದ ಮಾಹಿತಿ ಪರಿಶೀಲಿಸಬೇಕು. ಬಾಂಡ್‌ಗಳನ್ನು ರಾಜಕೀಯ ಪಕ್ಷಗಳು ತಮ್ಮ ಖಾತೆಗಳಿರುವ ಬ್ಯಾಂಕ್‌ಗಳಲ್ಲಿ ನಗದೀಕರಣಗೊಳಿಸಿಕೊಂಡಿವೆ. ಅದೇ ಪ್ರಕಾರ, ಎರಡನ್ನೂ ಗುರುತಿಸಿ ಹೋಲಿಕೆ ಮಾಡಬೇಕಾಗಿದೆ. ಬಾಂಡ್‌ಗಳ ಸಂಖ್ಯೆ ಸೇರಿದಂತೆ ಕೆಲವು ಮಾಹಿತಿಗಳು ಡಿಜಿಟಲ್ ಸ್ವರೂಪದಲ್ಲಿವೆ. ಖರೀದಿದಾರರ ಹೆಸರು, ಕೆವೈಸಿ ವಿವರಗಳು ಭೌತಿಕ ಸ್ವರೂಪದಲ್ಲಿಯೂ ಇವೆ. ಎಲ್ಲ ಮಾಹಿತಿಗಳನ್ನು ಡಿಜಿಟಲ್ ಸ್ವರೂಪದಲ್ಲಿಯೇ ಇಡದಿರುವುದರ ಉದ್ದೇಶ, ಯೋಜನೆಯ ಗುರಿಯಂತೆ ಮಾಹಿತಿಗಳು ಸುಲಭವಾಗಿ ಸಿಗದಂತಿರಬೇಕು ಎಂಬುದೇ ಆಗಿದೆ' ಎಂದು ಬ್ಯಾಂಕ್ ವಿವರಿಸಿದೆ.

ಶೇ 5ರಷ್ಟು ಸುಂಕ ಹಿಂಪಡೆಯಲು ಒತ್ತಾಯ

ನ್ಯೂಸ್‌ಪ್ರಿಂಟ್: ಕೇಂದ್ರಕ್ಕೆ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದಿನಪತ್ರಿಕೆಗಳ ಮುದ್ರಣ ಕಾಗದದ (ನ್ಯೂಸ್‌ಪ್ರಿಂಟ್) ಮೇಲೆ ವಿಧಿಸಿರುವ ಶೇ 5ರಷ್ಟು ಸುಂಕವನ್ನು ಹಿಂಪಡೆಯಬೇಕು ಎಂದು ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ (ಐಎನ್‌ಎಸ್) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಸುಂಕವನ್ನು ಹಿಂಪಡೆಯುವ ಕ್ರಮದಿಂದ ಮದ್ರಣ ಮಾಧ್ಯಮ ಉದ್ಯಮಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಅಲ್ಲದೆ, ಸಾರ್ವಜನಿಕರಿಗೆ ವಿಶ್ವಾಸಾರ್ಹವಾದ ಸುದ್ದಿಯನ್ನು ಒದಗಿಸಲು ಇದು ನೆರವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತ ಹೇಳಿಕೆಯಲ್ಲಿ 'ಐಎನ್‌ಎಸ್' ಅಧ್ಯಕ್ಷ ರಾಕೇಶ್ ಶರ್ಮಾ ಅವರು, ರೂಪಾಯಿ ಮೌಲ್ಯ ಕುಸಿತದ ಪರಿಣಾಮ ನ್ಯೂಸ್‌ಪ್ರಿಂಟ್‌ನ ದರವು ಏರುಮುಖವಾಗಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟು, ಉಕ್ರೇನ್–ರಷ್ಯಾ ಯುದ್ಧ, ಸರಕು ಸಾಗಣೆ ಹಡಗುಗಳನ್ನು ಗುರಿಯಾಗಿಸಿ ನಡೆಯುತ್ತಿರುವ ದಾಳಿ ಕಾರಣಗಳಿಂದಾಗಿ ನ್ಯೂಸ್‌ಪ್ರಿಂಟ್ ಖರೀದಿಗೆ ಈಗಾಗಲೇ ನೀಡಿದ್ದ ಕಾರ್ಯಾದೇಶಗಳು ರದ್ದಾಗುತ್ತಿವೆ' ಎಂದು ತಿಳಿಸಿದ್ದಾರೆ.

ಈ ಎಲ್ಲ ಪರಿಣಾಮವಾಗಿ ಪ್ರಕಾಶಕರ ಮೇಲೆ ಹೊರೆ ಅನಗತ್ಯವಾಗಿ ಹೆಚ್ಚಾಗಿದೆ. ವಿಶ್ವದಾದ್ಯಂತ ಇರುವ ಅನೇಕ ನ್ಯೂಸ್‌ಪ್ರಿಂಟ್ ಕಾರ್ಖಾನೆಗಳು ತಮ್ಮ ಕಾರ್ಯಾಚರಣೆ ಸ್ಥಗಿತಗೊಳಿಸಿವೆ ಅಥವಾ ಉತ್ಪಾದನೆಯನ್ನೇ ನಿಲ್ಲಿಸಿವೆ ಎಂದೂ ಉಲ್ಲೇಖಿಸಿದ್ದಾರೆ.

ರೂಪಾಯಿ ಮೌಲ್ಯವು ಕುಸಿಯುತ್ತಿರುವುದು ನ್ಯೂಸ್‌ಪ್ರಿಂಟ್‌ಗಳ ಆಮದನ್ನೇ ಅವಲಂಬಿಸಿರುವ ಮುದ್ರಣ ಮಾಧ್ಯಮ ಉದ್ಯಮದ ಮೇಲಿನ ಒತ್ತಡವನ್ನು ಹೆಚ್ಚಿಸಿದೆ. ರೂಪಾಯಿ ವಿನಿಮಯ ದರದ ಏರಿಳಿತದಿಂದಾಗಿ ವೆಚ್ಚವೂ ಹೆಚ್ಚುತ್ತಿದೆ ಎಂದು ಗಮನಸೆಳೆದಿದ್ದಾರೆ.

ಪ್ರಜಾಪ್ರಭುತ್ವದ ಹಿತರಕ್ಷಣೆ ದೃಷ್ಟಿಯಿಂದಲೂ ಮುದ್ರಣಮಾಧ್ಯಮ ಉದ್ಯಮದ ಉಳಿವು ಅಗತ್ಯವಾಗಿದೆ. ಈ ಉಧ್ಯಮವು ಕೈಗೆಟಕುವ ದರದಲ್ಲಿ ಜನಸಾಮಾನ್ಯರಿಗೆ ಮಾಹಿತಿಗಳನ್ನು ಒದಗಿಸುತ್ತಿದೆ. ಈ ಮೂಲಕ ಸರ್ಕಾರದ ಸಂವಹನ ಚಟುವಟಿಕೆಗೆ ನೆರವಾಗುತ್ತಿದೆ. ಜನರಿಗೆ ಸರ್ಕಾರದ ನೀತಿಗಳು ಹಾಗೂ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿಗಳನ್ನು ಒದಗಿಸುತ್ತಿದೆ ಎಂದು ತಿಳಿಸಿದ್ದಾರೆ.

ನ್ಯೂಸ್‌ಪ್ರಿಂಟ್‌ಗಳ ಮೇಲಿನ ಸುಂಕ ಹಿಂಪಡೆಯಬೇಕು ಎಂದು ಕೋರಿರುವ ಅವರು, ಜಾಲತಾಣಗಳ ಮೂಲಕ ಸುಳ್ಳು ಸುದ್ದಿಗಳು ವ್ಯಾಪಕವಾಗುತ್ತಿರುವ ಈಗಿನ ಸಂದರ್ಭದಲ್ಲಿ ಮುದ್ರಣ ಮಾಧ್ಯಮವು ಹೆಚ್ಚು ನಂಬಿಕೆ, ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿವೆ. ಅಲ್ಲದೆ, ವಿಶಾಲವಾದ ಓದುಗರ ಬಳಗವನ್ನು ಹೊಂದಿವೆ ಎಂದು ತಿಳಿಸಿದ್ದಾರೆ.

ಸುಂಕವನ್ನು ಹಿಂಪಡೆಯುವುದರಿಂದ ಉದ್ಯಮಕ್ಕೆ ದೊಡ್ಡ ಅನುಕೂಲವಾಗಲಿದೆ. ಪ್ರಕಾಶಕರು ತಮ್ಮ ನಿರ್ವಹಣಾ ವೆಚ್ಚ ನಿಭಾಯಿಸಲು ಹಾಗೂ ಜನತೆಗೆ ವಿಶ್ವಾಸಾರ್ಹವಾದ ಸುದ್ದಿಯನ್ನು ಒದಗಿಸುವುದು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ತೆಲಂಗಾಣ: ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಟೀಕೆ

ಬಿಆರ್‌ಎಸ್, ಕಾಂಗ್ರೆಸ್‌ನಿಂದ ಲೂಟಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕಾಂಗ್ರೆಸ್ ಮತ್ತು ಬಿಆರ್‌ಎಸ್ ಪಕ್ಷಗಳು 'ಲೂಟಿ ಮಾಡುವ' ಇತಿಹಾಸವನ್ನಷ್ಟೇ ಹೊಂದಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದರು.

ಅದಿಲಾಬಾದ್‌ನಲ್ಲಿ ಸೋಮವಾರ ಪಕ್ಷದ ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, 'ಇವೆರಡು ಪಕ್ಷಗಳಿಗೆ ವಿಭಿನ್ನ ಮುಖಗಳಿರಬಹುದು. ಆದರೆ 'ಸುಳ್ಳು ಮತ್ತು ಲೂಟಿ' ಈ ಪಕ್ಷಗಳ ಸಾಮಾನ್ಯ ಗುಣಗಳು' ಎಂದು ವಾಗ್ದಾಳಿ ನಡೆಸಿದರು.

'ತೆಲಂಗಾಣದಲ್ಲಿ ಬಿಆರ್‌ಎಸ್ ಅಧಿಕಾರದಲ್ಲಿದ್ದಾಗ ಕಾಳೇಶ್ವರಂ ಹಗರಣ ನಡೆಯಿತು. ಕಾಂಗ್ರೆಸ್ ಪಕ್ಷ, ಆ ಹಗರಣದ ತನಿಖೆ ನಡೆಸುವ ಬದಲು ಕಡತಗಳನ್ನು ಮುಚ್ಚಿಟ್ಟುಕೊಂಡು ಕುಳಿತಿದೆ. ನೀವು (ಬಿಆರ್‌ಎಸ್) ಲೂಟಿ ಮಾಡಿರುವುದರಿಂದ ನಾವೂ (ಕಾಂಗ್ರೆಸ್) ಲೂಟಿ ಮಾಡುತ್ತೇವೆ ಎಂಬುದು ಕಾಂಗ್ರೆಸ್‌ನ ಧೋರಣೆ' ಎಂದು ಟೀಕಿಸಿದರು.

ಲೋಕಸಭಾ ಚುನಾವಣೆಯ ದಿನಾಂಕ ಘೋಷಣೆ ಸಮೀಪಿಸುತ್ತಿರುವಂತೆಯೇ ವಿವಿಧ ರಾಜ್ಯಗಳಿಗೆ ಭೇಟಿ ನೀಡಲು ನಿರ್ಧರಿಸಿರುವ ಮೋದಿ ಅವರು, ತೆಲಂಗಾಣ ಭೇಟಿ ಮೂಲಕ ಪ್ರವಾಸಕ್ಕೆ ಚಾಲನೆ ನೀಡಿದರು. ಅದಿಲಾಬಾದ್‌ನಲ್ಲಿ ಆಯೋಜಿಸಿದ್ದ ಎರಡು ಸಭೆಗಳಲ್ಲಿ ಪಾಲ್ಗೊಂಡರು.

ಶಂಕುಸ್ಥಾಪನೆ: ಪ್ರಧಾನಿ ಅವರು ರಸ್ತೆ, ರೈಲು ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೆಲಂಗಾಣದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಸುಮಾರು ₹ 56 ಸಾವಿರ ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಂಕು ಸ್ಥಾಪನೆ ನೆರವೇರಿಸಿದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಮತ್ತು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಬಿಆರ್‌ಎಸ್ ಮೊದಲ ಪಟ್ಟಿ ಬಿಡುಗಡೆ

ಹೈದರಾಬಾದ್ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಗಾಗಿ ಬಿಆರ್‌ಎಸ್ ಪಕ್ಷವು ತನ್ನ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದ್ದು, ಇಬ್ಬರು ಹಾಲಿ ಸಂಸದರು ಸೇರಿದಂತೆ ನಾಲ್ವರ ಹೆಸರನ್ನು ಘೋಷಿಸಿದೆ.

ತೆಲಂಗಾಣದ 17 ಕ್ಷೇತ್ರಗಳ ಪೈಕಿ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳನ್ನು ಬಿಆರ್‌ಎಸ್ ಅಧ್ಯಕ್ಷ ಕೆ.ಚಂದ್ರಶೇಖರ್ ರಾವ್ ಪ್ರಕಟಿಸಿದರು.

ಕೇಂದ್ರದ ಜತೆ ತಿಕ್ಕಾಟ ಇಲ್ಲ: ರೇವಂತ್ ರೆಡ್ಡಿ

'ಕೇಂದ್ರ ಸರ್ಕಾರವನ್ನು ಎದುರು ಹಾಕಿಕೊಳ್ಳುವ ಯಾವುದೇ ಉದ್ದೇಶ ನಮ್ಮ ಸರ್ಕಾರಕ್ಕೆ ಇಲ್ಲ' ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹೇಳಿದರು.

ರಾಜ್ಯ ವಿಭಜನೆಯ ಸಂದರ್ಭದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಲು, ಮುಸಿ ನದಿ ದಡದ ಪ್ರದೇಶಗಳ ಅಭಿವೃದ್ಧಿ ಹಾಗೂ ಸೆಮಿಕಂಡಕ್ಟರ್ ಉದ್ಯಮದ ಬೆಳವಣಿಗೆಗೆ ಕೇಂದ್ರ ಸರ್ಕಾರದ ನೆರವನ್ನು ಅವರು ಕೋರಿದರು.

ಗುಜರಾತ್‌ನಂತೆ ತೆಲಂಗಾಣ ರಾಜ್ಯದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಒತ್ತು ನೀಡಬೇಕು ಎಂದೂ ಮನವಿ ಮಾಡಿದರು.

'ಸ್ಪರ್ಧಾತ್ಮಕ ಕುಸ್ತಿಗೆ ಮರಳುವುದಿಲ್ಲ'

ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ಸ್ಪರ್ಧಾತ್ಮಕ ಕುಸ್ತಿಗೆ ಮರಳುವುದನ್ನು ತಳ್ಳಿ ಹಾಕಿರುವ ಒಲಿಂಪಿಕ್ ಕಂಚಿನ ಪದಕ ವಿಜೇತೆ ಸಾಕ್ಷಿ ಮಲಿಕ್, ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದಂತೆ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧದ ದೀರ್ಘ ಕಾಲದ ಪ್ರತಿಭಟನೆಯು ತನ್ನನ್ನು ಮಾನಸಿಕವಾಗಿ ಹಿಂಸಿಸಿದೆ ಎಂದು ಹೇಳಿದ್ದಾರೆ.

ಶರಣ್ ಸಿಂಗ್ ಅವರ ನಿಕಟವರ್ತಿ ಸಂಜಯ್ ಸಿಂಗ್ ಅವರು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಭಾರತ ಕುಸ್ತಿ ಫೆಡರೇಶನ್ ಅಧ್ಯಕ್ಷರಾಗಿ ಆಯ್ಕೆಯಾದ ಬೆನ್ನಲ್ಲೇ 31 ವರ್ಷದ ಸಾಕ್ಷಿ ನಿವೃತ್ತಿ ಘೋಷಿಸಿದ್ದರು. ಬ್ರಿಜ್ ಭೂಷಣ್ ಬಂಧನಕ್ಕೆ ಆಗ್ರಹಿಸಿ ಸಾಕ್ಷಿ ಅವರೊಂದಿಗೆ ಒಲಿಂಪಿಕ್ ಕಂಚಿನ ಪದಕ ವಿಜೇತ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್ ಸಹ ಪ್ರತಿಭಟನೆ ನಡೆಸಿದ್ದರು.

'ಒಂದು ವರ್ಷಕ್ಕಿಂತ ಹೆಚ್ಚು ಸಮಯವಾಗಿದ್ದು, ತುಂಬಾ ಮಾನಸಿಕ ಒತ್ತಡವಿದೆ. ಈ ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಸಾಧ್ಯವಿರುವ ಎಲ್ಲ ರೀತಿಯ ಹೋರಾಟಕ್ಕೆ ಪ್ರಯತ್ನಿಸುತ್ತಿದ್ದೇವೆ. ಆದ್ದರಿಂದ ನಾನು ಕುಸ್ತಿಯಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ' ಎಂದು ಮಲಿಕ್ ಭಾರತದಲ್ಲಿ ಮಿ–ಟೂ ಚಳವಳಿಯ ಪರಿಣಾಮದ ಕುರಿತ ಪ್ಯಾನಲ್ ಚರ್ಚೆಯಲ್ಲಿ ಹೇಳಿದರು.

'ನಾನು ಭಾರತಕ್ಕೆ (ಒಲಿಂಪಿಕ್) ಕಂಚಿನ ಪದಕ ಗೆದ್ದಿದ್ದೇನೆ. ನನ್ನ ಕಿರಿಯರು ಬೆಳ್ಳಿ ಮತ್ತು ಚಿನ್ನ ಗೆಲ್ಲಬೇಕೆಂದು ಬಯಸುತ್ತೇನೆ. ದೇಶದ ಪ್ರತಿಯೊಬ್ಬ ಹುಡುಗಿಯೂ ತನ್ನ ಕನಸುಗಳನ್ನು ಬೆನ್ನಟ್ಟುವುದನ್ನು ನೋಡಲು ಬಯಸುತ್ತೇನೆ' ಎಂದು ಅವರು ತಿಳಿಸಿದರು.

ಕುಸ್ತಿಪಟುಗಳ ಮನವಿಗೆ ಉತ್ತರಿಸಿ: ಹೈಕೋರ್ಟ್

ನವದೆಹಲಿ (ಪಿಟಿಐ): ಕಳೆದ ಡಿಸೆಂಬರ್‌ನಲ್ಲಿ ನಡೆದ ಭಾರತ ಕುಸ್ತಿ ಫೆಡರೇಷನ್ ಚುನಾವಣೆಯನ್ನು ಕಾನೂನುಬಾಹಿರ ಮತ್ತು ಅದನ್ನು ಅನೂರ್ಜಿಗೊಳಿಸಬೇಕು ಎಂದು ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್, ಸಾಕ್ಷಿ ಮಲಿಕ್ ಮತ್ತು ಅವರ ಪತಿ ಸತ್ಯವ್ರತ ಕಾದಿಯಾನ್ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಸೋಮವಾರ ಕೇಂದ್ರ ಸರ್ಕಾರ ಮತ್ತು ಫೆಡರೇಷನ್ (ಡಬ್ಲ್ಯುಎಫ್‌ಐ) ಪ್ರತಿಕ್ರಿಯೆ ಕೋರಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ದತ್ತಾ ಅವರು ಕೇಂದ್ರ ಸರ್ಕಾರ, ಡಬ್ಲ್ಯುಎಫ್‌ಐ ಮತ್ತು ಡಬ್ಲ್ಯುಎಫ್‌ಐನ ಅಡ್‌ಹಾಕ್ ಸಮಿತಿಗೆ ನೋಟಿಸ್ ನೀಡಿದ್ದಾರೆ.

ಈ ವಿಷಯದಲ್ಲಿ ಸೂಚನೆಗಳನ್ನು ಪಡೆಯಲು ನ್ಯಾಯಾಲಯವು ಕೇಂದ್ರ ಸರ್ಕಾರದ ವಕೀಲ ಅನಿಲ್ ಸೋನಿ ಅವರಿಗೆ ಸಮಯ ನೀಡಿತು ಮತ್ತು ಮುಂದಿನ ವಿಚಾರಣೆಯನ್ನು ಮಾರ್ಚ್ 7 ಕ್ಕೆ ಪಟ್ಟಿ ಮಾಡಿತು.

ಬಾಕ್ಸಿಂಗ್: ಜಾಸ್ಮಿನ್‌ಗೆ ಸೋಲು

ಬುಸ್ಟೊ ಅರ್ಸಿಝಿಯೊ (ಇಟಲಿ), (ಪಿಟಿಐ): ಮೊದಲ ವಿಶ್ವ ಒಲಿಂಪಿಕ್ಸ್ ಬಾಕ್ಸಿಂಗ್ ಅರ್ಹತಾ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳ ನಿರಾಶಾದಾಯಕ ನಿರ್ವಹಣೆ ಮುಂದುವರಿದಿದೆ. ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತೆ ಜಾಸ್ಮಿನ್ ಲಂಬೋರಿಯಾ ಮೊದಲ ಸುತ್ತಿನಲ್ಲೇ ಹೊರಬಿದ್ದರು.

22 ವರ್ಷದ ಜಾಸ್ಮಿನ್ ಮಹಿಳೆಯರ 60 ಕೆ.ಜಿ. ತೂಕ ವಿಭಾಗದಲ್ಲಿ ಭಾನುವಾರ ರಾತ್ರಿ 0–5 ರಿಂದ ಜಪಾನ್‌ನ ಅಯಾಕಾ ತಗುಚಿ ಎದುರು ಒಮ್ಮತದ ತೀರ್ಪಿನಲ್ಲಿ ಸೋಲನುಭವಿಸಿದರು.

ಇದಕ್ಕೆ ಮೊದಲು ದೀಪಕ್ ಭೋರಿಯಾ (51 ಕೆ.ಜಿ) ಮತ್ತು ನರೇಂದರ್ ಬೆರ್ವಾಲ್ (+92 ಕೆ.ಜಿ) ಕೂಡ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಅಡಿ ಅರ್ಹತೆ ಪಡೆಯಲು ಅವಕಾಶವಿರುವ ಈ ಟೂರ್ನಿಯಲ್ಲಿ ಭಾರತದ ಇನ್ನೂ ಆರು ಮಂದಿ ವಿವಿಧ ವಿಭಾಗಗಳಲ್ಲಿ ಕಣದಲ್ಲಿದ್ದಾರೆ.

ಮಾರ್ಚ್ 30ರಿಂದ ಹಾಕಿ ಉತ್ಸವ

ಬೆಂಗಳೂರು: ಕೊಡವ ಹಾಕಿ ಉತ್ಸವದ 24ನೇ ಆವೃತಿಯ 'ಕುಂಡ್ಯೋಳಂಡ ಹಾಕಿ ಕಾರ್ನಿವಾಲ್ 2024' ಮಾರ್ಚ್ 30ರಿಂದ ನಡೆಯಲಿದೆ.

ನಾಪೋಕ್ಲು ಸಮೀಪದ ಕೊಳಕೇರಿ ಗ್ರಾಮದ ಕುಂಡ್ಯೋಳಂಡ ಕುಟುಂಬವು ಆಯೋಜಿಸುತ್ತಿರುವ ಹಾಕಿ ಉತ್ಸವವು ಏ.28ರಂದು ಮುಕ್ತಾಯಗೊಳ್ಳಲಿದೆ. 400 ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಪ್ರಥಮ ಸ್ಥಾನ ಪಡೆಯುವ ತಂಡಕ್ಕೆ ₹ 4 ಲಕ್ಷ ನಗದು, ಟ್ರೋಫಿ ಹಾಗೂ ರನ್ನರ್ ಅಪ್ ತಂಡಕ್ಕೆ ₹ 3 ಲಕ್ಷ ನಗದು ನೀಡಲಾಗುವುದು. ಕಳೆದ ವರ್ಷ ಅಪ್ಪಚೆಟ್ಟೋಳಂಡ ಕೌಟುಂಬಿಕ ಕಪ್ ಹಾಕಿ ಪಂದ್ಯಾವಳಿಯಲ್ಲಿ 336 ತಂಡಗಳು ಪಾಲ್ಗೊಂಡಿದ್ದವು ಎಂದು ಕುಂಡ್ಯೋಳಂಡ ಹಾಕಿ ಕಾರ್ನಿವಾಲ್ ಸಂಚಾಲಕ ದಿನೇಶ್ ಕಾರ್ಯಪ್ಪ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಿತ್ಯ 24 ಪಂದ್ಯಗಳು ನಡೆಯಲಿವೆ. ಪ್ರಮಾಣಿತ ನಿಯಮಗಳನ್ನು ಪೂರೈಸಲು ಸಾಧ್ಯವಾಗದ ತಂಡಗಳಿಗೆ ಕನಿಷ್ಠ 9 ಆಟಗಾರರನ್ನು ಒಳಗೊಂಡ ತಂಡ ರಚನೆಗೂ ಅವಕಾಶ ನೀಡುವ ಬಗ್ಗೆ ಚಿಂತಿಸಲಾಗುತ್ತಿದೆ ಎಂದು ಹೇಳಿದರು.

ಅಮೆರಿಕ ಕ್ಲಬ್ ಮುಖ್ಯ ತರಬೇತುದಾರನಾಗಿ ಹೊಸ ಇನಿಂಗ್ಸ್

ಬ್ಯಾಡ್ಮಿಂಟನ್‌ಗೆ ಸಾಯಿ ಪ್ರಣೀತ್ ವಿದಾಯ

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಬಿ. ಸಾಯಿ ಪ್ರಣೀತ್ ಸೋಮವಾರ ಅಂತರ ರಾಷ್ಟ್ರೀಯ ಬ್ಯಾಡ್ಮಿಂಟನ್‌ಗೆ ನಿವೃತ್ತಿ ಘೋಷಿಸಿದರು. ಸಿಂಗಪುರ ಓಪನ್ ಗೆದ್ದು, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ಟೋಕಿಯೊ ಕ್ರೀಡಾಕೂಟದ ನಂತರ ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಹೈದರಾಬಾದ್‌ನ 31 ವರ್ಷದ ಆಟಗಾರ, ಬ್ಯಾಡ್ಮಿಂಟನ್‌ಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ.

'24 ವರ್ಷಗಳಿಂದ ನನ್ನ ಜೀವನಾಡಿ ಆಗಿರುವ ಕ್ರೀಡೆಗೆ ನಿವೃತ್ತಿ ಘೋಷಿಸುತ್ತಿದ್ದೇನೆ. ಇಲ್ಲಿಯವರೆಗಿನ ಪ್ರಯಾಣಕ್ಕಾಗಿ ಕೃತಜ್ಞತೆ ಹೇಳುತ್ತೇನೆ' ಎಂದು ಸಾಯಿ ಪ್ರಣೀತ್ ತಮ್ಮ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಂದಿನ ತಿಂಗಳು ಅಮೆರಿಕದ ಟ್ರಯಾಂಗಲ್ ಬ್ಯಾಡ್ಮಿಂಟನ್ ಅಕಾಡೆಮಿಯ ಮುಖ್ಯ ತರಬೇತುದಾರರಾಗಿ ಸೇರಲು ಸಜ್ಜಾಗಿರುವ ಪ್ರಣೀತ್, ಹೊಸ ಇನಿಂಗ್ಸ್ ಪ್ರಾರಂಭಿಸಲಿದ್ದಾರೆ. 'ನಾನು ಏಪ್ರಿಲ್‌ನಲ್ಲಿ ಟ್ರಯಾಂಗಲ್ ಬ್ಯಾಡ್ಮಿಂಟನ್ ಅಕಾಡೆಮಿ ಮುಖ್ಯ ತರಬೇತುದಾರನಾಗಿ ಸೇರುತ್ತೇನೆ. ಜವಾಬ್ದಾರಿ ವಹಿಸಿಕೊಂಡ ಬಳಿಕ ನನ್ನ ಪಾತ್ರದ ಬಗ್ಗೆ ವಿಸ್ತಾರವಾಗಿ ತಿಳಿಸುತ್ತೇನೆ' ಎಂದು ಪ್ರಣೀತ್ ಸುದ್ದಿಸಂಸ್ಥೆಗೆ ಹೇಳಿದ್ದಾರೆ.

ಸಾಯಿ ಪ್ರಣೀತ್

ಎರಡು ದಶಕಗಳ ಸುದೀರ್ಘ ಅಂತರರಾಷ್ಟ್ರೀಯ ಬದುಕಿನಲ್ಲಿ ಪ್ರಣೀತ್ ಕೆಲವು ಸುಮಧುರ ಕ್ಷಣಗಳನ್ನು ಕಂಡಿದ್ದಾರೆ. ಆದರೆ 2017ರ ಸಿಂಗಪುರ ಓಪನ್ ಸೂಪರ್ ಸೀರೀಸ್ ಗೆಲುವು ಮತ್ತು ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆದ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದು ಸ್ಮರಣೀಯ. ಪ್ರಣೀತ್ ಅವರು ವಿಶ್ವ ಕ್ರಮಾಂಕದಲ್ಲಿ 10ನೇ ಕ್ರಮಾಂಕಕ್ಕೆ ಏರಿದ್ದು, ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಆದರೆ ಅಲ್ಲಿ ಛಾಪು ಮೂಡಿಸಲು ಸಾಧ್ಯವಾಗಲಿಲ್ಲ. ಎಲ್ಲಾ ಪಂದ್ಯಗಳನ್ನು ಸೋತು ಗ್ರೂಪ್ ಹಂತದಲ್ಲೇ ನಿರ್ಗಮಿಸಿದ್ದರು.

'ನನ್ನ ಕುಟುಂಬ, ಅಜ್ಜ–ಅಜ್ಜಿ, ಪೋಷಕರು ಮತ್ತು ಪ್ರೀತಿಯ ಪತ್ನಿ ಶ್ವೇತಾ ಅವರಿಗೆ - ನಿಮ್ಮ ಪ್ರೋತ್ಸಾಹವು ನನ್ನ ಯಶಸ್ಸಿನ ಅಡಿಪಾಯವಾಗಿದೆ. ನಿಮ್ಮ ಅಚಲ ಬೆಂಬಲವಿಲ್ಲದೆ, ಇದ್ಯಾವುದೂ ಸಾಧ್ಯವಾಗುತ್ತಿರಲಿಲ್ಲ' ಎಂದು ಪ್ರಣೀತ್ ಹೇಳಿದ್ದಾರೆ.

'ಗೋಪಿಚಂದ್ ಅಕಾಡೆಮಿ, ಬಾಲ್ಯದ ತರಬೇತುದಾರರಾದ ಆರಿಫ್ ಮತ್ತು ಗೋವರ್ಧನ್, ಭಾರತ ಬ್ಯಾಡ್ಮಿಂಟನ್ ಸಂಸ್ಥೆ, ಭಾರತ ಕ್ರೀಡಾ ಪ್ರಾಧಿಕಾರ ಹಾಗೂ ಬೆಂಬಲ ನೀಡಿದ ಸಂಸ್ಥೆಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ತಿಳಿಸಿದ್ದಾರೆ.

ಟೇಬಲ್ ಟೆನಿಸ್: ಭಾರತ ಪುರುಷ, ಮಹಿಳಾ ತಂಡಗಳ ಐತಿಹಾಸಿಕ ಸಾಧನೆ

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ

ನವದೆಹಲಿ (ಪಿಟಿಐ): ವಿಶ್ವ ಶ್ರೇಯಾಂಕದ ಆಧಾರದ ಮೇಲೆ ಭಾರತ ಪುರುಷರ ಮತ್ತು ಮಹಿಳಾ ಟೇಬಲ್ ಟೆನಿಸ್ ತಂಡಗಳು ಸೋಮವಾರ ಮೊದಲ ಬಾರಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಮೂಲಕ ಇತಿಹಾಸ ಬರೆದಿವೆ.

ಕಳೆದ ತಿಂಗಳು ದಕ್ಷಿಣ ಕೊರಿಯಾದ ಬೂಸಾನ್‌ನಲ್ಲಿ ನಡೆದ ವಿಶ್ವ ಟೇಬಲ್ ಟೆನಿಸ್ ಟೀಮ್ ಚಾಂಪಿಯನ್‌ಷಿಪ್ ಅನ್ನು, ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೊನೆಯ ಅರ್ಹತಾ ಕೂಟವಾಗಿ ಪರಿಗಣಿಸಲಾಗಿತ್ತು. ಇದರ ನಂತರವೂ ತಂಡ ವಿಭಾಗದಲ್ಲಿ ಏಳು ಸ್ಥಾನಗಳು ಉಳಿದಿದ್ದವು. ಅವುಗಳನ್ನು ತಂಡಗಳ ರ‍್ಯಾಂಕಿಂಗ್ ಆಧಾರದ ಮೇಲೆ ಒಲಿಂಪಿಕ್ಸ್‌ಗೆ ಪರಿಗಣಿಸಲಾಯಿತು.

ಮಹಿಳೆಯರ ವಿಭಾಗದಲ್ಲಿ ಭಾರತ 13ನೇ ಸ್ಥಾನ, ಪೋಲೆಂಡ್ (12), ಸ್ವೀಡನ್ (15) ಮತ್ತು ಥಾಯ್ಲೆಂಡ್ ತಂಡಗಳು ಈ ವರ್ಷದ ಪ್ಯಾರಿಸ್ ಕ್ರೀಡೆಗಳಿಗೆ ಅರ್ಹತೆ ಪಡೆದವು. ಪುರುಷರ ವಿಭಾಗ ದಲ್ಲಿ ಕ್ರೊಯೇಷಿಯಾ (12ನೇ ಸ್ಥಾನ), ಭಾರತ (15) ಮತ್ತು ಸ್ಲೊವೇನಿಯಾ (11) ಸ್ಥಾನ ಪಡೆದಿವೆ.

‘ಕೊನೆಗೂ...!, ಒಲಿಂಪಿಕ್ಸ್‌ನಲ್ಲಿ ತಂಡ ಸ್ಪರ್ಧೆಗೆ ಭಾರತ ಅರ್ಹತೆ ಪಡೆದಿದೆ. ನಾನು ಬಹಳ ದಿನಗಳಿಂದ ಬಯಸುತ್ತಿದ್ದೆ. ಒಲಿಂಪಿಕ್ಸ್‌ನಲ್ಲಿ ಇದು ನನ್ನ ಐದನೇ ಪ್ರದರ್ಶನವಾಗಿದ್ದರೂ ನಿಜವಾಗಿಯೂ ವಿಶೇಷವಾಗಿದೆ. ಐತಿಹಾಸಿಕ ಕೋಟಾವನ್ನು ಪಡೆದ ಮಹಿಳಾ ತಂಡಕ್ಕೂ ಅಭಿನಂದನೆಗಳು’ ಎಂದು ಅನುಭವಿ ಆಟಗಾರ ಶರತ್ ಕಮಲ್ ಟ್ವೀಟ್ ಮಾಡಿದ್ದಾರೆ.

ಇದು ಭಾರತೀಯ ಟೇಬಲ್ ಟೆನಿಸ್ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಏಕೆಂದರೆ ಬೀಜಿಂಗ್ 2008 ಕ್ರೀಡಾಕೂಟದಲ್ಲಿ ತಂಡ ವಿಭಾಗದ ಸ್ಪರ್ಧೆಗಳು ಆರಂಭವಾದ



ಶರತ್ ಕಮಲ್

ನಂತರ ರಾಷ್ಟ್ರವು ಒಲಿಂಪಿಕ್ಸ್‌ನಲ್ಲಿ ಈ ವಿಭಾಗದಲ್ಲಿ ಸ್ಪರ್ಧಿಸುತ್ತಿರುವುದು ಇದೇ ಮೊದಲು.

ಭಾರತ ಎರಡು ತಂಡಗಳು ಐಟಿಟಿಎಫ್ ವಿಶ್ವ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದ ನಂತರ ಒಲಿಂಪಿಕ್ ಸ್ಥಾನಗಳನ್ನು ಕಳೆದುಕೊಂಡಿದ್ದವು.

ಅನುಭವಿ ಶರತ್ ನೇತೃತ್ವದ ಪುರುಷರ ಟೇಬಲ್ ಟೆನಿಸ್ ತಂಡವು ದಕ್ಷಿಣ ಕೊರಿಯಾ ವಿರುದ್ಧ 0-3 ಗೋಲುಗಳಿಂದ ಸೋತರೆ, ಮಣಿಕಾ ಬಾತ್ರಾ ನೇತೃತ್ವದ ಮಹಿಳಾ ತಂಡವು ಚೀನಾ ತೈಪೆ ವಿರುದ್ಧ 1-3 ಅಂತರದಲ್ಲಿ ಸೋತಿತು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಪುರುಷ ಮತ್ತು ಮಹಿಳಾ ತಂಡಗಳು ಕ್ರೀಡಾಕೂಟಕ್ಕೆ ಮುಂಚಿತವಾಗಿ ಏಷ್ಯಾ ಮತ್ತು ಯುರೋಪ್‌ನಲ್ಲಿ ತರಬೇತಿ ಪಡೆಯುವ ನಿರೀಕ್ಷೆ ಇದೆ.

ಟಿಟಿಗೆ ಹೆಡ್ ಕೋಚ್

ನವದೆಹಲಿ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರರು ಆರು ವರ್ಷಗಳ ನಂತರ ಮುಖ್ಯ ತರಬೇತುದಾರರ ಮಾರ್ಗದರ್ಶನ ಪಡೆಯಲಿದ್ದಾರೆ. ಇಟಲಿಯ ಮಾಸ್ಸಿಮೊ ಕಾನ್ಸ್‌ಟೆಂಟಿನಿ ಅವರು ಮೂರನೇ ಬಾರಿಗೆ ರಾಷ್ಟ್ರೀಯ ತಂಡದ ಕೋಚ್ ಆಗಿ ಮರಳುವ ಸಾಧ್ಯತೆ ಇದೆ.

ಮಾಸ್ಸಿಮೊ ಅವರು ಈ ಹಿಂದೆ 2009-2010 ಮತ್ತು 2016-2018ರಲ್ಲಿ ಭಾರತ ತಂಡಕ್ಕೆ ಮಾರ್ಗದರ್ಶನ ನೀಡಿದ್ದರು. 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಪದಕ ಗೆದ್ದಿತ್ತು.

ಏಷ್ಯನ್ ಗೇಮ್ಸ್‌ನ ಐತಿಹಾಸಿಕ ಪ್ರದರ್ಶನದ ನಂತರ ಕೆಲವು ಕಾರಣಗಳಿಂದಾಗಿ, ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ)ಗೆ ಮಾಸ್ಸಿಮೊ ಅವರ ಉತ್ತರಾಧಿಕಾರಿ ಹುಡುಕಲು ಸಾಧ್ಯವಾಗಲಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ತಂಡದ ಕೋಚ್ ಆಗಿ ಮರಳಲು ಸಿದ್ಧರಾಗಿದ್ದಾರೆ.

ಮಾಸ್ಸಿಮೊ ಅವರೊಂದಿಗೆ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಪ್ರಸ್ತುತ ನಾಲ್ಕು ವರ್ಷಗಳ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿದೆ ಎಂದು ಟಿಟಿಎಫ್‌ಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

48ನೇ ಬಾರಿ ಫೈನಲ್‌ಗೆ ಮುಂಬೈ

ರಣಜಿ ಕ್ರಿಕೆಟ್ ಟ್ರೋಫಿ: ಮುಲಾನಿ ಬೌಲಿಂಗ್ ಮೋಡಿಗೆ ತಮಿಳುನಾಡು ಶರಣು

ಮುಂಬೈ (ಪಿಟಿಐ): ತಮಿಳುನಾಡು ತಂಡದ ಮೇಲೆ ಇನಿಂಗ್ಸ್ ಮತ್ತು 70 ರನ್‌ಗಳಿಂದ ಜಯಗಳಿಸಿದ ನಲ್ವತ್ತೊಂದು ಬಾರಿಯ ರಣಜಿ ಟ್ರೋಫಿ ಚಾಂಪಿಯನ್ ಮುಂಬೈ ಕ್ರಿಕೆಟ್ ತಂಡವು ಈಗ ಮತ್ತೊಂದು ಸಲ ಫೈನಲ್ ತಲುಪಿದೆ.

ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ನಡೆದ ಈ ಸೆಮಿಫೈನಲ್ ಪಂದ್ಯವು ಮೂರು ದಿನಗಳಲ್ಲಿ ಮುಕ್ತಾಯವಾಯಿತು. ಮುಂಬೈ ತಂಡವು 48ನೇ ಸಲ ಫೈನಲ್ ತಲುಪಿದ ದಾಖಲೆ ಮಾಡಿತು.

ತಮಿಳುನಾಡು ತಂಡವು ಮೊದಲ ಇನಿಂಗ್ಸ್‌ನಲ್ಲಿ ಕೇವಲ 146 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಮುಂಬೈ ತಂಡವು 106.5 ಓವರ್‌ಗಳಲ್ಲಿ 378 ರನ್ ಗಳಿಸಿತು. 232 ರನ್‌ಗಳ ದೊಡ್ಡ ಮುನ್ನಡೆ ಸಾಧಿಸಿತು.

ಮುಂಬೈ ತಂಡವು ಭಾನುವಾರ 106 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಾಗ ಶಾರ್ದೂಲ್ ಠಾಕೂರ್ ಶತಕ, ತನುಷ್ ಕೋಟ್ಯಾನ್ (ಅಜೇಯ 89) ಅವರು ತಂಡದ ಮೊತ್ತಕ್ಕೆ ಮಹತ್ವದ ಕಾಣಿಕೆ ನೀಡಿದರು. ಸೋಮವಾರ ಬೌಲಿಂಗ್‌ನಲ್ಲಿಯೂ ಮಿಂಚಿದ ಶಾರ್ದೂಲ್ (16ಕ್ಕೆ2), ತನುಷ್

ಮುಂಬೈ ತಂಡದ ಶಮ್ಸ್ ಮುಲಾನಿ

(18ಕ್ಕೆ2) ಮತ್ತು ಶಮ್ಸ್ ಮುಲಾನಿ (53ಕ್ಕೆ4) ತಮಿಳುನಾಡು ತಂಡವನ್ನು ಕಟ್ಟಿಹಾಕಿದರು. ತಮಿಳುನಾಡು ತಂಡಕ್ಕೆ 51.5 ಓವರ್‌ಗಳಲ್ಲಿ 162 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ತಂಡದ ಬಾಬಾ ಇಂದ್ರಜೀತ್ (70; 105ಎ, 4X9) ಏಕಾಂಗಿ ಹೋರಾಟ ಮಾಡಿದರು. ಆದರೆ ಆರಂಭಿಕ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್– **ತಮಿಳುನಾಡು** 146. **ಮುಂಬೈ** 106.5 ಓವರ್‌ಗಳಲ್ಲಿ 378 (ತನುಷ್ ಕೋಟ್ಯಾನ್ ಔಟಾಗದೆ 89, ಸಾಯಿಕಿಶೋರ್ 99ಕ್ಕೆ6) ಎರಡನೇ ಇನಿಂಗ್ಸ್: **ತಮಿಳುನಾಡು:** 51.5 ಓವರ್‌ಗಳಲ್ಲಿ 162 (ಬಾಬಾ ಇಂದ್ರಜಿತ್ 70, ಶಾರ್ದೂಲ್ ಠಾಕೂರ್ 16ಕ್ಕೆ2, ಶಮ್ಸ್ ಮುಲಾನಿ 53ಕ್ಕೆ4, ತನುಷ್ ಕೋಟ್ಯಾನ್ 18ಕ್ಕೆ2) **ಫಲಿತಾಂಶ:** ಮುಂಬೈ ತಂಡಕ್ಕೆ ಇನಿಂಗ್ಸ್ ಮತ್ತು 70 ರನ್‌ಗಳ ಜಯ.

ಯಶ್ ಆಟ; ವಿದರ್ಭ ಮರುಹೋರಾಟ

ನಾಗ್ಪುರ (ಪಿಟಿಐ): ಅಮೋಘ ಬ್ಯಾಟಿಂಗ್ ಮಾಡಿದ ಯಶ್ ರಾಥೋಡ್ (ಬ್ಯಾಟಿಂಗ್ 97) ಅವರ ನೆರವಿನಿಂದ ವಿದರ್ಭ ತಂಡವು ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶಕ್ಕೆ ತಿರುಗೇಟು ನೀಡಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ವಿದರ್ಭ:** 56.4 ಓವರ್‌ಗಳಲ್ಲಿ 170. **ಮಧ್ಯಪ್ರದೇಶ:** 94.3 ಓವರ್‌ಗಳಲ್ಲಿ 252 (ಸಾರಾಂಶ್ ಜೈನ್ 30, ಸಾಗರ್ ಸೋಳಂಕಿ 26, ಉಮೇಶ್ ಯಾದವ್ 40ಕ್ಕೆ3, ಯಶ್ ಠಾಕೂರ್ 51ಕ್ಕೆ3, ಅಕ್ಷಯ್ ವಖಾರೆ 68ಕ್ಕೆ2) ಎರಡನೇ ಇನಿಂಗ್ಸ್: **ವಿದರ್ಭ:** 90 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 343 (ಧ್ರುವ ಶೋರೆ 40, ಅಮನ್ ಮೊಖಡೆ 59, ಕರುಣ್ ನಾಯರ್ 38, ಯಶ್ ರಾಥೋಡ್ ಬ್ಯಾಟಿಂಗ್ 97, ಅಕ್ಷಯ್ ವಾಡಕರ್ 77, ಆದಿತ್ಯ ಸರವಟೆ ಬ್ಯಾಟಿಂಗ್ 14, ಅನುಭವ್ ಅಗರವಾಲ್ 68ಕ್ಕೆ2, ಕುಮಾರ್ ಕಾರ್ತಿಕೆಯ 73ಕ್ಕೆ2)

ರಣಜಿ ಫೈನಲ್ ಮುಂಬೈನಲ್ಲಿ

ಮುಂಬೈ (ಪಿಟಿಐ): ಈ ಸಲದ ರಣಜಿ ಟ್ರೋಫಿ ಫೈನಲ್ ಪಂದ್ಯ ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಮಾರ್ಚ್ 10 ರಿಂದ 14ರವರೆಗೆ ನಡೆಯಲಿದೆ ಎಂದು ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಸೋಮವಾರ ತಿಳಿಸಿದೆ. ಮುಂಬೈ ತಂಡ ರಣಜಿ ಫೈನಲ್‌ಗೆ ಅರ್ಹತೆ ಪಡೆದ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

ಗೆಲುವಿನ ಹಾದಿಗೆ ಮರಳಿದ ಬೆಂಗಳೂರು

ಚಿನ್ನಸ್ವಾಮಿ ಅಂಗಳದಲ್ಲಿ ಹರಿದ ರನ್ ಹೊಳೆ: ಸ್ಮೃತಿ, ಪೆರಿ ಜೊತೆಯಾಟಕ್ಕೆ ಜಯ

• ಗಿರೀಶ ದೊಡ್ಡಮನಿ

ಬೆಂಗಳೂರು: ಉದ್ಯಾನನಗರಿಯ ಕ್ರಿಕೆಟ್ ಅಭಿಮಾನಿಗಳ ಅಚ್ಚುಮೆಚ್ಚಿನ ಆಟಗಾರ್ತಿಯರಾದ ಸ್ಮೃತಿ ಮಂದಾನ ಮತ್ತು ಎಲಿಸ್ ಪೆರಿ ಅವರ ಜೊತೆಯಾಟದಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಜಯದ ಹಾದಿಗೆ ಮರಳಿತು.

ಈ ಬಾರಿಯ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಬೆಂಗಳೂರು ಲೆಗ್‌ನ ಕೊನೆಯ ಪಂದ್ಯದಲ್ಲಿ ಆರ್‌ಸಿಬಿ 23 ರನ್‌ಗಳಿಂದ ಯು.ಪಿ. ವಾರಿಯರ್ಸ್ ವಿರುದ್ಧ ಜಯಿಸಿತು. ಟೂರ್ನಿಯ ಕಳೆದ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿ ಸೋತಿತ್ತು. ತಂಡವು ಇಲ್ಲಿ ಆಡಿದ ಐದು ಪಂದ್ಯಗಳಲ್ಲಿ ಮೂರರಲ್ಲಿ ಜಯಿಸಿತು. ಇದರಲ್ಲಿ ಒಟ್ಟು 373 ರನ್‌ಗಳು ಹರಿದವು. 11 ವಿಕೆಟ್‌ಗಳು ಪತನವಾದವು. ಪಂದ್ಯ ಗೆದ್ದ ನಂತರ ಆರ್‌ಸಿಬಿ ಆಟಗಾರ್ತಿಯರು ಮೈದಾನದಲ್ಲಿ ಒಂದು ಸುತ್ತು ಹಾಕಿ ಗ್ಯಾಲರಿಯಲ್ಲಿದ್ದ 24 ಸಾವಿರಕ್ಕೂ ಹೆಚ್ಚು ಅಭಿಮಾನಿಗಳತ್ತ ಕೈಬೀಸಿ, ಚಪ್ಪಾಳೆ ತಟ್ಟಿ ಕೃತಜ್ಞತೆ ಸಲ್ಲಿಸಿದರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ವಾರಿಯರ್ಸ್ ಲೆಕ್ಕಾಚಾರ ತಲೆಕೆಳಗಾಯಿತು. ಮಂದಾನ (80; 50 ಎಸೆತ) ಹಾಗೂ ಎಲಿಸ್ ಪೆರಿ (58; 37ಎ) ಜೊತೆಗೂಡಿ ಸೇರಿಸಿದ

ಆರ್‌ಸಿಬಿ ನಾಯಕಿ ಸ್ಮೃತಿ ಮಂದಾನ ಬ್ಯಾಟಿಂಗ್ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

97 ರನ್‌ಗಳ ಜೊತೆಯಾಟದಿಂದಾಗಿ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 198 ರನ್‌ಗಳ ದೊಡ್ಡ ಮೊತ್ತ ಪೇರಿಸಿತು. ಅದಕ್ಕುತ್ತರವಾಗಿ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 175 ರನ್ ಗಳಿಸಿತು. ಅಲಿಸಾ ಹೀಲಿ (55; 38ಎ, 4X7, 6X3) ಅರ್ಧಶತಕ ದಾಖಲಿಸಿದರು.

ಆರ್‌ಸಿಬಿಗೆ ಸಬಿನೇನಿ ಮೇಘನಾ (28; 21ಎ, 4X5) ಮತ್ತು ಸ್ಮೃತಿ ಉತ್ತಮ ಆರಂಭ ನೀಡಿದರು. ಕೇವಲ 5.2 ಓವರ್‌ಗಳಲ್ಲಿ 51 ರನ್ ಸೇರಿಸಿದರು. ಮೇಘನಾ ಔಟಾದ ನಂತರ ಮಂದಾನ ಜೊತೆಗೆ ಸೇರಿಕೊಂಡ ಎಲಿಸ್ ಪೆರಿ ರನ್‌ಗಳ ಹೊಳೆ ಹರಿಸಿದರು. ಸ್ಮೃತಿ 10 ಬೌಂಡರಿ ಮತ್ತು ಮೂರು ಸಿಕ್ಸರ್ ಬಾರಿಸಿದರು. ಟೂರ್ನಿಯಲ್ಲಿ ವೈಯಕ್ತಿಕ ಗರಿಷ್ಠ ರನ್ ಗಳಿಸಿದ ಬ್ಯಾಟರ್ ಆದರು. 8ನೇ ಓವರ್‌ನಲ್ಲಿ ಫೀಲ್ಡರ್ ಚಾಮರಿ ಅಟ್ಟಪಟ್ಟು ಮತ್ತು 16ನೇ ಓವರ್‌ನಲ್ಲಿ ಸೋಫಿ ಎಕ್ಲೆಸ್ಟೋನ್ ಅವರು ಕ್ಯಾಚ್ ಕೈಚೆಲ್ಲಿದ್ದರಿಂದ ಜೀವದಾನ ಪಡೆದ ಮಂದಾನ ಮಿಂಚಿದರು.

ಗುರಿ ಬೆನ್ನಟ್ಟಿದ ವಾರಿಯರ್ಸ್ ತಂಡದ ಆರಂಭ ನಿಧಾನವಾಯಿತು. ಮೊದಲ ಓವರ್ ಹಾಕಿದ ಮಧ್ಯಮವೇಗಿ ರೇಣುಕಾಸಿಂಗ್ ಮೇಡನ್ ಮಾಡಿದರು. ನಂತರ ಹೀಲಿ ಬೀಸಾಟಕ್ಕೆ ಬೌಲರ್‌ಗಳು ಬಸವಳಿದರು. ಅವರ ಆಟದಿಂದಾಗಿ ವಾರಿಯರ್ಸ್‌ಗೆ ಗೆಲುವಿನ ವಿಶ್ವಾಸ ಮೂಡಿತ್ತು. ಆದರೆ 13ನೇ ಓವರ್‌ನಲ್ಲಿ ಆರ್‌ಸಿಬಿ ವಿಕೆಟ್‌ಕೀಪರ್ ರಿಚಾ ಘೋಷ್ ಅವರ ಚುರುಕಿನ ಸ್ಟಂಪಿಂಗ್‌ನಿಂದಾಗಿ ಹೀಲಿ ಔಟಾದರು. ಆತಿಥೇಯ ಬೌಲರ್‌ಗಳೂ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 198 (ಎಸ್. ಮೇಘನಾ 28, ಸ್ಮೃತಿ ಮಂದಾನ 80, ಎಲಿಸ್ ಪೆರಿ 58, ರಿಚಾ ಘೋಷ್ ಔಟಾಗದೆ 21,ಸೋಫಿ ಡಿವೈನ್ ಔಟಾಗದೆ 2) **ಯು.ಪಿ. ವಾರಿಯರ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 175 (ಅಲಿಸಾ ಹೀಲಿ 55, ಕಿರಣ್ ನವಗಿರೆ 18, ದೀಪ್ತಿ ಶರ್ಮಾ 33, ಪೂನಂ ಖೆಮ್ನಾರ್ 31, ಸೋಫಿ ಡಿವೈನ್ 37ಕ್ಕೆ2, ಆಶಾ ಶೋಭನಾ 29ಕ್ಕೆ2, ಸೋಫಿ ಮಾಲಿನೆ 29ಕ್ಕೆ2, ಜಾರ್ಜಿಯಾ ವೆರ್ಹಾಮ್ 38ಕ್ಕೆ2). **ಫಲಿತಾಂಶ:** ಆರ್‌ಸಿಬಿಗೆ 23 ರನ್‌ಗಳ ಜಯ.
ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ

ಇಂದಿನ ಪಂದ್ಯ (ರಾತ್ರಿ 7.30)
ಡೆಲ್ಲಿ ಕ್ಯಾಪಿಟಲ್ಸ್–ಮುಂಬೈ ಇಂಡಿಯನ್ಸ್ (ಸ್ಥಳ: ನವದೆಹಲಿ)
ನೇರಪ್ರಸಾರ: ಸ್ಪೋರ್ಟ್ಸ್ 18

ಕಾರಿನ ಗಾಜು ಪುಡಿ!

17ನೇ ಓವರ್‌ನಲ್ಲಿ ಸ್ಮೃತಿ ಅವರು ದೀಪ್ತಿ ಶರ್ಮಾ ಅವರ ಎಸೆತವನ್ನು ಸ್ಲಾಗ್ ಸ್ವೀಪ್ ಮಾಡಿದರು. ಅದನ್ನು ಡೀಪ್ ಮಿಡ್‌ವಿಕೆಟ್ ಫೀಲ್ಡರ್ ಪೂನಂ ಖೆಮ್ನರ್ ಕ್ಯಾಚ್ ಮಾಡಿದರು. ನಂತರದಲ್ಲಿ ಪೆರಿ ಅಬ್ಬರ ರಂಗೇರಿತು. 19ನೇ ಓವರ್‌ನಲ್ಲಿ ದೀಪ್ತಿ ಎಸೆತವನ್ನು ಪೆರಿ ಸಿಕ್ಸರ್‌ಗೆ ಎತ್ತಿದ ಚೆಂಡು ಪ್ರಚಾರಕ್ಕಾಗಿ ಬೌಂಡರಿಯಾಚೆ ಇಟ್ಟಿದ್ದ ಪಂಚ್ ಇ.ವಿ. ಕಾರಿನ ಕಿಟಕಿ ಗಾಜನ್ನು ಪುಡಿ ಮಾಡಿತು.

ಪ್ಯಾಟ್ ಕಮಿನ್ಸ್‌ಗೆ ಸನ್‌ರೈಸರ್ಸ್ ತಂಡದ ನಾಯಕತ್ವ

ಹೈದರಾಬಾದ್ (ಪಿಟಿಐ): ಏಕದಿನ ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮುನ್ನಡೆಸಲಿದ್ದಾರೆ.

ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ 30 ವರ್ಷದ ವೇಗಿ ಕಮಿನ್ಸ್ ಅವರನ್ನು ಬರೋಬ್ಬರಿ ₹20.50 ಕೋಟಿ ನೀಡಿ ಹೈದರಾಬಾದ್ ತಂಡವು ತೆಕ್ಕೆಗೆ ಪಡೆದಿತ್ತು. ಇದು ಐಪಿಎಲ್ ಇತಿಹಾಸದಲ್ಲಿ ಎರಡನೇ ಅತ್ಯಂತ ದುಬಾರಿ ಮೊತ್ತ ಎನಿಸಿದೆ.

‘ಪ್ಯಾಟ್ ಕಮಿನ್ಸ್ ನಮ್ಮ ಹೊಸ ನಾಯಕ’ ಎಂದು ಸನ್‌ರೈಸರ್ಸ್ ತನ್ನ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಚಿತ್ರ ಸಹಿತ ವಿಷಯ ಹಂಚಿಕೊಂಡಿದೆ. ಈ ತಂಡ 2024ರ ಆವೃತ್ತಿಯ ತನ್ನ ಮೊದಲ ಪಂದ್ಯವನ್ನು ಮಾ.23ರಂದು ಕೋಲ್ಕತ್ತ ನೈಟ್‌ರೈಡರ್ಸ್ ವಿರುದ್ಧ ಆಡಲಿದೆ.

ಡೆನಿಯಲ್ ವೆಟೋರಿ ಕೋಚ್: ತಂಡದ ಕೋಚಿಂಗ್ ವಿಭಾಗದಲ್ಲೂ ಬದಲಾವಣೆ ಮಾಡಲಾಗಿದೆ. ವೆಸ್ಟ್ ಇಂಡೀಸ್‌ನ ಬ್ರಯಾನ್ ಲಾರಾ ಅವರನ್ನು ಕೈಬಿಟ್ಟು ನ್ಯೂಜಿಲೆಂಡ್‌ನ ಡೆನಿಯಲ್ ವೆಟೋರಿ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಲಾಗಿದೆ. ನ್ಯೂಜಿಲೆಂಡ್‌ನ ಮಾಜಿ ಆಲ್‌ರೌಂಡರ್ ಜೇಮ್ಸ್ ಫ್ರಾಂಕ್ಲಿನ್ ಅವರನ್ನು ಬೌಲಿಂಗ್ ಕೋಚ್ ಆಗಿ ನೇಮಿಸಲಾಗಿದೆ.

ಫ್ರೆಂಚ್ ಓಪನ್: ಸಾತ್ವಿಕ್–ಚಿರಾಗ್ ಮೇಲೆ ನಿರೀಕ್ಷೆ

ಪ್ಯಾರಿಸ್ (ಪಿಟಿಐ): ವಿಶ್ವದ ಅಗ್ರಗಣ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಇಲ್ಲಿ ಮಂಗಳವಾರ ಆರಂಭವಾಗುವ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಭಾರತದ ಜೋಡಿಯು ಕಳೆದ ನವೆಂಬರ್‌ನಲ್ಲಿ ಚೀನಾ ಮಾಸ್ಟರ್ಸ್, ಮಲೇಷ್ಯಾ ಓಪನ್ ಮತ್ತು ಜನವರಿಯಲ್ಲಿ ಇಂಡಿಯಾ ಓಪನ್ ಟೂರ್ನಿಗಳಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು. 2022ರಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದ ಸಾತ್ವಿಕ್ – ಚಿರಾಗ್ ಈ ಬಾರಿಯೂ ಗೆಲುವಿನ ಅಭಿಯಾನ ಮುಂದುವರಿಸುವ ತವಕದಲ್ಲಿದ್ದಾರೆ.

ಭಾರತದ ಆಟಗಾರರು 32ರ ಘಟ್ಟದ ಪಂದ್ಯದಲ್ಲಿ ಮಲೇಷ್ಯಾದ ಓಂಗ್ ಯೂ ಸಿನ್ ಮತ್ತು ಟಿಯೋ ಈ ಯಿ ಅವರನ್ನು ಎದುರಿಸಲಿದ್ದಾರೆ.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಕೆನಡಾದ ಮಿಚೆಲ್ ಲೀ ವಿರುದ್ಧ ಅಭಿಯಾನ ಆರಂಭಿಸುವರು.

ಹೊಸ ಪಾತ್ರ: ಧೋನಿ ಪೋಸ್ಟ್

ನವದೆಹಲಿ (ಪಿಟಿಐ): ಐಪಿಎಲ್ ಆರಂಭಕ್ಕೆ ಎರಡು ವಾರ ಇರುವಾಗ ಮಹೇಂದ್ರ ಸಿಂಗ್ ಧೋನಿ ಸೋಮವಾರ ಸಾಮಾಜಿಕ ಮಾಧ್ಯಮದಲ್ಲಿ ‘ಹೊಸ ಋತುವಿನಲ್ಲಿ ಹೊಸ ಪಾತ್ರ ತನಗೆ ಕಾಯುತ್ತಿದೆ’ ಎಂದು ಪೋಸ್ಟ್ ಮಾಡಿದ್ದಾರೆ.

ಕಳೆದ ಋತುವಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಐದನೇ ಐಪಿಎಲ್ ಪ್ರಶಸ್ತಿಗೆ ಮುನ್ನಡೆಸಿದ ಭಾರತ ತಂಡದ ಮಾಜಿ ನಾಯಕ, ಲೀಗ್ ಅನ್ನು ಉಲ್ಲೇಖಿಸಲಿಲ್ಲ ಅಥವಾ ಹೊಸ ಪಾತ್ರದ ಬಗ್ಗೆಯೂ ವಿವರಿಸಲಿಲ್ಲ. ಹೀಗಾಗಿ, ಅವರ ಪೋಸ್ಟ್ ಕುತೂಹಲ ಕೆರಳಿಸಿದೆ.